6. ವಿತ್ತೀಯ ಕಾರ್ಯಕಲಾಪ

ವಿಷಯ: 2006-07ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, 2006-07ನೇ ಸಾಲಿನ ಮೊದಲನೆ ಪೂರಕ ಅಂದಾಜನ್ನು ಈಗಾಗಲೇ ಮಂಡನೆ ಮಾಡಿದ್ದೇನೆ. ಈ ಪೂರಕ ಅಂದಾಜಿನಲ್ಲಿ 1408.89 ಕೋಟಿ ರೂಪಾಯಿಗಳ ವೆಚ್ಚವನ್ನು ಭರಿಸುವುದಕ್ಕಾಗಿ ಪ್ರಸ್ತಾವ ಮಾಡಲಾಗಿದೆ. ಈ ಪೂರಕ ಅಂದಾಜಿನಲ್ಲಿ 1243.41 ಕೋಟಿ ರೂಪಾಯಿಗಳು ರಾಜಸ್ವದಿಂದ ಹೊರ ಹೋಗುವ ನಿವ್ವಳ ಮೊತ್ತ ಇದಾಗಿದೆ. ಪ್ರಮುಖವಾದ ಸಂಗತಿಗಳು ಈ ರೀತಿ ಇವೆ. ನಾವು ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜವನ್ನು ವಿತರಣೆ ಮಾಡುವ ಸಲುವಾಗಿ 2006-07ನೇ ಸಾಲಿನಲ್ಲಿ ನಾವು ಪ್ರಸ್ತಾಪವನ್ನು ಮಾಡಿದ್ದೆವು. ಹೆಚ್ಚು ಬೇಡಿಕೆ ಬಂದಿದ್ದರಿಂದ ಬಿತ್ತನೆ ಬೀಜವನ್ನು 75% ಸಬ್ಸಿಡಿ ಕೊಟ್ಟು ವಿತರಣೆ ಮಾಡುವ ಸಂದರ್ಭ ಬಂದಿದ್ದರಿಂದ 44.50 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಈ ಪೂರಕ ಅಂದಾಜಿನಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಬರಗಾಲದ ಬಗ್ಗೆ ಚರ್ಚೆ ಮಾಡಿದರೆ ಅವರಿಗೆ ಹಣ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದೇ ಬೇರೆ, ಇದೇ ಬೇರೆ. ಪೂರಕ ಅಂದಾಜಿಗೂ ಮತ್ತು ಬರಗಾಲಕ್ಕೂ ಏನು ಸಂಬಂಧ?

ಶ್ರೀ ಬಸವರಾಜ ರಾಯರೆಡ್ಡಿ : ಅದನ್ನು ನಾನು ಒಪ್ಪುತ್ತೇನೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲದಿದ್ದರೂ ಕೂಡ, ಈ ಚರ್ಚೆಯಿಂದ ನಿಮಗೆ ಸಹಾಯವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಂಬಂಧ ನನಗೆ ಇದೆ. ಆ ಟೈಮ್‌ನಲ್ಲಿ ಏನು ಹಣ ಕೊಡಬೇಕು ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಕೇಳುವುದೇನೆಂದರೆ, ದಯಮಾಡಿ ತಾವು ಒಪ್ಪಿಕೊಳ್ಳುವುದಿದ್ದರೆ, ಬರಗಾಲದ ಬಗ್ಗೆ ಚರ್ಚಿಸೋಣ. ಇದರ ಬಗ್ಗೆ ಸದನ ಒಪ್ಪಿಗೆ ಕೊಡುವುದು ಅಷ್ಟೆ ಉಳಿದಿದೆ.

ಅಧ್ಯಕ್ಷರು : ಆಯಿತು. ಅವರು 15-20 ನಿಮಿಷದಲ್ಲಿ ಮುಗಿಸುತ್ತಾರೆ. ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ಬೇಗ ಮುಗಿಸಿಕೊಟ್ಟುಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೆ, ಈಗತಾನೆ ಮಾನ್ಯ ಸಚಿವರು 44.50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಬಹಳ ಸಂತೋಷ. ಬೀದರ್ ಜಿಲ್ಲೆಯಲ್ಲಿ ಉದ್ದು ಬಿತ್ತನೆ ಮಾಡುವುದಕ್ಕೆ ಬೀಜಗಳನ್ನು ಏನು ಕಳುಹಿಸಿದಿರಿ ಅವು ಬಹಳ ಕಳಪೆ ಇವೆ. ನಾನು ತಮಗೆ ಇದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ನೀವು ಮನೆಯಿಂದ ತಂದಿದ್ದೀರಾ ಅಥವಾ ಬೇರೆ ಯಾರಾದರೂ ಕೊಟ್ಟರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಚೀಲ ಇಲ್ಲಿಯೇ ಇದೆ. ನಾನು ಅದನ್ನೇ ತಂದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಯಾವ ಚೆಲ? ಇದರ ಬಗ್ಗೆ ಇಡೀ ರಾಜ್ಯದಲ್ಲಿ ಎಲ್ಲೂ ಕಂಪ್ಲೇಂಟ್ ಇಲ್ಲ ಸ್ವಾಮಿ. ನೀವು ಸುಮ್ಮನೆ ಏಕೆ ಹೊಸದನ್ನು ಕ್ರಿಯೇಟ್ ಮಾಡುತ್ತೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇಲ್ಲ. ಇಲ್ಲ, ಮಾನ್ಯ ಮಂತ್ರಿಗಳು ಈ ಕಡೆ ಗಮನವನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ಜನ ನೆಮ್ಮದಿಯಿಂದ ಇದ್ದಾರೆ, ಆಯಿತು ನೀವು ಆ ಚೀಲವನ್ನು ಕಳುಹಿಸಿ ಕೊಡಿ ನೋಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸಾರ್ ಇದರಲ್ಲಿ ಒಂದೂ ಕೂಡ ಕಾಯಿ ಇಲ್ಲ, ದೊಡ್ಡದಾಗಿ ಬೆಳೆಯದೇ ಇರುವುದರಿಂದ ಅದನ್ನು ಒಡೆದು ಹಾಕಿದ್ದಾರೆ. ನೀವು ಬೀದರ್‌ಗೆ ಬಂದಿಲ್ಲ, ನಾನು ಬೀದರ್ ಜಿಲ್ಲೆಯ ಬಗ್ಗೆ ಹೇಳುತ್ತಿದ್ದೇನೆ, ಉದ್ದಿನ ಬೀಜ, ಉದ್ದಿಗೆ 75% ಕೊಟ್ಟಿದ್ದಿರಿ, ಅದರಿಂದ ಯಾರಿಗೂ ಉಪಯೋಗವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಸಮ್ಮಿಶ್ರ ಸರಕಾರಕ್ಕೆ ಕೆಟ್ಟ ಹೆಸರು ತರಲಿಕ್ಕೆ ಯರೋ ಕೊಟ್ಟು ಕಳುಹಿಸಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಕೆಟ್ಟ ಹೆಸರು ತರಲಿಕ್ಕೆ ಮಾಡುತ್ತಿಲ್ಲ, ರೈತ ಹಾಳಾಗಿ ಹೋಗಿದ್ದಾನೆ ಅದರ ಬಗ್ಗೆ ಹೇಳುತ್ತಿದ್ದೇನೆ. ನಾನೇಕೆ ಕೆಟ್ಟ ಹೆಸರು ತರಲಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಳ್ಳೆಯ ಕೆಲಸ ಮಾಡುವುದನ್ನು ಸಹಿಸದೇ ಯಾರಾದರೂ ಕಳುಹಿಸಿ ಕೊಟ್ಟಿದ್ದರೆ ನಾವು ಅದನ್ನು ಪರಿಶೀಲಿಸೋಣ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಯಾವತ್ತು ಒಳ್ಳೆಯದನ್ನು ಒಳ್ಳೆಯದು ಎಂದು ಹೇಳುತ್ತೇನೆ, ನಾನು ಅನಾವಶ್ಯಕವಾಗಿ ಮಾತನಾಡುವುದಿಲ್ಲ. ಕೆಟ್ಟದಕ್ಕೆ ಕೆಟ್ಟದ್ದು ಎಂದು ಹೇಳುತ್ತೇನೆ. ನಾನು ಇದನ್ನು ಏಕೆ ಹೇಳಿದೆ ಎಂದರೆ, ತಾವು ಬೀಜದ ಬಗ್ಗೆ ಹೇಳಿದಿರಿ ಅದಕ್ಕೆ ನಾನು ಇದನ್ನು ಹೇಳಿದೆ. ನಾನು ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಕಳುಹಿಸಿ ಕೊಡಿ. ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆ ಮಾತು ಹೇಳಿ ನಾನು ಒಪ್ಪುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಗ ತಾನೇ ಹೇಳುತ್ತಿದ್ದೆ. ರೈತರಿಗೆ ರಿಯಾಯಿತಿ ದರದಲ್ಲಿ 75% ಹಾಗೆ ನಾವು ಕೊಟ್ಟೆವು. ಅದರಲ್ಲಿ ಸುಮಾರು 44 ಕೋಟಿ 50 ಲಕ್ಷ ರೂಪಾಯಿಗಳನ್ನು

ಹೆಚ್ಚುವರಿಯಾಗಿ ಈ ಪೂರಕ ಅಂದಾಜಿನಲ್ಲಿ ನಾವು ನೀಡುತ್ತಿದ್ದೇವೆ. ಬಹಳ ಮುಖ್ಯವಾಗಿ ಮೊದಲ ಬಾರಿಗೆ ಈ ರಾಜ್ಯದಲ್ಲಿ, ಏನು ಗ್ರಾಮೀಣ ಪ್ರದೇಶದಲ್ಲಿ ರೈತನ ಮನೆಯ ಮುಂದೆ ಮೊದಲು ಕಾಣಿಸುತ್ತಿದ್ದ ಎತ್ತು, ಆಕಳು, ಗಾಡಿ, ಎಮ್ಮೆ, ಇಂಥ ದೃಶ್ಯ ಇವತ್ತು ಹೊರಟು ಹೋಗಿದೆ. ದುಬಾರಿ ಆದ ಹಾಗೆ ಅದನ್ನು ಖರೀದಿ ಮಾಡುವ ಶಕ್ತಿಯೂ ಇಲ್ಲ, ಸಣ್ಣ ಅತಿ ಸಣ್ಣ ರೈತರು ಬೀದಿ ಪಾಲಾಗುವಂಥ ಸಂದರ್ಭ ಇತ್ತು. ಅದಕ್ಕೇ ದೇಶದಲ್ಲಿ ಮೊದಲ ಬಾರಿಗೆ ಒಂದು ವಿನೂತನವಾದಂಥ ಕಾರ್ಯಕ್ರಮದ ಕಲ್ಪನೆಯನ್ನು ನಾನು ಇಟ್ಟುಕೊಂಡು ಆಯವ್ಯಯದಲ್ಲಿ ನಾವು ಪ್ರಸ್ತಾಪ ಮಾಡಿದ್ದವು. ಅದು ಯಾವುದು ಎಂದರೆ ಸಣ್ಣ ರೈತರಿಗೆ ಸಬ್ಸಿಡಿನಲ್ಲಿ ಒಂದು ಜೊತೆ ಎತ್ತು, ಎತ್ತಿನ ಗಾಡಿ, ಕೊಡಬೇಕೆಂದು 5 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದೆ. ಆದರೆ ಇದು ಯಾವ ಮೂಲೆಗೂ ಸಾಕಾಗುವುದಿಲ್ಲವೆಂದು ರಾಜ್ಯದ ಎಲ್ಲಾ ಕಡೆಯಿಂದ, ಸಣ್ಣ ಅತಿ ಸಣ್ಣ ರೈತರಿಂದ, ಹಾಗೂ ಶಾಸಕರುಗಳಿಂದ ಒತ್ತಡ ಬಂದ ಮೇಲೆ, ಇವತ್ತು ಇದನ್ನು 5 ಕೋಟಿ ರೂ. ಇದ್ದದ್ದನ್ನು 15 ಕೋಟಿ ರೂಪಾಯಿಗಳ ಹಣವನ್ನು ತೆಗೆದಿಟ್ಟಿದ್ದೇವೆ, ನಮ್ಮ ಎಲ್ಲಾ ಶಾಸಕರು ಗಮನಿಸಬೇಕು, ಸುಮಾರು ರಾಜ್ಯದ 20 ಸಾವಿರ ಸಣ್ಣ ಅತಿ ಸಣ್ಣ ರೈತರಿಗೆ ಇದರಿಂದ ಅನುಕೂಲವಾಗುತ್ತದೆ. 10 ಸಾವಿರ ರೂಪಾಯಿ ಒಂದು ಜೊತೆ ಎತ್ತು ತೆಗೆದುಕೊಳ್ಳುವುದಕ್ಕೋಸ್ಕರ ಸಬ್ಸಿಡಿ ಕೊಡುತ್ತೇವೆ. ಒಬ್ಬ ರೈತನ ಬಳಿ ಎತ್ತು ಇದೆ ಎಂದರೆ, ಆ ಗಾಡಿ ಕೊಂಡುಕೊಳ್ಳುವುದಕ್ಕೆ 10 ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತೇವೆ. ಈ ರೀತಿ ರಾಜ್ಯದ ಸುಮಾರು 20 ಸಾವಿರ ಸಣ್ಣ ಅತಿ ಸಣ್ಣ ರೈತರಿಗೆ ನಾವು ಈ ಯೋಜನೆಯನ್ನು ತಂದಿದ್ದೇವೆ, ನಮ್ಮ ಶಾಸಕರಲ್ಲಿ ನಾನು ವಿನಮ್ರವಾಗಿ ನಾನು ವಿನಂತಿಯನ್ನು ಮಾಡುವಂಥದ್ದು, ಮತ್ತೇ ಇದು ಪ್ರಭಾವಿಗಳ ಕಪಿ ಮುಷ್ಟಿಗೆ ಸಿಕ್ಕಿ ಇದ್ದವರೇ ಎತ್ತು ಗಾಡಿ ತೆಗೆದುಕೊಂಡು, ಇರುವ ಎತ್ತು ಗಾಡಿಯನ್ನು ತೋರಿಸಿ, ಹಣವನ್ನು ಹೊಡೆಯುವುದಕ್ಕೆ ಅವಕಾಶವನ್ನು ಕೊಡದೇ, ಈ ಸವಲತ್ತು ನಿಜವಾದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಿಗುವಂತೆ ಮಾಡಬೇಕು, ನೀವೆಲ್ಲಾ ಒಪ್ಪುವುದಾದರೆ, ಮುಂದೆ ಬರುವಂತ ದಿವಸಗಳಲ್ಲಿ ಈ ಸೌಲಭ್ಯವನ್ನು ಇನ್ನು ಹೆಚ್ಚಿನ ಸವಲತ್ತನ್ನು ಹೆಚ್ಚಿನ ಜನಕ್ಕೆ ವಿಸ್ತರಣೆ ಮಾಡುವುದಕ್ಕೆ ನಮ್ಮ ಸಮ್ಮಿಶ್ರ ಸರಕಾರ ಬದ್ಧವಾಗಿದೆ, ಸಣ್ಣ ಅತಿ ಸಣ್ಣ ರೈತ ಬದುಕಬೇಕಾಗಿದೆ, ಇದಕ್ಕೆಲ್ಲಾ ನೀವು ಸ್ವಾಗತ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ, ಅದಕ್ಕೆ 5 ಕೋಟಿ ರೂ. ಇದ್ದುದ್ದನ್ನು 15 ಕೋಟಿ ರೂ. ಇಟ್ಟಿದ್ದೇವೆ. ವೀರಪ್ಪನ್ ಹತವಾಗಿರುವಂಥ ಸಂದರ್ಭದಲ್ಲಿ ಆ ಕಾರ್ಯಾಚರಣೆಯ ಬಾಗವಹಿಸಿದಂಥ ಎಲ್ಲಾ ಪೋಲೀಸ್ ಸಿಬ್ಬಂದಿಗಳಿಗೆ ಸರ್ಕಾರ ಬಹುಮಾನ ನೀಡುವುದಕ್ಕೆ ನಿರ್ಧಾರ ಮಾಡಿದ್ದರು, ಬೇರೆ ಬೇರೆ ಕಾರಣಗಳಿಗಾಗಿ ಅದು ನಿಧಾನವಾಗಿತ್ತು, ಅದಕ್ಕೆ ಪೂರಕ ಅಂದಾಜಿನಲ್ಲಿ 10 ಕೋಟಿ ರೂಪಾಯಿಯನ್ನು ನಾವು ಪ್ರಸ್ತಾಪ ಮಾಡಿದ್ದೇವೆ, ಅದನ್ನು ಈಗಾಗಲೇ ವ್ಯವಸ್ಥೆಯನ್ನು ಮಾಡಿದ್ದೇನೆಂಬುದು ತಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಶಾಸಕರು ಗಮನಿಸಬೇಕಾದ ಮತ್ತೊಂದು ಅಪರೂಪದ ಕಾರ್ಯಕ್ರಮ ಏನೆಂದರೆ, ನಾವು ಘೋಷಣೆ ಮಾಡಿರುವಂಥದ್ದು ಏನೆಂದರೆ, ಸ್ವಚ್ಛ ಗ್ರಾಮ ಯೋಜನೆಯ ಅನುಷ್ಠಾನ, ಗ್ರಾಮದ

ಸ್ವಚ್ಛತೆ, ಚರಂಡಿ ನಿರ್ಮಾಣ ಹಾಗೂ ರಸ್ತೆಗಳನ್ನು ಸರಿಪಡಿಸುವಂಥ ಯೋಜನೆ, ಈ ಸುವರ್ಣ ಗ್ರಾಮ ಎಂಬ ಯೋಜನೆಯಲ್ಲಿ ಜಾರಿಗೆ ತರುವುದಕ್ಕೋಸ್ಕರ ಈ ಉದ್ದೇಶ ಇಟ್ಟುಕೊಂಡಿದ್ದೇವೆ. ಈ ಯೋಜನೆಗಳಡಿ ಗ್ರಾಮಗಳ ನೈರ್ಮಲ್ಯ, ಕುಡಿಯುವ ನೀರಿನ ಸೌಲಭ್ಯ, ರಸ್ತೆಗಳ ನಿರ್ಮಾಣ, ಕೃಷಿ ಜಮೀನುಗಳಲ್ಲಿ ತೇವಾಂಶವನ್ನು ಕಾಯ್ದುಕೊಳ್ಳುವುದು, ಈ ರೀತಿ ಅನೇಕ ಯೋಜನೆಗಳಿಗೆ ಇದು ಉಪಯೋಗವಾಗಬೇಕೆಂದು ಮೊದಲ ಹಂತವಾಗಿ, ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅಲ್ಲದೇ ಎಲ್ಲಾ ಹೋಬಳಿಗಳಲ್ಲೂ ಸಹ ಸುವರ್ಣ ಗ್ರಾಮ ಯೋಜನೆಯನ್ನು ಜಾರಿಗೆ ತರಬೇಕೆನ್ನುವ ಸದುದ್ದೇಶದಿಂದ ಈ ಯೋಜನೆ ಅನುಷ್ಠಾನಕ್ಕಾಗಿ ಒಟ್ಟು 200 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಈ ಒಂದು ಪೂರಕ ಅಂದಾಜಿನಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಪ್ರಕಾಶ ಬಿ.ಹುಕ್ಕೇರಿ : ನಮ್ಮ ಭಾಗದಲ್ಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಸಾರ್, ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ, ನನ್ನ ಮಾತು ಪೂರ್ತಿಯಾದ ಮೇಲೆ ನಾನು ಕುಳಿತುಕೊಳ್ಳುತ್ತೇನೆ, ಉತ್ತರ ಕೊಡುತ್ತೇನೆ, ಅವಸರ ಏನು? ನಾನೇನು ಓಡಿ ಹೋಗುತ್ತೇನೆಯೇ?.. ದಯಮಾಡಿ ನಾನು ಯೀಲ್ಡ್ ಆಗಿಲ್ಲ. ನಾನು ಕೊನೆಗೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಅವರು ಮಾತು ಮುಗಿಸಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಧಾರವಾಡ ಸುತ್ತಮುತ್ತ ಇರತಕ್ಕಂಥ ನಮ್ಮ ಶಾಸಕ ಮಿತ್ರರು ಒತ್ತಾಯ ಮಾಡಿದಂತೆ, ಈ ಕೆಸಿಸಿ ಬ್ಯಾಂಕ್ ಧಾರವಾಡ ಸಂಸ್ಥೆ ಪುನರುತ್ಥಾನಕ್ಕಾಗಿ 25 ಕೋಟಿ ರೂಪಾಯಿಗಳನ್ನು ನೀಡುವಂಥ ಭರವಸೆಯನ್ನು ಹಿಂದೆ ನೀಡಿತ್ತು. ಆದರೆ ಕಳೆದ ಸಾಲಿನಲ್ಲಿ 6 ಕೋಟಿ 25 ಲಕ್ಷ ರೂಪಾಯಿ ಮಾತ್ರ ಈ ಉದ್ದೇಶಕ್ಕೆ ಬಳಸಲಾಗಿತ್ತು, ಈ ರಾಜ್ಯದ ಸಂಪನ್ಮೂಲ ಲಭ್ಯ ಇರುವಂಥ ಕಾರಣ ಈ ಬಾರಿ 14 ಕೋಟಿ 6 ಲಕ್ಷ ರೂಪಾಯಿಗಳನ್ನು ಈ ಉದ್ದೇಶಕ್ಕಾಗಿ ವೆಚ್ಚ ಮಾಡಲು ಪೂರಕ ಅಂದಾಜಿನಲ್ಲಿ ವ್ಯವಸ್ಥೆ ಮಾಡಲಾಗಿದೆ, ಇನ್ನು ಹಂಚಬೇಕಾಗಿದೆ, ಇನ್ನೂ ಹಣದ ಅಗತ್ಯವಿದೆ, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕು, ಏಕೆಂದರೆ, ಒಂದು ಸಂತೋಷದ ಸಂಗತಿ ಏನೆಂದರೆ, ಕೆಸಿಸಿ ಬ್ಯಾಂಕ್ ಮುಳುಗಿ ಹೋಯಿತು, ಅನೇಕ ಸಹಕಾರಿ ಸಂಘಗಳು ಅದರ ಮೇಲೆ ಡಿಪೆಂಡ್ ಆಗಿದ್ದು ಮುಂದೆ ಏನು ಎನ್ನುವಂಥ ಯಕ್ಷ ಪ್ರಶ್ನೆ ಇತ್ತು. ಸ್ವಲ್ಪ ಸುಧಾರಿಸುತ್ತದೆಂದು ಆ ಭಾಗದ ಜನರು ಎಲ್ಲರೂ ಹೇಳುತ್ತಿದ್ದಾರೆ. ಈ 14 ಕೋಟಿ 6 ಲಕ್ಷ ರೂಪಾಯಿಗಳ ಅನುದಾನವನ್ನು ಪೂರಕ ಅಂದಾಜಿನಲ್ಲಿ ಸೇರಿಸುತ್ತೇನೆ. ಇನ್ನು ಅದಕ್ಕೆ ಅರ್ಹತೆ ಇದೆ, ಈ ಸಮ್ಮಿಶ್ರ ಸರಕಾರ ನಿಮ್ಮ ಎಲ್ಲಾ ಪ್ರಶ್ನೆಗೆ ಉತ್ತರ ಕೊಟ್ಟು, ನಿಮ್ಮ ಒತ್ತಾಯಗಳೇನು ಇವೆ, ಅವುಗಳ ಈಡೇರಿಕೆಗೆ ಹಣಕಾಸಿನ ಸಂಪನ್ಮೂಲ ಚೆನ್ನಾಗಿರುವುದರಿಂದ ಬೇಕಾದಂತಹ ವ್ಯವಸ್ಥೆ ಮಾಡುತ್ತೇವೆ. ಸೋರಿಕೆ ತಡೆದಿದ್ದೇವೆ. ನೀವು ಏನು ಕೇಳುತ್ತೀರೋ ಅದನ್ನು ಕೊಡುವುದಕ್ಕೆ ಪಕ್ಷಬೇದ ಮರೆತು ಕೊಡುವುದಕ್ಕೆ ನಾವು ನಿಮ್ಮ ಜೊತೆ ಇದ್ದೇವೆ. ಎಲ್ಲವನ್ನೂ ಮಾಡೋಣ ನೀವು ಸಲಹೆಗಳನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಪಕ್ಷಭೇದ ಎಂದು ನೀವು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮುನಿಸಿಪಾಲಿಟಿಗೆ ಹಣ ಕೊಟ್ಟಿರುವ ಬಗ್ಗೆ ಹೇಳುವುದಾದರೆ,

(ಅಡಚಣೆ)

ಶ್ರೀ ಎಸ್.ಎಸ್. ದೋಸರಾಜ್ : ನೀವು ಯಾವುದಕ್ಕೂ ಕೂಡ ವಿರೋಧ ಪಕ್ಷದವರ ಸಹಕಾರ ತೆಗೆದುಕೊಳ್ಳುತ್ತಿಲ್ಲ. ಆದರೆ, ಸರಿ ಮಾಡುತ್ತೇವೆಂದು ಹೇಳುತ್ತೀರಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪಕ್ಷಭೇದ ಮಾಡುವುದಿಲ್ಲವೆಂದು ಹೇಳುತ್ತೀರಿ. ಆದರೆ, ಕೋಲಾರ ಜಿಲ್ಲೆಯಲ್ಲಿರುವ ಯಾವುದೇ ಮುನಿಸಿಪಾಲಿಟಿಗೆ ಹಣ ಕೊಟ್ಟಿಲ್ಲ. ಯಾವುದಕ್ಕೆ ಕೊಟ್ಟಿದ್ದೇವೆಂದು ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿಪಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೇವಲ ಜೆಡಿಎಸ್ ಮತ್ತು ಬಿಜೆಪಿ ರವರು ಹಂಚಿಕೊಂಡಿದ್ದೀರಿ.

(ಅಡಚಣೆ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಈ ರೀತಿಯಾದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಣ ಕೊಡಬೇಕೆಂದು ನಿಮ್ಮ ಗಮನಕ್ಕೆ ತಂದು ಮೂರು ತಿಂಗಳಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಸ್ಪೆಷಲ್ ಆಗಿ ಬಿಡುಗಡೆ ಮಾಡಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಬೆಳಗಾವಿ, ಬಿಜಾಪುರ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕೃಷ್ಣಾ ಮತ್ತು ಭೀಮಾ ನದಿಯ ಪ್ರವಾಹದಿಂದ ಉಂಟಾದಂಥ ತೊಂದರೆಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ಇದು ನಿಜವಾಗಿಯೂ ಬಹಳ ಪ್ರಮುಖವಾದಂಥ ವಿಷಯವಾಗಿದೆ. ಈ ಪ್ರವಾಹ ಪೀಡಿತ ಗ್ರಾಮಗಳ ಸ್ಥಳಾಂತರ ಕಾರ್ಯಕ್ಕಾಗಿ ಒಟ್ಟು 64 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕಾಗಿ ಈ ಪೂರಕ ಅಂದಾಜನ್ನು ಪಾಸ್ ಮಾಡಿಕೊಡಬೇಕಾಗಿದೆ. ಇದರ ಜೊತೆಗೆ ನಾನು ಕೇಂದ್ರಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಕೇಂದ್ರದ ಗೃಹ ಸಚಿವರಾಗಿರತಕ್ಕಂಥ ಮಾನ್ಯ ಶಿವರಾಜ್ ಪಾಟೀಲ್‌ರವರು ಇಲ್ಲಿಗೆ ಬಂದಾಗ ನಮ್ಮ ವಿರೋಧಪಕ್ಷ ನಾಯಕರಾಗಿರತಕ್ಕಂಥ ಮಾನ್ಯ ಧರ್ಮಸಿಂಗ್‌ರವರು ಮತ್ತು ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ನಾನು ಪ್ರವಾಹ ಪೀಡಿತ ಪ್ರದೇಶಗಳನ್ನು ವಿಮಾನದ ಮೂಲಕ ವೀಕ್ಷಣೆ ಮಾಡುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ತಲೆದೋರಿರುವ ಅತಿವೃಷ್ಟಿ ಮತ್ತು ಬರಗಾಲದ ಬಗ್ಗೆ ನಾವುಗಳೆಲ್ಲಾ ವ್ಯಾಪಕವಾಗಿ ಚರ್ಚೆ ಮಾಡಿದೆವು. ಆ ಸಂದರ್ಭದಲ್ಲಿ ಅವರು ಒಂದು ಭರವಸೆಯನ್ನು ಕೊಟ್ಟಿದ್ದರು. ಅದನ್ನು ಈ ಮನೆಗೆ ನಾನು ತಿಳಿಸಬೇಕೆಂಬುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಅದೇನೆಂದರೆ, ಕಳೆದ ಹತ್ತಾರು

ವರ್ಷಗಳಿಂದ ಅತಿವೃಷ್ಟಿ ಸಂದರ್ಭದಲ್ಲಿ ಆ ಗ್ರಾಮಗಳು ಮುಳುಗಡೆ ಆಗುತ್ತಿವೆ. ಅಲ್ಲಿರತಕ್ಕಂಥ ಜನರನ್ನು ತಾತ್ಕಾಲಿಕವಾಗಿ ಹೊರಗಡೆ ತರುತ್ತೇವೆ. ಒಂದು ವಾರದವರೆಗೆ ಬೇರೆ ಕಡೆ ವ್ಯವಸ್ಥೆ ಮಾಡುತ್ತೇವೆ. ಮತ್ತೆ ಅವರುಗಳು ಅಲ್ಲಿಗೆ ವಾಪಸ್ಸು ಹೊರಟು ಹೋಗುತ್ತಾರೆ. ಇಂಥ ಪರಿಸ್ಥಿತಿಗೆ ಶಾಶ್ವತವಾದ ಪರಿಹಾರವನ್ನು ಹುಡುಕಬೇಕೆಂಬ ದೃಷ್ಟಿಯಿಂದ ಇವತ್ತು 64 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತೆ ಕೇಂದ್ರದ ಗೃಹಸಚಿವರು ಒಂದು ಭರವಸೆಯನ್ನು ಕೊಟ್ಟರು. ಅದೇನೆಂದರೆ, ಯಾವ ಯಾವ ಗ್ರಾಮಗಳನ್ನು ಶಿಫ್ಟ್ ಮಾಡಬೇಕೆಂದು ಇದ್ದೀರಿ ಅದರ ವಿವರಗಳೊಂದಿಗೆ ಮನವಿಯನ್ನು ಕಳುಹಿಸಿಕೊಡಿ. ಅದಕ್ಕೆ ಹಣ ಕೊಡುವುದಕ್ಕೆ ಏನೂ ತೊಂದರೆ ಇಲ್ಲ. ನಾವು ನಿಮ್ಮ ನೆರವಿಗೆ ಬರುತ್ತೇವೆ ಎಂಬ ಭರವಸೆಯನ್ನು ಕೊಟ್ಟಿದ್ದಾರೆ. ಎರಡನೆಯದು ಏನೆಂದರೆ, ನಾವು ಈಗ ಏನು ಬರವನ್ನು ಅನುಭವಿಸುತ್ತಿದ್ದೇವೆ ಅದಕ್ಕೆ 3 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಕೊಡಬೇಕೆಂದು ಕೇಳಿದೆವು. ಇದನ್ನು ಕೊಡುವುದಕ್ಕೆ ನಮಗೇನು ತೊಂದರೆ ಇಲ್ಲ. ಇದಕ್ಕೊಂದು ಪ್ರತ್ಯೇಕವಾದ ಮನವಿಯನ್ನು ಕೊಡಿ ಎಂದು ಹೇಳಿದ್ದಾರೆ. ಈ ಅಧಿವೇಶನ ಮುಗಿದ ಮೇಲೆ ಮುಖ್ಯಮಂತ್ರಿಗಳು ನಾನು ಪ್ರತಿಪಕ್ಷದ ನಾಯಕರನ್ನು ಕರೆದುಕೊಂಡು ಒಂದು ನಿಯೋಗ ಹೋಗಿ ಈ ಗ್ರಾಮಗಳನ್ನು ಶಿಫ್ಟ್ ಮಾಡಬೇಕೆಂಬುದರ ಬಗ್ಗೆ ಈಗಾಗಲೇ ಸ್ಥಳಗಳನ್ನು ನೋಡಿ ವ್ಯವಸ್ಥೆ ಆಗುತ್ತಿರುವ ಸಂದರ್ಭದಲ್ಲಿ ಕೇಂದ್ರದ ಸಹಾಯವನ್ನು ಪಡೆದು ಪ್ರವಾಹದ ನೀರಿನಲ್ಲಿ ಮುಳುಗಿ ಹಾಳಾಗುತ್ತಿರುವ ಗ್ರಾಮಗಳ ಅನೇಕ ರೈತರು ಸಂಕಷ್ಟದಲ್ಲಿ ಸಿಲುಕಿಕೊಂಡಿರುವವರಿಗೆ ಶಾಶ್ವತವಾದ ಒಂದು ಪರಿಹಾರವನ್ನು ಒದಗಿಸಿ ಕೊಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ. ಆ ದಿಕ್ಕಿನಲ್ಲಿ ಕೇಂದ್ರದ ಸಹಾಯವನ್ನೂ ಸಹ ಪಡೆದು ಆ ಕೆಲಸವನ್ನು ಮಾಡುತ್ತೇವೆ. ಅದಕ್ಕಾಗಿ ಮೊದಲಬಾರಿಗೆ ದೊಡ್ಡ ಪ್ರಮಾಣದಲ್ಲಿ 64 ಕೋಟಿ ರೂಪಾಯಿಗಳನ್ನು ಈ ಪೂರಕ ಬೇಡಿಕೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಮತ್ತೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 8ನೇ ತರಗತಿಯಲ್ಲಿ ಓದುತ್ತಿರುವ ಹೆಣ್ಣು ಮಕ್ಕಳಿಗೆ ಉಚಿತವಾಗಿ ಬೈಸಿಕಲ್ ಕೊಡತಕ್ಕಂಥ ಕಾರ್ಯಕ್ರಮಗಳನ್ನು ನಮ್ಮೆಲ್ಲಾ ಶಾಸಕರು ನೆರವೇರಿಸಿದ್ದಾರೆ. ಇದರ ಬಗ್ಗೆ ಇನ್ನೂ ಅನೇಕ ಕಡೆ ಬೇಡಿಕೆಗಳಿವೆ. ಮತ್ತೆ ಕೆಲವು ಕಡೆ ಕೊರತೆಗಳಾಗಿವೆ. ಅಲ್ಲಿಗೂ ಕೂಡ ಕೊಡಬೇಕಾಗಿದೆ. ಇದಕ್ಕಾಗಿ ಪೂರಕ ಬೇಡಿಕೆಯಲ್ಲಿ 25 ಕೋಟಿ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಮತ್ತೆ ಬಹಳ ಪ್ರಮುಖವಾಗಿ ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಬವಣೆಯನ್ನು ನೀಗಿಸಬೇಕಾಗಿದೆ. ರಾಜಸ್ವ ಲಭ್ಯತೆ ಇರುವ ಕಾರಣ ನಗರ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ....

ಶ್ರೀ ಎ. ಕೃಷ್ಣಪ್ಪ : ಇದರ ಬಗ್ಗೆ ನಾನು ಮಾತನಾಡಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಕೊನೆಯಲ್ಲಿ ಮಾತನಾಡಿ. ನಿಮ್ಮ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ. ಕುಡಿಯುವ ನೀರಿನ ಯೋಜನೆಗಾಗಿ 45 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ.

(ಅಡಚಣೆ)

ಅಧ್ಯಕ್ಷರು : ಅವರು ಮಾತನಾಡಿದ ಮೇಲೆ ತಾವು ಕೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇನ್ನೂ ಯೀಲ್ಡ್ ಆಗಿಲ್ಲ.

ಅಧ್ಯಕ್ಷರು : ಅವರು ಮೊದಲು ಹೇಳಲಿ. ಆನಂತರ ತಾವು ಕೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಕೇಳತಕ್ಕಂಥದ್ದಕ್ಕೆ ಆನಂತರ ಉತ್ತರ ಕೊಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಚಿವರು ವಿವರಣೆ ಕೊಡುವುದಕ್ಕೆ ಇವರು ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆಮೇಲೆ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಪೂರಕ ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದಾರೆ. ಆನಂತರ ನೀವು ಏನು ಬೇಕಾದರೂ ಕೇಳಿ, ಅದಕ್ಕೆ ಅವರು ಉತ್ತರ ಕೊಡುತ್ತಾರೆ. ನೀವು ಮಧ್ಯದಲ್ಲಿ ಈ ರೀತಿಯಾಗಿ ನಿಂತುಕೊಂಡರೆ ಅವರಿಗೂ ತೊಂದರೆ ಆಗುವುದಿಲ್ಲವೇ?

ಶ್ರೀ ಎ. ಕೃಷ್ಣಪ್ಪ : ಅವರು ಫೈನಾನ್ಸ್ ಮಿನಿಸ್ಟರ್ ಆಗಿದ್ದಾರೆ. ಆದ್ದರಿಂದ ಅವರಿಗೆ ಒಂದು ಸಲಹೆಯನ್ನು ಕೊಡಬೇಕಾಗಿದೆ. ಆದ್ದರಿಂದ ಒಂದು ಕ್ಷಣ ಅವಕಾಶ ಕೊಡಿ.

ಶ್ರೀ ಆರಗ ಜ್ಞಾನೇಂದ್ರ : ನಿಮ್ಮ ಉಚಿತವಾದಂಥ ಸಲಹೆಯನ್ನು ಆಮೇಲೆ ಕೊಡಬಹುದು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ಜಿಲ್ಲೆಯ ವಿಚಾರದಲ್ಲಿ ಬರಗಾಲಕ್ಕೆ ಸೇರಿಸಬೇಕಾಗಿರತಕ್ಕಂಥ ಎಲ್ಲಾ ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಆದರೆ, ಪೂರ್ವ ತಾಲ್ಲೂಕು ಎನ್ನುವ ಒಂದು ಲೆಕ್ಕವನ್ನೇ ಅವರು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದಾರೆ. ಪಕ್ಕದಲ್ಲಿ ಮಳೆ ಬೀಳುತ್ತದೆ, ಆದ್ದರಿಂದ ಅಲ್ಲಿ ಬರಗಾಲ ಇಲ್ಲವೆಂದು ಬಿಟ್ಟಿದ್ದಾರೆಯೇ ಅಥವಾ ರಾಜಕೀಯವಾಗಿ ಏನಾದರೂ ಬಿಟ್ಟಿದ್ದಾರೆಯೇ ಎಂದು ಕೇಳಬೇಕಾಗಿದೆ. ಎಲ್ಲಾ ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಆದರೆ, ಇದೊಂದು ತಾಲ್ಲೂಕನ್ನು ಬಿಟ್ಟಿದ್ದಾರೆ. ನೀರಿಗಾಗಿ ಅವರು ಎಲ್ಲಾ ತಾಲ್ಲೂಕುಗಳಿಗೆ ದುಡ್ಡನ್ನು ಬಿಡುಗಡೆ ಮಾಡಿದ್ದಾರೆ. ಆದರೆ, ನಾವು ನೀರಿಗಾಗಿ ಏನು ಮಾಡಬೇಕು? ದುಡ್ಡನ್ನು ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳಿಗೆ ಆದೇಶ ಪತ್ರವನ್ನು ಕೊಟ್ಟಿದ್ದಾರೆ. ಮತ್ತೆ ಜಿಲ್ಲಾಧಿಕಾರಿಗಳು ಸಭೆಗಳನ್ನು ಮಾಡಿ ದುಡ್ಡನ್ನು ಬಿಡುಗಡೆ ಮಾಡಿದ್ದಾರೆ. ನಾವು ನೀರು ಕುಡಿಯುವುದಕ್ಕೆ ಎಲ್ಲಿಗೆ ಹೋಗುವುದು? ನಾವು ಬಾಗಲಕೋಟೆಗೆ ಬರೋಣವೇ ಅಥವಾ ಕಾವೇರಿ ನದಿಯ ಹತ್ತಿರ ಹೋಗೋಣವೇ? ಅವರು ಈಗ ಹಲವಾರು ಜಿಲ್ಲೆಗಳ ಮತ್ತು ತಾಲ್ಲೂಕುಗಳ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಮೂರು ಹೋಬಳಿ ಇದೆ. 10 ಲಕ್ಷ ಜನಸಂಖ್ಯೆ ಇದ್ದಾರೆ. ಮತ್ತೆ ಸುಮಾರು 20 ಸಾವಿರ ಕೋಟಿ ರೂಪಾಯಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಈ ಪ್ರದೇಶದಿಂದ ಆದಾಯ ಬರುತ್ತಿದೆ. ಆದ್ದರಿಂದ ಕುಡಿಯುವ ನೀರಿಗೆ ಮತ್ತು ರಸ್ತೆಗಳಿಗೆ ಈಗ ಬೇರೆ ಕಡೆ ಕೊಡಲಾಗಿದೆ. ಈ ರೀತಿಯಾದ ತಾರತಮ್ಯ ಅಕಸ್ಮಾತ್ ಆಗಿ ಆಡಳಿತದಲ್ಲಿ ಆಗಿದ್ದರೆ ಅದನ್ನು ಸರಿ ಮಾಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಹಣಕಾಸಿನ ಸಚಿವರು ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಬೇರೇನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ ಹಾಗೆ ಈ ವಿಶೇಷ ಅಧಿವೇಶನದಲ್ಲಿ ಈ ರಾಜ್ಯ ಎದುರಿಸುತ್ತಿರುವ ಬರಗಾಲ, ನೆರೆಹಾವಳಿ ಮತ್ತೆ ಕೆಲವು ಕಡೆ ಅತಿವೃಷ್ಟಿ ಬಗ್ಗೆ ನೀವು ಚರ್ಚೆ ಮಾಡಬಹುದು. ಯಾವ ತಾಲ್ಲೂಕುಗಳಲ್ಲಿ ಮಳೆ ಬಿದ್ದಿದೆ, ಅದರ ಆಧಾರದ ಮೇಲೆ ಮಾಡಲಾಗಿದೆ. ಇದು ಪೂರ್ವಕ ಬೇಡಿಕೆಯಲ್ಲಿ ಬರುವುದಿಲ್ಲ ಆದರೂ ನೀವು ಪ್ರಶ್ನೆ ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ಮಳೆಯ ಆಧಾರದ ಮೇಲೆ ಕೆಲವು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೇವೆ. ಮತ್ತೆ ಹೆಚ್ಚುವರಿಯಾಗಿಯೂ ಕೂಡ ಘೋಷಣೆ ಮಾಡಿದ್ದೇವೆ. ನನಗೆ ತಿಳಿದ ಮಟ್ಟಿಗೆ, ಬರುವಂಥ ದಿವಸಗಳಲ್ಲಿ ಕೆಲವು ಕಡೆ ಇನ್ನು ಮಳೆಯೇ ಬರದೇ ಇರತಕ್ಕಂಥ ಅನೇಕ ತಾಲ್ಲೂಕುಗಳಿರುವುದರಿಂದ ಯಾವ್ಯಾವ ತಾಲ್ಲೂಕುಗಳಲ್ಲಿ ಈ ರೀತಿಯಾದ ಬರದ ಛಾಯೆ ಮೂಡಿದೆ ಮತ್ತು ಬರಗಾಲವನ್ನು ಎದುರಿಸುತ್ತಿರುವ ತಾಲ್ಲೂಕುಗಳನ್ನು ಸೇರಿಸುವುದಕ್ಕೆ ನಮ್ಮದೇನು ಭಿನ್ನಾಭಿಪ್ರಾಯ ಇಲ್ಲ. ಉತ್ತರ ಕೊಡುವಂಥ ಕಾಲದಲ್ಲಿ ಬರಗಾಲ ಮತ್ತು ಅತಿವೃಷ್ಟಿಯ ಬಗ್ಗೆ ಚರ್ಚೆ ಸಂದರ್ಭದಲ್ಲಿ ನೀವೆಲ್ಲಾ ಸಲಹೆ ಕೊಡಿ. ಇದು ಆದ ಮೇಲೆ ದಾಖಲೆಗಳನ್ನು ಪರಿಶೀಲಿಸಿ ಮುಕ್ತ ಮನಸ್ಸಿನಿಂದ ಬಿಟ್ಟು ಹೋಗಿರತಕ್ಕಂಥ ತಾಲ್ಲೂಕುಗಳನ್ನು ಸೇರಿಸುವುದಕ್ಕೆ ನಾನು ಮತ್ತು ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಗಮನ ಕೊಡುತ್ತೇವೆ. ನಿಮ್ಮ ಸಲಹೆಯನ್ನು ನಾನು ಗಮನದಲ್ಲಿಟ್ಟುಕೊಂಡು ಮುಂದೆ ಪೂರಕ ಬೇಡಿಕೆ ಮೇಲೆ ಉತ್ತರ ಕೊಡುತ್ತೇನೆ. ನಾನು ಈಗಾಗಲೇ ನಗರ ಪ್ರದೇಶಗಳ ಕುಡಿಯುವ ನೀರಿನ ಬವಣೆ ನಿಲ್ಲಿಸುವ ವಿಷಯದ ಬಗ್ಗೆ ಹೇಳುತ್ತಿದ್ದೆ. ರಾಜಸ್ವ ಲಭ್ಯತೆಯ ಕಾರಣದಿಂದ ನಗರ ಪ್ರದೇಶದಲ್ಲಿ ಈ ಯೋಜನೆಗಾಗಿ 45 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡುವುದಕ್ಕೋಸ್ಕರ ಬಿಡುಗಡೆ ಮಾಡಿದ್ದೇವೆ. ನಗರ ಪ್ರದೇಶದಲ್ಲಿ ಏನು ಕುಡಿಯುವ ನೀರಿನ ಬವಣೆ ಇದೆ, ಅದನ್ನು ತಪ್ಪಿಸುವ ದೃಷ್ಟಿಯಿಂದ ಈ ಪ್ರಾವಿಜನ್ ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆಯಲ್ಲಿ ಅನೇಕ ಬಾಕಿ ಬಿಲ್ಲುಗಳು ಹಣದ ಕೊರತೆಯಿಂದ ಪಾವತಿ ಆಗಿಲ್ಲವೆಂದು ಹಿಂದೆ ಅನೇಕ ಮಾನ್ಯ ಸದಸ್ಯರು ಹೇಳಿರತಕ್ಕಂಥ ಮಾತುಗಳನ್ನು ನಾವು ಕೇಳಿದ್ದೇವೆ. ಈ ಬಾಕಿ ಬಿಲ್ಲುಗಳ ಪಾವತಿ ಹಣವನ್ನು ಸಂಪೂರ್ಣವಾಗಿ ಕೊಟ್ಟು ಅಭಿವೃದ್ಧಿ ಕಾರ್ಯಗಳು ಆಗಬೇಕೆಂಬ ದೃಷ್ಟಿಯಿಂದ ಪೂರಕ ಅಂದಾಜಿನಲ್ಲಿ ಇದಕ್ಕೆ 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಸಲಹೆ ಕೊಡಬೇಕು. ಎರಡು ಸಂಗತಿಯನ್ನು ನಾನು ಹಣಕಾಸಿನ ಸಚಿವನಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು ಏನೆಂದರೆ, ಈ ರಾಜ್ಯದಲ್ಲಿ ಯಾವ ಕಾಮಗಾರಿಗಳು ಮುಗಿದಿವೆ, ಅಂದರೆ ಪ್ರಾಮಾಣಿಕವಾಗಿ ಆಗಿದೆ ಎಂದು ನಮಗೆ ಅನಿಸಿದರೆ ಅಂಥದಕ್ಕೆ ಹಣ ಬಿಡುಗಡೆ ಮಾಡದೆ ಗುತ್ತಿಗೆದಾರರು ಮುಂದೆ ಬಾರದೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಾರದೆಂಬ ದೃಷ್ಟಿಯಿಂದ ಬಹುತೇಕ ಬಾಕಿ ಬಿಲ್ಲುಗಳನ್ನು ಪಾವತಿ ಮಾಡಿದ್ದೇವೆ. ಇನ್ನು ಉಳಿದಿರಬಹುದು, ಆದುದರಿಂದ ಬಹುತೇಕ ಎಂಬ ಶಬ್ದವನ್ನು ನಾನು ಉಪಯೋಗಿಸಿದ್ದೇನೆ. ಏಕೆಂದರೆ ನಾವು ಅಭಿವೃದ್ಧಿ ಕಡೆ ಗಮನ ಕೊಡಬೇಕಾಗಿದೆ. ಒಂದು ಕಾಲದಲ್ಲಿ ಅಧಿಕಾರಿಗಳಿಂದ ಹಣಕಾಸಿನ ಲಭ್ಯತೆ ಇಲ್ಲ ಅಂತ

slow ಎಂದು ಸೂಚನೆ ಹೋಗುತ್ತಿತ್ತು. ಆದರೆ, ಒಂದು ತಿಂಗಳು ಮುಂಚಿತವಾಗಿ ಅಡ್ವಾನ್ಸ್ ಆಗಿ ಕೆಲಸ ಮುಗಿಸೆಂದು ನಾವು ಸೂಚನೆ ಕೊಡುತ್ತಿದ್ದೇವೆ. ನಾವೇನು ಬಜೆಟ್‌ನಲ್ಲಿ ಅಲೋಕೇಶನ್ ಮಾಡಿದ್ದೇವೆ ಈ ಎಲ್ಲಾ ಕಾಮಗಾರಿಗಳಿಗೆ ನಮ್ಮ ಹತ್ತಿರ ಹಣ ಇದೆ. ಮಾರ್ಚ್‌ನಲ್ಲಿ ಕೊನೆಗೆ ಬಿಲ್ ಮಾಡಿಕೊಂಡು ಅಂದರೆ, ಹಳೆಯ ಬಿಲ್, ಹಳೆಯ ಲೆಕ್ಕವನ್ನು ಮಾಡದೆ ಇರುವುದಕ್ಕೆ ನಾವು ಈಗಿನಿಂದಲೇ quarterly ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಎಲ್.ಓ.ಸಿ. ಬಿಡುಗಡೆ ಮಾಡುತ್ತಿದ್ದೇವೆ. ಪ್ರಾಮಾಣಿಕವಾಗಿ ಕಾಮಗಾರಿಗಳು ಆಗುತ್ತವೆ. ಇವುಗಳನ್ನು ನೀವೂ ಕೂಡ ನೋಡಿಕೊಳ್ಳಿ. ಎಲ್ಲಿ ಕೊರತೆಯಾಗಿದೆ ಅಲ್ಲಿಗೆ ನಾವು ಬಜೆಟ್‌ನಲ್ಲಿ ಹೇಳಿರತಕ್ಕಂತ ಹಣವನ್ನು ಕೊಟ್ಟು ಅದನ್ನು ಪೂರ್ತಿ ಮಾಡಬೇಕೆಂಬುದು ನಮ್ಮ ಸದುದ್ದೇಶವಾಗಿದೆ. ಮತ್ತೆ ಈ 150 ಕೋಟಿ ರೂಪಾಯಿಗಳನ್ನು PWD ಯಲ್ಲಿ ಬಾಕಿ ಇರತಕ್ಕಂತ ಬಿಲ್‌ಗಳ ಪಾವತಿ ಮಾಡುವುದಕ್ಕೋಸ್ಕರ ಉಪಯೋಗ ಮಾಡಲಾಗಿದೆ. ಅದೂ ಅಲ್ಲದೆ ಗ್ರಾಮಗಳ ರಸ್ತೆ ಅಭಿವೃದ್ಧಿಗಾಗಿ 60 ಕೋಟಿ ರೂ.ಗಳನ್ನು ಒದಗಿಸಲು ನಾನು ಪ್ರಸ್ತಾಪ ಮಾಡಿರುತ್ತೇನೆ. ಈ ಹಿಂದೆ ಬಾಂಡ್‌ಗಳ ಮೂಲಕ ಹಣವನ್ನು ಎತ್ತಿರುವಂಥದ್ದನ್ನು ಕೇಳಿರುತ್ತೇವೆ. ಆದರೆ ಈಗ ಸಂಪನ್ಮೂಲದ ಲಭ್ಯತೆ ಇರುವುದರಿಂದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಬಾಂಡ್ ಮೂಲಕ ಹಣವನ್ನು ಎತ್ತಿ ಬಡ್ಡಿಕೊಡುವುದು ಅಗತ್ಯವಿಲ್ಲವೆಂದು, ನೀವು ಗ್ಯಾರಂಟಿಯನ್ನು ಕೇಳಬೇಡಿ ಎಂದು ಹೇಳಿ 98 ಕೋಟಿ ರೂ.ಗಳನ್ನು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿಯಾಗಿ ಕೊಡಲು ಪೂರಕ ಅಂದಾಜಿನಲ್ಲಿ ಪ್ರಸ್ತಾಪ ಮಾಡಿ ಸೇರಿಸಿರುತ್ತೇವೆ. ಧಾರವಾಡ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಹೈಕೋರ್ಟ್ ಕಟ್ಟಡದ ಸಲುವಾಗಿ ಸಾಕಷ್ಟು ಚರ್ಚೆಗಳು ಆಗುತ್ತಿತ್ತು; ಭರವಸೆಗಳನ್ನು ಕೊಡುತ್ತಾ ಇರುವುದು ಹಾಗೂ ಬೇರೆ ಬೇರೆ ಕಾರಣಗಳಿಗಾಗಿ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಆ ಕಟ್ಟಡ ಪೂರ್ಣವಾಗಬೇಕೆಂದು ಹೇಳೀ 39.45 ಕೋಟಿ ರೂ.ಗಳನ್ನು ಪೂರಕ ಅಂದಾಜಿನಲ್ಲಿ ನಾವು ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ. ಈ ಕಟ್ಟಡಗಳು ಪೂರ್ಣವಾಗಬೇಕೆನ್ನುವ ದೃಷ್ಟಿಯಿಂದ ಈ ಹಣವನ್ನು ಒದಗಿಸಿದ್ದೇವೆ. ತಲಕಾಡು ಪಂಚಲಿಂಗ ಉತ್ಸವ ನಡೆಯುತ್ತಿದೆ, ಅಲ್ಲಿ ಐತಿಹಾಸಿಕವಾದ ಒಂದು ಕಾರ್ಯಕ್ರಮ ಅಲ್ಲಿ ಆಗುತ್ತಿದೆ ಲಕ್ಷಾಂತರ ಜನ ಯಾತ್ರಾರ್ಥಿಗಳು ಅಲ್ಲಿ ಸೇರುತ್ತಿರುವುದರಿಂದ ಆ ಉತ್ಸವದ ಆಚರಣೆಗಾಗಿ 10 ಕೋಟಿ ರೂ.ಗಳನ್ನು ಪೂರಕ ಅಂದಾಜಿನಲ್ಲಿ ನಾನು ಒದಗಿಸುವಂಥ ವ್ಯವಸ್ಥೆ ಮಾಡಿದ್ದೇನೆ. 2006–07ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ತಾಲ್ಲೂಕು ಆಸ್ಪತ್ರೆಗಳನ್ನು 100 ಬೆಡ್‌ಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸಬೇಕೆಂದು ಹೇಳಿದ ಪ್ರಕಾರ ಮಾಡಲಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೀವು ಹೌಸ್ ಮುಂದೆ ಇದನ್ನು ಮಂಡಿಸಿದ ಮೇಲೆ ಯಾವ್ಯಾವ ಪರಪಸ್‌ಗೆ ಹಣ ಬೇಕು ಎಂದು ಸ್ಪೆಷಿಫೈ ಮಾಡುತ್ತಾರೆ. ಹಣ ಬೇಕು ಎಂದು ನಾವು ಪಾರ್ಟಿಸಿಪೇಟ್ ಮಾಡುವಾಗ ಯಾವುದು ಸರಿ ಯಾವುದು ಸರಿಯಿಲ್ಲವೆಂದು ಎಲ್ಲಿ ಕರೆಕ್ಷನ್ ಮಾಡಿಕೊಳ್ಳಬೇಕೆಂದು ನಾವು ಹೇಳುತ್ತೇವೆ. ನೀವೇ ರಿಪ್ಲೈ ಮಾಡುವಾಗ ನೀವು ಹೇಳಬೇಕು. ನೀವು

ಪ್ರೆಸೆಂಟ್ ಮಾಡಿ ನೀವು ರಿಪ್ಲೈ ಮಾಡಿದ ಮೇಲೆ ನಾವು ಆಗ ಏನು ಹೇಳುವುದು ಇರುವುದಿಲ್ಲ. ನಾನು ಏನು ಹೇಳುತ್ತೇನೆಂದರೆ you have presented you demand. The House will take a consideration of the whole demand that you have presented. ಯಾವ್ಯಾವುದು ಸರಿ ಇದೆ ಯಾವುದು ಸರಿಯಿಲ್ಲವೆಂದು ನಾವು ನಮ್ಮ ವಿವೇಚನೆಗೆ ಒಳಪಟ್ಟಂತೆ ನಾವು ಪ್ರತಿಕ್ರಿಯೆ ತೋರಿಸುತ್ತೇವೆ. ಆಗ ತಾವು ಉತ್ತರವನ್ನು ಕೊಟ್ಟು you can have it passed. ಪದ್ಧತಿಯನ್ನು ಹೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ ನಾನು ಹೇಳಿದ ನಂತರ ತಾವು ಉತ್ತರವನ್ನು ಕೊಟ್ಟು ಏನೇನು ಮಾಡುತ್ತೀರೆಂದು ಹೇಳಬೇಕು. ನಮ್ಮ ಚರ್ಚೆಗೆ ನೀವು ಉತ್ತರ ಕೊಡಬೇಕು ಅಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಹೇಳಿ ನನ್ನ ಮಾತನ್ನು ನಿಲ್ಲಿಸಿ ಬಿಡುತ್ತೇನೆ. ಸಮಯದ ಅಭಾವ ಇರುವುದರಿಂದ ಯಡಿಯೂರಪ್ಪ ಹಣಕಾಸಿನ ಮಂತ್ರಿಯಾದ ಮೇಲೆ ಹಣಕಾಸಿನ ಸಂಪನ್ಮೂಲವನ್ನು ಕ್ರೋಢಿಕರಿಸಿಕೊಂಡು ಹೋಗುತ್ತಿದ್ದಾನೆ. ನಾವು ಹಣವನ್ನು ಕೇಳುವ ಮುಂಚೆ ನಮಗೆ ಬೇಕಾದ ಕಾರ್ಯಕ್ಕೆ ಹಣವನ್ನು ಕೊಡುತ್ತಿದ್ದಾರೆ. ಆದ್ದರಿಂದ ಯಾವುದೇ ಚರ್ಚೆ ಇಲ್ಲದೆ ಅನುಮತಿಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ತಮ್ಮನ್ನು ಕೇಳಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಮುತ್ತಿನಂಥ ಮಾತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಇಬ್ಬರೂ ನಿಮ್ಮನ್ನು ಏನೂ ಕೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ ಇನ್ನೊಂದೆರಡು ಸೆಂಟೆನ್ಸ್ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಎರಡನೇಯದಾಗಿ ಈ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸಬೇಕು ಎನ್ನುವ ನಮ್ಮ ಚಿಂತನೆಯು ಇದೆ. ಆ ಹಿನ್ನೆಲೆಯಲ್ಲಿ ಆ ಉದ್ದೇಶಕ್ಕಾಗಿ 46.50 ಕೋಟಿ ರೂ.ಗಳನ್ನು ಈ ಪೂರಕ ಅಂದಾಜಿನಲ್ಲಿ ಸೇರಿಸಿರುತ್ತೇವೆ. ಹೊಸ ವೈದ್ಯಕೀಯ ಕಾಲೇಜುಗಳನ್ನು ಮಾಡುವುದಕ್ಕೋಸ್ಕರವಾಗಿ ಒಂದು ಐತಿಹಾಸಿ ದಾಖಲೆ ಎಂದು ಎರಡು ಸರ್ಕಾರಿ ಮೆಡಿಕಲ್ ಕಾಲೇಜುಗಳು ಪ್ರಾರಂಭವಾಯಿತು. ನಿಮ್ಮೆಲ್ಲರ ಸಹಕಾರದಿಂದ ನಾವು ವಿಶ್ವ ಪ್ರಯತ್ನವನ್ನು ಮಾಡಿರುತ್ತೇವೆ. ಉಳಿದ ಸರ್ಕಾರಿ ಕಾಲೇಜುಗಳು ಏನಿವೆ ಅವುಗಳನ್ನು ಪೂರ್ಣ ಮಾಡಬೇಕು ಎನ್ನುವ ದೃಷ್ಟಿಯಿಂದ ಪೂರಕ ಅಂದಾಜಿನಲ್ಲಿ 30 ಕೋಟಿ ರೂ.ಗಳನ್ನು ಕಟ್ಟಡಗಳನ್ನು ಪೂರ್ಣ ಮಾಡುವುದಕ್ಕೋಸ್ಕರ ಬಿಡುಗಡೆ ಮಾಡಿರುತ್ತೇವೆ. 2006–07ನೇ ಸಾಲಿಗೆ ನಮ್ಮ ಶಾಸಕರ ನಿಧಿಗೆ 50 ಲಕ್ಷ ರೂ.ಗಳ ಬದಲಾಗಿ ಒಂದು ಕೋಟಿ ರೂ.ಗಳನ್ನು ಮಾಡಲಾಗಿದೆ. ಆ ಹಣ ಸುಮಾರು 150 ಕೋಟಿ ರೂ.ಗಳನ್ನು ಶಾಸಕರ ಪ್ರದೇಶಾಭಿವೃದ್ಧಿಯಲ್ಲಿ ಪೂರಕ ಅಂದಾಜಿನಲ್ಲಿ ಸೇರಿಸಿರುತ್ತೇವೆ. ಅದು ಒಂದು ಕೋಟಿ ರೂ.ಗಳಾಗುತ್ತದೆ. ಅದರಲ್ಲಿ ನಾವು ಈಗಾಗಲೇ ಎರಡು ಕಂತಿನಲ್ಲಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಈ ಎಲ್ಲಾ ಸಂಗತಿಗಳು ಒಳಗೊಂಡಂತೆ ಈ

ಒಂದು 14889 ಕೋಟಿ ರೂ.ಗಳನ್ನು ವೆಚ್ಚವನ್ನು ಭರಿಸುವಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಈ ಪೂರಕ ಅಂದಾಜಿನಲ್ಲಿ 1143.41 ಕೋಟಿ ರೂ.ಗಳು ರಾಜಸ್ವ ಖಾತೆಯಿಂದ ಹೊರ ಹೋಗುವ ನಿವ್ವಳ ಮೊತ್ತ ಇದನ್ನು ಯಾವುದೇ ಚರ್ಚೆ ಇಲ್ಲದೆ ಅನುಮೋದನೆ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪ್ರಕಾಶ ಬಿ. ಹುಕ್ಕೇರಿ : ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಸುವರ್ಣ ಗ್ರಾಮವೆಂದು ಹೇಳಿ ಪ್ರತಿಯೊಂದು ಗ್ರಾಮಕ್ಕೆ ಒಂದು ಕೋಟಿ ರೂ. ಗಳನ್ನು ಕೊಡುತ್ತಿದ್ದೀರಿ.

ಶ್ರೀ ಹೆಚ್. ಆಂಜನೇಯ : ಅವರು ಪಾಪ ಮಂತ್ರಿಯಾಗಿದ್ದಾಗ ಮಾತನಾಡಿಲ್ಲ. ಈಗ ಬೆಳಗಾಂ ಅಧಿವೇಶನದಲ್ಲಿಯಾದರೂ ಮಾತನಾಡಲಿ ಬಿಡಿ.

ಒಬ್ಬ ಮಾನ್ಯ ಸದಸ್ಯರು : ಅಧಿವೇಶನ ಬೆಳಗಾಮ ಜಿಲ್ಲೆಯಲ್ಲಿ ನಡೆಯತಕ್ಕಂಥ ಸಂದರ್ಭದಲ್ಲಿ ಸ್ವಲ್ಪ ಪ್ರಚಾರ ಸಿಗಲಿ ಎಂದು ಕೇಳುತ್ತಿದ್ದಾರೆ.

ಶ್ರೀ ಪ್ರಕಾಶ ಬಿ. ಹುಕ್ಕೇರಿ : ನಮ್ಮ ಜಿಲ್ಲೆಯಲ್ಲಿ 32 ಹೋಬಳಿಗಳಲ್ಲಿ 21 ಸುವರ್ಣ ಗ್ರಾಮಗಳನ್ನು ಆಯ್ಕೆ ಮಾಡಿರುತ್ತಾರೆ. ಇನ್ನುಳಿದವುಗಳು ಏನಾಗಿವೆ ಎಂದರೆ ಟೌನ್ ಪಂಚಾಯಿತಿ ಅಥವಾ ಮುನಿಸಿಪಾಲಿಟಿಗಳು ಏನಿವೆ, ಅವುಗಳನ್ನು ನಿಮಗೆ ಆಯ್ಕೆ ಮಾಡುವುದಕ್ಕಾಗಿಲ್ಲ. ಆದ್ದರಿಂದ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಎಲ್ಲಿ ಹೋಬಳಿ ಟೌನ್ ಪಂಚಾಯಿತಿ ಮುನ್ಸಿಪಾಲಿಟಿಗಳು ಇವೆ ಅವುಗಳನ್ನು ಬಿಟ್ಟು ಬೇರೆ ಗ್ರಾಮಗಳನ್ನು ಆ ಕ್ಷೇತ್ರದಲ್ಲಿ ಆಯ್ಕೆ ಮಾಡಲು ಅವರು ಅನುಕೂಲ ಮಾಡಿಕೊಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಆ ತರಹ ಆಗಿವೆ. 32 ರಲ್ಲಿ 21 ಆಯ್ಕೆ ಆಗಿದೆ. ಇನ್ನು ಉಳಿದದ್ದು ಆಯ್ಕೆ ಆಗಿಲ್ಲ. ಇನ್ನೊಂದು ವಿಷಯ. ಬೆಳಗಾಂ ಸರ್ಕಾರಿ ಮೆಡಿಕಲ್ ಕಾಲೇಜಿಗೆ ಪ್ರಾರಂಭ ಮಾಡಿರುವುದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಎಲ್ಲರ ಪ್ರಯತ್ನದಿಂದ ಕಟ್ಟಡ ಕಾಮಗಾರಿ ಕೂಡ ಪ್ರಾರಂಭವಾಗಿದೆ. ಆದರೆ ಇನ್ನೂ ಕೂಡ ಕಟ್ಟಡ ಪೂರ್ತಿಯಾಗುವುದಕ್ಕೆ ಇನ್ನು ಹಣಕಾಸಿನ ಅವಶ್ಯಕತೆ ಇದೆ, ಮಾನ್ಯ ಉಪ ಮುಖ್ಯಮಂತ್ರಿಗಳು ಬೆಳಗಾಂ ಸರ್ಕಾರಿ ಮೆಡಿಕಲ್ ಕಾಲೇಜಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ, ಅದನ್ನು ದಯಮಾಡಿ ಅವರು ಹೇಳಬೇಕು. ಒಟ್ಟಾರೆ ರಾಜ್ಯದಲ್ಲಿರುವ ಎಲ್ಲಾ ಹೊಸ ಸರ್ಕಾರಿ ಮೆಡಿಕಲ್ ಕಾಲೇಜಿಗೆ 39 ಕೋಟಿ ರೂ.ಗಳು ಎಂದು ಹೇಳಿದ್ದಾರೆ. ನಮ್ಮ ಬೆಳಗಾಂ ಮೆಡಿಕಲ್ ಕಾಲೇಜಿಗೆ 16 ರಿಂದ 15 ಕೋಟಿ ರೂ.ಗಳನ್ನು ಭೂಸೇನಾ ನಿಗಮಕ್ಕೆ ಬಿಡುಗಡೆ ಮಾಡಿ ಕೆಲಸ ಅರ್ಧಕ್ಕೆ ನಿಂತಿದೆ. ಅದಕ್ಕಾಗಿ ಪೂರ್ತಿ ಹಣವನ್ನು ಬಿಡುಗಡೆ ಮಾಡುತ್ತೀರೋ ಅಥವಾ ಇಲ್ಲವೋ ಹೇಳಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಉಪ ಮುಖ್ಯಮಂತ್ರಿಗಳು 6 ತಿಂಗಳ ಹಿಂದೆ ಈ ರಾಜ್ಯಕ್ಕೆ ಬಜೆಟ್‌ನ್ನು ಕೊಟ್ಟಿದ್ದಾರೆ. ತದನಂತರ ಈ ದಿನ ಪೂರಕ ಅಂದಾಜಿನಲ್ಲಿ 1490 ಕೋಟಿ ರೂ.ಗಳ ಒಪ್ಪಿಗೆ ಕೊಡಬೇಕೆಂದು

5.00 P.M.

ಕೇಳಿಕೊಳ್ಳುತ್ತಿದೀರೆ, ನಾನೂ ಕೂಡ ಈ ರಾಜ್ಯದಲ್ಲಿ 36 ವರ್ಷಗಳ ಕಾಲ ರಾಜಕೀಯವಾಗಿ ಕೆಲಸ ಮಾಡಿರುತ್ತೇನೆ. ಒಂದು ಬಜೆಟ್ ಬಂದ ಮೇಲೆ 6 ತಿಂಗಳ ಅವಧಿಯಲ್ಲಿ ಇಷ್ಟೊಂದು ಮೊತ್ತದ ಹಣವನ್ನೂ ಕೂಡ ಎಂದು ಕೇಳುವಂಥ ಪ್ರಯತ್ನವಾಗಿಲ್ಲ. ತಾವು ಏನು ಹೇಳುತ್ತಿದ್ದೀರಿ, ಬಜೆಟ್ ತಯಾರಿಸತಕ್ಕಂಥ ರೀತಿಯಲ್ಲಿ you have not anticipated. ಯಾವ್ಯಾವ ಪ್ರಗತಿಪರ ಕೆಲಸ ಕಾರ್ಯಗಳಿಗೆ ಮತ್ತು ಬಡತನ ರೇಖೆಗಿಂತ ಕೆಳಗೆ ಇರುವ ಜನರಿಗೆ ಮತ್ತು ವಿಶೇಷವಾಗಿ ಬರಗಾಲ ಮತ್ತು ಪ್ರವಾಹ ಪ್ರದೇಶಗಳಿಗೆ ಇದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಈ ಗಡಿಭಾಗದಲ್ಲಿ ಇರತಕ್ಕಂಥ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿರುವುದರಿಂದ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ನಾಳೆ ನಾವು ನಂಜುಂಡಪ್ಪ ವರದಿ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಬರಗಾಲ ಪ್ರವಾಹದ ಭೀತಿ ಇರುವ ಪ್ರದೇಶದ ಬಗ್ಗೆ, ಹೋದ ಸಲ ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ಭಾಗದಲ್ಲಿ ಪ್ರವಾಸವನ್ನು ಮಾಡಿದ್ದಾರೆ. ಮೊನ್ನೆ ಪೂರಕ ಅಂದಾಜನ್ನು ಮಾಡುವಾಗ ವಿಧಾನಸಭೆಯಲ್ಲಿ ಹೇಳಿದರು. ಕೇಂದ್ರ ಸರ್ಕಾರದಿಂದ 357 ಕೋಟಿ ರೂ.ಗಳು ಬಂದಿರುವ ಬಗ್ಗೆ ಮೊದಲನೇ ಸಲ ಅವರ ಬಾಯಿಂದ ಬಂತು ಮತ್ತು ಈಗಲೂ ಕೂಡ ಅವರು ಹೇಳಿದ್ದಾರೆ. ಹೋದ ಸಲ 357 ಕೋಟಿ ರೂ. ಗಳು ಪ್ರವಾಹ ಸಲುವಾಗಿ ಬಂತು. ಕೇಂದ್ರ ಸರ್ಕಾರದಿಂದ ಬಂದಿರುವ ಬಗ್ಗೆ ತಾವು ಅದನ್ನು ಪೂರಕ ಅಂದಾಜಿನಲ್ಲಿ ಸೇರಿಸಿದ್ದೀರಿ. ಕೇಂದ್ರದಿಂದ ಬಂದಿರುವ ಹಣವನ್ನು ಖರ್ಚು ಮಾಡಬೇಕಾಗಿದೆ ಎನ್ನುವ ರೀತಿಯಲ್ಲಿ ಅದನ್ನು ಇವತ್ತು ತೋರಿಸಿದ್ದೀರಿ. ಇವತ್ತು ಯಾವಾಗಲೂ ಕೂಡ ಗಡಿಭಾಗದಲ್ಲಿ ನಡೆಯತಕ್ಕಂಥ ಅಧಿವೇಶನದಲ್ಲಿ ಏನು ಪೂರಕ ಅಂದಾಜುಗಳನ್ನು ಮಂಡಿಸುತ್ತಿದ್ದೀರಿ ತಾವು ವಿಧಾನಸಭೆಯಲ್ಲಿ ಹೇಳತಕ್ಕಂಥ ಮಾತಿಗೆ, ಅಲ್ಲಿ ಆಗತಕ್ಕಂಥ ಕೆಲಸಗಳೂ ಕೂಡ ಸರಿಯಾದ ರೀತಿಯಲ್ಲಿ ಟ್ಯಾಲಿಯಾಗಬೇಕಾಗಿದೆ. ಜನರಿಗೆ ಕೂಡ ಸ್ಪಂದಿಸಬೇಕಾದ ರೀತಿಯಲ್ಲಿ ಮಾಡಬೇಕಾಗುತ್ತದೆ. ಈಗ 1490 ಕೋಟಿ ರೂ.ಗಳನ್ನು ಕೇಳುತ್ತೀರಿ, ಮತ್ತೆ ಇದನ್ನು ಸರಿಯಾದ ರೀತಿಯಲ್ಲಿ ತಾವು anticipate ಮಾಡಿಲ್ಲ. ನಿಮ್ಮ ಬಜೆಟ್ realistic ಅಲ್ಲವೆನ್ನುವ ಮಾತನ್ನೂ ಕೂಡ ನಾನು ಇವತ್ತು ಹೇಳುತ್ತಿದ್ದೇನೆ. ಇವತ್ತು ಬೀಜ ಗೊಬ್ಬರ ಪೂರೈಕೆಗೆ ಸಬ್ಸಿಡಿ ಬಗ್ಗೆ ಹೇಳುತ್ತಿದ್ದೀರಿ. ಈಗ ನಮ್ಮ ಕಡೆ ಜೋಳ ಇದೆ, ಗೋಧಿ ಇದೆ, ಕಡಲೆ ಇದೆ. ಇದು ಬೀಜಗಳನ್ನು ಸಬ್ಸಿಡಿ ದರದಲ್ಲಿ ಇವತ್ತಿನ ದಿವಸ ಬಿಡುಗಡೆ ಮಾಡಬೇಕಾಗುತ್ತದೆ. ಹೋದ ಸಲ ಅಧಿವೇಶನದಲ್ಲಿ ಹೋದ ಸರ್ಕಾರ ಏನು ಕೊಟ್ಟಿತ್ತು ಅದಕ್ಕಿಂತ ಹೆಚ್ಚಿನ ಸಬ್ಸಿಡಿಯನ್ನು ಕೊಟ್ಟಿರುವಂತಹ ಮಾತನ್ನು ತಾವು ಹೇಳಿದಿರಿ. ಇವತ್ತು ಏನು ನಮ್ಮ ಹಿಂಗಾರು ಬೆಳೆ ಬಿತ್ತುವಂತಹ season start ಆಗಿದೆ. ಇದಕ್ಕೆ ತಾವು direction ನ್ನು ಕೊಡಬೇಕಾಗುತ್ತದೆ. ಪ್ರತಿಯೊಂದು ಅಧಿಕಾರಿಗಳು ಕೂಡ ಅದನ್ನು ಪಾಲನೆಯನ್ನು ಕೂಡ ಮಾಡಬೇಕಾಗುತ್ತದೆ. ಇವತ್ತು Finance Department ನಿಂದ ತಮ್ಮ demand No.3 ಅನ್ನು ನಾನು 11ನೇಯ ಪುಟದಲ್ಲಿ ನೋಡಿದ್ದೇನೆ. ಎಲ್ಲಾ item ಗಳಿಗೆ insufficienct to meet

the requirement ಎಂಬ ವಿವರಣೆ ಇದೆ. ಏಕೆ? ಇವತ್ತು ತಾವು ರಾಜ್ಯದ ಉಪ ಮುಖ್ಯಮಂತ್ರಿಗಳಾದ ಭರಾಟೆಯಲ್ಲಿ ಬಹಳ ಹೇಳಿದ್ದೀರಿ, 2–3 ತಿಂಗಳು ಫುಲ್‌ಸ್ಟಾಪ್, ಕಾಮನೇ ಇಲ್ಲಾ. 6 ಪರ್ಸೆಂಟ್ ಇರುವ ಬಡ್ಡಿಯನ್ನು 4 ಪರ್ಸೆಂಟ್‌ಗೆ ಇಳಿಸಿದ್ದೀರಿ. ನೀವು ಎಷ್ಟು ಬಡ್ಡಿಯನ್ನು ಕೊಟ್ಟಿದ್ದೀರಿ ಅದರಿಂದ ಇವತ್ತು ಎಷ್ಟು ರೈತರಿಗೆ ಸಹಾಯವಾಗಿದೆ ಅದರ ಬಗ್ಗೆ ತಾವು ಹೇಳಬೇಕಾಗುತ್ತದೆ. ಕೇವಲ ಇವತ್ತು ಭಾಷಣಗಳನ್ನು ಮಾಡತಕ್ಕದ್ದು ಅಲ್ಲ, ತಾವು ರಾಜ್ಯದ ಹಣಕಾಸಿನ ಮಮಂತ್ರಿಗಳಾಗಿದ್ದೀರಿ. ಶ್ರೀ ದೇವರಾಜ್ ಅರಸ್ ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆಗ ಮಾನ್ಯ ಘೋರ್ಪಡೆಯವರು Finance Minister ಆಗಿದ್ದರು. ಬಹಳಷ್ಟು ಅವರು ಶಿಸ್ತಿನಿಂದ ಇವತ್ತು ರಾಜ್ಯದಲ್ಲಿರತಕ್ಕಂತಹ ಏನು ಸಮಸ್ಯೆಗಳು ಇದೆ, ಅವುಗಳಿಗೆ ಸ್ಪಂದಿಸುತ್ತಿದ್ದರು. ಇವತ್ತು ತಾವು ಏನು ಮಾಡಿದ್ದೀರಿ? ಇವತ್ತು ಸಿಆರ್‌ಎಫ್ ನಲ್ಲಿ 128 ಕೋಟಿ ರೂಪಾಯಿಗಳು, ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಕೇಂದ್ರದಿಂದ ಹಣ ಬರಲಿಲ್ಲವೆಂದು ಇದು ಮಲತಾಯಿ ದೋರಣೆ ಎಂದು ಹೇಳುತ್ತೀರಿ. ಈಗ ಕೇಂದ್ರದ ಗೃಹ ಮಂತ್ರಿಗಳು ಬಂದರು, 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ? ಹೋದ ಸಲ 557 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇನ್ನೂ ಕೂಡ ಬ್ಯಾಲೆನ್ಸ್ 33 ಕೋಟಿ ರೂಪಾಯಿಗಳು ಇದೆ. ಏಕೆ ತಾವು ಸಬ್ಸಿಡಿಯನ್ನು ರಿಲೀಸ್ ಮಾಡುತ್ತಿಲ್ಲ? ಇದರ ಬಗ್ಗೆ ತಾವು ತಮ್ಮ ಶಾಸಕರನ್ನು ಕೇಳಿ. ಯಾವ ಜಿಲ್ಲೆಯಲ್ಲಿಯೂ ಕೂಡ ಇನ್ನೂ ಹಣ ಬಂದು ಮುಟ್ಟಿಲ್ಲ. ಬೆಳಗಾಂನಲ್ಲಿ ಹೋದ ಸಲ ನಾವು ಪ್ರವಾಹ ಪೀಡಿತ ಪ್ರದೇಶಗಳಿಗೆ 171 ಕೋಟಿ ರೂಪಾಯಿಗಳನ್ನು ಒಂದೇ ಜಿಲ್ಲೆಗೆ ಕೊಟ್ಟಿದ್ದೇವೆ. ಬಿಜಾಪುರಕ್ಕೆ 34 ಕೋಟಿ ರೂಪಾಯಿಗಳು ಖರ್ಚಾಗಿದೆ. ಗುಲ್ಬರ್ಗಾಕ್ಕೆ 41 ಕೋಟಿ ರೂಪಾಯಿಗಳು ಖರ್ಚಾಗಿದೆ. ಇವತ್ತು ತಮ್ಮ ಕಂದಾಯ ಮಂತ್ರಿಗಳು ಎಲ್ಲಾ ಕಡೆ ಹಣ ಕೊಟ್ಟಿದ್ದೇವೆನ್ನುವಂತಹ ಮಾತನ್ನು ಹೇಳುತ್ತಾರೆ. At least ನಿಮ್ಮ ಬಜೆಟ್ ನಲ್ಲಿ ಇವತ್ತು ಸಂಕಟಕ್ಕೆ ಸಿಕ್ಕಿರುವಂತಹ ಜನರು ಏನು ಇದ್ದಾರೆ ಅವರಿಗೆ ಹೆಚ್ಚು ಹಣ ಬಿಡುಗಡೆ ಮಾಡಿ ಬರಗಾಲ ಪೀಡಿತ ಪ್ರದೇಶದಲ್ಲಿ, ಪ್ರವಾಹ ಕಾಲದಲ್ಲಿ ಕೊಡತಕ್ಕಂತಹ ಹಣ ಬೇರೆ, ನೀವು ಕೇಂದ್ರದಿಂದ ಬಂದಂತಹ ಹಣವನ್ನು ಕೂಡ ಸರಿಯಾದಂತಹ ರೀತಿಯಲ್ಲಿ ವಿತರಣೆಯನ್ನು ಮಾಡಬೇಕು. ಅದಕ್ಕೆ ಇವತ್ತು ತಾವು ಇನ್ನೂ ಕೂಡ ಹೆಚ್ಚಿನ ಹಣದ ಬಗ್ಗೆ ಹೇಳಿದ್ದೀರಿ, Demand No.7 ರಲ್ಲಿ Rural Development and Panchayath Raj ಪುಟ 21ರಲ್ಲಿ 254 ಕೋಟಿ ರೂಪಾಯಿಗಳ ಕೋರಿಕೆಯನ್ನು ತಾವು ಕೇಳಿದ್ದೀರಿ. ಸ್ವಚ್ಛಗ್ರಾಮಕ್ಕೆ 54 ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ. ಸುವರ್ಣ ಗ್ರಾಮದ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ಹೇಳಿದ್ದಾರೆ. ಅದಕ್ಕಾಗಿ 200 ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ. ಈಗಾಗಲೇ ಪಂಚಾಯಿತಿಗೆ ಮೊಟಕುಗೊಳಿಸುವಂತಹ ರೀತಿಯಲ್ಲಿ ಗ್ರಾಮಪಂಚಾಯಿತಿಗೆ ಕೊಟ್ಟಂತಹ ಅಧಿಕಾರವನ್ನು ಕಿತ್ತೊಗೆಯುತ್ತಿದ್ದೀರಿ. ಮತ್ತು ವಿಶೇಷವಾಗಿ ಇವತ್ತಿನ ದಿವಸ 254 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದೀರಿ, ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ

ಮಾಡಿದ್ದೀರಿ? ಇವತ್ತು ಅಧಿಕಾರ ವಿಕೇಂದ್ರೀಕರಣದಲ್ಲಿ ರಾಜ್ಯದಲ್ಲಿರುವಂತಹ 29 ಸ್ಕೀಮ್‌ಗಳನ್ನು ನಾವು ಜಿಲ್ಲಾ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ ನಾವು ಎಲ್ಲಾ ಕಡೆ ಕೊಟ್ಟಿದ್ದೇವೆ. ಇವತ್ತು ಹಣವನ್ನು ಕೂಡ ಕೊಡಬೇಕಾಗಿದೆ. ನಾವು ನಮ್ಮ ಕಾಲದಲ್ಲಿ ಸಮ್ಮಿಶ್ರ ಸರ್ಕಾರ ಇದ್ದಾಗ ಆಗ ನಮ್ಮ ಜೊತೆ ಮಾನ್ಯ ಪ್ರಕಾಶ್ ರವರು ಇದ್ದರು, 1500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇವತ್ತು ಯಾವ ಗ್ರಾಮ ಪಂಚಾಯಿತಿಗಳೂ ಕೂಡ functioning ಮಾಡುತ್ತಿಲ್ಲ. ಎಲ್ಲಿಯೂ ಕೂಡ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಎಲ್ಲಿಗಾದರೂ ಹೋಗಲಿ, ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಕೂಡ 100 ಕೋಟಿ ರೂಪಾಯಿಗಳು, 200 ಕೋಟಿ ರೂಪಾಯಿಗಳು ಎಂಬ ತಮ್ಮ ಏನು ಭರವಸೆಗಳ ಸುರಿಮಳೆ ಏನು ಇದೆ, ಇವತ್ತು ಆಶ್ವಾಸನೆಯನ್ನು ಕೊಟ್ಟಿರುವ ಬಗ್ಗೆ ಲೆಕ್ಕ ಹಾಕಿರಿ, ಎಲ್ಲಿಯೂ ಕೂಡ ಕಾರ್ಯಗತ ಆಗುತ್ತಿಲ್ಲ. ಅದಕ್ಕೆ ಇವತ್ತಿನ ದಿವಸ ಮತ್ತೆ 1409 ಕೋಟಿ ರೂಪಾಯಿಗಳ ಬಗ್ಗೆ ನಮಗೆ ಕೇಳುತ್ತಿದ್ದೀರಿ. ನಮ್ಮ ಬಜೆಟ್‌ನಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ನಿರ್ವಹಣೆಯನ್ನು ಮಾಡಲಿಲ್ಲ. ಅದರ ಬಗ್ಗೆ ನಾನು ಹೇಳಬೇಕಾಗುತ್ತದೆ. That is forcing us to say that as a Finance Minister utterly you have failed. You have anticipated. ಯಾವ ಬಾಬತ್ತಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಮತ್ತೆ ಇವತ್ತಿನ ದಿವಸ ಇದೂ ಕೂಡ ಮಿನಿ ಬಜೆಟ್ ಆಗಿದೆ. 1500 ಕೋಟಿ ರೂ.ಗಳು ಇವತ್ತಿನ ದಿವಸ ಸಮಯದ ಅಭಾವ ಇದೆ ಎಂದು ತರಾತುರಿಯಲ್ಲಿ ಮಂಜೂರು ಮಾಡುವುದು ಅಲ್ಲ. ಪ್ರತಿಯೊಂದು ಐಟಂನಲ್ಲಿ ಯಾವ್ಯಾವ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ ಇವತ್ತು ರಾಜ್ಯದ ಜನತೆಗೆ ಯಾವ್ಯಾವ ಕೆಲಸ ಕಾರ್ಯಗಳ ಬಗ್ಗೆ, ನಾವು ಕ್ರಮವನ್ನು ತೆಗೆದುಕೊಂಡಿರುವ ಬಗ್ಗೆ ವಿವರವನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಪೂರಕ ಅಂದಾಜು 2006–07ಕ್ಕೆ ಮಂಡಿಸಿದ್ದಾರೆ. ಕೇವಲ 6 ತಿಂಗಳಲ್ಲಿ ಸುಮಾರು 1409 ಕೋಟಿ ರೂ.ಗಳು ಅವರಿಗೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಬೇಕು. ಅಂದರೆ ಯಥಾಪ್ರಕಾರ ಪ್ರತಿವರ್ಷ ಬಜೆಟ್ ಮಂಡನೆ ಮಾಡತಕ್ಕಂಥ ಕಾಲದಲ್ಲಿ ಅವರು ಯೋಚನೆ ಮಾಡದೇ ಇರತಕ್ಕಂಥ ಬಾಬತ್ತಿಗೆ, ಇವತ್ತ ಅವರು ಕೇಳುವಂಥದ್ದು ಸುಮಾರು 1409 ಕೋಟಿ ರೂ.ಗಳು ಇಷ್ಟೊಂದು ಹಣ ಅವರು ಸಂಗ್ರಹಿಸಬೇಕಾಗುತ್ತದೆ. ಮತ್ತು ಅವರು ಅಪೇಕ್ಷೆ ಪಟ್ಟ ಹಾಗೆ ಕೇಂದ್ರ ಸರ್ಕಾರದ ಕಡೆಯಿಂದ ಹಣ ಬರಬಹುದು. ಅಥವಾ ಇರತಕ್ಕಂಥ ಸೇಲ್ಸ್ ಟ್ಯಾಕ್ಸ್‌ನಲ್ಲಿ ಹೆಚ್ಚಿನ ಆದಾಯವನ್ನು ತಂದುಕೊಳ್ಳಬಹುದು. ಅಥವಾ ಎಕ್ಸೈಜ್‌ನಲ್ಲಿ ಹೆಚ್ಚಿಗೆ ಮಾಡುತ್ತೇನೆಂದು ಅವರು ಹೇಳಿಕೊಳ್ಳಬಹುದು. ಏಕೆಂದರೆ ಈ ಹಣವನ್ನು ಖರ್ಚು ಮಾಡಬೇಕಾದರೆ ಎಲ್ಲಿಂದಾದರೂ ನಾವು ಹಣವನ್ನು ಸಂಪಾದನೆ ಮಾಡಬೇಕಾಗುತ್ತದೆ. ನೀವು ಮೊದಲು ಹಣ ಬರುತ್ತದೆಂದು ತಿಳಿದುಕೊಂಡಿದ್ದೀರಿ, ಅದಕ್ಕೆ ಈಗಾಗಲೇ ನೀವು ಬಜೆಟ್ ಮಾಡಿದ್ದೀರಿ. ಆದರೆ ಇದನ್ನು ನೀವು supplementary ಆಗಿ ಕೇಳುವಾಗ ಇಷ್ಟೊಂದು

ಹಣವನ್ನು ನೀವು ಒಂದಲ್ಲ ಒಂದು ರೂಪದಲ್ಲಿ ಸಂಗ್ರಹಣೆ ಮಾಡುವ ಅವಶ್ಯಕತೆ ಇದೆ. ಒಂದು ವೇಳೆ ಹಣ ಸಂಗ್ರಹಣೆ ಆಗದೇ ಹೋದರೆ ಮುಂದಿನ ಬಜೆಟ್‌ನಲ್ಲಿ ಇದು deficit ಆಗಿ ಬರುತ್ತದೆ. ತಾವು ಇದನ್ನು surplus ಎಂದು ತೋರಿಸುತ್ತೀರಿ, ನಮಗೆಲ್ಲರಿಗೆ 6 ತಿಂಗಳ ಹಿಂದೆ, ಈಗ ಮುಂದೆ ಬರತಕ್ಕಂತಹ ಮಾರ್ಚ್‌ನಲ್ಲಿ ಇವರು ತೋರಿಸುವಂತಹದು "ಇಷ್ಟೊಂದು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ, ಅದರಿಂದ ಹಣವನ್ನು ಸಂಗ್ರಹಣೆ ಮಾಡುವುದಕ್ಕೆ ಆಗಲಿಲ್ಲ, ಇಲ್ಲಾ ಕೇಂದ್ರ ಸರ್ಕಾರದಿಂದ ಇಷ್ಟು ಹಣವನ್ನು ಅಪೇಕ್ಷೆ ಮಾಡಿದ್ದೇವೆ ಅದು ಬರಲಿಲ್ಲ, ಮತ್ತು ನಮ್ಮ ಸೈಕಲ್ ಕಾರ್ಯಕ್ರಮ, ಸೀಡ್ ಸಬ್ಸಿಡಿ ಉಳಿದಂತಹ ಎಲ್ಲಾ ಕಾರ್ಯಕ್ರಮಗಳು ಕೂಡ ಅನುಷ್ಠಾನದಲ್ಲಿ ನಾವು ತರಬೇಕಾದರೆ ಖರ್ಚು ಮಾಡಬೇಕು" ಎಂದು ಹೇಳಿ ನೀವು ಇವತ್ತು ಹಣಕ್ಕಾಗಿ ಈ ಒಂದು ಮಂಜೂರಿಯನ್ನು ಪಡೆಯುತ್ತಿದ್ದೀರಿ. ನೀವೇ ಹೇಳಿದ ಹಾಗೆ 1243 ಕೋಟಿ ರೂಪಾಯಿಗಳು ಒಂದಲ್ಲ ಒಂದು ರೂಪದಲ್ಲಿ ನಾವು ರಾಜಸ್ವದಿಂದ ರೆವಿನ್ಯೂದಿಂದ ಸಂಪಾದನೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಉಳಿದಂತಹ 200 ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುತ್ತೀರಿ? ಅದಕ್ಕೆ ಏನು over draft ಮಾಡಿ ಕೊಡುತ್ತೀರೋ? ಈಗ ಏನೆಂದರೆ adjustment tactics ಇದೆ. ಹೇಗೆಂದರೆ, ಕೇಂದ್ರ ಸರ್ಕಾರದಿಂದ 250 ಕೋಟಿ ರೂಪಾಯಿಗಳು ಬಂದ ಮೇಲೆ ಇವರು ಸುಮಾರು 15–20 ದಿವಸಗಳಾದರೂ ಕೂಡ ಹಣವನ್ನು ಬಿಡುಗಡೆ ಮಾಡಲಿಲ್ಲ. ಇವರು ಬರಗಾಲಕ್ಕೆ ಹಣವನ್ನು ಬಿಡುಗಡೆ ಮಾಡಿರುವುದು ಯಾವಾಗ ಅಂದರೆ 22ನೇ ತಾರೀಖು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ. ಅಂದರೆ ನಾವು ಇಲ್ಲಿ ಸೆಷನ್‌ಗೆ ಸೇರುತ್ತೇವೆ. ಅಲ್ಲಿ ಎಲ್ಲರೂ ಇದರ ಬಗ್ಗೆ ಕೇಳುತ್ತಾರೆಂದು ತಿಳಿದುಕೊಂಡು ಎಲ್ಲಾ ಕಡೆ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ಬರಗಾಲದ ಬಗ್ಗೆ ಹಣ ಬಿಡುಗಡೆಯಾಗಲಿ ಅಥವಾ ಅತಿವೃಷ್ಟಿಯಿಂದ ತೊಂದರೆಗೆ ಒಳಪಟ್ಟಂತಹ ತಾಲ್ಲೂಕುಗಳಿಗೆ ತಾವು ಹಣವನ್ನು ಬಿಡುಗಡೆ ಮಾಡಿದ್ದು ಯಾವಾಗ ಸ್ವಾಮಿ? 22ನೇ ತಾರೀಖು, ಇಲ್ಲಿಯವರೆವಿಗೆ ಅದರಲ್ಲಿ ಒಂದು ನಯಾಪೈಸೆಯೂ ಕೂಡ ಖರ್ಚಾಗಲಿಲ್ಲ. ಆದರೆ ಭಾಷಣ ಮಾತ್ರ ಜೋರಾಗಿ ಹೇಳಿದರು. ಬಾಯಿ ಇದ್ದವನು ಬರಗಾಲದಲ್ಲಿ ಬದುಕಿದ್ದ ಎಂದು ನಮ್ಮ ಕಡೆ ಹೇಳುತ್ತಾರೆ. ಹಾಗೆ ಯಾವಾಗಲೂ ಕೂಡ ಯಡಿಯೂರಪ್ಪನವರಿಗೆ ಬಾಯಿ ಜೋರು, ಏನು ಮಾಡಿದ್ದೇವೆ ನಾವು? ಕೊಡುತ್ತೇವೆ ಎಂದು ಹೇಳುತ್ತಾರೆ. ಎಲ್ಲಿದೆ? ಕೊಡುವುದು ಯಾವಾಗ/ ಬರಗಾಲ ಬಂದು ಅತಿವೃಷ್ಟಿ ಆಗಿ ಎರಡು ಮೂರು ತಿಂಗಳಿನಿಂದ ಜನರೆಲ್ಲರೂ ನರಳುತ್ತಿದ್ದಾರೆ. ನಾವು ಹಣ ಕೊಡುತ್ತೇವೆಂದು ಹೇಳಿ ನೀವು ನಿಮ್ಮ ಬೊಕ್ಕಸದಿಂದ ಹಣವನ್ನು ಕೊಡುವುದನ್ನು ಬಿಟ್ಟು ಅಲ್ಲಿ ಇರತಕ್ಕಂತ ಹಣವನ್ನು ಬಹಳ ಇದೆಯೆಂದು ಜಿಲ್ಲಾಧಿಕಾರಿಗಳ ಹತ್ತಿರ ಕಳೆದ ಸಾರಿ ಏನು ಹಣ ಇತ್ತು, ಅದನ್ನು ಹೋದ ಸರ್ಕಾರ ಒಂದಲ್ಲ ಒಂದು ರೀತಿಯಲ್ಲಿ ಏನು ಹಣವನ್ನು ಬಿಡುಗಡೆ ಮಾಡಿತ್ತೋ, ಆ ಹಣವನ್ನು ನೀವು ಇನ್ನೂ ಖರ್ಚು ಮಾಡಿಲ್ಲವೆಂದು ಹೇಳಿ ಜಿಲ್ಲಾಧಿಕಾರಿಗಳಿಗೆ ಬಯ್ದಿದ್ದೇ ಬಯ್ದಿದ್ದು. ಹೋದ ಕಡೆಯಲ್ಲೆಲ್ಲಾ ಅವರಿಗೆ ಹೆದರಿಸಿದ್ದೇ ಹೆದರಿಸಿದ್ದು. ದುಡ್ಡು ಕೊಟ್ಟು ಕೆಲಸ ಮಾಡು ಎಂದರೆ

ಯಾರಾದರೂ ಮಾಡುತ್ತಾರೆ. ಇವತ್ತು ಏನಾಗಿದೆ ಎಂದರೆ ದುಡ್ಡು ಇಲ್ಲದೆ ಪುಕ್ಸಟ್ಟೆ ಚಾಕರಿ ಮಾಡಿರಿ ಎಂದು ಹೇಳುವುದು. ಹೇಗೆ ಸಾಧ್ಯವಾಗುತ್ತದೆ? ಆದರೆ ಅನೇಕ ಜನ ತಮ್ಮ ಪೋಸ್ಟಿಂಗ್ಸ್ ಉಳಿಸಿಕೊಳ್ಳುವ ಸಲುವಾಗಿ ಹೆದರಿಕೊಂಡು, ನಾವು ಡಿ.ಸಿ. ಆಗಿದ್ದೇವೆ, ಬಿಟ್ಟು ಎಲ್ಲಿ ಹೋಗುವುದು ಎಂದು ಇವರು ಹೇಳಿದ್ದಕ್ಕೆಲ್ಲಾ ಸರಿ ಎನ್ನುವುದು. ಇವರು ಎಲ್ಲೆಲ್ಲು ಹೋದರೂ ರಿಹ್ಯಾಬಿಟೇಷನ್‌ಗೆ 10.00 ಕೋಟಿ ಬಿಡುಗಡೆ ಮಾಡಿ ಎಂದರೆ ಸರಿ ಸರ್ ಎನ್ನುವುದು, ಈ ರಸ್ತೆಗೆ 1.00 ಕೋಟಿ ರೂ. ಕೊಡಿ ಎಂದರೆ ಸರಿ ಸರ್ ಎನ್ನುತ್ತಾರೆ. ದುಡ್ಡಿ ಎಲ್ಲಿದೆ, ಪ್ರಾವಿಷನ್ ಎಲ್ಲಿದೆ, ಬಜೆಟ್ ಎಲ್ಲಿದೆ? ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ತೆಗೆದುಕೊಂಡು ಈಗ ನೀವು ಅಪ್ರೂವ್ ಮಾಡಿಕೊಳ್ಳುತ್ತಿದ್ದೀರಿ. ಕೆಲವನ್ನು ನಿಮ್ಮಲ್ಲಿರತಕ್ಕಂಥ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ, ಅದು ಈ ಬೈಸಿಕಲ್ ಮುಂತಾದ ಪಾಪ್ಯುಲರ್ ಸ್ಕೀಮ್ ನೀವೇನು ಮಾಡುತ್ತೇವೆ ಎಂದು ಹೇಳಿದ್ದಿರಿ ಅದಕ್ಕೆ 25.00 ಕೋಟಿ ಇದರಲ್ಲೇ ತಾವು ಮಾಡಿದ್ದು. ಹಣದ ಕೊರತೆ ಇಲ್ಲ ಎನ್ನುತಕ್ಕಂಥವರು ಹಣಕ್ಕಾಗಿ ಕೇಂದ್ರಸರ್ಕಾರಕ್ಕೆ ಕಾಯಬೇಕಾಗಿತ್ತೇ ಅಥವಾ ಅಲ್ಲಿಂದ 250 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದರೆ ಇವರು ಬಿಡುಗಡೆ ಮಾಡಿದ್ದು 150.00 ಕೋಟಿ ರೂ.ಗಳು. ಅದರಲ್ಲಿ ಇನ್ನೂ ಹಣವನ್ನು ಹಿಡಿದುಕೊಂಡು ಬಿಟ್ಟಿದ್ದಾರೆ. ಇನ್ನೊಂದು ಮಾತು, "ನಮಗೆ ಹಣ ಬರಲಿಲ್ಲ", ಎಂದು ಹೇಳುತ್ತೀರಿ. ನೀವು ಖರ್ಚು ಮಾಡದೇ ಹಣ ಬರಲಿಲ್ಲವೆಂದರೆ ಹೇಗೆ? ಅಧ್ಯಕ್ಷರೇ, ಮೊನ್ನೆ ನಾನೂ ಕೂಡ ಪ್ರಧಾನಮಂತ್ರಿಯವರನ್ನು ಭೇಟಿಯಾದೆ, ಶಿವರಾಜ್ ಪಾಟೀಲರವರನ್ನು ಭೇಟಿಯಾದೆ. ನಾವೆಲ್ಲರೂ ಮೊಟ್ಟ ಮೊದಲಿಗೆ ನಮ್ಮ ಮೆಮೊರಾಂಡಮ್‌ನಲ್ಲಿ ಅವರಿಗೆ ಕೇಳಿದ ಡಿಮ್ಯಾಂಡ್ ಏನೆಂದರೆ ನೀವು ಅತಿವೃಷ್ಟಿಗೆ ಮತ್ತು ಅನಾವೃಷ್ಟಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. 250 ಕೋಟಿ ರೂ.ಗಳನ್ನು ನೀವು ಕೊಟ್ಟಿದ್ದೀರಿ, ಅದು ಸಾಕಾಗುವುದಿಲ್ಲ. ದಯವಿಟ್ಟು ಹೆಚ್ಚಿನ ಹಣವನ್ನು ಕೊಡಬೇಕೆಂಬ ಡಿಮ್ಯಾಂಡ್ ಅನ್ನು ನಾವು ರೈಟಿಂಗ್‌ನಲ್ಲಿ ಕೊಟ್ಟಿದ್ದೇವೆ. ಯಾವರೀತಿಯಾಗಿ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಕೇರಳದವರಿಗೆ ಪ್ಯಾಕೇಜ್ ಕೊಟ್ಟಿದ್ದೀರಿ. ಅದೇ ಪ್ಯಾಕೇಜನ್ನು ತಾವು ಘೋಷಣೆ ಮಾಡಬೇಕೆಂಬುದನ್ನು ಕೂಡ ನಾವು ಬರೆದುಕೊಟ್ಟಿದ್ದೇವೆ. ಅದು ಅಲ್ಲದೇ ಇವತ್ತು ಕಳಸಾ ಬಂಡೂರಿ ನಾಲೆ ಬಗ್ಗೆ ಕೂಡ ಮುಂಜಾನೆ ನಮ್ಮ ಇರಿಗೇಷನ್ ಮಿನಿಸ್ಟರ್ ಮತ್ತು ಉಪ ಮುಖ್ಯಮಂತ್ರಿಗಳು ಹೇಳಿದರು, ಆ ವಿಷಯವನ್ನೂ ಕೂಡ ನಾವು ಪ್ರಸ್ತಾಪ ಮಾಡಿ ನಮಗೆ ಆದಷ್ಟು ಬೇಗನೆ ಆ ಅಬೆಯನ್ಸ್‌ನಲ್ಲಿರತಕ್ಕಂಥ ಆರ್ಡರನ್ನು ತೆಗೆದು ಗೋವಾದವರ ಮನವನ್ನು ಒಲಿಸಿ ಇದಕ್ಕೆ clearance ಕೊಡಬೇಕೆಂದೂ ಸಹ ನಾವು ಪ್ರಸ್ತಾಪ ಮಾಡಿದ್ದೇವೆ. ಅದಾದ ಮೇಲೆ ಹಾಸನ ಮತ್ತು ಗುಲ್ಬರ್ಗದ Airport ಏನು ಪೆಂಡಿಂಗ್ ಇದೆ, ಅದನ್ನು clear ಮಾಡಬೇಕೆಂದೂ ಕೂಡ ನಾವು ಕೇಳಿಕೊಂಡಿದ್ದೇವೆ. ಸಂದರ್ಭ ಬಂದಾಗ ರಾಜ್ಯದ ಹಿತದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ ನಾವು ಏನು ಕೇಳಬೇಕೋ ಅದನ್ನು ಕೇಳುತ್ತೇವೆ. ಆದರೆ ಇಲ್ಲಿ ನಿಮ್ಮ ಬಜೆಟ್ ನೋಡಿದಾಗ ಒಂದು, ಇಲ್ಲಿ ಈ ಕಡೆ ಇಷ್ಟೊಂದು ಹೆಚ್ಚಿನ deficit ಆಗುವ ಸಾಧ್ಯತೆ ಇದೆ. ಇನ್ನೊಂದು ಮುಂದಾಲೋಚನೆ ಇಲ್ಲದೆ ಬಜೆಟ್ ತಯಾರು ಮಾಡಿ

ಆಮೇಲೆ ಸಾವಿರಾರು ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿಯಲ್ಲಿ ತರುವುದು, ನಾನು ಒಪ್ಪುತ್ತೇನೆ, ಸಪ್ಲಿಮೆಂಟರಿಯಲ್ಲಿ 100, 200, 300 ಕೋಟಿ ರೂ. ಮಂಜೂರು ಮಾಡಬಹುದು, ಆದರೆ ಇವತ್ತು 1400 ಕೋಟಿ ರೂ. ಇದು ಮತ್ತೆ ಇನ್ನು ಎಲಿಗೆ ಹೋಗುತ್ತದೋ ಗೊತ್ತಿಲ್ಲ. ಏಕೆಂದರೆ ನಂಜುಂಡಪ್ಪ ವರದಿಯ ಪ್ರಕಾರ ಚರ್ಚೆ ಮಾಡಿ ಇಲ್ಲೇ ಕೆಲವು ಯೋಜನೆಗಳನ್ನು ನೀವು ಘೋಷಣೆ ಮಾಡುತ್ತೇವೆಂದು ಹೇಳುತ್ತೀರಿ, ಅದು ಈ ಸಪ್ಲಿಮೆಂಟರಿಯಲ್ಲಿ ಬಂದಿಲ್ಲ. ಪುನಃ ಅದು ಬರುವುದು ಇನ್ನೊಂದು ಸಪ್ಲಿಮೆಂಟರಿಯಲ್ಲಿಯೇ. ಅಂದರೆ ಎಷ್ಟು ಸಾವಿರ ಕೋಟಿ ರೂ. ಡೆಫಿಸಿಟ್ ಆಗುತ್ತದೆಂದು ತಾವು ಹೇಳಬೇಕು, ಏಕೆಂದರೆ ಮೇಲ್ನೋಟಕ್ಕೆ ತಾವು ಇಲ್ಲಿ ಬಂದಾಗ ಹೇಳಬಹುದು. ನಂಜುಂಡಪ್ಪ ವರದಿಯನ್ನು ಇಂಪ್ಲಿಮೆಂಟ್ ಮಾಡುತ್ತೇವೆ, ಅಸಮಾನತೆಯನ್ನು ತೆಗೆದುಹಾಕುತ್ತೇವೆಂಬ ಮಾತುಗಳನ್ನು ಹೇಳಬಹುದು, ಆದರೆ ಅದಕ್ಕೆ ದುಡ್ಡು ಎಲ್ಲಿದೆ? ಇದಕ್ಕೆ ದುಡ್ಡಿಲ್ಲ, ಇನ್ನು 200 ಕೋಟಿ ರೂಪಾಯಿಗಳಷ್ಟು ಡೆಫಿಸಿಟ್ ಇದಕ್ಕೆ ಬೀಳುತ್ತದೆ. ಇನ್ನು ನಂಜುಂಡಪ್ಪ ವರದಿಯನ್ನು ತಾವು ಇಂಪ್ಲಿಮೆಂಟ್ ಮಾಡುವುದಕ್ಕೆ ಈ ವರ್ಷ ಕನಿಷ್ಠ ಪಕ್ಷ ಏನೋ ಒಂದು ಅಂದಾಜು 200, 300, 500 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡರೂ ಸಹ ಅದಕ್ಕೆ sources ಬೇಕಲ್ಲವೇ, ಅದನ್ನು ಯಾವ ರೀತಿಯಾಗಿ ಮೊಬಿಲೈಸ್ ಮಾಡುತ್ತೀರಿ ಎಂಬುದನ್ನೂ ಕೂಡ ತಾವು ಹೇಳಬೇಕು. ಇವರದೇನೆಂದರೆ, ಹೇಳುವುದೊಂದು, ಮಾಡುವುದೊಂದು, ಎಲ್ಲಾ ನಾವು ನಡೆದಂತೆ ನುಡಿಯುವುದು ಎನ್ನುವುದು, ಆದರೆ ಈ ಬಜೆಟ್ ನೋಡಿದಾಗ ನಮಗೆ ಗೊತ್ತಾಗುತ್ತಿದೆ. ನೀವು ಒಂದು ವರ್ಷಕ್ಕಾಗಿ ಇಟ್ಟಂಥ ಬಜೆಟ್, ಈಗ ಉದಾಹರಣೆಗಾಗಿ ಹೇಳುತ್ತೇನೆ. ಒಂದು ಕೆಲಸಕ್ಕಾಗಿ ತಾವು 10.00 ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಇಟ್ಟರೆ, ಈಗ ಸುಮಾರು 8–9 ತಿಂಗಳಾಯಿತು, ನೀವು ಬಿಡುಗಡೆಯನ್ನೇ ಮಾಡದೇ ಹೋದರೆ ಖರ್ಚು ಹೇಗೆ ಆಗುತ್ತದೆ? Naturally ನೀವು 8 ತಿಂಗಳಲ್ಲೇ ಆ 10 ಕೋಟಿ ರೂ.ಗಳಲ್ಲಿ 6.00 ಕೋಟಿ. ರೂ.ಗಳನ್ನು ಖರ್ಚು ಮಾಡಿದ್ದರೆ ಉಳಿದ ನಾಲ್ಕು ಕೋಟಿ ರೂ. ಖರ್ಚಾಗುತ್ತದೆಂದು ನಾವು ತಿಳಿದುಕೊಳ್ಳಬಹುದು. ಆದರೆ ಇವರು ಖರ್ಚು ಮಾಡದೇ ಅದೇ ರೀತಿಯಾಗಿ ಮುಂದಕ್ಕೆ ಹಾಕುತ್ತಿದ್ದಾರೆ, ಈಗ ಬರಗಾಲಕ್ಕಾಗಿ ಒಂದುನಯಾ ಪೈಸೆ ಕೂಡ ಖರ್ಚಿಲ್ಲ. Employment gurantee scheme ಅನ್ನು ಇವರು ನೋಡುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಈ ಸರ್ಕಾರ ಇದ್ದಾಗ ನಾವು ಅಭಿವೃದ್ಧಿಪರ, ಅಭಿವೃದ್ಧಿಪರ ಎಂದು ಹೇಳಿಕೊಳ್ಳುತ್ತಾರಲ್ಲಾ, ನಾನು ಇವರಿಗೆ ಏನು ಹೇಳಬೇಕು ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ಇದು ಇವರ ಸಪ್ಲಿಮೆಂಟರಿ ಬಜೆಟ್ಟಿನಲ್ಲಿರತಕಥ ಮೊದಲನೇ ಬೇಡಿಕೆ. ಎರಡನೆಯದಾಗಿ, ಈಗಾಗಲೇ ಡಿಮ್ಯಾಂಡ್ 1ರ ಪುಟ 4ರಲ್ಲಿ ತಾವು ಏನು ಮಾಡಿದ್ದೀರಿ ಎಂದರೆ, ಬೀಜ ಪೂರೈಸುವಂಥ ಕಾರ್ಯಕ್ರಮ agriculture department ಗೆ ಸೇರಿದ್ದು, ಇದೇನೂ ಹೊಸ ಕಾರ್ಯಕ್ರಮವಲ್ಲ. ಇದು

ಯಥಾಪ್ರಕಾರ ಪ್ರತಿವರ್ಷ ನಾವು ಬಜೆಟ್ಟಿನಲ್ಲಿ ಇಡತಕ್ಕಂಥದ್ದು ಆದರೆ ಬಜೆಟ್ಟಿನಲ್ಲಿ ಕಡಿಮೆ ಏತಕ್ಕೆ ಇಟ್ಟಿದ್ದಾರೆಂದರೆ ಹೆಚ್ಚಿಗೆ ಹಣ ಇಟ್ಟರೆ ಅದು ಡೆಫಿಸಿಟ್ ಆಗುತ್ತದೆ. ಕಡಿಮೆ ಇಟ್ಟರೆ surplus ಆಗುತ್ತದೆ. ಜನರಿಗೆ ತೋರಿಸಲಿಕ್ಕೋಸ್ಕರ ಸ್ವಲ್ಪ nominal fund ಇಟ್ಟು ನಾವು ಇಷ್ಟು ಇಟ್ಟಿದ್ದೇವೆಂದು ಹೇಳಿ ಕೊನೆಗೆ ಅಂತಿಮವಾಗಿ ಬಜೆಟ್ surplus budjet ಎಂದು ಹೇಳುತ್ತಾರೆ. ಈಗ ತರುವುದು ಮತ್ತೆ supplementary budjet ಆದರೆ ನಮಗೆ 54.00 ಕೋಟಿ ರೂಪಾಯಿಗಳು ಬೇಕು, 34.00 ಕೋಟಿ ರೂ. ಬೇಕು. ಅದೇ ರೀತಿಯಾಗಿ ಡಿಮ್ಯಾಂಡ್ ನಂ. 1, 8, 9, 10 ನೀವು ಇದನ್ನು ನೋಡಿದರೆ ಅದು ಬೀಜಕ್ಕೆ 44.00 ಕೋಟಿ ರೂ.ಗಳು, ಅದೇ ರೀತಿಯಾಗಿ ನಿಮ್ಮ Animal Husbandary department ಗೆ ಸುಮಾರು 7.00 ಕೋಟಿ ರೂ. ಅದೂ ಶಿವಮೊಗ್ಗ ಜಿಲ್ಲೆಗೆ ಕೊಟ್ಟಿದ್ದಾರೆ, ಪರವಾಗಿಲ್ಲ. ಏಕೆಂದರೆ ಶಿವಮೊಗ್ಗಕ್ಕೆ ಕೊಟ್ಟರೆ ಒಳ್ಳೆಯದೇ, ಏಕೆಂದರೆ ಒಂದೇ ಜಾಗಕ್ಕೆ ಕೊಟ್ಟಿದ್ದಾರೆ. ಅಲ್ಲೇನು ಕಾಲೇಜ್ ತೆರೆಯಬೇಕೆಂದಿದ್ದಾರೋ ಏನೋ ಗೊತ್ತಿಲ್ಲ. 7.00 ಕೋಟಿ ರೂ.ಗಳು, ಇವೆಲ್ಲಾ ಅನ್‌ಫೋರ್‌ಸೀನ್ ಅವರ ಕಲ್ಪನೆಗೆ ಇರಲಿಲ್ಲ. ಅವರಿಗೆ ಆ ಕಲ್ಪನೆ ಯಾವಾಗ ಬಂತು ಅಂದರೆ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳೂ ಪ್ರವಾಸ ಕಾರ್ಯಕ್ರಮ ಕೈಗೊಂಡಾಗ ಅಥವಾ ಉಪ ಮುಖ್ಯಮಂತ್ರಿಗಳು ಈಶ್ವರಪ್ಪನವರು ಪ್ರವಾಸ ಕಾರ್ಯಕ್ರಮ ಕೈಗೊಂಡಾಗ ಇವು ನೆನಪಿಗೆ ಬಂದು ಆಗ ಇವೆಲ್ಲಾ ಸೇರಿವೆ. ಇನ್ನೊಂದು ಡಿಮ್ಯಾಂಡ್ ನಂ. 7 Rural Development and Panchayat Raj, ನಮ್ಮ ಪ್ರಕಾಶ್ ಹುಕ್ಕೇರಿಯವರು ಕೇಳಿದರು, ಇದರಲ್ಲಿ ಅತೀ ಹೆಚ್ಚಿನ ಮೊತ್ತವನ್ನು ಕೇಳಿದ್ದೀರಿ. 254.00 ಕೋಟಿ ರೂಪಾಯಿಗಳು, ಅಂದರೆ ಸ್ವಚ್ಛ ಗ್ರಾಮಕ್ಕಾಗಿ 54.00 ಕೋಟಿ ರೂ. ಮತ್ತು ಸುವರ್ಣ ಗ್ರಾಮ ಯೋಜನೆಗೆ 200.00 ಕೋಟಿ ರೂ.ಗಳು ಇವೆರಡೂ ಸೇರಿ 254.00 ಕೋಟಿ ರೂ. ಇದನ್ನು ಜೊತೆಯಲ್ಲಿ ಇನ್ನು ಡಿಮ್ಯಾಂಡ್ ನಂ.1 ಮತ್ತು 4ರಲ್ಲಿಯೂ ಕೂಡ ಎಷ್ಟು ಹಣವನ್ನು ನಮೂದು ಮಾಡಿದ್ದೀರಿ, ಇದನ್ನು ನಾನು ನೋಡಿದಾಗ ಇಷ್ಟೊಂದು ಹಣ ಈ ನಾಲ್ಕು ತಿಂಗಳಲ್ಲಿ ಖರ್ಚು ಮಾಡಲಿಕ್ಕೆ ಸಾಧ್ಯವಿದೆಯೇ? ಈ ಹಣವನ್ನು ನಮ್ಮಿಂದ ಪಡೆದುಕೊಂಡು ನೂರಕ್ಕೆ ನೂರು ಖರ್ಚು ಮಾಡುತ್ತೇವೆಂಬ ಶಕ್ತಿ ನಿಮ್ಮಲ್ಲಿದೆಯೇ? ಕೊಟ್ಟ ಹಣವನ್ನೇ ನೀವು ಖರ್ಚು ಮಾಡಿಲ್ಲ. ಈಗ ಇರತಕ್ಕಂಥ ಹಣವನ್ನು ತಾವು ಅನೇಕ ರೀತಿಯಿಂದ ತಾವು ತಡೆ ಹಿಡಿದಿದ್ದೀರಿ. ಏಕೆಂದರೆ ಅನೇಕ ಸಾರಿ ಎಲ್.ಓ.ಸಿ. ಬೇಗನೇ ಬಿಡುಗಡೆಯಾಗುವುದಿಲ್ಲ. ಅನೇಕ ಸಾರಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗುವುದಿಲ್ಲ. ಅನೇಕ ಸಾರಿ ಟೆಂಡರ್‌ಗಳು ಬೇಗನೆ ಅಕ್ಸೆಪ್ಟ್ ಆಗುವುದಿಲ್ಲ. ಟೆಂಡರ್‌ಗಳು ಅಕ್ಸೆಪ್ಟ್ ಆದರೆ ಅವುಗಳಿಗೆ ಕಮಿಟಿಗಳನ್ನು ಫಾರಂ ಮಾಡಿ ಅದು ಬಿಡುಗಡೆ ಮಾಡತಕ್ಕಂಥದ್ದು ಆಗುವುದಿಲ್ಲ, ಇವೆಲ್ಲಾ ನಾವು ನೋಡಿದ್ದೇವೆ. ನೀವು ಎಲ್ಲಿಯವರೆಗೆ ಪರ್ಸ್ಯೂ ಮಾಡಿ ಇದರ ಬಗ್ಗೆ review ಮಾಡುವುದಿಲ್ಲವೋ, ಖಂಡಿತವಾಗಿ ಈ ಹಣವೂ ಖರ್ಚಾಗುವುದಿಲ್ಲ, ಕೇವಲ ಪುಸ್ತಕದಲ್ಲಿ

ಪ್ರಿಂಟ್ ಮಾಡಿ ನಮಗೆ ಹಣವನ್ನು ತೋರಿಸುವುದೇ ಹೊರತಾಗಿ practical ಆಗಿ ಆ ಹಣವನ್ನು ಖರ್ಚು ಆಗುವುದಿಲ್ಲವೆನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಲಿಚ್ಛಿಸುತ್ತೇನೆ. ಅದಕ್ಕಾಗಿ ಈಗ ಸಾಕಷ್ಟು ಯೋಜನೆಗಳಲ್ಲಿ ಇವರು ಬಜೆಟ್ ಬಾಹಿರ ಮಾಡಿದ್ದಾರೆ. ಒಂದಲ್ಲ, ಎರಡಲ್ಲ, ಈಗ social welfare department ಗೆ ಬಾಕಿ ಕೊಡಲಿಕ್ಕೆ ಹಣದ ವ್ಯವಸ್ಥೆ ಮಾಡಿದ್ದೀರಿ. 850.00 ಕೋಟಿ ರೂ. Backward class ನವರಿಗೆ, 3,71 ಲಕ್ಷ ರೂ. ST ಜನರಿಗೆ, 5,00 ಕೋಟಿ ರೂ. SC ಜನರಿಗೆ ಸ್ಕಾಲರ್‌ಷಿಪ್ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದೀರಿ. ಆದರೆ ಇಷ್ಟು ಹಣವನ್ನು ಕೊಟ್ಟರೂ ಕೂಡ ಇನ್ನೂ ಸುಮಾರು 70 ರಿಂದ 75.00 ಕೋಟಿ ರೂಪಾಯಿಯಷ್ಟು ಬಾಕಿ ಇದೆ, ಇದರ ಬಗ್ಗೆ ನೀವು ಮಾಹಿತಿಯನ್ನು ತರಿಸಿಕೊಂಡು ನೋಡಿ. ಅನೇಕ ಶಾಲೆಗಳಲ್ಲಿ ಮಕ್ಕಳಿಗೆ ಅಡ್ಮಿಷನ್ಸ್ ಕೊಡುತ್ತಿಲ್ಲ. ಕಾರಣವೇನೆಂದರೆ, ಅವರಿಗೆ ಹಿಂದಿನ ಬಾಕಿಯನ್ನು ಕೊಟ್ಟಿಲ್ಲ. ಹೋದ ಸಲ ಅವರಿಗೆ ಏನು ಸ್ಕಾಲರ್‌ಷಿಪ್ ದೊರೆಯಬೇಕಿತ್ತು, ಅದೂ ಬಂದಿಲ್ಲವೆಂದು ತಿಳಿದುಕೊಂಡು ಈ ವರ್ಷವೂ ಅವರಿಗೆ ಕೆಲವು ಕಡೆ ಅಡ್ಮಿಷನ್ಸ್ ದೊರೆತಿಲ್ಲ. ಅದು ಫಾರ್ಮಸಿ ಇರಬಹುದು, ಎಂ.ಬಿ.ಎ. ಇರಬಹುದು, Business Administration Diploma ಇರಬಹುದು. ಹಾಗಾಗಿ ಇವತ್ತು ಬಹಳಷ್ಟು ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ನಾನು ಹೀಗೆ ಹೇಳಿದರೆ ಅವರು ಹಿಂದಿನಿಂದ ಬಂದಿದೆ, ನನ್ನ ಕಾಲದಲ್ಲಿ ಮಾತ್ರ ಆಗುತ್ತಿಲ್ಲವೆಂದು ಅವರು ಹೇಳುತ್ತಾರೆಂಬುದು ನನಗೆ ಗೊತ್ತು. ಇದು cumulative. ಸರ್ಕಾರ ಎಂದರೆ ಯಾವಾಗಲೂ ಕೊಡಬೇಕಾಗುತ್ತದೆ, ಮುಂದೆಯೂ ಕೊಡಬೇಕಾಗುತ್ತದೆ, ತೆಗೆದುಕೊಳ್ಳಬೇಕಾಗುತ್ತದೆ. ಆದರೆ ನಿಮ್ಮ ಕಾಲದಲ್ಲಿ ಏನಾಗಿದೆಯೆಂದರೆ ಮೀಟಿಂಗ್ ಮಾಡಿ ನಾವು ಯಾವ ವಿದ್ಯಾರ್ಥಿಗಳನ್ನು ಅವರಲ್ಲಿ ಕಳುಹಿಸುತ್ತೇವೆ ಆ ವಿದ್ಯಾರ್ಥಿಗಳು fees ಕೊಡಲಿ, ಕೊಡದಿರಲಿ, ಅದರ ಜವಾಬ್ದಾರಿ ನಮ್ಮದು, admissions ಮಾಡಿಕೊಳ್ಳುವ ಜವಾಬ್ದಾರಿ ನಿಮ್ಮದು ಎಂಬ ಮಾತನ್ನು ನೀವು ಹೇಳಿದ್ದರೆ ಈ ಪರಿಸ್ಥಿತಿ ಆಗುತ್ತಿರಲಿಲ್ಲ. ಈ ಹಿಂದೆಯೂ ಕೂಡ ಹಣ ಸಿಗಲಿಲ್ಲವೆಂದು ವಿದ್ಯಾರ್ಥಿಗಳನ್ನು ವಾಪಸ್ಸು ಕಳುಹಿಸಿಲ್ಲ. ಏಕೆಂದರೆ ಸರ್ಕಾರ ಆ ಮ್ಯಾನೇಜ್‌ಮೆಂಟ್‌ನವರನ್ನು ಕರೆಸಿ "ನಿಮ್ಮ ಹಣ ಇಂದಲ್ಲ ನಾಳೆ ಬರುತ್ತದೆ, ಆದರೆ ವಿದ್ಯಾರ್ಥಿಗಳಿಗೆ ನೀವು ತೊಂದರೆ ಮಾಡಬಾರದು" ಎನ್ನತಕ್ಕಂಥ strict warning ಇದ್ದ ಕಾರಣ ಬಾಕಿ ಇದ್ದರೂ ಕೂಡ ಆ ವಿದ್ಯಾರ್ಥಿಗಳಿಗೆ admissions ಕೊಡುತ್ತಿದ್ದರು. ಆದರೆ ಇವತ್ತು ಆ ಹೆದರಿಕೆ ಹೋಗಿದೆ, ಏಕೆಂದರೆ ನಾವು ಒಬ್ಬೊಬ್ಬರು ಒಂದೊಂದು ಮಾತನಾಡುತ್ತೇವೆ. ಸರ್ಕಾರವೊಂದೇ ಅಲ್ಲ, Management ನವರು ಒಂದು ಮಾತು, ಸರ್ಕಾರದವರದೊಂದು ಮಾತು, Institutions ಇದ್ದವರದ್ದು ಒಂದು ಮಾತು, ಹೀಗಾಗುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ, ಹಿಂದುಳಿದ ವಿದ್ಯಾರ್ಥಿಗಳಿರಬಹುದು ಅಥವಾ SC/ST ವಿದ್ಯಾರ್ಥಿಗಳಿರಬಹುದು, ಯಾರು Scholorship ಅನ್ನು ತೆಗೆದುಕೊಂಡು ನಿಮ್ಮ ಸರ್ಕಾರಿ ಆಜ್ಞೆ ಮೇಲೆ ಅವಲಂಬಿಸಿದ್ದಾರೋ, ಅವರೆಲ್ಲರಿಗೂ ಕೂಡ

ತೊಂದರೆಯಾಗುತ್ತಿದೆ, ಅದಕ್ಕಾಗಿ ತಕ್ಷಣವೇ ಹಣ ಬಿಡುಗಡೆ ಮಾಡಿ. ನಾನು ಯಾವುದೇ ಸಂಸ್ಥೆಯ ವಿರುದ್ಧ ಅಥವಾ ಪರ ಮಾತನಾಡುತ್ತೇನೆಂದು ತಪ್ಪು ತಿಳಿದುಕೊಳ್ಳಬೇಡಿ. ನಾವು ಅನೇಕ ಸಾರಿ ಗುಡಿ ಗುಂಡಾರಗಳಿಗೆ, ದೇವಸ್ಥಾನಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಇಲ್ಲಿ ಕೊಟ್ಟಿದ್ದನ್ನು ಬಾಕಿ ಕೊಡಲಿಕ್ಕೆ ನಮ್ಮ ಹತ್ತಿರ ದುಡ್ಡು ಇಲ್ಲ. ಆದರೆ ನಾವು ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಹತ್ತಾರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಏಕೆಂದರೆ ಇದು ಅವರವರ ಕಮಿಟ್‌ಮೆಂಟ್. ನಿಮ್ಮ ಕಮಿಟ್‌ಮೆಂಟ್ ಅದು, ನಮ್ಮ ಕಮಿಟ್‌ಮೆಂಟ್ ಬಡ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು.

ಶ್ರೀ ಆರಗ ಜ್ಞಾನೇಂದ್ರ : ಸರ್, ಕನಿಷ್ಠ BCMC, SC/ST ಮಕ್ಕಳ Fee reimbursement ಕಮಿಟ್‌ಮೆಂಟ್ ಅನ್ನು ನಿಮ್ಮ ಕಾಲದಲ್ಲಿಯೇ ಮುಗಿಸಿದ್ದರೆ, ಬಹುಶಃ ಈಗ ಈ ಪೂರಕ ಅಂದಾಜಿನಲ್ಲಿ ತರುವಂತಹ ಅವಶ್ಯಕತೆಯಿರಲಿಲ್ಲ. ನಿಮ್ಮ ಕಮಿಟ್‌ಮೆಂಟ್ ಅನ್ನೇ ನೀವು ಮಾಡಲಿಲ್ಲವೆಂದು ಹೇಳುತ್ತೇವೆ. ನೀವು ಗುಡಿಗೂ ಕೊಡಲಿಲ್ಲ, ವಿದ್ಯಾರ್ಥಿಗಳಿಗೂ ಕೊಡಲಿಲ್ಲ. ಇಬ್ಬರಿಗೂ ಇಲ್ಲದ ಹಾಗೆ ಸಾಲ ಮಾಡಿಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮನುಷ್ಯನಿಗೆ ಅವಕಾಶ ಸಿಕ್ಕಾಗ ಯಾವುದಕ್ಕೆ priority ಕೊಡುತ್ತಾನೆಂದು ಆಗ ಗೊತ್ತಾಗುತ್ತದೆ. ಅದಕ್ಕೆ ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಮಾತಿದೆ, "ಸೋತಾಗ ಸ್ನೇಗತಿ ಗುಣ, ಖಾಯಿಲೆ ಬಿದ್ದಾಗ ಹೆಂಡತಿ ಗುಣ ನೋಡಬೇಕಂತೆ". ಅದಕ್ಕೆ ನಿಮಗೆ ಅಧಿಕಾರ ಸಿಕ್ಕಾಗ ನಿಮ್ಮ ಕಮಿಟ್‌ಮೆಂಟ್ ಏನು ಎನ್ನುವುದು ಗೊತ್ತಾಗುತ್ತದೆ. ಅಧಿಕಾರ ಈಗ ಅವರ ಹತ್ತಿರ ಇದೆ, ಆ ಮಾತು ನಿಮಗೆ, ಲೋಕೋಪಯೋಗಿ ಸಚಿವರಿಗೆ ಹೇಳುವುದಿಲ್ಲ. ರಸ್ತೆ ಬಂದರೆ ಹೇಳೋಣ. ಆದರೆ ಇವತ್ತು ಅನೇಕ ಗುಡಿ ಗುಂಡಾರಗಳಿಗೆ ಸುಮಾರು 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಸಪ್ಲಿಮೆಂಟರಿ ಬಜೆಟ್‌ನಲ್ಲೂ, ಮೊದಲಿನ ಬಜೆಟ್ಟಿನಲ್ಲಿಯೂ ಬಂದಿದೆ. ಅದರಲ್ಲಿ ನೀವು ಮೂರು ಕೋಟಿ SC/ST students ಗೆ ಸ್ಕಾಲರ್‌ಶಿಪ್‌ಗೆಂದು ಕೊಟ್ಟಿದ್ದೀರಿ. 10.00 ಕೋಟಿ ರೂ.ಗಳನ್ನು ಕೊಡಬೇಕಾಗಿತ್ತು. ಯಾರು ಬೇಡವೆನ್ನುತ್ತಾರೆ? ನನಗೆ ಮಾತ್ರ ಏಕೆ ನೀವು ಹೇಳುತ್ತೀರಿ? ನಾನೊಬ್ಬನೇ ಏನು ಕಾಂಟ್ರಾಕ್ಟ್ ಹಿಡಿದಿದ್ದೇನೆಯೇ? ನಾನು ನಿಮ್ಮ ಹಾಗೆ ಬಂದಿರಬಹುದು, ಆದರೆ ಪದೇ ಪದೇ ನನ್ನನ್ನು ಚುಚ್ಚಿ ಮಾತನಾಡುವುದಕ್ಕಿಂತಲೂ ನೀವು ನಿಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಿ. ನಿಮಗೇನೂ ಮತವನ್ನು ಜನರು ಕೊಟ್ಟಿಲ್ಲವೇ?

ಶ್ರೀ ಆರಗ ಜ್ಞಾನೇಂದ್ರ : ಇಲ್ಲ ಸರ್, ಆ ಕ್ಯಾಬಿನೆಟ್‌ನಲ್ಲಿ ನೀವೊಬ್ಬರು ಕಮಿಟ್‌ಮೆಂಟ್ ಇದ್ದವರು ಎಂದು ಹಾಗೆ ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಗಲೂ ನಾನು ಮಾತನಾಡುತ್ತಿದ್ದೇನೇ ಇಲ್ಲವೇ ಎಂಬುದು ನಿಮಗೆ ಚೆನ್ನಾಗಿ ಗೊತ್ತಿದೆ, ಅದಕ್ಕೆ ಇಲ್ಲಿ ರಾಜಕೀಯ ಬೇಡ, ನಾವು ಮಾತನಾಡುತ್ತಿದ್ದವೋ, ಸಂದರ್ಭ ಬಂದಾಗ ಹೋರಾಟ ಮಾಡುತ್ತಿದ್ದೆವೋ ಇಲ್ಲವೊ ಎಂಬುದು ನಿಮಗೂ ಕೂಡ ಗೊತ್ತಿದೆ, ಅದಕ್ಕಾಗಿ ನಾನು ಪ್ರಸ್ತಾಪ ಮಾಡುವುದು ಇಷ್ಟೇ. ಅಂದರೆ ಯಾವುದಕ್ಕೆ ಒತ್ತು ಕೊಡಬೇಕು, ಯಾವುದಕ್ಕೆ necessity ಇದೆ need base ಗೆ ನಿಮ್ಮ ಅಲೋಕೇಷನ್ ಇರಲಿ ಎಂದಷ್ಟೇ ನಾನು ಹೇಳುವುದು. ನಾನು ಅವರಿಗೆ ಚುಚ್ಚು ಮಾತನಾಡುತ್ತೇನೆಂಬುದು ಅಲ್ಲ. Priority ಯಾವುದಕ್ಕೆ ಕೊಡಬೇಕು? ಕೇಂದ್ರ ಸರ್ಕಾರದಿಂದ ಶಿಕ್ಷಣ ಅಭಿಯಾನ ಎನ್ನತಕ್ಕಂಥ ಯೋಜನೆಗಳು ಪ್ರಚಾರ ಮಾಡುವಾಗ, ನಮ್ಮ ಕೈಯಲ್ಲಿ ಅಧಿಕಾರವಿದ್ದಾಗ ಆ ಮಕ್ಕಳಿಗೆ ತೊಂದರೆಯಾಗದಂತಹ ರೀತಿಯಲ್ಲಿ ಅದಕ್ಕೆ ಹೆಚ್ಚಿನ priority ಕೊಡಬೇಕೋ ಅಥವಾ ಸುಣ್ಣ ಬಣ್ಣ ಹಚ್ಚಲಿಕ್ಕೆ ಗುಡಿ, ಗುಂಡಾರಗಳಿಗೆ ಒತ್ತು ಕೊಡಬೇಕೋ? ನಾನು ಅವುಗಳಿಗೆ ಹಣ ಕೊಡಬೇಡಿ ಎಂದು ಹೇಳುತ್ತಿಲ್ಲ, ಆದರೆ priority bsis, need basis, ನೀವು ಅದನ್ನು ನೋಡಿ. ಅದು ನನಗೆ ಕಾಣುತ್ತಿಲ್ಲ, ಆಮೇಲೆ ಇನ್ನೊಂದು ವಿಷಯವೇನೆಂದರೆ, ಕೆಲವು ಕಡೆ D.C.C. ಬ್ಯಾಂಕ್‌ಗಳನ್ನು ಪುನರುಜ್ಜೀವನ ಮಾಡಬೇಕೆಂಬ ಉದ್ದೇಶದಿಂದ ಹಣವನ್ನು ಕೊಟ್ಟಿದ್ದೀರಿ, ಆದರೆ ಕೆಲವು ಕಡೆ ಏನಾಗಿದೆಯೆಂದರೆ discriminate ಆಗಿವೆ. ಅಂದರೆ ಕೆಲವು ಬ್ಯಾಂಕ್‌ಗಳಿಗೆ ಹಣವನ್ನು ಕೊಡುವುದು, ಕೆಲವು ಬ್ಯಾಂಕ್‌ಗಳಿಗೆ ಕೊಡುವುದಿಲ್ಲ. ಈ ರಾಯಚೂರು, ಗುಲ್ಬರ್ಗ, weak bank ಇರಬಹುದು, ಇತ್ತೀಚೆಗೆ ಕೋಲಾರದಲ್ಲಿಯೂ bank weak ಆಗಿದೆ, ಅಲ್ಲಿ ಶ್ರೀನಿವಾಸಗೌಡರಂಥ ಮೇಧಾವಿಗಳಿದ್ದು ಏತಕ್ಕೆ weak ಆಗಿದೆಯೆಂದು ನಮಗೆ ಆಶ್ಚರ್ಯಕರವಾಗಿದೆ. ಹಿಂದೆ ಹಾಸನದಲ್ಲಿಯೂ weak ಆಗಿತ್ತು, ಈಗೇನಾದರೂ ಸರಿ ಹೋಗಿರಬಹುದು. ಅದಕ್ಕಾಗಿ ತಾವು ಸಮಗ್ರವಾಗಿ ಒಂದು package ಮಾಡಿ, ಎಲ್ಲಿ weak D.C.C. ಬ್ಯಾಂಕುಗಳಿವೆ, ಅಲ್ಲಿ ಒಂದು ಪ್ಯಾಕೇಜ್ ಮಾಡಿ. ಏಕೆಂದರೆ ಇವತ್ತು ಎಲ್ಲಾ ಸಬ್ಸಿಡಿ ಕೊಡುವುದು ಅಥವಾ Interest ಕೊಡುವುದು ಅವರ ಮುಖಾಂತರವೇ. ಅದಕ್ಕಾಗಿ ನೀವು ಒಂದು package ಮಾಡಿ ಎಲ್ಲೆಲ್ಲಿ weak ಬ್ಯಾಂಕ್‌ಗಳಿವೆ, ಎಲ್ಲರಿಗೂ ಕೊಟ್ಟು ಪುನರುಜ್ಜೀವನಗೊಳಿಸಿದರೆ ರೈತರಿಗೆ ಅದರಿಂದ ಪ್ರಯೋಜನವಾಗುತ್ತದೆ. ಆದರೆ ಕೆಲವು ಬ್ಯಾಂಕ್‌ಗಳಿಗೆ ಕೊಟ್ಟಿದ್ದೀರಿ, ಕೆಲವು ಬ್ಯಾಂಕುಗಳಿಗೆ ಕೊಡಲಿಲ್ಲ. ಅದನ್ನು ಈ ಬಜೆಟ್ಟಿನಲ್ಲಿ ಸರಿಪಡಿಸಬೇಕೆಂದು ಹೇಳುತ್ತೇನೆ. ಮೂರನೆಯದಾಗಿ ಈ Primary Health Centre ಗೆ ಮತ್ತು purchase of equipments ಸುಮಾರು 36.00 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. 46.00 ಕೋಟಿ ರೂ.ಗಳನ್ನು upgradation ಗೆ ಮತ್ತು 10.00 ರೂ.ಗಳನ್ನು Primary Health Centre ಗಳಿಗೆ ಇಟ್ಟಿದ್ದೀರಿ. ಅಲ್ಲಿಯೂ ಕೂಡ discrimination ಆಗಿವೆ. ಹೇಗೆಂದರೆ ಯಾರು ನಿಮ್ಮಲ್ಲಿ ಬಂದು ಕೇಳುತ್ತಾರೆ ಅವರನ್ನು

5.30 P.M.

upgradation ಮಾಡುವುದು. ಯಾರೂ ನಿಮ್ಮನ್ನು ಕೇಳಿಲ್ಲ ಅಂದರೆ, ಅದು ಕಣ್ಣು ತಪ್ಪಿನಿಂದಾಗಿದೆಯೆಂದು ನೀವು ಹೇಳುತ್ತಿರೋ ಅದು ಗೊತ್ತಿಲ್ಲ. ಏಕೆಂದರೆ ಇದು ಒಂದೇ ಅಲ್ಲ, ಕೆಲವು ವಿಷಯಗಳಲ್ಲಿ discrimination ಅಂದರೆ ತಾರತಮ್ಯ ಆಗಿದೆ, ಇದನ್ನು ಎಲ್ಲರೂ ಕೂಡ ಒಪ್ಪಿಕೊಳ್ಳುವಂಥಾದ್ದು. ನಾವು ಒಂದು ಕಡೆ ತಾರತಮ್ಯವಾಗಬಾರದು, ಸಮಾನತೆ ದೃಷ್ಟಿಯಿಂದ ನಂಜುಂಡಪ್ಪ ವರದಿಯನ್ನು implement ಮಾಡಬೇಕೆಂದು ಹೇಳಿಕೊಳ್ಳುತ್ತೇವೆ. ಇನ್ನೊಂದು ಕಡೆ ಗೊತ್ತಿದ್ದೂ ಕೂಡ ತಾರತಮ್ಯ ಮಾಡುತ್ತೇವೆ. ನಾವು ಇದನ್ನು ಕೇಳಿದಾಗ, ನಿಮ್ಮ ಕಾಲದಲ್ಲಿ ನೀವು ಮಾಡಿಕೊಂಡಿಲ್ಲ ಎನ್ನುವುದು, ನಮ್ಮ ಕಾಲದಲ್ಲಿ ನಾವು ಮಾಡಿಕೊಂಡು ಬಿಟ್ಟಿದ್ದೇವೆ. ನಿಮ್ಮ ಕಾಲದಲ್ಲಿ ಏನೊಂದು norm ಇದೆ, ಆ norm ಗಿಂತಲೂ ಹೆಚ್ಚು schools, colleges ಇದ್ದರೆ, ಎಲ್ಲಿ ಅಸಮಾನತೆ ಇದೆ, ಅಂತಹ ಕಡೆಯಲ್ಲಾದರೂ ಕೊಡಬೇಕಲ್ಲವೇ? ಅಂತಹ ಕಡೆಯೂ ಇಲ್ಲ, ಹೀಗಾಗಿ ಇವತ್ತು Primary Health Centre ಗಳನ್ನು upgradation ಮಾಡುವುದರಲ್ಲಾಗಲಿ, ಇಲ್ಲಿಯೂ ಕೂಡ ತೊಂದರೆಯಾಗಿದೆ. ಇದನ್ನೂ ಕೂಡ ತಾವು ಸರಿಪಡಿಸಬೇಕು. ಇನ್ನು ಚಿಕೂನ್ ಗುನ್ಯಾ ರೋಗ ಬಂದಿರುವುದರಿಂದ, ಇಡೀ ರಾಜ್ಯ ಅಲ್ಲೋಲ ಕಲ್ಲೋಲವಾಗಿದೆ. ಇನ್ನೂ ಆ ರೋಗ ಮುಂದುವರೆಯುತ್ತಿದೆ. ಆ ರೋಗ ನಿಯಂತ್ರಣಕ್ಕಾಗಿ ಆರೋಗ್ಯ ಸಚಿವರು ಪ್ರಯತ್ನ ಮಾಡಿದರೂ, ಎಲ್ಲಾ ಇಲಾಖೆಗಳೂ ಪ್ರಯತ್ನ ಮಾಡಿದರೂ ಕೂಡ ಅಲ್ಲಿ equipments, furniture, building ಕೊರತೆ, ಎಲ್ಲದಕ್ಕಿಂತಲೂ ಅನೇಕ ಸಾರಿ ವೈದ್ಯರ ಕೊರತೆ ಇರುತ್ತದೆ, ಹೀಗಾಗಿ ಆ ರೋಗ ನಿಯಂತ್ರಣವನ್ನು ಮಾಡಲಿಕ್ಕೆ ತೊಂದರೆಯಾಗಿದೆ. ಆದ್ದರಿಂದ ನೀವು ಆ ನಂಜುಂಡಪ್ಪ ವರದಿಯನ್ನು ತರಿಸಿಕೊಂಡು ಬಜೆಟ್ ಅಲೋಕೇಷನ್ ಮಾಡುವಾಗ ಆ ವರದಿಯನ್ನು ಕಣ್ಣು ಮುಂದೆ ಇಟ್ಟುಕೊಂಡು ಯಾವ್ಯಾವುದಕ್ಕೆ ಎಷ್ಟೆಷ್ಟು ಕೊಡಬೇಕೆಂದು ನೋಡಿ ಕೊಡಬೇಕು. ಒಂದು ಜಿಲ್ಲೆಗೆ ಎರಡು ಬರಬಹುದು. ಮತ್ತೊಂದು ಜಿಲ್ಲೆಗೆ ಮೂರು ಬರಬಹುದು. ಇನ್ನೊಂದು ಜಿಲ್ಲೆಗೆ ಐದು ಬರಬಹುದು. ಆದರೆ ನಾವು ನೋಡಿಕೊಂಡು ಕೊಡಬೇಕಾಗುತ್ತದೆ, ತಾವು ಗೃಹ ಸಚಿವರಿದ್ದೀರಿ, ಉಪ ಮುಖ್ಯಮಂತ್ರಿಗಳಿದ್ದೀರಿ, ಪವರ್‌ಫುಲ್ ರೇವಣ್ಣನವರು ಇದ್ದೀರಿ. ನಿಮ್ಮಂತಹವರು ಒಂದೋ ಎರಡೋ ಹೆಚ್ಚಿಗೆ ತೆಗೆದುಕೊಂಡರೆ ಪರವಾಗಿಲ್ಲ. ಒಂದು ತೆಗೆದುಕೊಳ್ಳುವ ಜಾಗದಲ್ಲಿ ನೀವು ಎರಡು ತೆಗೆದುಕೊಂಡರೆ ಯಾರೂ ಮಾತನಾಡುವುದಿಲ್ಲ. ಆದರೆ ಇರುವುದೇ ನೂರು, ಅದರಲ್ಲಿ 10, 10 ನೀವೇ ತೆಗೆದುಕೊಂಡರೆ ಬೇರೆಯವರು ಎಲ್ಲಿಗೆ ಹೋಗಬೇಕು? JDS, BJP ಯಲ್ಲೂ ಅನೇಕರು ಬಾಯಿಲ್ಲದವರು ಸುಮ್ಮನೆ ಇರುತ್ತಾರೆ. ಯಾರ ಬಾಯಿ ಜೋರಿದೆಯೋ, ಇಲ್ಲಿ ರೇವಣ್ಣನವರಿಗೆ support ಮಾಡಲು ಯಾರು ಏಳುತ್ತಾರೋ, ತಕ್ಷಣ ಅವರ ಹೆಸರು note

ಮಾಡಿಕೊಂಡು next day ನೇ ಕೊಟ್ಟುಬಿಡುತ್ತಾರೆ. ಆದರೆ support ಮಾಡಿಯೂ ಹಾಗೇ ಕೂತವರಿಗೆ ಪಾಪ hospital ಇಲ್ಲ school, junior college or discretionary fund ಯಾವುದು ಇಲ್ಲ. ಎಲ್ಲಾ ಹೋಯ್ತು, ಪಾಪ ಅವನು ಬರೇ ಆಕಾಶ ನೆಲ ನೋಡುತ್ತಾ ಕೂರಬೇಕು. ಇಂತಹ ಪರಿಸ್ಥಿತಿ ಅಲ್ಲೂ ಇದೆ, ನಮಗೇ ಮಾಡಿದ್ದಾರೆ ಅಂತ ಅಲ್ಲ. ಇದರ ಜೊತೆಯಲ್ಲಿ ಈಗ 60 ಕೋಟಿ ರೂ. ZP roads ಗೆ ಅಂತ ಕೊಟ್ಟಿದ್ದಾರೆ. 39 ಕೋಟಿ ರೂ. High Court building ಗೆ ಕೊಟ್ಟಿದ್ದೀರಿ, ಆದರೆ ಗುಲ್ಬರ್ಗಾದಲ್ಲಿ ಇನ್ನೂ ಕೆಲಸ ಪ್ರಾರಂಭ ಆಗಿಲ್ಲ. ಒಂದು ನಯಾಪೈಸೇನೂ ಖರ್ಚಾಗಿಲ್ಲ. ಮತ್ತೆ 10 ಕೋಟಿ ರೂಪಾಯಿಗಳನ್ನು ಅಂತ ಕೊಟ್ಟಿದ್ದೀರಿ, ಅದು ನಿಮ್ಮ discretion, ನಾನು ಅದಕ್ಕೆ ಒತ್ತು ಕೊಡುವುದಿಲ್ಲ. 98 ಕೋಟಿ ರೂ. Karnataka Road Development Corporation ಹೀಗೆ ಹಂಚಿಕೆಯಾಗಿದೆ. ಹಂಚಿಕೆ ಮಾಡುವಾಗಲು ಅತ್ಯಂತ ಹಿಂದುಳಿದ ಭಾಗದಲ್ಲಿ ರಸ್ತೆಗಳು ಕೆಟ್ಟಲ್ಲಿ ಈ ಹಣ ಕೊಟ್ಟರೆ ಒಳ್ಳೆಯದಾಗುತ್ತದೆ. ಇದಕ್ಕೂ ಒಂದು norm ಅಂತ ಮಾಡಬೇಕು. ಅಂದರೆ ಒಂದೊಂದು ಜಿಲ್ಲೆಯಲ್ಲಿ geographically ಎಷ್ಟು ಕಿಮೀ ರಸ್ತೆ ಇದೆ ಅದಕ್ಕೆ ಎಷ್ಟು maintenance ಕೊಡಬೇಕು ಎಂದು ಲೆಕ್ಕ ಹಾಕಿ ಕೊಟ್ಟರೆ ಯಾರೂ ಟೀಕೇನೂ ಮಾಡುವುದಿಲ್ಲ, ಟಿಪ್ಪಣಿನೂ ಮಾಡುವುದಿಲ್ಲ. Routine course ನಲ್ಲಿ ಎಲ್ಲರಿಗೂ ತಲುಪುತ್ತದೆ. ಆಗ ತಂಟೆ ತಕರಾರು ಏನೂ ಬರುವುದಿಲ್ಲ. ಆದರೆ ಇವತ್ತಿನ ದುರ್ದೈವದ ರಾಜಕೀಯ ಅಸ್ಥಿರತೆಯಿಂದ ಶಾಸಕರ ಮನವೊಲಿಸಿಕೊಳ್ಳಲು ಪೈಪೋಟಿ ನಡೆದಿದೆ. ಒಬ್ಬರಿಗೆ 20 ಲಕ್ಷ ರೂ. ಕೊಟ್ಟರೆ ಇನ್ನೊಬ್ಬರಿಗೆ 40, ಒಬ್ಬನಿಗೆ 10 ಕೋಟಿ ರೂ. ಕೊಟ್ಟರೆ ಇನ್ನೊಬ್ಬನಿಗೆ 20 ಕೋಟಿ ರೂ. ಬಾಕಿಯವರು ವಿರೋಧ ಪಕ್ಷದವರು, ನೀವು ಹಾಗೇ ಇರಿ, ನಾವು ಇದೇ ರೀತಿ ಮಾಡಿಕೊಂಡು ಹೋಗುತ್ತೇವೆ ಅನ್ನುವುದು, ನಾವು ಉಳಿದರೆ ತಾನೇ ನಿಮಗೆ ಕೊಡುವುದು, ಆದರೆ ನಮ್ಮನ್ನು ರಸ್ತೆಯಲ್ಲಿ ಜನ ನಡೆಯಲು ಬಿಡಬೇಕಲ್ಲಾ. ಅವರಿಗೆ ಸಹಾಯ ಆಗಬೇಕಲ್ಲಾ. ಇವತ್ತು ನನಗೆ ಆರಿಸಿರಬಹುದು, ನಾಳೆ ನಿಮಗೇ ಆರಿಸುತ್ತಾರೆ. ಇನ್ನೊಬ್ಬರಿಗೆ ಆರಿಸುತ್ತಾರೆ. ಖಾಯಂಆಗಿ ನೀವೇ ಗೂಟ ಹೊಡೆದುಕೊಂಡು ಕೂರಲ್ಲ. ಅದಕ್ಕೆ ದಯವಿಟ್ಟು ಜನಪರ ಕಾರ್ಯಕ್ರಮಗಳೇನಿವೆ, ರಸ್ತೆಯಾಗಲಿ ಕೆರೆ school ಗಳಾಗಲಿ, junior college ಆಗಲಿ, ಇವುಗಳಿಗೆ ತಾರತಮ್ಯ ಮಾಡಬಾರದು. ತಾರತಮ್ಯ ಮಾಡಿದರೆ ನಾವು ಎಲ್ಲಿಗೆ ಹೋಗಿ ಮುಟ್ಟುತ್ತೇವೆ? ಅಧ್ಯಕ್ಷರೆ ನೀವು ಅವರಿಗೆ ಹೇಳಬೇಕು, ಸ್ವಲ್ಪ ನಿಮ್ಮ ಮಾತು ಕೇಳುತ್ತಾರೆ. ಈಗ ನೀವು America, most powerful country in the world which believes in democratic principles ನೋಡಿಕೊಂಡು ಬಂದಿದ್ದೀರಿ, ಈ ಸರ್ಕಾರವನ್ನು instal ಮಾಡಿದವರೇ ನೀವು. ನಿಮಗೇ ಈ ಗತಿಯಾದರೆ ನಮ್ಮ ಗತಿಯೇನು? ಅದಕ್ಕೆ atleast development ಗಾಗಿ ನಾವು ನೀವು ಒಂದಾಗೋಣ, ನಾನು ಇದನ್ನು sarcastic ಗೆ ಹೇಳೀದರೂ ಅದರ ಅರ್ಥ

ಏನೆಂದರೆ ನಾವು ಯಾವಾಗಲೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ನೋಡಬೇಕು. Alright ನಿಮಗೆ discretion ಇದ್ದಲ್ಲಿ, ಯಾರಿಗೋ 10 ರೂ. ಹೆಚ್ಚಿಗೆ ಕೊಟ್ಟಿದ್ದೀರಿ ಅಂದರೆ ಒಪ್ಪಿಕೊಳ್ಳೋಣ. ಆದರೆ ಸಾರ್ವಜನಿಕರಿಗೆ ಸಹಾಯವಾಗುವ ಕೆಲಸಗಳಲ್ಲಿ ನಾವು ರಾಜಕೀಯ ಮಾಡಬಾರದು, Allocation ಎಲ್ಲದಕ್ಕೂ ಒಂದೇ ತರಹ ಕೊಡಬೇಕು ಅಂತ ಹೇಳುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕಡೆ ಗಮನ ಕೊಟ್ಟು ಎಲ್ಲ ಕ್ಷೇತ್ರಗಳಿಗೆ ಸರಿಸಮಾನವಾಗಿ development ಬರುವುದನ್ನು ನೋಡಬೇಕು. ಅದು hospital, road high school, junior college ಯಾವುದೇ ಇರಲಿ ಅದರ ಬಗ್ಗೆ ಗಮನ ಕೊಡಬೇಕು.

ಅಧ್ಯಕ್ಷರು : ಖರ್ಗೆಯವರ ವಾದಕ್ಕೆ ನನ್ನ ಸಹಮತವಿದೆ. ಏಕೆಂದರೆ ಕೆಲವು ಕ್ಷೇತ್ರಗಳು ಹಿಂದುಳಿದಿವೆ ಕೆಲವು ಮುಂದುವರೆದಿವೆ, ಯಾವುದಾದರೂ ಒಂದು ವೈಜ್ಞಾನಿಕ guideline ಇಟ್ಟುಕೊಂಡು ಯಾವುದೇ ಸರ್ಕಾರ ಇರಲಿ, ನಿಮ್ಮದಿರಲಿ, ಇವರದಿರಲಿ ಹಾಗೆ ಮಾಡಬೇಕಾದ್ದು ಧರ್ಮ. ಆದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೇಗಾಗಿದೆ ಅಂದರೆ ಸ್ವಾತಂತ್ರ್ಯಕ್ಕೋಸ್ಕರ, ಈ ವ್ಯವಸ್ಥೆಗಾಗಿ ಹೋರಾಟ ಮಾಡಿದರಲ್ಲಾ ಅವರ ಕನಸು ನನಸಾಗುತ್ತಾ ಇಲ್ಲ. ಯಾಕೆ? ಅಧಿಕಾರಕ್ಕೆ ಬಂದವರು ಪಾಳೆಗಾರರಾಗಿಬಿಡುತ್ತಾರೆ. ನಾವು ಅನೇಕ ಪಾಳೆಗಾರರನ್ನು ನೋಡಿದ್ದೇವೆ. ಅವರು ಇವರು ಅಂತ ಇಲ್ಲ. ಈ ಮನೋಭಾವನೆ ಹೋದರೆ ಇದೆಲ್ಲಾ ಸರಿಹೋಗುತ್ತದೆ.

Sri M. Mallikarjuna Kharge : Thank You Sir,

ಅಧ್ಯಕ್ಷರು : ಇದು 40–50 ವರ್ಷದಿಂದ ನಡೆದುಕೊಂಡು ಬಂದಿದೆ, ಬರಬರುತ್ತಾ ಜಾಸ್ತಿಯಾಗುತ್ತಿದೆ. ಬರುಬರುತ್ತಾ ಕಡಿಮೆಯಾಗಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಇವತ್ತು ನೀವು ನಿಜವಾಗಿ ಅಧ್ಯಕ್ಷರು.

ಶ್ರೀ ಹೆಚ್.ಸಿ. ಮಹಾದೇವಪ್ಪ : ಏನಾದರೂ guideline ಬೇಕು ಅಂತ ಹೇಳಿದಿರಿ, ಕಡಪಟ್ಟಿ ಸಮಿತಿ ವರದಿ ಇದೆ, Regional Imbalance ಬಗ್ಗೆ. Human Development Index ಇದೆ. ನಂಜುಂಡಪ್ಪ ವರದೀನೂ ಇದೆ. Dr. Abdul Kalam ರವರ ಮಾರ್ಗಸೂಚಿಗಳಿದೆ, ಇವೆಲ್ಲವನ್ನೂ ಇಟ್ಟುಕೊಂಡು ನಾವು ಸಮತೋಲದ ಅಭಿವೃದ್ಧಿ ಮಾಡುತ್ತೇವೆ ಅಂತ ಹೇಳಿ, ಯಾವ್ಯಾವ ಶಾಸಕರಿಗೆ ಬೇಕೋ ಅವರಿಗೇ ಕೊಟ್ಟರೆ, ಯಾವ ರೀತಿ ಸಮತೋಲದ ಅಭಿವೃದ್ಧಿ ಮಾಡುತ್ತಾರೆ? ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ ಪಕ್ಷಪಾತ ಮಾಡುವುದಿಲ್ಲ ಭೇದಭಾವ ಎಣಿಸುವುದಿಲ್ಲ ಎಲ್ಲರಿಗೂ ಸಮವಾಗಿ ಹಣ ವಿತರಣೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ allocation ನೋಡಿದಾಗ ನಿಮಗೆ feedback ಇದೆಯಾ? ಎಷ್ಟು ಶಾಲೆಗಳು ಎಲ್ಲಿ ಬೇಕು ಅಂತ ಏನೂ ಗೊತ್ತಿಲ್ಲದೇ ಹೇಗೆ ಮಾಡುತ್ತೀರಿ? ನಿಮಗೆ ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೇನೆ ಇಲ್ಲ.

ಶ್ರೀಮತಿ ಸುನೀತಾ ವೀರಪ್ಪಗೌಡ : ಇವರು ಮಂತ್ರಿಯಾಗಿದ್ದಾಗ ಅವರ ತಾಲ್ಲೂಕಿಗೆ 3.5 ಕೋಟಿ ರೂ. ಹಾಕಿಕೊಂಡರು, ನನ್ನ ಕ್ಷೇತ್ರಕ್ಕೆ ಬರೀ 20 ಲಕ್ಷ ರೂ. ಆಗ ಸಮಾನತೆ ಎಲ್ಲಿ ಹೋಗಿತ್ತು?

ಶ್ರೀ ಹೆಚ್.ಸಿ. ಮಹಾದೇವಪ್ಪ : ನಮ್ಮ ಕಾಲದಲ್ಲಿ ರಸ್ತೆಗಳಿಗೆ ಬಂದಿರುವ allocation ನೋಡಿ. ನಂಜುಂಡಪ್ಪ ವರದಿ ಏನಿದೆ, ಅದರ ಪ್ರಕಾರ ಹಂಚಿಕೆ ಮಾಡಿದೆವು. ಹಂಚಿಕೆ ವರದಿ ಇದೆ, ನೋಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಮ್ಮದೂ ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕು ಆದರೆ ಕೊಡಲೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಡೀ ರಾಜ್ಯದ ಹಿತದೃಷ್ಟಿಯಿಂದ ಮತ್ತು ಎಲ್ಲಾ ಕ್ಷೇತ್ರಗಳ ಸರ್ವಾಂಗೀಣ ಉನ್ನತಿಗಾಗಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು ಎಂದು ಹೇಳಿ ಅವರಿಗೆ ಕೇಳಿಕೊಳ್ಳುತ್ತೇನೆ ಮತ್ತು ಈ Session ಗೆ ಈ ಬಜೆಟ್‌ನಲ್ಲಿ ಸಪ್ಲಿಮೆಂಟರಿಯಲ್ಲಿ ಕೇವಲ ಎರಡು ಕೋಟಿ ರೂಪಾಯಿ ಇಟ್ಟಿದ್ದಾರೆ. ಮಾನ್ಯ ಯಡಿಯೂರಪ್ಪನವರೇ, ಬೆಳಗಾಮ್‌ನಲ್ಲಿ ಆಗತಕ್ಕ Session ಗೆ ನಿಮ್ಮ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಎರಡು ಕೋಟಿ ರೂ. ಇದೆ. ಬಹುಶಃ ಈಗ ನಾವು ನೋಡಿದಾಗ ಇದಕ್ಕೆ ಇನ್ನೂ ಹಣ ಬೇಕಾಗುತ್ತದೆ. ಮತ್ತೆ ಪುನಃ ತಾವು ಇನ್ನೊಂದು ಸಪ್ಲಿಮೆಂಟರಿ ತಾವು ತರುತ್ತೀರಿ. ಮೊದಲೇ ನೋಡಿ ಇದನ್ನು ಸರಿ ಮಾಡಿದ್ದರೆ, ಇವೆಲ್ಲಾ ಕಡಿಮೆ ಆಗತಕ್ಕದ್ದು ಅಥವಾ ಸರಿ ಹೋಗತಕ್ಕದ್ದು ಆಗುತ್ತಿತ್ತು. ಅದು ಏನೇ ಇರಲಿ, ನಾನು ತಮಗೆ ಇಷ್ಟು ಮಾತ್ರ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ದಯವಿಟ್ಟು ಅವರೆಲ್ಲರೂ ಕೂಡ ಗಮನ ಕೊಟ್ಟು ಸರಿ ಪಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಖರ್ಗೆಯವರು ಸುದೀರ್ಘವಾಗಿ ಮಾತನಾಡಿದರು. ನಾನೇನೂ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ನೀವಾದರೂ ಒಳ್ಳೆಯ ಮಾತು ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಮ್ಮ ರಾಜ್ಯದಲ್ಲಿ ಒಂದು ಪದ್ಧತಿ ಇತ್ತು. ಈ Finance ಇಲಾಖೆಗೆ 1983ನೇ ಇಸವಿಯವರೆಗೆ ಸ್ವಲ್ಪ ಆ ವಿಚಾರದಲ್ಲಿ ಪರಿಣಿತಿ ಇರತಕ್ಕವರನ್ನು ಮಂತ್ರಿಗಳನ್ನಾಗಿ ಮಾಡತಕ್ಕ ಒಂದು ಅಭ್ಯಾಸ ಇತ್ತು. 1983 ಆದ ಮೇಲೆ ಒಂದು ಹೊಸ ವರ್ಷನ್ ಪ್ರಾರಂಭ ಆಯಿತು. Chief Minister ಆದವರೇ Finance Port Folio ಇಟ್ಟುಕೊಳ್ಳತಕ್ಕ

ಪದ್ಧತಿ ಶುರು ಆಯಿತು. ಈ Chief Minister ಆದವರು Finance Port Folio ವನ್ನು ತಮ್ಮ ಕಡೆಗೆ ಇಟ್ಟುಕೊಳ್ಳುವುದರಿಂದ ಪ್ರಾರಂಭ ಆದದ್ದು ಅನೇಕ ರೀತಿಯ ಪ್ರಬಲ ಸಂಶಯಗಳಿಗೆ ಎಡೆ ಮಾಡಿ ಕೊಟ್ಟಿತು. ಆ ಉದ್ದೇಶದ ಹಿಂದೆ ಒಳ್ಳೆಯದನ್ನು ಕಾಣುವುದು ಕಷ್ಟ ಇತ್ತು. ನಾನು ಬಹಳ ಗೌರವಯುತವಾಗಿ ಮಾತನಾಡಲು ಇಷ್ಟಪಡುತ್ತೇನೆ. ಕಣ್ಣಿಗೆ ಕಾಣದೇ ಇರತಕ್ಕಂಥ ಅಗೋಚರವಾದಂಥ ಒಂದು vested interest ಇರುತ್ತಿತ್ತು. ಅಂದರೆ decline ಪ್ರಾರಂಭ ಆಯಿತು. ಮತ್ತೆ ಎಲ್ಲೋ ಒಂದು ಕಡೆ ಹಾಗೆ ಹೀಗೆ ಆಗುತ್ತಿತ್ತು. ಕಾಮರಾಜ್ ನಾಡಾರ್ ಅವರು ಹೆಚ್ಚು ಓದಿರಲಿಲ್ಲ. ಅವರು ಮೂರು ನಾಲ್ಕು ಕ್ಲಾಸು ಅಷ್ಟೇ ಎಂದು ಕಾಣುತ್ತದೆ. ರಾಜಕಾರಣಿ ಏನೂ ಹೆಚ್ಚು ಓದಿಕೊಳ್ಳಬೇಕಾಗಿಲ್ಲ. ರಾಜಕಾರಣಿಗೆ ಒಂದು ಹೃದಯ ಇರಬೇಕಾಗುತ್ತದೆ. ಅವನ ಹೃದಯ ಸ್ವಲ್ಪ ಸಕ್ರಿಯವಾಗಿ ಕೆಲಸ ಮಾಡಿದರೆ, ಅವನಿಗೆ ಆಲೋಚನೆಗಳು ಮೂಡಿ ಬರುತ್ತವೆ. ಈ ಆಲೋಚನೆಗಳಲ್ಲಿ ಎರಡು ವಿಧ ಇರುತ್ತದೆ. ಸದಾಲೋಚನೆನೂ ಇರುತ್ತದೆ, ದುರಾಲೋಚನೇನು ಇರುತ್ತದೆ. ಆಲೋಚನೆ ಬಂದ ಮೇಲೆ ಅದು ವಿವೇಚನೆಗೆ ಒಳಗಾಗಬೇಕು. ವಿವೇಚನೆಗೆ ಆ ಆಲೋಚನೆ ಒಳಗಾಗಬೇಕು. ವಿವೇಚನೆಗೆ ಆ ಆಲೋಚನೆ ಒಳಗಾಗಬೇಕು. ವಿವೇಚನಾ ರಹಿತವಾದಂಥ ಆಲೋಚನೆ ಆದರೆ ಪ್ರಯೋಜನ ಆಗುವುದಿಲ್ಲ. ಆಲೋಚನೆಯನ್ನು ಮಾಡಿ ವಿವೇಚನೆಗೆ ಒಳಪಡಿಸಿ, ಅದರ ಮೇಲೆ ಬದ್ಧತೆ ಇರಬೇಕಾಗುತ್ತದೆ ನೀವು ಘೋಷಣೆ ಮಾಡಬೇಕಾದಂಥ ಒಂದು ಕಾರ್ಯಕ್ರಮಕ್ಕೆ. ಈಗ ಏನಾಗಿಬಿಟ್ಟಿದೆ ಎಲ್ಲಿ ತಿರುಗಿ, ಚುನಾವಣೆ ಆದ ಮಾರನೆಯ ದಿವಸದಿಂದ, ತಮ್ಮ ವಿಚಾರಕ್ಕೆ ನಾನು ಹೇಳುವುದಿಲ್ಲ. ನಮ್ಮೆಲ್ಲರನ್ನೂ ಸೇರಿಸಿಯೇ ನಾನು ಹೇಳುತ್ತೇನೆ. ನಮ್ಮ ಗಮನ ಎಲ್ಲಾ ಮತ್ತೆ ಮುಂದಿನ ಚುನಾವಣೆ ಕಡೆಗೆ ಇರುತ್ತದೆಯೇ ಹೊರತು ಬೇರೆ ದಿಕ್ಕಿಗೆ ಹೋಗುವುದೇ ಅಪರೂಪ. ನಮ್ಮ ನಡೆ, ನುಡಿ, ನಾವು ರೂಪಿಸುವ ಕಾರ್ಯಕ್ರಮಗಳು. ನಮ್ಮ ಮಾತು. ನಮ್ಮ ಆಲೋಚನೆ. ನಮ್ಮ ಕಾರ್ಯಕ್ರಮಗಳು ಎಲ್ಲವೂ ಕೂಡ ಡಬ್ಬದ ಕಡೆಗೆ ಇರುತ್ತವೆ. ಡಬ್ಬ ತುಂಬಬೇಕು. ಈ ಜನಪ್ರಿಯತೆಗೋಸ್ಕರ ನಾವು ಒಬ್ಬರಿಗಿಂತ ಒಬ್ಬರು Speed ಆಗಿ ಹೋಗುತ್ತೇವೆ. ಮತ್ತು ಅನೇಕ ವೇಳೆ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ ಎಂತಲೇ ಮರೆತು ಬಿಡುತ್ತೇವೆ. ಈಗ ಒಂದು ಕ್ಷಣದ ಕೆಳಗೆ ಮಾನ್ಯ ಅಧ್ಯಕ್ಷರು ಲೋಕಾಭಿರಾಮವಾಗಿ ಮಾತನಾಡಿದರು. ಅಧಿಕಾರದಲ್ಲಿ ಇದ್ದಾಗ ನಮಗೆ ಅಮಲು ಬರುತ್ತದೆ. We get intoxicated. ಈ ಜನರನ್ನು ನೋಡಿದಾಗ ನಾವು balance ಕಳೆದುಕೊಳ್ಳುತ್ತೇವೆ. ರೈಕಸ್ ಎಂದು ಹೇಳುತ್ತಾರೆ. ಅಂದರೆ ಶರೀರ ಎಲ್ಲಾ ಅದುರು ಬಂದು ಬಿಡುತ್ತದೆ. ಜನರನ್ನು ನೋಡಿ ಖುಷಿ ಆಗಿ ಬಿಟ್ಟು ಕೆಲವು ಸಲ ನಾವು ಕಾರ್ಯಕ್ರಮಗಳನ್ನು ಅನೌನ್ಸ್ ಮಾಡುತ್ತಾ ಹೋಗುತ್ತೇವೆ. ನಾವು ಅನೌನ್ಸ್ ಮಾಡಿ ಬಂದ ಕಾರ್ಯಕ್ರಮಕ್ಕೆ ಮತ್ತೆ Finance Commissioner ಅವರ ಸಹೋದ್ಯೋಗಿಗಳು ಎಲ್ಲರೂ ತಲೆ ಕೆಡಿಸಿಕೊಂಡು ನಿಮ್ಮ ಮುಂದೆ ಬರಬೇಕು. ದುಡ್ಡು ಇದೆಯಾ ಇಲ್ಲವಾ? ಸಾಧ್ಯವಾ? ಸಾಧ್ಯ ಇಲ್ಲವಾ ಎಂದು ಬರಬೇಕು. ಹೀಗಾಗಿ ಏನಾಗುತ್ತದೆ? ನಾವು ಪ್ರಕಟಣೆ ಮಾಡತಕ್ಕಂಥ ಕಾರ್ಯಕ್ರಮಗಳು ಅನುಷ್ಠಾನದ ಹಂತ ತಲುಪುವ ಒಳಗಾಗಿ

ಸಾಕಷ್ಟು ಸಣ್ಣದಾಗಿ ಬಿಟ್ಟಿರುತ್ತದೆ. ನಾವು ಏನು ಬಿಟ್ಟಿದಷ್ಟು ರಾಗ ಏನು ತೆಗೆದಿರುತ್ತೇವೆ ಆ ರಾಗ ಎಲ್ಲಾ ಪೂರೈಸಿ ಹಾಡಿಗೆ ಬರುವ ಹೊತ್ತಿಗೆ, ಆ ಹಾಡು ಕೇಳುವುದೇ ಇಲ್ಲ. Democratic temperament ನಿಂದ ನಾವು ಕೆಲಸ ಮಾಡತಕ್ಕದ್ದು ಬಹಳ ಕಡಿಮೆ. Autocratic attitude ನಮ್ಮದು. ಈಗ Officers ಹೇಗಿದ್ದಾರೆ? ಇವತ್ತು ಇರತಕ್ಕ Officers ಬಗ್ಗೆ ನಾನು ಮಾತನಾಡುವುದಿಲ್ಲ. I havae lot of respect for them. ಅವರಲ್ಲೂ ಕೂಡ ನಮ್ಮಂತೆ ಜನ ಇದ್ದಾರೆ. ಮಿನಿಸ್ಟರ್ ಮೂಡ್ ಏನು? ಮಿನಿಸ್ಟರ್‌ಗೆ ಏನು ಹೇಳಿದರೆ ಖುಷಿ ಮಾಡಿಸಬಹುದು? ಹೇಗಿದ್ದರೆ ಮಿನಿಸ್ಟರ್ ಹತ್ತಿರ ನನ್ನ ಕಾಲ ಬರುತ್ತದೆ ಎಂದು ತಿಳಿದುಕೊಂಡು ನಿಮಗೆ ಮೊದಲೇ ಅವರು ಬಗ್ಗಿಬಿಡುತ್ತಾರೆ. ವಿವೇಚನೆ ಇಲ್ಲದೇ ಇರತಕ್ಕಂಥ ಮಂತ್ರಿ, Spine ಇಲ್ಲದೇ ಇರತಕ್ಕಂಥ Officer ಇಬ್ಬರೂ combination ಆಗಿ ಬಿಟ್ಟರೆ ಆ ರಾಜ್ಯ ಅಲ್ಲಿಗೆ ಮುಗಿಯಿತು. ಮಂತ್ರಿಗೆ ಯಾವ ತರಹದ ದಿಟ್ಟತನ ಇರಬೇಕು ಎಂದರೆ ತಾನು ಬದ್ಧತೆ ಆಧಾರದ ಮೇಲೆ ಘೋಷಣೆ ಮಾಡತಕ್ಕ ಕಾರ್ಯಕ್ರಮ. ಯಾವ ಕಾರಣಕ್ಕೂ ನಿಲ್ಲಬಾರದು. ಅದು ಅನುಷ್ಠಾನಗೊಳ್ಳಬೇಕು. ಅಧಿಕಾರಿಯ ವಿವೇಚನೆ ಹೇಗಿರಬೇಕು ಎಂದರೆ ಯಾವುದು ಸಾಧು ಅಲ್ಲವೋ, ಯಾವುದು ಸಾಧ್ಯವಿಲ್ಲವೋ ಅದನ್ನು ಗೌರವದಿಂದ ನಮ್ರತೆಯಿಂದ ತನ್ನ ಮಂತ್ರಿಗೆ, ಇದು ಸಾಧ್ಯ ಆಗುವುದಿಲ್ಲ ಎನ್ನತಕ್ಕಂಥ, ಹೇಳತಕ್ಕಂಥ ಧೈರ್ಯ ಇರಬೇಕು. ಆ ತರಹದ ಸನ್ನಿವೇಶದಲ್ಲಿ ಇವತ್ತು ನಾವು ಇಲ್ಲ. Public Accounts Committee ನಾವು ಇಟ್ಟುಕೊಂಡಿದ್ದೇವೆ. It is a Statutory Committee ಏಕೆ ಇದೆ? ಮಾನ್ಯ ಯಡಿಯೂರಪ್ಪನವರೇ, ತಾವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಬಹುಶಃ Public Accounts Committee Chairman ಆಗಿಯೂ ಕೆಲಸ ಮಾಡಿದ್ದೀರಿ. ಒಂದು ಆರ್ಥಿಕ ವರ್ಷದಲ್ಲಿ ಯಾವುದೇ ಒಂದು ಇಲಾಖೆಗೆ ನಾವು ನಿಗದಿ ಮಾಡಿ ಇಡತಕ್ಕ ಹಣ ಸಾಕಾಗದೇ ಹೋಗಿ ಅವನು ಹೆಚ್ಚು ಹಣ ಖರ್ಚು ಮಾಡಿದಾಗ, ಅದು Audit Objection ಗೆ ಬರುತ್ತದೆ. PAC ಯಲ್ಲಿ Auditor General ಅವರು ಇರುತ್ತಾರೆ. ನಾವು grill ಮಾಡುತ್ತೇವೆ ಅದರ ಮೇಲೆ ನಾವು Recommendations ಮಾಡುತ್ತೇವೆ. ಸ್ವಲ್ಪ ದಯಮಾಡಿ ಸಹಕಾರ ಮಾಡಿ. ನಿಮ್ಮ ಇಲಾಖೆಯವರು Public Accounts Committee ಯ Auditor general ಅವರು ಇರುತ್ತಾರೆ. ನಾವು gril ಮಾಡುತ್ತೇನೆ. ಅದರ ಮೇಲೆ ನಾವು Recommendations ಅನ್ನು ಏನಾದರೂ ತೆಗೆದು ನೋಡುತ್ತಾರೆಯೇ? ಅದಕ್ಕೆ ಏನಾದರೂ ಮೂರು ಕಾಸಿನ ಬೆಲೆ ಕೊಡುತ್ತಾರಾ? Estimates Committee ಯಲ್ಲಿ ಏನು ತೀರ್ಮಾನ ಆಗುತ್ತದೆ? ಏನು Observations ಮಾಡುತ್ತಾರೆ? ಇದನ್ನು ಏನಾದರೂ ಗಮನಿಸುತ್ತಾರಾ ಅಥವಾ Monitoring ಮಾಡುವುದಕ್ಕೆ, ನಿಮ್ಮ ಕಾರ್ಯಕ್ರಮಗಳನ್ನು ನೀವು ಬಜೆಟ್ ಮುಖಾಂತರ ಅನೌನ್ಸ್ ಮಾಡುತ್ತೀರಿ ಇವುಗಳನ್ನು ಅನುಷ್ಠಾನಗೊಳಿಸುವುದಕ್ಕೆ Monitoring ಮಾಡತಕ್ಕ ವ್ಯವಸ್ಥೆ ನಿಮ್ಮಲ್ಲಿ ಏನು ಇದೆ? Monitoring ಇಲ್ಲ. ಒಂದು ರೀತಿಯ ವಿಚಿತ್ರವಾದ ವ್ಯವಸ್ಥೆಯಲ್ಲಿ ನಾವು ನಡೆದುಕೊಂಡು ಹೋಗುತ್ತಿದ್ದೇವೆ. ಹಣ ತುಂಬಿತ್ತು ಕಾರ್ಯಕ್ರಮ ಅನೌನ್ಸ್ ಮಾಡಿದರು. ನಿಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಏನು ಹೇಳುತ್ತೀರಿ?

"ಹೊಸ ಸೇವೆ, ವೆಚ್ಚಗಳಿಗೆ ಮಂಜೂರಾದ ಮುಂಗಡಗಳು ಮತ್ತು ಇತರ ಅನಿರೀಕ್ಷಿತ ವೆಚ್ಚಗಳಿಗೆ ಸಂಬಂಧಿಸಿವೆ" ಎಂದು. ಯಡಿಯೂರಪ್ಪನವರೇ, 'ಅನಿರೀಕ್ಷಿತ' ಎಂದರೆ, ನನಗೆ ಅರ್ಥವಾಗುತ್ತದೆ. ಬರಗಾಲ ಬಂತು, ತಾವೇನೂ ನಿರೀಕ್ಷಿಸಿರುವುದಿಲ್ಲ ಅಥವಾ ಪ್ರವಾಹ ಬಂತು, ಚಿಕೂನ್ ಗುನ್ಯಾ ಬಂತು. ಇದಕ್ಕೆಲ್ಲಾ ಯಾವುದೇ ಸರ್ಕಾರ ತಕ್ಷಣಕ್ಕೆ ಜನರಿಗೆ ಸ್ಪಂದಿಸಬೇಕಾಗುತ್ತದೆ. ಅದಕ್ಕೆ ಖರ್ಚು ಬರುತ್ತದೆ. ಅಂತಹ ಸನ್ನಿವೇಶದಲ್ಲಿ ನಾವು ಮಾಡತಕ್ಕಂಥ ಖರ್ಚಿಗೆ ಸಮರ್ಥನೆ ಮಾಡತಕ್ಕಂಥಾದ್ದು ಸರಿ. 'ಹೊಸ ಸೇವೆ' ಎಂದು ಹೇಳುತ್ತೀರಲ್ಲಾ, ಬಜೆಟ್ ಅನೌನ್ಸ್ ಮಾಡಿದ್ದೀರಿ, ಬಜೆಟ್ ಪ್ರಸೆಂಟ್ ಮಾಡಿದ್ದೀರಿ, ಅದಕ್ಕೆ ಈ ಸದನದ ಒಪ್ಪಿಗೆ ಪಡೆದುಕೊಂಡಿದ್ದೀರಿ. ಬಜೆಟ್ ಮಂಡನೆ ನಿಮಗೆ ಸಿಗತಕ್ಕಂಥ ಒಂದು ಸುವರ್ಣಾವಕಾಶ. ನಿಮ್ಮ ಮನಸ್ಸಿನಲ್ಲಿರುವ ಎಲ್ಲಾ ಆಲೋಚನೆಗಳನ್ನೂ ಪ್ರಚಾರಂಗೊಳಿಸುವುದಕ್ಕೆ ಮತ್ತು ನಿಮ್ಮ ಕಾರ್ಯಕ್ರಮಗಳನ್ನು ಘೋಷಿಸುವುದಕ್ಕೆ. ಒಂದು ವೇಳೆ ನಿಮಗೆ ಕಡಿಮೆ ಸಮಯ ಇದ್ದಾಗ ಏನು ಮಾಡುತ್ತೀರಿ? ಮೂರ್ನಾಲ್ಕು ತಿಂಗಳಿಗೆ Vote on Account ತೆಗೆದುಕೊಳ್ಳುತ್ತೀರಿ. ಅನಂತರ, ಪೂರ್ಣ ಬಜೆಟ್ ಮಂಡಿಸುತ್ತೀರಿ. ಈ ಹೊಸ ಯೋಜನೆಗಳು ಯಾವುವು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅಂದರೆ, ಮನಸೋ ಇಚ್ಛೆ ಹೊದ ಹೋದ ಕಡೆಗಳಲ್ಲೆಲ್ಲಾ ಇದಕ್ಕೆ ಐವತ್ತು ಕೋಟಿ, ಇದಕ್ಕೆ ಎಪ್ಪತ್ತು ಕೋಟಿ, ಇದಕ್ಕೆ ಎಂಬತ್ತು ಕೋಟಿ, ಇದಕ್ಕೆ ನೂರು ಕೋಟಿ ಎಂದು ಬಾದಶಹ ತರಹ ಅನೌನ್ಸ್ ಮಾಡುತ್ತಿರುತ್ತೇವಲ್ಲಾ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾನಾಶಾಹಿ ಪ್ರವೃತ್ತಿಯನ್ನು ನಾವು ತೋರಿಸಿದಾಗ, ಆರ್ಥಿಕ ಶಿಸ್ತು ಇರುವುದಿಲ್ಲ. ಯಾವ ರಾಜ್ಯದಲ್ಲಿ ಆರ್ಥಿಕ ಶಿಸ್ತು ಇರುವುದಿಲ್ಲವೋ, ಆ ರಾಜ್ಯ ಅಭಿವೃದ್ಧಿ ಸಾಧಿಸತಕ್ಕಂಥಾದ್ದು ಬಹಳ ಕಷ್ಟವಾದ ಕೆಲಸ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ. ತಾವು enlighten ಮಾಡಿ ಹೇಳಿ. ಆಯವ್ಯಯದಲ್ಲಿ ಎಷ್ಟು ಮೊತ್ತ ನಮಗೆ ಸಿಗಬಹುದೆಂಬ ನಿರೀಕ್ಷೆ ಮೇಲೆ ಬಜೆಟ್ ತಯಾರಿಸುತ್ತೇವೆ, ಈ ಸೋರಿಕೆ ತಡೆದು ಅಥವಾ ಬೇರೆ ಬೇರೆ ಭಾಗಗಳಲ್ಲಿ ನಮಗೆ ಆದಾಯ ಬರುತ್ತದೆಂದು ಮನವರಿಕೆಯಾದ ನಂತರ ಆ ಶಕ್ತಿಯ ಆಧಾರದ ಮೇಲೆ ಜನರಿಗೆ ಬೇಕಾದಂತಹ ಹೊಸ ಕಾರ್ಯಕ್ರಮಗಳನ್ನು ಘೋಷಿಸುವುದು ತಪ್ಪೇ? ಇದು ಮೊದಲನೆಯದು. ಎರಡನೆಯದು, ಈಗ ನಾನು ಕೇಳಿರುವಂತಹ ಮೊತ್ತದಲ್ಲಿ ಯಡಿಯೂರಪ್ಪನವರೆ, ಇದು ಅಗತ್ಯವಿರಲಿಲ್ಲವೆಂದು ಯಾವುದಾದರೂ ಇದ್ದರೆ, ದಯಮಾಡಿ ಹೇಳಿ. ಮೂರನೆಯದು, ಆರ್ಥಿಕ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರದ Planning Commission ನವರು ಇಡೀ ದೇಶದಲ್ಲಿ ಅತ್ಯಂತ ಚೆನ್ನಾಗಿ ಆರ್ಥಿಕ ನಿರ್ವಹಣೆ ಮಾಡುತ್ತಿರುವಂತಹ ಮೊದಲನೇ ರಾಜ್ಯ ಕರ್ನಾಟಕವೆಂದು ನಮಗೆ ಸಹಭಾಷ್‌ಗಿರಿ ಕೊಟ್ಟರು.

ಶ್ರೀ ಆರ್.ವಿ. ದೇಶಪಾಂಡೆ : ಯಾರಿಗೆ ಈ ಶಹಭಾಷ್‌ಗಿರಿ ಕೊಟ್ಟಿರುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಸ್ವಾಮಿ. ನೀವು ಏನು ಹೇಳುತ್ತಿದ್ದೀರೋ, ನನಗೆ ಗೊತ್ತು.

ಶ್ರೀ ಆರ್.ವಿ. ದೇಶಪಾಂಡೆ : ದೇವರು ಒಳ್ಳೆಯದು ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಿದೆನಲ್ಲಾ, ನಾನು ನನ್ನ ಬಾಯಿಂದ 'ಹಿಂದಿನ ಆರ್ಥಿಕ ಸಚಿವರು ಸರಿ ಇಲ್ಲ, ಹಣಕಾಸಿನ ನಿರ್ವಹಣೆ ಸರಿಯಿಲ್ಲವೆಂದು ನನ್ನ ಬಾಯಿಂದ ಬಂದಾಗ ನೀವು ಅದಕ್ಕೆ ಹೇಳಬೇಕು. ಈಗ ನಾವು ಕಳೆದ ಆರೇಳು ತಿಂಗಳುಗಳಲ್ಲಿ ಮಾಡಿರುವಂತಹ ಐದು ತಿಂಗಳಿನ performance ಆಧಾರದ ಮೇಲೆ ಪ್ಲಾನಿಂಗ್ ಕಮೀಷನ್ ಸರ್ಟಿಫೈ ಮಾಡಿದೆ. ಇದು ಮೊದಲನೆಯದು. ಎರಡನೆಯದು, ನಾನು ಅರ್ಥ ಸಚಿವನಾದ ನಂತರ ಯಾವ್ಯಾವ ಬಾಬ್ತಿನಲ್ಲಿ ನೀವೇನು ಸಂಗ್ರಹಿಸಿದ್ದೀರಿ, ನಾವೇನು ಸಂಗ್ರಹಿಸಿದ್ದೇವೆ, ಯಾವ್ಯಾವುದು ಹೆಚ್ಚುವರಿಯಾಗಿದೆ ಎಂದು ಉತ್ತರ ಕೊಡುವಂತಹ ಕಾಲದಲ್ಲಿ ಹೇಳುತ್ತೇವೆ. ನಾನು ಎದ್ದು ನಿಂತುಕೊಂಡು ಹಿರಿಯರಾದ ರಮೇಶ್‌ಕುಮಾರ್ ಅವರನ್ನು ಕೇಳುವುದೇನೆಂದರೆ, ಹೆಚ್ಚು ಆದಾಯ ಬಂದಾಗ ಹೆಚ್ಚುವರಿ ಹಣವನ್ನು ಪೂರಕ ಬೇಡಿಕೆಯಲ್ಲಿ ಹೊಸ ಕಾರ್ಯಕ್ರಮಗಳಿಗೆ ನಾವು ಕೊಟ್ಟಿದ್ದೇವೆ. ಯಡಿಯೂರಪ್ಪನವರೆ, ಇದು ಅನಗತ್ಯ ಕಾರ್ಯಕ್ರಮ ಎಂದು ಯಾವುದಾದರೂ ಇದ್ದು, ಅದರ ಬಗ್ಗೆ ಹೇಳಿದರೆ, ದಯಮಾಡಿ ಅದನ್ನು ನನ್ನ ಗಮನಕ್ಕೆ ತಂದರೆ, ನಾನು ತಿದ್ದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೋಸ್ಕರ, ನಾನು ಎದ್ದು ನಿಂತೆ ಅಷ್ಟೆ. ಬೇರೇನೂ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಯಾವುದೇ ಸ್ಪಷ್ಟ ಆರೋಪ ಮಾಡಲಿಲ್ಲ. General expressions ಮಾಡಿದೆ. ತಾವು ಮಾತನಾಡುತ್ತಾ, 'ನಮ್ಮ ರಾಜ್ಯದ ಆರ್ಥಿಕ ಸ್ಥಿತಿ–ಗತಿ ಚೆನ್ನಾಗಿದೆ, ಪ್ಲಾನಿಂಗ್ ಕಮೀಷನ್‌ನವರು ಸರ್ಟಿಫೈ ಮಾಡಿದ್ದಾರೆ' ಎಂದಿರಿ. ಸಿದ್ದರಾಮಯ್ಯನವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಬಹಳ ದೊಡ್ಡ financial wizard ಅಲ್ಲದೆ ಹೋದರೂ, ಆ ಮನುಷ್ಯ ಈ ರಾಜ್ಯದ ಅರ್ಥ ವ್ಯವಸ್ಥೆಯನ್ನು ಚೆನ್ನಾಗಿ ನಡೆಸಿಕೊಂಡು ಹೋದರು. ರಾಜಕಾರಣ ಬೇರೆ. ಏನೇನಾಗುತ್ತದೋ, ಎಲ್ಲಿಗೆ ಹೋಗುತ್ತದೋ, ಎಲ್ಲಿಗೆ ಬರುತ್ತದೋ, ಗೊತ್ತಿಲ್ಲ. ಅವೊತ್ತು ಸರಿ, ಇವೊತ್ತು ಸರಿಯಿಲ್ಲವೆಂದು ಅಥವಾ ಇವೊತ್ತು ಸರಿ, ನಾಳೆ ಸರಿಯಿಲ್ಲವೆಂದು ರಾಜಕೀಯ ವಿಚಾರಗಳಲ್ಲಿ ಆ ರೀತಿ ಹೇಳಬಹುದೇ ಹೊರತು ಈ ರಾಜ್ಯದ ಅರ್ಥ ಸಚಿವರಾಗಿ ಅವರು ಕೆಲಸ ನಿರ್ವಹಿಸಿದ ರೀತಿಯಿಂದಾಗಿ ನಮ್ಮನ್ನು ಇವೊತ್ತು ಆರೋಗ್ಯಕರವಾಗ ಸ್ಥಿತಿಯಲ್ಲಿಟ್ಟಿದೆ. ತಾವು ನನಗೆ ಒಂದು ಸ್ಪಷ್ಟ ಪ್ರಶ್ನೆ ಕೇಳಿದಿರಿ. ಸಂಪನ್ಮೂಲಗಳನ್ನು ಸಂಗ್ರಹಿಸುವಂತಹ ಶಕ್ತಿ ಇದ್ದರೆ, ಚೈತನ್ಯ ಇದ್ದರೆ, ಹೊಸ ಕಾರ್ಯಕ್ರಮಗಳನ್ನು ಘೋಷಿಸುವುದು ತಪ್ಪೇ ಎಂದು. ಖಂಡಿತವಾಗಿಯೂ ತಪ್ಪಿಲ್ಲ. ಅದೇ ಸವಾಲು. ನಾವು ಆ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಆ ದಿಕ್ಕಿನಲ್ಲಿ ನಿಮ್ಮ ಆಲೋಚನೆ ಇದ್ದಷ್ಟೂ ದಿವಸ ನೀವು ಆರೋಗ್ಯವಾಗಿ ಇರುತ್ತೀರಿ. ಸಂಗ್ರಹಣೆ ಮಾಡಬೇಕು, ಬರುವ ಆದಾಯ ಸೋರಿ ಹೋಗಬಾರದು, ತೆರಿಗೆಯಿಂದ ಬಂದಂಥ ಯಾವ ಹಣ ಖಜಾನೆಯಲ್ಲಿರುತ್ತದೆ, ಅದು ಸತ್ಕಾರ್ಯಕ್ಕೆ ವಿನಿಯೋಗವಾಗಬೇಕೆಂಬ ದೀಕ್ಷೆ ನಿಮ್ಮಲ್ಲಿರುವವರೆಗೆ ರಾಜ್ಯದ ಅಭಿವೃದ್ಧಿಗೆ ಏನೂ ತೊಂದರೆ ಇಲ್ಲ. ನಾನು ಪೂರ್ವಾಗ್ರಹಪೀಡಿತನಾಗಿ ಮಾತನಾಡುತ್ತಿಲ್ಲ. ಈಗ ನೋಡಿ ಒಂದು

ಉದಾಹರಣೆ ತಮಗೆ ಹೇಳುತ್ತೇನೆ. ಅಭಿಯಾಚನೆ 1. ನೀವೇ ನೋಡಿ. ಮೊದಲನೇ ಐಟಂ ನೋಡಿ. ಅನುದಾನದ ಕೊರತೆ ಇರುವುದರಿಂದ ಬಾಬ್ತು ಸಂಖ್ಯೆ 2 –133.78ರಲ್ಲಿ ಹೆಚ್ಚುವರಿ ಅನುದಾನವನ್ನು ಅಭಿಯಾಚನೆಯಲ್ಲಿ ಸೇರಿಸಲಾಗಿದೆ. ಯೋಜನೆಯ ಅನುಷ್ಠಾನಕ್ಕೆ ಅನುದಾನದ ಕೊರತೆ ಇರುವುದರಿಂದ ಅಂದರೆ, ನಿಮ್ಮ ಇಲಾಖೆಯ ಅಧಿಕಾರಿಗಳು ಇದನ್ನು ನಿರೀಕ್ಷಿಸಿರಲಿಲ್ಲವೇ? ಲೆಕ್ಕ ಹಾಕುವುದಿಲ್ಲವೇ? ಅನುದಾನಕ್ಕೆ ನಮಗೆ ಎಷ್ಟು ಹಣ ಬೇಕಾಗುತ್ತದೆಂದು ಅವರಿಗೆ ಗೊತ್ತಿರುವುದಿಲ್ಲವೇ? ಇಷ್ಟು ದೊಡ್ಡ ಪ್ರಮಾಣದ ಹಣ ಹೇಗೆ ವ್ಯತ್ಯಾಸ ಬರುತ್ತದೆ? ಖರ್ಗೆಯವರು ಮಾತನಾಡುತ್ತಾರೆ, ಇನ್ನು ಅನೇಕ ಜನರು ಮಾತನಾಡುತ್ತಾರೆ. ಎಲ್ಲಾ details ಗೂ ನಾನು ಹೋಗುವುದಿಲ್ಲ. ಒಬ್ಬರೇ ಜವಾಬ್ದಾರಿಯಿಂದ ಕೆಲಸ ಮಾಡಿದರೆ ಸಾಲದು. ಇಲಾಖೆಯ ಎಲ್ಲಾ ಹಂತಗಳಲ್ಲೂ ಇರತಕ್ಕಂಥ ಜನರು ಕೆಲಸ ಮಾಡಬೇಕಲ್ಲಾ. ನೀವು ರಾಜ್ಯದ ಪರವಾಗಿ ಬಜೆಟ್ ಮಂಡಿಸಿ ಈ ವರ್ಷಕ್ಕೆ ಇಷ್ಟು ಕೋಟಿ ರೂಪಾಯಿ ನಮಗೆ ಬೇಕಾಗಿದೆ, ಖರ್ಚು ಮಾಡಬೇಕೆಂದು ಆಯಾ ಇಲಾಖೆಗಳ ಮಂತ್ರಿಗಳು ಬಂದು ಬೇಡಿಕೆಗಳನ್ನು ಮಂಡಿಸಿ ಮಂಜೂರಾತಿ ಮಾಡಿಸಿಕೊಂಡು ಹೋದ ನಂತರ, ಪುನಃ ನಿಮ್ಮ ಎದುರಿಗೆ ಬಂದು ನಮಗೆ ಇಷ್ಟು ಹಣ ಬೇಕೆಂದು ಕೇಳಿದಾಗ, ನಿಮಗೆ ಜವಾಬ್ದಾರಿ ಇತ್ತೇ? ಇಲ್ಲವೇ? ಆಲೋಚನೆ ಇತ್ತೇ? ಇಲ್ಲವೇ? ಮಳೆ ಬರಲಿಲ್ಲ, ತೊಂದರೆಯಾಯಿತು, Yes. ಅರ್ಥ ಮಾಡಿಕೊಳ್ಳುತ್ತೇವೆ. ನಿಮಗೆ ಉಳಿದ ವಿಚಾರಗಳಲ್ಲಿ, ಆಡಳಿತಾತ್ಮಕ ವಿಚಾರಗಳಲ್ಲಿ ಕೂಡ ಸ್ಪಷ್ಟ ಅಂದಾಜು ಇಲ್ಲದೆ ಹೋದರೆ, ಅದರಲ್ಲೂ ನಿಮ್ಮ ಮುಖಾಂತರ ನಮ್ಮ ಮುಂದೆ ತಂದಿಟ್ಟು ಬೇಡಿಕೆಯನ್ನು ಮಂಜೂರು ಮಾಡಿ ಎಂದರೆ, ನಾವು ಅನಿವಾರ್ಯವಾಗಿ ಮಾಡಬೇಕೆ ಸಂತೋಷದಿಂದ ಮಾಡಬೇಕೆ ಅಥವಾ ಈ ಬೇಡಿಕೆಗಳು ಸಂಖ್ಯಾಬಲದ ದೃಷ್ಟಿಯಿಂದ ಈ ಸದನದಲ್ಲಿ ಪಾಸ್ ಆಗಬೇಕೆ? ಹಾಗಾದರೆ, ಈ ತಪ್ಪು ಮಾಡಿದವರಿಗೆ, ಯಾರು ತಮ್ಮ ಕರ್ತವ್ಯದಲ್ಲಿ ವಿಮುಖರಾಗಿದ್ದಾರೋ, ಯಾರು ಫೇಲ್ ಆಗಿದ್ದಾರೋ, ಅವರಿಗೆ ಶಿಕ್ಷೆ ಹೇಗೆ? ಯೋಚನೆ ಮಾಡಿ. ಈಗ ಸೈಕಲ್ ವಿಚಾರ ಹೇಳಿದಿರಿ. Alright. ಸೈಕಲ್ ಕಾರ್ಯಕ್ರಮ ಕೆಟ್ಟದ್ದೆಂದು ನಾವ್ಯಾರೂ ಹೇಳುವುದಿಲ್ಲ. ನಿಮಗೆ ಸೈಕಲ್ ಕಾರ್ಯಕ್ರಮ ಅನೌನ್ಸ್ ಮಾಡುವುದರಲ್ಲಿ ಏನು ಉದ್ದೇಶ? ಯಾವ ಹೆಣ್ಣು ಮಕ್ಕಳು ಆರ್ಥಿಕವಾಗಿ ಬಡತನದ ರೇಖೆಗಿಂತಲೂ ಕೆಳಗಿರುವ ಕುಟುಂಬಗಳಿಂದ ಬರುತ್ತಿದ್ದಾರೆ, ಯಾರು, ಎಲ್ಲಿ ವಾಸ ಮಾಡುತ್ತಿರುವ ಪ್ರದೇಶಗಳಲ್ಲಿ ಶಾಲೆ ಇಲ್ಲವೋ, ಶಾಲೆಗಾಗಿ ದೂರ ಹೋಗಬೇಕೆಂಬ ಕಾರಣಕ್ಕಾಗಿ ಓದುವುದನ್ನು ನಿಲ್ಲಿಸಿದ್ದಾರೋ, ಶಿಕ್ಷಣವನ್ನು ಅಲ್ಲಿಗೆ ಮುಕ್ತಾಯ ಮಾಡಿದ್ದಾರೋ, ಅಂತಹ ಕುಟುಂಬಗಳಲ್ಲಿರುವ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಮಾಡುವುದಕ್ಕೆ ನಾವು ಸೈಕಲ್ ಕೊಡುತ್ತೇವೆಂದು ಹೇಳಿದಿರಿ. ಯಾರು ಮನಸ್ಸು ಇರತಕ್ಕಂತಹವನು, ಮಾನವೀಯತೆ ಇರುವವನೂ ಕೂಡ ಈ ಕಾರ್ಯಕ್ರಮವನ್ನು ವಿರೋಧಿಸುವುದಿಲ್ಲ. ಆದರೆ, ಯಡಿಯೂರಪ್ಪನವರೆ, ನಾನು ತಮಗೆ ಒಂದು ಪ್ರಶ್ನೆ ಕೇಳುತ್ತೇನೆ. ಎಷ್ಟು ಕುಟುಂಬಗಳಿವೆ? ಎಷ್ಟು ಮಕ್ಕಳು ಶಾಲೆಗೆ ಹೋಗುವುದನ್ನು ನಿಲ್ಲಿಸಿದ್ದಾರೆ? ಎಷ್ಟು ಮಕ್ಕಳಿಗೆ ನಾವು ಸೈಕಲ್ ಕೊಡಬೇಕಾಗುತ್ತದೆ? ಸೈಕಲ್

ಕೊಡುತ್ತೇವೆಂದು ಈ ಕಾರ್ಯಕ್ರಮವನ್ನು ಅನೌನ್ಸ್ ಮಾಡುವ ಮೊದಲು ಸಮೀಕ್ಷೆ ಮಾಡಿದ್ದೀರಾ? ಅಂದಾಜು ಇತ್ತೇ? ಸಮೀಕ್ಷೆ ಮಾಡಲಿಲ್ಲ. ಸಮೀಕ್ಷೆ ಮಾಡಿದ್ದರೆ, ವ್ಯತ್ಯಾಸ ಎಷ್ಟು ಬರಬಹುದಾಗಿತ್ತು? ಇವತ್ತು ಎಷ್ಟು ಬರುತ್ತಿದೆ?

ಶ್ರೀ ಎ. ಕೃಷ್ಣಪ್ಪ : ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಯಾವ ಮಕ್ಕಳು ಶಾಲೆಗೆ ಬರಲಿಕ್ಕೆ ಅನಾನುಕೂಲ ಇದೆ ಎಂದು ಹೇಳಿ ಶಾಲೆಗೆ ಬರಲಿ ಎಂಬ ಉದ್ದೇಶ ಇಟ್ಟುಕೊಂಡು ಸೈಕಲ್ ಕೊಟ್ಟರೋ, ಆ ಮಕ್ಕಳು ಯಾವ ಶಾಲೆಗೆ ಬಂದು ಕುಳಿತುಕೊಳ್ಳಲಿಕ್ಕೆ ಕೊಠಡಿಗಳಿವೆಯೋ ಎಂದು ಅವರು ಸರಿಯಾಗಿ ಉತ್ತರ ಕೊಡಲಿ. ಯಾವ ಮಕ್ಕಳಿಗೆ ಶಿಕ್ಷಣ ತಪ್ಪಿ ಹೋಗಬಹುದು ಎಂದು ಇವರು ಸೈಕಲ್‌ನಲ್ಲಿ ಬಂದು ಶಾಲೆಯನ್ನು ಮುಟ್ಟಲಿ ಎನ್ನುವಂತಹ ಒಂದು ಉದ್ದೇಶವನ್ನು ಇಟ್ಟುಕೊಂಡು ಸೈಕಲ್ ಕೊಟ್ಟರೋ, ಆ ಮಕ್ಕಳು ಬಂದು ಕುಳಿತುಕೊಳ್ಳಲಿಕ್ಕೆ class room ಗಳಿವೆಯೇ? Desk ಗಳಿವೆಯೇ?

ಶ್ರೀ ಕೆ. ಪದ್ಮನಾಭ ಕೊಠಾರಿ : ಮಾನ್ಯ ಅಧ್ಯಕ್ಷರೆ, ಶಾಲೆಗೆ ಬರುತ್ತಿರುವ ಮಕ್ಕಳಿಗೆ ಮಾತ್ರ ಸೈಕಲ್ ಕೊಡಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಪ್ರಶ್ನೆ ನೀವು ಅಧಿಕಾರದಲ್ಲಿ ಇದ್ದಾಗ ಬರಬೇಕಾಗಿತ್ತು. ಇದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ.

ಶ್ರೀ ಎ. ಕೃಷ್ಣಪ್ಪ : ನೀವು ಕಟ್ಟಡಗಳಿಗೆ ಬೇಕಾದಂತಹ ಅನುಕೂಲಗಳಿಗೆ ಹಣ ಕೊಡಲಿಕ್ಕೆ ಆಗದಿದ್ದ ಮೇಲೆ ಸೈಕಲ್ ಕೊಡುವಂತಹ ಕಾರ್ಯಕ್ರಮಕ್ಕೆ ಏಕೆ ಕೈ ಹಾಕಿದಿರಿ? ಇವತ್ತು ಎಷ್ಟು ಶಾಲೆಗಳಲ್ಲಿ ಮತ್ತು ಎಷ್ಟು ತಾಲ್ಲೂಕುಗಳಲ್ಲಿ ....

ಶ್ರೀ ಆರಗ ಜ್ಞಾನೇಂದ್ರ : ಸೈಕಲ್ ಕೊಟ್ಟಿರುವುದನ್ನು ನೀವು ತಪ್ಪು ಎಂದು ಹೇಳುತ್ತೀರಾ?

ಶ್ರೀ ಎ. ಕೃಷ್ಣಪ್ಪ : ಅದು ತಪ್ಪು ಎಂದು ನಾನು ಹೇಳಲಿಲ್ಲ. ನಮ್ಮ ಲೀಡರ್ ಈ ಬಗ್ಗೆ ಎಲ್ಲವನ್ನೂ ಹೇಳಿದ್ದಾರೆ. ನಾವೆಲ್ಲಿ ಅದನ್ನು ತಪ್ಪು ಎಂದು ಹೇಳಿದೆವು? ನಾವು ಹೇಳುವುದೇನೆಂದರೆ, ಮೂಲಭೂತವಾಗಿ ಶಿಕ್ಷಣಕ್ಕೆ ಬೇಕಾದಂತಹ ಸೌಕರ್ಯಗಳನ್ನು ಸೃಷ್ಟಿ ಮಾಡಲಿಕ್ಕೆ ಶಕ್ತಿ ಇಲ್ಲದಂತಹ ಸರ್ಕಾರ ಇತರೆ ಕಾರ್ಯಕ್ರಮಗಳಿಗೆ ಏತಕ್ಕೆ ಕೈ ಹಾಕಬೇಕು? Basic infrastructure ಇಲ್ಲ. Laboratories ಇರಬಹುದು, Libraries ಇರಬಹುದು, Teachers ಇರಬಹುದು, ಇದಕ್ಕಿಂತ ಮುಖ್ಯವಾಗಿ ಮಕ್ಕಳಿಗೆ ಕುಳಿತುಕೊಳ್ಳಲಿಕ್ಕೆ ನೆರಳು ಮತ್ತು ಕಟ್ಟಡಗಳು ಇರಬೇಕು.

ಒಬ್ಬ ಮಾನ್ಯ ಸದಸ್ಯರು : ಎಲ್ಲಿ class rooms ಇಲ್ಲವೆಂದು ಹೇಳಿ.

(ಅಡಚಣೆ)

ಶ್ರೀ ಎ. ಕೃಷ್ಣಪ್ಪ : ನೂರಾರು ಊರುಗಳಲ್ಲಿ ಇಲ್ಲ. ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ.....

ಶ್ರೀ ಎ. ಕೃಷ್ಣಪ್ಪ : ನಮ್ಮ ತಾಲ್ಲೂಕಿಗೆ ಬನ್ನಿ. ನಾನು ಇಡೀ ರಾಜ್ಯಕ್ಕೆ ಹೋಗುವುದಿಲ್ಲ.

ಶ್ರೀ ಎ. ಕೃಷ್ಣಪ್ಪ : ನಿಮಗೆ ಮಾನ್ಯ ರಮೇಶ್‌ಕುಮಾರ್‌ರವರು ಯೀಲ್ಡ್ ಆಗುವುದಾದರೆ, ನೀವು ಮಾತನಾಡಿ. ಅದಕ್ಕೇನೂ ತೊಂದರೆ ಇಲ್ಲ.....

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಎನ್.ಡಿ.ಎ. ಸರ್ಕಾರದವರು ಸರ್ವ ಶಿಕ್ಷಣ ಅಭಿಯಾನದಲ್ಲಿ ಸಂಪೂರ್ಣವಾಗಿ ಕೊಠಡಿಗಳನ್ನು ಕೊಟ್ಟಾಗ, ಇವರ ಕ್ಷೇತ್ರದಲ್ಲಿ ಇವರು ಎಲ್ಲಿಗೆ ಹೋಗಿದ್ದರೋ ಗೊತ್ತಿಲ್ಲ.....

ಶ್ರೀ ಎ. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ಇವರು ಬೇಜವಾಬ್ದಾರಿಯಾಗಿ ಮಾತನಾಡುವುದು ಬೇಡ. ನೀವು ಬೇಜವಾಬ್ದಾರಿಯಾಗಿ ಮಾತನಾಡಬೇಡಿ.....

(ಅಡಚಣೆ)

ಶ್ರೀ ಎ. ಕೃಷ್ಣಪ್ಪ : ನೀವು irresponsible ಆಗಿ ಮಾತನಾಡಬೇಡಿ. ನನ್ನ ಕ್ಷೇತ್ರದಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತು. ಅದರ ಬಗ್ಗೆ ನಿಮಗೇನು ಗೊತ್ತು?

(ಅಡಚಣೆ)

ಶ್ರೀ ಎ. ಕೃಷ್ಣಪ್ಪ : ನಾನು ನನ್ನ ಕ್ಷೇತ್ರದ ಪರಿಸ್ಥಿತಿಯನ್ನು ಹೇಳಿದ್ದೇನೆ. ನಾನು ನಿಮ್ಮ ಕ್ಷೇತ್ರದ್ದು ಹೇಳಲಿಲ್ಲ. ಒಟ್ಟಾರೆ ರಾಜ್ಯದಲ್ಲಿ ಹಲವಾರು ತಾಲ್ಲೂಕುಗಳಲ್ಲಿ ಇರತಕ್ಕ ಈ ಪರಿಸ್ಥಿತಿಯನ್ನು ಸರಿಪಡಿಸಬೇಕು. ಅದಕ್ಕೆ ಅವರು ಉತ್ತರವನ್ನು ಕೊಡಲಿ.

ಉಪಾಧ್ಯಕ್ಷರು : ನೀವು ಬೇಗ ಮುಗಿಸಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಅವರ permission ಅನ್ನು ತೆಗೆದುಕೊಂಡಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಹೌದು, ನಾನೂ ಸಹ ಮಂತ್ರಿಯಾಗಿದ್ದೆ. ನಾನು ಮಂತ್ರಿಯಾಗಿದ್ದಾಗ ಈ x ನಡೆಯಲಿಲ್ಲ. ಈಗ x ನಡೆಯುತ್ತಿದೆ.

(ಅಡಚಣೆ)

ಶ್ರೀ ಎ. ಕೃಷ್ಣಪ್ಪ : .... ಸ್ಕೂಲುಗಳನ್ನು ಕೊಡುವುದರಲ್ಲಿ ಭೇದ-ಭಾವನೆ, Teachers ಕೊಡುವುದರಲ್ಲಿ ಭೇದ-ಭಾವನೆ, sanction ಕೊಡುವುದರಲ್ಲಿ ಭೇದ-ಭಾವನೆ, ಹೈಸ್ಕೂಲುಗಳನ್ನು ಕೊಡುವುದರಲ್ಲಿ ಭೇದ-ಭಾವನೆ, ಕಾಲೇಜುಗಳನ್ನು ಕೊಡುವುದರಲ್ಲಿ ಭೇದ-ಭಾವನೆ ನಡೆಯುತ್ತಿದೆ. ಈ x ನಾವು ಮಾಡಲಿಲ್ಲ. Mind it........

(ಅಡಚಣೆ)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎ. ಕೃಷ್ಣಪ್ಪ : ...... ಮಾಡುವುದನ್ನೆಲ್ಲಾ ದುರುದ್ದೇಶದಿಂದ ಮಾಡಿ ನೀವು ಇವತ್ತು ಈ ರೀತಿಯಾಗಿ ಹೇಳುತ್ತೀರಾ? ಕಾನೂನು ಬಾಹಿರ, ನ್ಯಾಯ ಬಾಹಿರ ಮತ್ತು ನೀತಿ ಬಾಹಿರ....

ಒಬ್ಬ ಮಾನ್ಯ ಸದಸ್ಯರು : ನೀವು ಅದನ್ನು ಯಾರಿಗೆ ಹೇಳುತ್ತಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ನಾನು ಈ ಮಾತುಗಳನ್ನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ನಿಮ್ಮಲ್ಲಿ ನೀತಿ ಇದೆಯೇ? ನಿಮ್ಮಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿವೆಯಾ?

(ಅಡಚಣೆ)

ಉಪಾಧ್ಯಕ್ಷರು : ಒಂದು ನಿಮಿಷ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎ. ಕೃಷ್ಣಪ್ಪ : ನಾನು ಹೇಳಿದ್ದು ಇಷ್ಟೇ. ಇವತ್ತು ಮೂಲಭೂತವಾದಂತಹ ಸೌಕರ್ಯಗಳಿಗೆ ಹಲವಾರು ಸಮಸ್ಯೆಗಳು ಮತ್ತು ತೊಂದರೆಗಳು ಇರುವಂತಹ ಸಂದರ್ಭಗಳಲ್ಲಿ ಸೈಕಲ್ ಕೊಡಬೇಕಾದಂತಹ ಅಗತ್ಯ ಇತ್ತೇ ಅಥವಾ ನಮ್ಮ priority ಮೂಲಭೂತ ಸೌಕರ್ಯಗಳನ್ನು ಕೊಡಬೇಕಾಗಿತ್ತು ಎಂದು ಮಾತ್ರ ನಾನು ಹೇಳಲಿಕ್ಕೆ ಹೊರಟೆ. ಮಂತ್ರಿಯಾಗಿ ಹೇಗೆ ಕೆಲಸ ಮಾಡಿದೆ ಎಂಬ ಬಗ್ಗೆ ನಾನೇನೂ ನಿನ್ನ ಹತ್ತಿರ ಪಾಠ ಹೇಳಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಕೊಟ್ಟಿದ್ದು ತಪ್ಪು ಎಂದು ಬೇಕಾದರೆ ಹೇಳಿ.

(ಅಡಚಣೆ)

ಉಪಾಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೆ, ದಯವಿಟ್ಟು ತಾವು ಮುಂದುವರೆಸಬೇಕು.

ಶ್ರೀ ಆರಗ ಜ್ಞಾನೇಂದ್ರ : ನಾನೊಂದು ಸಣ್ಣ clarification ಕೊಡ ಬಯಸುತ್ತೇನೆ.

(ಅಡಚಣೆ)

ಉಪಾಧ್ಯಕ್ಷರು : ಈಗ ಮಾತನಾಡುತ್ತಿರುವವರು ಅವರು. ದಯವಿಟ್ಟು ತಾವು ಮಧ್ಯದಲ್ಲಿ ಮಾತನಾಡಬೇಡಿ. ತಾವು ಆಮೇಲೆ ಬೇಕಾದರೆ ಮಾತನಾಡಿ. ಈಗ ಕುಳಿತುಕೊಳ್ಳಿ. ಶಾಲಾ ಕೊಠಡಿಗಳ ಬಗ್ಗೆ ಈಗಾಗಲೇ ಅವರು ಮಾತನಾಡಿದ್ದಾರೆ. ತಾವು ಕುಳಿತುಕೊಳ್ಳಿ. ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಮುಂದುವರೆಸಿ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸನ್ಮಾನ್ಯ ಉಪಾಧ್ಯಕ್ಷರೆ, ಸ್ವಲ್ಪ ದಯಮಾಡಿ ಎಲ್ಲರೂ ಸಹಕರಿಸಿ.

ಉಪಾಧ್ಯಕ್ಷರು : ಮಾನ್ಯ ಮಹದೇವ್‌ರವರೆ, ತಾವೂ ಸಹ ಅವರದಾದ ಮೇಲೆ ಮಾತನಾಡುವಿರಂತೆ.

6.00 ಗಂಟೆ

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಆ ಇಲಾಖೆಗೆ ಸಂಬಂಧಪಟ್ಟಂತೆಯೇ ನಾನು ಇವತ್ತು ಹೇಳುತ್ತಿದ್ದೇನೆ. ಇಲ್ಲಿ ರಾಜಕೀಯದ ಪ್ರಶ್ನೆ ಬೇರೆ ಇದೆ. ಶಾಲಾ ಕೊಠಡಿಗಳ ಬಗ್ಗೆ ಹೇಳುವುದಾದರೆ, ಇವತ್ತು ಎಲ್ಲಾ ಕಡೆ ಕೊಠಡಿಗಳಿದೆ. ನಾವು ನೂರಾರು ಕಡೆ ಅಧಿಕಾರಿಗಳಿಗೆ ಹೇಳಿದ್ದೇವೆ. ಸರ್ವ ಶಿಕ್ಷಣ ಅಭಿಯಾನದಲ್ಲಿ ಈಗ ಕೊಠಡಿಗಳನ್ನು ಕೊಡುತ್ತಿದ್ದಾರೆ. ರಾಜಕೀಯದ ಮಾತಲ್ಲ ಇದು. ಇದು ಎಲ್ಲರಿಗೂ ಕೂಡ ಸಂಬಂಧಪಟ್ಟಿದೆ. ಆದರೆ ಇಲ್ಲಿ maintenance component ಎಂಬುದು ಇಲ್ಲಿಲ್ಲ. ಸರ್ವ ಶಿಕ್ಷಣ ಅಭಿಯಾನದಲ್ಲಿ ಹೊಸ ರೂಂಗಳನ್ನು ಕೊಡುತ್ತಾರೆ. ಆದರೆ ಈ scheme ಬಂದು ಈಗಾಗಲೇ ಐದಾರು ವರ್ಷಗಳಾಗಿದೆ. ಆ ಕೊಠಡಿಗಳು ಲೀಕ್ ಆಗುತ್ತಿವೆ. ಅವುಗಳ maintenance ಗೆಂದು ದುಡ್ಡು ಕೊಡುವುದಿಲ್ಲ. SDMC ಯವರಿಗೆ ಐದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಗಂಭೀರವಾಗಿ ಚರ್ಚೆ ಮಾಡಿ ಎಂದು ನಾವು ಅಧಿಕಾರಿಗಳ ಗಮನಕ್ಕೆ ತಂದೆವು.

(ಅಡಚಣೆ)

ಉಪಾಧ್ಯಕ್ಷರು : ತಾವು ಹೇಳಿದ್ದೆಲ್ಲಾ ಆಯಿತು, ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ : ನಾವು ಅದನ್ನೆಲ್ಲಾ ಅನುಭವಿಸುತ್ತಿದ್ದೇವೆ. ಹಳ್ಳಿಗಳಲ್ಲಿ ಬೈಸಿಕೊಳ್ಳುತ್ತಿದ್ದೇವೆ.

ಉಪಾಧ್ಯಕ್ಷರು : ಅವರೇನು ಹೇಳುತ್ತಾರೋ ಕೇಳೋಣ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವೈಜನಾಥ ಪಾಟೀಲ್ : ಶಾಲೆಗಳನ್ನು ಕಟ್ಟಿಸಿಕೊಡುವ ಪ್ರಶ್ನೆ ಬೇರೆ, ಸೈಕಲ್ ಕೊಡುವುದು ಬೇರೆ. ನಮ್ಮಲ್ಲಿ ಬಹಳಷ್ಟು ಕಡೆ ಶಿಕ್ಷಕರುಗಳೇ ಇಲ್ಲ. ನಮ್ಮ ಚಿಂಚೋಳಿ ತಾಲ್ಲೂಕಿನಲ್ಲಿ 150 vacancies ಖಾಲಿ ಇವೆ. ನೀವು ಸೈಕಲ್ಸ್ ಕೊಡುವುದು ಅಥವಾ ಮತ್ತೊಂದು programme ಏನು ಮಾಡಿದರೂ ಪ್ರಯೋಜನವಿಲ್ಲ. ಶಿಕ್ಷಕರೇ ಇಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಶಿಕ್ಷಕರನ್ನು ನೇಮಕ ಮಾಡದಿರುವವರು ಯಾರು ಎಂಬ ಬಗ್ಗೆ ತಾವು ವಿಶ್ಲೇಷಣೆ ಮಾಡಿ. ಶಿಕ್ಷಕರ ಕೊರತೆ ಯಾವಾಗಿನಿಂದ ಬಂತು? ಅದನ್ನು ಇವತ್ತು ಯೋಚನೆ ಮಾಡಬೇಕಾಗಿದೆ. ಶಿಕ್ಷಕರ ಕೊರತೆ ಇವತ್ತು ದಿಢೀರ್ ಎಂದು ಉದ್ಭವವಾಯಿತೇ? ಈ ಸರ್ಕಾರ ಒಂದೊಂದು ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದೆ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸನ್ಮಾನ್ಯ ಉಪಾಧ್ಯಕ್ಷರೇ, ...

ಉಪಾಧ್ಯಕ್ಷರು : ಮಾನ್ಯ ಧ್ರುವನಾರಾಯಣ್‌ರವರೆ, ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

ಉಪಾಧ್ಯಕ್ಷರು : ಮಾನ್ಯ ಬಸವರಾಜ್‌ರವರೆ, ತಾವು ಇದನ್ನೆಲ್ಲಾ ಮಾನ್ಯ ವೈಜನಾಥ್ ಪಾಟೀಲ್‌ರವರಿಗೆ ಏಕೆ ಹೇಳುತ್ತಿದ್ದೀರಿ?

ಶ್ರೀ ಹೆಚ್.ಡಿ. ಬಸವರಾಜ್ : ಅವರು ಸೈಕಲ್ ವಿತರಣೆಗೆ ಆಕ್ಷೇಪ ಮಾಡಿದರು ಮತ್ತು ತಮ್ಮಲ್ಲಿ ಶಿಕ್ಷಕರ ಕೊರತೆ ಇದೆ ಎಂದು ಹೇಳಿದರು. ಅದಕ್ಕಾಗಿ ನಾನು ಈ ಸರ್ಕಾರ ಒಂದೊಂದನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಹೇಲಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ.

(ಅಡಚಣೆ)

ಶ್ರೀ ವೈಜನಾಥ್ ಪಾಟೀಲ್ : ನಮಗೆ ಹೊಸ ಶಾಲೆಗಳನ್ನು ಕೊಡಲಿಕ್ಕೆ ಸರ್ಕಾರ ತಯಾರಿಲ್ಲ. ಹಳೆಯ ಶಾಲೆಗಳಿಗೆ ಟೀಚರ್ಸ್ ಇಲ್ಲ. ಒಂದೊಂದು ಕಡೆ ಒಂದೊಂದು ತಾಲ್ಲೂಕಿನಲ್ಲಿ 14 ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮಲ್ಲಿ ಒಂದೆರಡು ಕೊಡಲಿಕ್ಕೆ ಕೂಡ ತಯಾರಿಲ್ಲ. ಇದು ಈ ಸರ್ಕಾರದ discrimination policy ಆಗಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ವಿಶೇಷವಾಗಿ ನಮ್ಮ ಭಾಗದಲ್ಲಿ discrimination ಆಗುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷ್ಣಪ್ಪನವರು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಶಾಲಾ ಕೊಠಡಿಗಳನ್ನು ಕಟ್ಟಲಿಕ್ಕೆ ಒತ್ತು ಕೊಟ್ಟಿಲ್ಲ ಎಂದು charge ಮಾಡಿದರು. ನಾನೇ ಈ ಸಾರಿ ನಬಾರ್ಡ್ ಯೋಜನೆಯಲ್ಲಿ ಇದಕ್ಕಾಗಿ 125 ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿದ್ದೇನೆ. ಪಾಪ, ಮಾನ್ಯ ಕೃಷ್ಣಪ್ಪನವರೂ ಕೂಡ ಮಂತ್ರಿಗಳಾಗಿದ್ದರು. ಬೆಂಗಳೂರು ನಗರದ ಮಹಾರಾಣೀಸ್ ಕಾಲೇಜಿಗೆ ಕಳೆದ 50 ವರ್ಷಗಳಲ್ಲಿ ಅವರು ಎಷ್ಟು ಹಣವನ್ನು ಕೊಡಿಸಿದರು ಎಂಬುದನ್ನು ಹೇಳಲಿ. 14 ಕೋಟಿ ರೂಪಾಯಿಗಳನ್ನು ನಾವು ಇವತ್ತು ಅಲ್ಲಿಗೆ ಕೊಟ್ಟು, ಟೆಂಡರ್ ಕರೆದು, finalise ಮಾಡಿ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ತಾವೇ ಮಂತ್ರಿಗಳಾಗಿದ್ದಿರಿ, ನಾವೇನು ನಿಮ್ಮನ್ನು ಮಾಡಬೇಡಿ ಎಂದು ಹಿಡಿದುಕೊಂಡಿದ್ದೆವಾ? ಕಳೆದ 50 ವರ್ಷಗಳಲ್ಲಿ ಮುಕ್ಕಾಲು ಭಾಗ ತಾವೇ ಅಧಿಕಾರದಲ್ಲಿ ಇದ್ದಿರಿ. ನಾವೇನು ನಿಮ್ಮನ್ನು ಮಾಡಬೇಡಿ ಎಂದು ಹಿಡಿದುಕೊಂಡಿದ್ದೆವಾ? ಅದನ್ನು ಬೇಕಾದರೆ ಚರ್ಚೆ ಮಾಡೋಣ. ಏನೇನು ಇದೆ ಎಂಬ ಬಗ್ಗೆ ಚರ್ಚೆ ಬೇಕಾದರೆ ಮಾಡೋಣ. ಅದರ ಬಗ್ಗೆ ಏನೂ ಅಭ್ಯಂತರ ಇಲ್ಲ. ಈ ಸರ್ಕಾರ ಶಿಕ್ಷಣ ಇಲಾಖೆಗೆ ಒತ್ತು ಕೊಟ್ಟಷ್ಟು ಇನ್ನು ಯಾವ ಸರ್ಕಾರವೂ ಕೊಟ್ಟಿಲ್ಲವೆಂದು ಹೇಳಬಯಸುತ್ತೇನೆ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಈಗ ಯಾರಿಗೂ ಯೀಲ್ಡ್ ಆಗುವುದಿಲ್ಲ. ದಯಮಾಡಿ ಸಹಕರಿಸಿ.

ಉಪಾಧ್ಯಕ್ಷರು : ತಾವು ಯಾರಿಗೂ ಯೀಲ್ಡ್ ಆಗಬೇಡಿ. ತಮ್ಮ ಮಾತು ಮುಂದುವರೆಸಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಅಭಿಯಾಚನೆ ಸಂಖ್ಯೆ 3, ಬಾಬ್ತು ಸಂಖ್ಯೆ 31ನ್ನು ಗಮನಿಸಬೇಕು. ಅದರಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ವಾಹನ ಮುಂಗಡಕ್ಕಾಗಿ ಆಯವ್ಯಯದಲ್ಲಿ ಅನುದಾನ ಸಾಲದಿರುವುದರಿಂದ

ರೂ. 75 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಅಭಿಯಾಚನೆಯಲ್ಲಿ ಸೇರಿಸಿದೆ ಎಂದು ಹೇಳಲಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ ಏನಾದರೂ ಜಾಸ್ತಿ ಆಯಿತೇ? ಅದು ಎಪ್ಪತ್ತೈದೇ ಇದೆ ತಾನೆ? Biennial election ಅಲ್ಲಿ ನಡೆಯುತ್ತದೆ. ಎರಡೆರಡು ವರ್ಷಕ್ಕೆ 1/3 retire ಆಗುತ್ತಾರೆ. ಆದರೆ ಟೋಟಲ್ ಸ್ಟ್ರೆಂಗ್ತ್ ಮಾತ್ರ 75ಕ್ಕೇ ನಿಲ್ಲುತ್ತದೆ. ನಾವೆಷ್ಟು ಕೊಡಬೇಕು ಒಬ್ಬ ಸದಸ್ಯರು ಕಾರಿನ ಮುಂಗಡ ಕೇಳಿದರೆ ಎನ್ನತಕ್ಕಂಥದ್ದರ ಬಗ್ಗೆ ಪಾಲಿಸಿ ಮ್ಯಾಟರ್ ಡಿಸೈಡ್ ಮಾಡುತ್ತೇವೆ. ಮ್ಯಾಕ್ಸಿಮಮ್ ಎಷ್ಟು ಜನ ಕೇಳಬಹುದು ಎಂದು anticipate ಮಾಡಿ ಒಂದು ತೀರ್ಮಾನ ಮಾಡಿರುತ್ತೇವಲ್ಲಾ, ಇದು ಇಷ್ಟು ಸಣ್ಣ ವಿಚಾರ ಕೂಡ ಯಾವುದು ಖಚಿತವಾಗಿ ಗೊತ್ತಿದೆ, ಇದೂ ಕೂಡ ಗೊತ್ತಾಗುವುದಿಲ್ಲವೇ ನಿಮ್ಮವರಿಗೆ? ಮತ್ತೆ ಅವರ್ಯಾಕೆ ಇರಬೇಕು? ಅವರ ಬದಲು ನಾನು ಕೇಳುತ್ತೇನೆ, ನಮ್ಮ ಊರಿನಲ್ಲಿ ಯಾರಾದರೂ ಬಸ್‌ಸ್ಟ್ಯಾಂಡಿನಲ್ಲಿ ಕಡ್ಲೇಬೀಜ ಗಿಡ್ಲೇಬೀಜ ಮಾರುವವರನ್ನು ಕರೆದುಕೊಂಡು ಬಂದು Finance Department ಗೆ ಹಾಕಿಕೊಳ್ಳಲಿ. ಏಕೆ ಇರಬೇಕು ಇಂಥ ದೊಡ್ಡ ಮನುಷ್ಯರೆಲ್ಲಾ ಈ finance department ನಲ್ಲಿ? ಆ ಕನಿಷ್ಠ ವಿಚಾರವೂ ಕೂಡ ಅವರಿಗೆ ಗೊತ್ತಿಲ್ಲದೇ ಹೋದರೆ, ಏಕೆ ಇರಬೇಕು ಆ ಡಿಪಾರ್ಟ್‌ಮೆಂಟ್‌ನಲ್ಲಿ? ಇಲ್ಲಿ ನಾನು ಹೇಳುವುದು, ನಿಮ್ಮ ದಕ್ಷತೆ reflect ಆಗುವುದು. ಯಡಿಯೂರಪ್ಪನವರೆ, ನಾನು ಏನು ಹೇಳುತ್ತೇನೆ ತಮಗೆ ಎಂದರೆ, ಇದನ್ನು ತಂದಾಗ ಇಲ್ಲಿ ಸೇರಿಸುವ ಬದಲು "ಯಾಕೀ anticipate ಮಾಡಲಿಲ್ಲ" ಎಂದು ನೀವು ಅವರನ್ನು ಕೇಳಬೇಕು. "ಯಾರು ಇದನ್ನು ಕಳುಹಿಸಿದವರು" ಎಂದು ನೀವು ಕೇಳಬೇಕು. ಯಾರು ಜವಾಬ್ದಾರಿ ಎಂದು ಕೇಳಬೇಕು. ಒಬ್ಬರನ್ನೋ, ಇಬ್ಬರನ್ನೋ ಮನೆಗೆ ಕಳುಹಿಸಬೇಕು. ಆವಾಗ, ಇಲ್ಲಪ್ಪಾ Deputy Chief Minister ಯಡಿಯೂರಪ್ಪನವರ ಹತ್ತಿರ ಇಂಥದ್ದೆಲ್ಲಾ ನಡೆಯುವುದಿಲ್ಲ, ಹೀಗೆಲ್ಲಾ silly proposals ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಭಯ ಅಧಿಕಾರಿಗಳಿಗೆ ಇರುತ್ತದೆ. ಅದರ effect ಇಡೀ ಇಲಾಖೆ ಮೇಲೆ ಬರುತ್ತದೆ. ಹೊರಗಡೆ ಜನರಿಗೆ ಗೊತ್ತಾಗುತ್ತದೆ. ಹಿಂದೆ ಹೆಚ್.ಎನ್. ಚೆನ್ನಬಸಪ್ಪನವರು ಇದ್ದರು, ಎಷ್ಟು ಅಡಿ ಇದ್ದದ್ದು ಅವರು, ಐದು ಅಡಿ ಅಥವಾ ಐದೂಕಾಲು ಅಡಿ ಇದ್ದರು ಎಂದು ಕಾಣುತ್ತದೆ. ನಾನು ನೋಡಿದ್ದೇನೆ. ನಿಮಗೂ ಗೊತ್ತಲ್ಲಾ ಅವರ ಬಗ್ಗೆ, ಮಾನ್ಯ ಉಪಾಧ್ಯಕ್ಷರೆ: ಅವರು Home Minister ಆಗಿದ್ದರು. ಆ ಮನುಷ್ಯ ವಿಧಾನ ಸೌಧ ಕಾರಿಡಾರ್‌ನಲ್ಲಿ Home Minister ಆಗಿ walk ಮಾಡುತ್ತಿದ್ದರೆ ಆ ಇಡೀ ಕಲ್ಲು ಕಟ್ಟಡ ನಡುಗುವುದು, ಏನು ಆ speciality? ಏನು ಆ speciality ಹೇಳಿ, ಆ ರೀತಿಯಲ್ಲಿ ಅವರು ಯೋಗ್ಯರಾಗಿದ್ದರು. ನೀವು ಯೋಗ್ಯರಲ್ಲ ಎಂದು ನಾನು ಹೇಳುತ್ತಿಲ್ಲ. ನಿಮಗೆ ಅವಕಾಶವಿದೆ. ಸಾಕಷ್ಟು ಅವಕಾಶಗಳಿವೆ. ನೀವು ಚೆನ್ನಬಸಪ್ಪನವರ ರೀತಿಯಲ್ಲಿ ಆಗಬೇಕು ಎಂಬುದು ನಮ್ಮ ಆಸೆ. ಇದೇ ಸದನದಲ್ಲಿ ನಾವೆಲ್ಲಾ ಒಟ್ಟಾಗಿ ನಿಂತು ನಿಮ್ಮನ್ನು ಗುಣಗಾನ ಮಾಡಬೇಕು. ನೀವು fail ಆಗಿಬಿಟ್ಟಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಇಂಥ silly proposals ಅನ್ನು ಕಳುಹಿಸತಕ್ಕಂಥವರನ್ನು ಬಲಿ ಹಾಕಬೇಕು. ನೀವು ಎಚ್ಚರವಾಗಿರಬೇಕು. ನೀವು ದಕ್ಷರಾಗಬೇಕು.

ಇಲ್ಲದೇ ಹೋದರೆ ಬರುವ ವರ್ಷ ಇನ್ನೂ silly ಆಗಿರತಕ್ಕಂಥ ಪೂರಕ ಡಿಮ್ಯಾಂಡ್‌ಗಳನ್ನೆಲ್ಲಾ ನಿಮ್ಮ ಕೈಯಲ್ಲಿ ಕೊಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಾರೆ. ನಿಮ್ಮ ನಾಯಕತ್ವದ ಮೇಲೆ ಇದೆಲ್ಲಾ effect ಆಗುವುದು.

ಶ್ರೀ ವಾಟಾಳ್ ನಾಗರಾಜ್ : ನೀವು ಚೆನ್ನಬಸಪ್ಪನವರನ್ನು ಯೋಗ್ಯತೆ ಇಟ್ಟುಕೊಂಡಿದ್ದರು ಎಂದಿರಿ. ಅಂದರೆ ಇವರೇನು?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೋಡಿ ನೀವು ಸ್ನೇಹಿತರಾಗಿದ್ದುಕೊಂಡು ಆ ರೀತಿ ಹೇಳಬಾರದು.

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ಆ ರೀತಿ ಹೇಳಲಿಲ್ಲ. ನೀವು ಮಾತನಾಡುವಾಗ ಚೆನ್ನಬಸಪ್ಪನವರು ಯೋಗ್ಯತೆ ಇಟ್ಟುಕೊಂಡಿದ್ದರು, ಅದಕ್ಕಾಗಿ ಆ ರೀತಿ ಅವರನ್ನು ಕಂಡರೆ ಜನರು ಹೆದರುತ್ತಿದ್ದರು ಎಂದು ಹೇಳುತ್ತಾ ನೀವೇನೂ ಯೋಗ್ಯರಲ್ಲ ಎಂದು ನಾನು ಹೇಳುತ್ತಿಲ್ಲವೆಂದರೆ ಅರ್ಥ ಏನು ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಶ್ರೀರಾಮರೆಡ್ಡಿಯವರ ಮನಸ್ಸಿನಲ್ಲಿದ್ದಂಥ ಯಾವ ಆಲೋಚನೆಯೂ ನನ್ನ ಮನಸ್ಸಿನಲ್ಲಿ ಇಲ್ಲ. ಅವರ ಮಾತುಗಳನ್ನು ನನ್ನ ಬಾಯಲ್ಲಿ ಹಾಕುವುದು ಬೇಡ. ನಾನು ಆವಾಗಿನಿಂದಲೂ ಮಾತನಾಡುತ್ತಿದ್ದೇನೆ, ನಾನು ಎಲ್ಲ ಸದಸ್ಯರಲ್ಲೂ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಆರ್ಥಿಕ ವಲಯದ ವಿಚಾರದಲ್ಲಿ ಚರ್ಚೆ ಮಾಡುವಾಗ ಒಂದು ಕ್ಷಣ ನಾವು ನಮ್ಮ ಪಕ್ಷಗಳನ್ನು ಮರೆತು ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪ್ರಾಮಾಣಿಕತೆಗೂ ಮತ್ತು ಬಹಳ ಪ್ರಾಮಾಣಿಕತೆಗೂ ಪರ್ಸೆಂಟೇಜ್ ವ್ಯತ್ಯಾಸ ಎಷ್ಟಿರಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಆ ಬಗ್ಗೆ ಹೇಳುವುದಿಲ್ಲ. ನಾನೇನೂ ಹೇಳುತ್ತೇನೆ, ಸ್ವಲ್ಪ ಮಟ್ಟಿಗೆ ನಾವು ನಮ್ಮ Political affiliations ಅನ್ನು ಮರೆಯಬೇಕು. ರಾಜ್ಯದ ಹಿತವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಏನು ಅವರು ಒಳ್ಳೆಯ ಕೆಲಸವನ್ನು ಮಾಡಬಾರದು ಎಂದು ರೂಲ್ ಇದೆಯೇನು? ಮಾಡಬೇಕು ಎಂಬುದು ನಮ್ಮ ambition. ಈಗ ಮೇಜರ್ ಖಂಡೂರಿಯವರು ಇದ್ದರು, ಎನ್.ಡಿ.ಎ. ಸರ್ಕಾರದಲ್ಲಿ......

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಒಳ್ಳೆಯ ಕೆಲಸ ಮಾಡುವುದನ್ನು indirect ಆಗಿ ಹೇಳುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ತಾವು ನೋಡಿ ಅಭಿಯಾಚನೆ 4. ಸಂಖ್ಯೆ 11., ಯಡಿಯೂರಪ್ಪನವರೆ, ಕೆಲವು ವಿಚಾರಗಳಲ್ಲಿ ನಾವು ಬಹಳ ಬೇಮೂಲಾಜಾಗಿ ಕೂಡ ನಾವು ನಡೆದುಕೊಳ್ಳಬೇಕಾಗುತ್ತದೆ. 3.6 ಕೋಟಿ ರೂಪಾಯಿಗಳನ್ನು ಹೈಕೋರ್ಟ್‌ನ ಹೊಸ

ಕಾರ್ಯಗಳಿಗೆ ಅವಕಾಶ ಕೊಟ್ಟಿದ್ದೇವೆ. ನನಗೆ ಅರ್ಥವೇ ಆಗುತ್ತಿಲ್ಲ, ಈ ಜ್ಯುಡಿಷಿಯರಿ ಬಹಳ ಸೂಕ್ಷ್ಮವಾದಂಥ ಪ್ರದೇಶ. ನಾವು ಬಹಳ ಜಾಗ್ರತರಾಗಿ ಅದರ ಬೌಂಡರಿಗೆ ಎಂಟರ್ ಆಗಬೇಕು. ಜಡ್ಜ್‌ಗಳನ್ನು ಕ್ರಿಟಿಸೈಸ್ ಮಾಡುವ ಹಾಗಿಲ್ಲ, ಜಡ್ಜ್‌ಮೆಂಟ್‌ಗಳನ್ನು ಕಾಮೆಂಟ್ ಮಾಡುವ ಹಾಗಿಲ್ಲ, ನಾವೂ ಅದನ್ನೆಲ್ಲಾ ಮಾಡುವುದಕ್ಕೆ ಹೋಗುವುದೂ ಇಲ್ಲ. ಮಂತ್ರಿಗಳಿಗೆ ಎಂದರೆ, ಅವರು ಪ್ರಯಾಣ ಮಾಡದೇ ಟಿ.ಎ. ತೆಗೆದುಕೊಳ್ಳುತ್ತಾರೆ ಎನ್ನುವ ಆರೋಪಗಳಿವೆ. ಸುಳ್ಳು ಸುಳ್ಳನ್ನೆಲ್ಲಾ ಹೇಳುತ್ತಾರೆ ಎನ್ನುವ ಆರೋಪಗಳಿವೆ. ಅವರಿಗೇನಪ್ಪಾ ಎಜ್ಯುಕೇಶನ್ ಇಲ್ಲ, ಏನೂ ಇಲ್ಲ, ಯಾವುದೇ ಒಂದು ಎಲೆಕ್ಷನ್‌ನಲ್ಲಿ ಗೆದ್ದುಬಂದುಬಿಟ್ಟರು, ಲಾಟರಿ ಹೊಡೆಯಿತು, ಮಂತ್ರಿಯಾದ, ಇಂಥವರೆಲ್ಲಾ ಆಗಿ ದೇಶ ಹೋಗಿಬಿಡ್ತು ಎಂದು ಎನ್ನುತ್ತಾರೆ. ಅನೇಕ ವೇಳೆ ನಾವೂ ಹಾಗೆಯೇ ನಡೆದುಕೊಂಡುಬಿಡುತ್ತೇವೆ. ಇಂಗ್ಲೆಂಡ್‌ನಲ್ಲಿ ಒಂದು ಸಲ Chief Justice ನ್ನು ಕೇಳುತ್ತಾರೆ. ಯಾರಪ್ಪಾ ಜಡ್ಜ್ ಆಗಬೇಕು? Whom do you like to be a Judge ಎಂದು ಕೇಳಿದರೆ ಅದಕ್ಕೆ Chief Justice ಪ್ರತಿಕ್ರಿಯಿಸುತ್ತಾರೆ He who is a gentleman and also knows a bit of law ಎಂದು ಹೇಳುತ್ತಾರೆ. He who is a gentleman and also knows a bit of law, ಅಂದರೆ Judge ಆಗುವುದಕ್ಕೆ ಮೂಲಭೂತವಾದಂಥ ಅಗತ್ಯ gentlemanliness.

ಎಲ್ಲೋ ಒಂದು ಕಡೆಗೆ ಅವರ ಮೂಲಭೂತವಾದ demands ಗೆ ಮಿತಿ ಇತ್ತು. ಈಗ ಅವರಿಗೂ ಮಂತ್ರಿಗಳಿಗೆ ಇರುವ facilities ಬೇಕು, ಕಾರಿನ ಮೇಲುಗಡೆ ಲೈಟ್ ಬೇಕು, ಸೆಕ್ಯುರಿಟಿ ಬೇಕು, ಬಾವುಟ ಬೇಕು, ಎಸ್.ಟಿ.ಡಿ. telephone ಬೇಕು, ನಮಗೆ ಕೊಡುವ ಕ್ವಾಟರ್ಸ್‌ನಲ್ಲಿ ಅವರಿಗೂ ಒಂದು ಶೇರ್ ಬೇಕು. ಅವರು ಜಡ್ಜಸ್, ಅವರಿಗೆ ಯಾವುದೋ ಒಂದೋ ಎರಡೋ ಡಿಸ್ಟ್ರಿಕ್ಟ್‌ಗೆ administrative charge ಕೊಟ್ಟಿರುತ್ತಾರೆ, ಹೋಗುವುದಕ್ಕೆ, ಬರುವುದಕ್ಕೆ. ಆದರೆ ಇಂಥ brand car ಬೇಕು, ಹೀಗೇ ಬೇಕು ಎಂದೇನಾದರೂ ನಿಯಮ ಇದೆಯೇ? ಏನ್ ಇವೆಲ್ಲಾ ಎಲ್ಲಿಗೆ ಹೋಗುತ್ತಿದೆ. ಇದನ್ನೆಲ್ಲಾ ನಾವು ನೋಡಬೇಕಾಗುತ್ತದೆ.

ತಾಲ್ಲೂಕು ಪಂಚಾಯಿತಿ ಪ್ರೆಸಿಡೆಂಟ್ ಯಾರಾದರೂ ಎಲ್ಲರನ್ನೂ ಸೇರಿಸಿ ಒಂದು ಸಂಘ ಕಟ್ಟುತ್ತಾರೆ, ಸ್ವಾಮಿ ನಮಗೆಲ್ಲಾ ಕ್ವಾಲಿಸ್ ಬೇಕು ಎಂದು ಕೇಳುತ್ತಾರೆ, ಎಷ್ಟು ನಿರ್ದಾಕ್ಷಿಣ್ಯವಾಗಿ ಅವರನ್ನು ಬೈಯ್ದುಬಿಡುತ್ತೇವೆ ಗೊತ್ತೇ ನಾವು, ಇವರಿಗೆಲ್ಲಾ ಕ್ವಾಲಿಸ್ ಬೇಕಂತೆ ಕ್ವಾಲಿಸ್ ಎಂದು ಬಿಡುತ್ತೇವೆ. ಯಾರ ಬೇಡಿಕೆಗಳನ್ನು ಸಾರಾಸಗಟು ಹಾಗೆಯೇ ತಳ್ಳಿ ಹಾಕಿ ಬಿಡಬಹುದೋ ಅವುಗಳ ವಿಚಾರದಲ್ಲಿ ಬಹಳ ನಿರ್ದಾಕ್ಷಿಣ್ಯವಾಗಿರುತ್ತೇವೆ ನಾವು. ಎಲ್ಲಿ ನಿರ್ದಾಕ್ಷಿಣ್ಯವಾದಂಥ ಮಾತುಗಳನ್ನು ನಯವಾಗಿ ನಗುನಗುತ್ತ ಗಂಭೀರವಾಗಿ ಹೇಳಬಹುದೋ ಅಂಥ ಕಡೆ ನಾವು ಮೆತ್ತಗಾಗಿ ಬಿಡುತ್ತೇವೆ.

ಜಡ್ಜ್ ಸಾಹೇಬರು ಬಂದರು, ಆಗ ಅವರಿಗೆ ಗೌರವ ಕೊಡುವುದು, ಕಾಫಿ ಕೊಡುವುದು, ಗೋಡಂಬಿ ಕೊಡುವುದು, ಸ್ವೀಟ್ ಅನ್ನೂ ಒಂದಷ್ಟು ಕೊಡುವುದು, ಇಲ್ಲಾ ಸಾರ್ ದೇಶದ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲಾ ಸಾರ್, ತಾವು ನ್ಯಾಯಾಧೀಶರು, ತಮಗೆ ಗೊತ್ತಿಲ್ಲದೇ ಇರುವುದು

ಏನಿದೆ, ಬಡವರ ಕೆಲಸ ಬಹಳ ಮಾಡಬೇಕಾಗಿದೆ, ಈಗ ಸಧ್ಯಕ್ಕೆ ಅಂಬ್ಯಾಸಿಡರ್‌ನ್ನೇ ಅಡ್ಜಸ್ಟ್ ಮಾಡಿಕೊಳ್ಳಿ ಎಂದು ಹೇಳಬಹುದಾಗಿತ್ತು. ವಿವೇಚನೆ ಎಂದು ಇದನ್ನೇ ನಾವು ಹೇಳುವುದು.

x ನಮಗೆ ಎಜ್ಯುಕೇಶನ್ ಇಲ್ಲಾ, ಅವರಿಗೆ ಎಜ್ಯುಕೇಶನ್ ಇದೆ. ನಮಗೆ ಟ್ರೈನಿಂಗ್ ಇಲ್ಲ, ಅವರಿಗೆ ಟ್ರೈನಿಂಗ್ ಇದೆ. ನಮಗೆ ಸೆಕ್ಯುರಿಟಿ ಇಲ್ಲ, ಅವರಿಗೆ ಸೆಕ್ಯುರಿಟಿ ಇದೆ. ಇಂಥ ಖರ್ಚುಗಳನ್ನು ಅವೈಡ್ ಮಾಡಬಹುದಿತ್ತು ಎಂದು ನಾನು ಹೇಳುತ್ತಿರುವುದು. ಇನ್ನು social welfare ಬಗ್ಗೆ ಖರ್ಗೆ ಸಾಹೇಬರು ಮಾತನಾಡುತ್ತಾ ಹೇಳಿದರು. ಯಡಿಯೂರಪ್ಪನವರೆ, ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಬ್ಬ ಪರಿಶಿಷ್ಟ ಜಾತಿ ಅಥವಾ ಪಂಗಡದ ವಿದ್ಯಾರ್ಥಿ, ವಿದ್ಯಾರ್ಥಿನಿ, ಅವರಿಗೆ ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಸರ್ಕಾರಿ ಸೀಟ್ ಕೊಟ್ಟರೆ, ಅದು ಎಂಬಿಎ ಗೋ, ಫಾರ್ಮಸಿಗೋ, ಬಿ.ಇ. ಗೋ, ಮೆಡಿಕಲ್‌ಗೋ ಯಾವುದಕ್ಕಾದರೂ ಕೊಡಲಿ ಅಧ್ಯಕ್ಷರೆ, ಆ ವಿದ್ಯಾರ್ಥಿಗಳು ಕೌನ್ಸಿಲ್‌ಗೆ ಹೋಗುತ್ತಾರಲ್ಲಾ ಆ ರೀತಿ ಹೋಗುವ ಮೊದಲೇ ಅವರು ದುಡ್ಡು ತುಂಬಿಬಿಟ್ಟು ಅಲ್ಲಿಗೆ ಹೋಬೇಕು. ಮೊನ್ನೆ ನನ್ನ ಗ್ರಾಮದಿಂದ ಒಬ್ಬ ಹುಡುಗ ಬಂದಿದ್ದಾನೆ. ತಂದೆ, ತಾಯಿ ಇಬ್ಬರೂ ಕೂಲಿ ಮಾಡಿ ಜೀವನ ಮಾಡುತ್ತಿರುವುದು. ಅವರಿಗೆ ಅದನ್ನು ಬಿಟ್ಟರೆ ಏನೇನೂ ಗತಿಯಿಲ್ಲ. ಅವನನ್ನು ಬೆಂಗಳೂರು ಯೂನಿವರ್ಸಿಟಿಯಲ್ಲಿ ಎಂಬಿಎ ಗೆ ಕೌನ್ಸಿಲಿಂಗ್‌ಗೆ ಕರೆಯುತ್ತಾರೆ. 13900–00 ರೂಪಾಯಿಯನ್ನು ಅವರು ಕಟ್ಟಲೇಬೇಕಂತೆ. ಬೇಕಾದರೆ ಅವರ ಹತ್ತಿರ ಆತನನ್ನು ನಾಳೆ ಕಳುಹಿಸಿಕೊಡುತ್ತೇನೆ. ಬೆಂಗಳೂರಿನಲ್ಲಿ ಇನ್ನೂ ಅವರು LH ನಲ್ಲಿ ನನ್ನ ರೂಮಿನಲ್ಲಿಯೇ ಇದ್ದಾನೆ, ಅವನು ಇನ್ನೂ ಸೆಟ್ಲ್ ಆಗಿಲ್ಲ. ನಾನು ಕೇಳಿದೆ, ಇದು ಏನಪ್ಪಾ ವಿಚಿತ್ರ, ಇದು ಯಾವ ರೀತಿಯ ವ್ಯವಸ್ಥೆ ಎಂದು ಕೇಳಿದೆ. ಅದಕ್ಕೆ ಹೇಳುತ್ತಾರೆ. ಪ್ರೈವೇಟ್ ಕಾಲೇಜುಗಳಿಗೆ ಏನು ಹಣವನ್ನು Social Welfare Department ನವರು ತುಂಬಬೇಕಾಗಿತ್ತೋ ಈ ವಿದ್ಯಾರ್ಥಿಗಳ ಪರವಾಗಿ, ಆ ಹಣ ಸಕಾಲಕ್ಕೆ ಇವರು ತುಂಬುತ್ತಿಲ್ಲ. ಅವರು ಪಾಪ ಬಡವರು ಆ ಪ್ರೈವೇಟ್ ಕಾಲೇಜುನವರು ಅವರ ಹತ್ತಿರ ದುಡ್ಡು ಎಲ್ಲಿದೆ. ಪಾಪ ಅವರು ನಮ್ಮ ಹಾಗೆ ಅನುಕೂಲಸ್ಥರಲ್ಲ, ಅವರೆಲ್ಲಾ ಪಾಪ ಬಿಕಾರಿಗಳು. ಅವರಿಗೆ ವಿದ್ಯಾರ್ಥಿಗಳ ಪರವಾಗಿ ಬರಬೇಕಾದ ಹಣ ಬರುತ್ತದೋ ಇಲ್ಲವೋ ಎಂದು ತಿಳಿದು ವಿದ್ಯಾರ್ಥಿಗಳಿಗೆ ಮೊದಲೇ ಕಂಡೀಶನ್ ಹಾಕುತ್ತಾರೆ. ಯಡಿಯೂರಪ್ಪನವರೆ, ಸ್ವಲ್ಪ ಈ ಕಡೆ ಗಮನ ಕೊಡಿ, ಇದರ ಹಿಂದೆ ಇರುವ ಪಿತೂರಿ ಬಗ್ಗೆ ಹೇಳುತ್ತೇನೆ. ಯಾವ ಸೀಟುಗಳನ್ನು ಈ ಹುಡುಗರಿಗಾಗಿ ಮೀಸಲಿಟ್ಟಿದ್ದಾರೆ, advance ಆಗಿಯೇ ಇವರು ದುಡ್ಡು ಕಟ್ಟಬೇಕು ಎಂದು ಕಂಡೀಶನ್ ಹಾಕಿದಾಗ, ಇವರಿಗೆ ದುಡ್ಡು ಇಲ್ಲದೇ ಇವರಿಗೆ ಸೇರುವುದಕ್ಕೆ ಆಗದಿದ್ದರೆ ಆ ಸೀಟ್ ಲ್ಯಾಪ್ಸ್ ಆದಾಗ ಅವರಿಗೆ ಬೇಕಾದ ಹಾಗೆ ಆ ಸೀಟ್‌ಗಳನ್ನು ಯೂಸ್ ಮಾಡಿಕೊಳ್ಳಬಹುದು. Social Welfare Department ನಲ್ಲಿ ಯಾರು ಅವರು ಆಫೀಸರ್ಸ್? ದಯಮಾಡಿ ಇನ್ನು ಮೂರು ದಿವಸಗಳೊಳಗಾಗಿ keep them under

---

x ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

6.20 ಗಂಟೆ

suspension. ಈ ವರ್ಗದ ಜನರ ಮೇಲೆ ನಿಮ್ಮ ನಿಷ್ಠೆ ಏನಿದೆ? ನಿಮ್ಮ ಬದ್ಧತೆ ಏನಿದೆ? ಹೌದು, ಈ ಕಡೆ ಇದ್ದವರು ಮಾಡಲಿಲ್ಲ. ಇವರಿಗೆ ಶಿಕ್ಷೆಯಾಗಿದೆ, ನಿಮಗೆ ಹೊಸದಾಗಿ ಅವಕಾಶ ಸಿಕ್ಕಿದೆ. ನಿಮ್ಮ ನಿಯತ್ತನ್ನು ಪ್ರದರ್ಶನ ಮಾಡುವುದಕ್ಕೆ, ಡೆಮಾನ್ಸ್ಟ್ರೇಟ್ ಮಾಡುವುದಕ್ಕೆ ನಿಮಗೆ ಅವಕಾಶ ಸಿಕ್ಕಿದೆ, ನೀವು ಮಾಡಿ. ಮೂರು ದಿವಸದಲ್ಲಿ, ಇದಕ್ಕೆ ಯಾರು ಕಾರಣ? ಎಷ್ಟು ಜನ ವಿದ್ಯಾರ್ಥಿಗಳಿಗೆ ತೊಂದರೆ ಆಯಿತು? ಎಷ್ಟು ಜನ ವಿದ್ಯಾರ್ಥಿಗಳು ಅವಕಾಶದಿಂದ ವಂಚಿತರಾದರು? Who is that Officer? ಫೈನಾನ್ಸ್‌ನಿಂದ ಏಕೆ ಇನ್‌ಸ್ಟ್ರಕ್ಷನ್ ಹೋಗಲಿಲ್ಲ? ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಅಡ್ವಾನ್ಸ್ ಆಗಿ ಏಕೆ ಹಣ ಹೋಗಲಿಲ್ಲ? Kindly get the details. ಇವತ್ತಿಗೆ ಈ ವಿಚಾರದಲ್ಲಿ ಯಾರೂ ಚಕಾರ ಎತ್ತಿಲ್ಲ. ನಿಮ್ಮ ಹತ್ತಿರ ಎಷ್ಟು ಜನ ಮಕ್ಕಳಿಗೆ ತೊಂದರೆಯಾಯಿತು ಎನ್ನುವುದರ ಬಗ್ಗೆ ಮಾಹಿತಿ ಇಲ್ಲ. ಮಂಗಳೂರಿನಲ್ಲಿ ಫಾದರ್ ಮುಲ್ಲರ್ ಕಾಲೇಜಿಗೆ ನನ್ನ ಊರಿನಲ್ಲಿ ಕೆಲಸ ಮಾಡುವಂತಹ ಒಬ್ಬ ವಡ್ಡರ ಹುಡುಗ ತಂದೆ, ತಾಯಿ ಇಬ್ಬರೂ ಕಲ್ಲು ಹೊಡೆದು ಕೂಲಿ ಕೆಲಸ ಮಾಡುತ್ತಾರೆ. ಅವರು ಕಲ್ಲು ವಡ್ಡರು. ಆ ಹುಡುಗನಿಗೆ ಸೀಟು ಸಿಕ್ಕಿದೆ. ಆ ಹುಡುಗನಿಗೆ ದುಡ್ಡು ಕಟ್ಟದೇ ಹೋದರೆ ಹಾಸ್ಟೆಲ್ ಮತ್ತು ಕಾಲೇಜಿನ ಒಳಗಡೆ ಅವರನ್ನು ಸೇರಿಸುವುದಿಲ್ಲ. ಇವರು ಹಣ ಕೊಡುವುದಿಲ್ಲ. ಅವನ ತಂದೆ ತಾಯಿ ಕೂಲಿಗೆ ಹೋಗಿ ಬಂದು ಆನಂತರ ನನ್ನ ಹತ್ತಿರ ಬಂದು ಅಳುತ್ತಾ ಕುಳಿತುಕೊಳ್ಳುತ್ತಾರೆ. ನಾವು ನೀವು ಸಾರ್ವಜನಿಕ ಜೀವನದಲ್ಲಿ ಏಕೆ ಇದ್ದೇವೆ ಯಡಿಯೂರಪ್ಪನವರೇ?

ಶ್ರೀ ರಾಮಚಂದ್ರಗೌಡ (ರೇಷ್ಮೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಕ್ಕಳಿಗೆ ಫೀಜ್ ಕೊಡುವ ವಿಚಾರದಲ್ಲಿ ಕಳೆದ 5 ಬಜೆಟ್‌ನಲ್ಲಿ ಇಟ್ಟಿದಂತಹ ಹಣ ಬಹಳ ಕಡಿಮೆ ಇತ್ತು. ಡಿಮ್ಯಾಂಡ್ ಬಹಳ ಜಾಸ್ತಿ ಇತ್ತು. ಈ ಸರ್ಕಾರ ಅಧಿಕಾರಕ್ಕೆ ಬರುವಾಗ ಕೊಡಬೇಕಾದಂತಹ ಬಾಕಿ 49 ಕೋಟಿ ರೂಪಾಯಿ ಇತ್ತು. ಯಾರನ್ನು ಹಿಡಿಯುತ್ತೀರಿ? ಯಾರನ್ನು ನೀವು ಕೇಳುತ್ತೀರಿ? ಈ ಸರ್ಕಾರ ಬರುವುದಕ್ಕಿಂತ 5 ಬಜೆಟ್ ಮೊದಲೇ ಐದೈದು ಕೋಟಿ ರೂಪಾಯಿ ಇಟ್ಟುಕೊಂಡು ಬಂದಿದ್ದರೂ ಕೂಡ ಡಿಮ್ಯಾಂಡ್ ಜಾಸ್ತಿಯಾಗಿ 49 ಕೋಟಿ ರೂಪಾಯಿ ಬಾಕಿ ಇತ್ತು. ಇದನ್ನು ನಿಮ್ಮ ಮಾಹಿತಿಗಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸರ್ಕಾರ ಕೊಡುತ್ತದೆಂದು ಕಾಲೇಜಿನವರಿಗೆ ಗೊತ್ತಿದೆಯಲ್ಲಾ. ನೀವು ಸರ್ಕಾರದಿಂದ, ಅವರಿಂದ ಕಲೆಕ್ಟ್ ಮಾಡಿಕೊಳ್ಳಬೇಡಿ, ಆಮೇಲೆ ನಾವು ಕಟ್ಟುತ್ತೇವೆಂದು ಇನ್‌ಸ್ಟ್ರಕ್ಷನ್ ಕೊಡಿಸಿ, ಅದು ಆಗುವುದಿಲ್ಲವಾ? ಫೀಜ್ ಅನ್ನು ಮೊದಲೇ ಹುಡುಗ ಕೊಡಬೇಕಾ? ತಾವು ಅಷ್ಟಾದರೂ ಮಾಡಬಹುದಲ್ಲವಾ? ಒಂದು ಸಣ್ಣ ವಿಷಯ ಇದು, ತಾವು ಆದೇಶ ಕಳುಹಿಸಿದರೆ ಆಹಿತು.

ಶ್ರೀ ಎ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮಕ್ಕಳು ಅಡ್ಮಿಷನ್‌ಗೆ ಹೋದಾಗ ಸರ್ಕಾರ ದುಡ್ಡನ್ನು ಕಟ್ಟದೇ ಹೋದರೆ, ಸರ್ಕಾರ ಎಲ್ಲಾ ಮಾಡಿ ಅಲ್ಲಿಗೆ ಕಳುಹಿಸಿದರೂ

ಕೂಡ ಮಕ್ಕಳು ಅಲ್ಲಿಗೆ ಹೋಗಿ ಸರ್ಕಾರ ಹೇಳಿದೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ನಾವು ಬಂದಿದ್ದೇವೆ, ನಮಗೆ ಸೀಟು ಸಿಕ್ಕಿದೆ ದಯಮಾಡಿ ನಮ್ಮನ್ನು ಅಡ್‌ಮಿಷನ್ ಮಾಡಿಕೊಳ್ಳಿ ಎಂದರೆ ಅವರಿಗೆ ಏನು ಹೇಳುತ್ತಾರೆ ಎಂದರೆ, ಬೇರೆಯವರು ಯಾವ ರೀತಿ ದುಡ್ಡು ಕಟ್ಟುತ್ತಾರೆ ಅಷ್ಟು ಕಟ್ಟಿದರೆ ಮಾತ್ರ ಅಡ್ಮಿಷನ್ ಮಾಡಿಕೊಳ್ಳುವುದು ಎನ್ನುತ್ತಾರೆ. ಮೊನ್ನೆ ನಾನೇ ಒಂದು ಕಾಲೇಜಿಗೆ ಹೋಗಿ ಹೇಳಿದೆ, ಅವರಿಗೆ ನೀವು ಬರೆದುಕೊಡಿ ಸರ್ಕಾರದ ಸೀಟು ಕೊಡುವುದಕ್ಕೆ ಆಗುವುದಿಲ್ಲವೆಂದು ಲೆಟರ್ ಕೊಡಿ ಎಂದು ಗಲಾಟೆ ಮಾಡಿದ ಮೇಲೆ, ಆಗ ಅವರು ಇಲ್ಲ ನೀವು 50 ಪರ್ಸೆಂಟ್ ಕಟ್ಟಿ ಎಂದರು. ಈ ದ್ವಂದ್ವ ನೀತಿ ಏನಿದೆ, ಇದರ ಹಿನ್ನೆಲೆಯಲ್ಲಿ ನಮ್ಮ ಅಧಿಕಾರಿಗಳು ಎಲ್ಲೋ ಒಂದು ಕಡೆ ಖಾಸಗಿ ವಿದ್ಯಾ ಸಂಸ್ಥೆ ಮೇಲೆ ಕಡಿವಾಣ ಹಾಕುವುದು ಸೂಕ್ತ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರೆ, ತಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ. ನಾನು ಮೊನ್ನೆ ಮೊನ್ನೆಯವರಿಗೂ ಬಿಸಿಎಂ ಕಮಿಟಿಯಲ್ಲಿ ಕೆಲಸ ಮಾಡುತ್ತಿದ್ದೆ. 2002ನೇ ಇಸವಿಯಿಂದ 60 ಕೋಟಿ ರೂಪಾಯಿ ಬಾಕಿ ಇದೆ. ಇದರ ಪರಿಣಾಮ ಅನೇಕ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಡಿಗ್ರಿನಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾದರೂ ಕೂಡ ಅವರಿಗೆ ಅವರ ಸರ್ಟಿಫಿಕೇಟ್ ಕೊಡಲಿಲ್ಲ. ಅದನ್ನು ತಡೆಹಿಡಿದುಕೊಂಡಿದ್ದಾರೆ. ಏಕೆಂದರೆ, ಸರ್ಕಾರವನ್ನು ನಂಬಿ ಸಾಕಾಗಿ ಎಷ್ಟೋ ಜನರು ಇದನ್ನು ತುಂಬುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆ ಕಾಲೇಜಿನವರು, ನೀನು ಎಲ್ಲಿಂದಲಾದರೂ ಸಾಲ ಮಾಡಿ ತಂದುಕೊಡು, ಇಲ್ಲದೇ ಇದ್ದರೆ ನಿನ್ನ ಸರ್ಟಿಫಿಕೇಟ್ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಧಿಕಾರಿಗಳೂ ಕೂಡ ಏನೂ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ನಾವು ಬಿಸಿಎಂ ಕಮಿಟಿಯಿಂದ ಒತ್ತಡ ಹಾಕಿದ ಮೇಲೆ ಈ ಸಲ 8.50 ಕೋಟಿ ರೂಪಾಯಿ ನಮ್ಮ ಸರ್ಕಾರ ಕೊಟ್ಟಿದೆ. ನಾನು ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಏಕೆಂದರೆ, ಈ ಸಾರಿ ಮಾತ್ರ ಹಣವನ್ನು ಬಿಡುಗಡೆ ಮಾಡಿದ್ದು, ಹಿಂದೆಲ್ಲಾ ತುಂಬಿ ತುಳುಕುತ್ತಿತ್ತಲ್ಲಾ, ಆಗ ಏಕೆ ಇದಕ್ಕೆ ಹಣವನ್ನು ಬಿಡುಗಡೆ ಮಾಡಲಿಲ್ಲವೆಂಬುದು ನಮಗೆ ಅರ್ಥವಾಗಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಿಜವಾದ ಪರಿಸ್ಥಿತಿ ಬಯಲಿಗೆ ಬರಲಿಲ್ಲವೆಂದು ನನಗೆ ಅನ್ನಿಸುತ್ತದೆ. ಬಿಸಿಎಂ ಕಮಿಟಿಯಲ್ಲಿದ್ದೆ ಎಂದು ಹೇಳುತ್ತಿದ್ದೀರಿ. ನೀವು ಆ ಕಮಿಟಿಯಲ್ಲಿ ನೋಡಿದಿರೋ ಇಲ್ಲವೋ ನನಗೆ ಗೊತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಸರಿಯಾಗಿ ತಿಳಿದುಕೊಂಡು ಉತ್ತರವನ್ನು ಹೇಳಬೇಕಾಗುತ್ತದೆ. ಅದೇನೆಂದರೆ, ಹೆಚ್ಚು ಹಾಸ್ಟೆಲ್‌ಗಳನ್ನು ತೆರೆದಿದ್ದೇವೆ. ಆದ್ದರಿಂದ ಈ ಗ್ರಾಂಟ್ ಅವಶ್ಯಕತೆಯಿಲ್ಲವೆಂದು ಹೇಳಿ ಒಂದು ವರದಿ ಕೊಟ್ಟಿದ್ದಾರೆ. ಆ ಕಾರಣದಿಂದ ನೀವು ಇದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಲಿಲ್ಲ. ಮೊನ್ನೆ ನಾವು ರಿವ್ಯೂ ಮಾಡಿದಾಗ ಗೊತ್ತಾಗಿದೆ. ಇದು ಇರುವಂತಹ ಪರಿಸ್ಥಿತಿ. ಈಗ ಮತ್ತೆ ಅದನ್ನು ಮನಃ ಶುರು ಮಾಡಿದ್ದೀರಿ. ಇದು ನಿಮ್ಮ ಅಧಿಕಾರಿಗಳು ಮಾಡುವಂತಹ ವ್ಯವಹಾರ. ಆ

ಕಾರಣದಿಂದ ಈ ತಪ್ಪು ನಿಮ್ಮಿಂದಾಗಿದೆ. ಪಾಪ ಇದರಿಂದ ಹುಡುಗರಿಗೆ ಬಹಳ ತೊಂದರೆಯಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಅದರ ಬಗ್ಗೆ ಅಧಿಕಾರಿಗಳ ವರದಿ ಬಂದಿದೆ. ಅದರ ಬಗ್ಗೆ ಕೂಡ ಆ ವರದಿ ಬಂದಿದೆಯೋ ಇಲ್ಲವೋ ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರ ಮಾತನ್ನು ಕೇಳಿದೆ. ನಮ್ಮಲ್ಲಿ ಒಂದು ವೈಪರೀತ್ಯ ಇದೆ. ಗೌವರ್ನ್‌ಮೆಂಟ್ ಆಫ್ ಇಂಡಿಯಾದಲ್ಲಿ ಫುಡ್ ಅಂಡ್ ಅಗ್ರಿಕಲ್ಚರ್ ಮಿನಿಸ್ಟ್ರಿಯವರು ಡಿಕ್ಲೇರ್ ಮಾಡುತ್ತಾರೆ, ನಾವು 114 ಕೋಟಿ ಮೆಟ್ರಿಕ್ ಟನ್ ಫುಡ್‌ನ್ನು ಈ ವರ್ಷ ಉತ್ಪಾದನೆ ಮಾಡಿದ್ದೇವೆ. ಹೆಚ್ಚುವರಿಯಾಗಿದೆ ಎಂದು ಹೇಳುತ್ತಾರೆ. ಮತ್ತೆ ಇನ್ನೊಂದು ಇಲಾಖೆಯವರು ಡಿಕ್ಲೇರ್ ಮಾಡುತ್ತಾರೆ. Below ಪಾವರ್ಟಿ ಲೈನ್ ಇಷ್ಟು ಜನ ಇದ್ದಾರೆಂದು ಹೇಳುತ್ತಾರೆ. ಹೆಚ್ಚುವರಿ ಆಹಾರಧಾನ್ಯ ಕೂಡ ಈ ದೇಶದಲ್ಲಿ ಆಗುತ್ತದೆ. ಎರಡು ಹೊತ್ತು ಊಟಕ್ಕೆ ಇಲ್ಲದೆ ಇರುವವರೂ ಕೂಡ ಈ ದೇಶದಲ್ಲಿದ್ದಾರೆ. ಎಂದರೆ ಈ ಉತ್ಪಾದನೆ ಎಲ್ಲಿಗೆ ಹೋಗುತ್ತದೆ? ಮಾನ್ಯ ಯಡಿಯೂರಪ್ಪನವರು ಫೈನಾನ್ಸ್ ಮಿನಿಸ್ಟರ್ ಆಗಿ ಒಂದು ಮಾತು ಹೇಳಿದರು. ಫೈನಾನ್ಸ್ ಕಮೀಷನ್‌ರವರು ನಮಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂದು. ಅದನ್ನು ಹಿಂದೂ ಕೊಟ್ಟಿದ್ದಾರೆ, ಈಗಲೂ ಕೊಟ್ಟಿದ್ದಾರೆ, ಬಹಳ ಸಂತೋಷದ ವಿಚಾರ ಬಹಳ ಹೆಮ್ಮೆ ಪಡುತ್ತೇವೆ. ನಮ್ಮ ಆರ್ಥಿಕ ವ್ಯವಸ್ಥೆ ಬಹಳ ಸುಭದ್ರವಾಗಿದೆ. ಹಣದ ಕೊರತೆ ಇಲ್ಲ. ಆದರೆ, ಆ ಮಕ್ಕಳಿಗೆ ದುಡ್ಡು ಹೋಗಲಿಲ್ಲ. ಹಾಗಾದರೆ ಯಾರು ಕಾರಣ? ಹಿಂದಾಗಲೀ, ಮುಂದಾಗಲೀ ನಾನು ಮಾನ್ಯ ರಾಮಚಂದ್ರ ಗೌಡರಿಗೂ ಇದನ್ನೇ ಹೇಳುವುದು, ಪಕ್ಷಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಸರ್ಕಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಅವರು ಮಾಡಲಿಲ್ಲ, ಇವರು ಮಾಡಲಿಲ್ಲ, ಇವತ್ತು ಮಾಡಿದೆವು, ನಿನ್ನೆಯಾಯಿತು ಎಂದು ನಾವು ಆಲೋಚನೆ ಮಾಡುವುದು ಬೇಡ. ಒಂದು ವೇಳೆ ಕಾಂಗ್ರೆಸ್‌ನವರು ಯಾರಾದರೂ ಇದ್ದು ಅವರ ಕರ್ತವ್ಯವನ್ನು ಅವರು ಮಾಡದೇ ಹೋಗಿದಿದ್ದರೆ, ನಾನು ಕಾಂಗ್ರೆಸ್‌ನಲ್ಲಿ ಇದ್ದೇನೆ ಎನ್ನುವ ಕಾರಣಕ್ಕೆ ಅವರು ಬಹಳ ಒಳ್ಳೆಯ ಕೆಲಸ ಮಾಡಿದರು ಎಂದು ಹೇಳಲಾ? I don't belong to that category. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಇವತ್ತಿನ ಸಮಸ್ಯೆ ಇದು. ಆ ಮಕ್ಕಳಿಗೆ ಪ್ರೋತ್ಸಾಹ ಮಾಡಬೇಕೆಂದು ಹೇಳಿ, ಸಾರ್ವಜನಿಕ ಸಭೆಗಳಲ್ಲಿ ಆಕಾಶವನ್ನೇ ತೆಗೆದು ಅವರ ಕೈಯಲ್ಲಿ ಇಡುತ್ತೇವೆಂದು ಭರವಸೆಗಳನ್ನೆಲ್ಲಾ ಕೊಟ್ಟು, ನ್ಯಾಯಬದ್ಧವಾಗಿ ಅವರಿಗೆ ಸಿಗಬೇಕಾದಂತಹ ಹಣವನ್ನು ಸಮಯಕ್ಕೆ ಸರಿಯಾಗಿ ಕೊಡುವುದಕ್ಕೂ ಕೂಡ ಮನಸ್ಸಿಲ್ಲವೆಂದರೆ, ಎಲ್ಲೋ ಒಂದು ಸ್ಥಾಪಿಕ ಹಿತಾಸಕ್ತಿಗಳು, ವೆಸ್ಟೆಡ್ ಇಂಟರೆಸ್ಟ್ ನಿಮ್ಮ ನೆಟ್‌ವರ್ಕ್‌ನಲ್ಲಿದ್ದಾರೆ. ಅವರು ಯಾವ ಹಂತದಲ್ಲಿದ್ದಾರೆ? ನಿಮ್ಮ ಸೆಕ್ರೆಟರಿಯೇಟ್‌ನಲ್ಲಿದ್ದಾರಾ? ಅಥವಾ ಇನ್ನು ಕೆಳಗಿದ್ದಾರಾ? ಅಥವಾ ಕೆಳಹಂತದಲ್ಲಿದ್ದಾರಾ? ಅವರನ್ನು ಹೇಗೆ ಬಲಿ ಹಾಕುತ್ತೀರಿ? ಇದನ್ನು ನೀವು ಯೋಚನೆ ಮಾಡಬೇಕಾಗಿದೆ. ಮಾನ್ಯ ರಾಮಚಂದ್ರಗೌಡರೆ, ಆಚಾರ್ಯ ಕೃಪಲಾನಿಯವರು ಹೇಳುತ್ತಾರೆ, "Men of rank do not belong to any party. If at

all they belong to any, they are not only fools but are also slaves. It is necessary in this system we do belong to certain political parties but, we need not be unnecessarily conscious of it all the time. When it comes to the question of cause and commitment and expression of our will, I think, we will have to raise above that and demonstrate our will and dedication towards those people." "ಅಭಿಯಾಚನೆ ಸಂಖ್ಯೆ 16 ಹೊಸ ಕೆರೆ ಯೋಜನೆಗಳಿಗೆ ಆಯವ್ಯಯದಲ್ಲಿ ಸಾಕಷ್ಟು ಅನುದಾನವನ್ನು ಒದಗಿಸಿದೆ ಇರುವುದರಿಂದ 941 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಅಭಿಯಾಚನೆಯಲ್ಲಿ ಸೇರಿಸಿದೆ". ಯಾರು ಇವರು ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು? ಇವರು ಏನು ಎಸ್ಟಿಮೇಟ್ ಮಾಡಿದರು? ಏಕೆ ಇದನ್ನು ಇವರು ಅಂಟಿಸಿಪೇಟ್ ಮಾಡಲಿಲ್ಲ? After all, ನೀವು ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಕೊಡುವ ದುಡ್ಡೇ ಮೂರು ಕಾಸು. ಅಲ್ಲಿ ಇರುವ ದುಡ್ಡು ಬರೀ ಸಂಬಳಕ್ಕೆ ಸಾಕಾಗುತ್ತದೆ. ನೀವು ಹೊಸ ಕೆರೆ ತೆಗೆದುಕೊಳ್ಳುವುದಿಲ್ಲ, ತೂಬು ಕಾಲುವೆ ಮಾಡುವುದಿಲ್ಲ, ರಾಜಾ ಕಾಲುವೆ ಮಾಡುವುದಿಲ್ಲ. ಏನೂ ಮಾಡುವುದಿಲ್ಲ. ಅದರಲ್ಲೂ ಕೂಡ ಮತ್ತೆ ನಿಮಗೆ ಅಡಿಷನಲ್ ಡಿಮ್ಯಾಂಡ್ಸ್ ಕೇಳುತ್ತಾರೆಂದರೆ, ಅಂದಾಜನ್ನು ಪ್ರಿಪೇರ್ ಮಾಡುವಾಗ ಎಷ್ಟೊಂದು ಅಲಕ್ಷ್ಯ ಮಾಡಿದ್ದಾರೆ. ನಿಮ್ಮ ಬಜೆಟ್ ಪ್ರಿಪೇರ್ ಮಾಡುವಾಗ ಕನ್‌ಸರ್ನ್ಡ್ ಡಿಪಾರ್ಟ್‌ಮೆಂಟ್‌ನವರಿಗೆ ಶ್ರದ್ಧೆ ಏನಾದರು ಇದೆಯಾ? ಇವತ್ತು ದೈವವಶಾತ್ ನಿಮ್ಮ ಕೈಯಲ್ಲಿ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಇದೆ. ಇದೊಂದು ಸಬ್ಜೆಕ್ಟ್ ಅನ್ನು ದಯಮಾಡಿ ತೆಗೆದುಕೊಳ್ಳಿ. ಯಾರು ಇವರು ಈ ಇಲಾಖೆಯವರು? ಏಕೆ ಈ ಡಿಮ್ಯಾಂಡ್‌ನ್ನು project ಮಾಡಿದರು? Why they failed to make proper assessments? Are they going to repeat it again? ಅವರಿಗೆ ಹೇಗೆ ಬುದ್ಧಿ ಕಲಿಸಬೇಕು? ಫೈನಾನ್ಸ್ ಮಿನಿಸ್ಟರ್ ದಕ್ಷತೆ ಹೆಚ್ಚಬೇಕು, ನೀವು ಇಡೀ ಸಭೆಯ ಶ್ಲಾಘನೆಗೆ ಒಳಗಾಗಬೇಕೆಂದರೆ ಅತ್ಯಂತ ನಮ್ರತೆಯಿಂದ ನಾನು ನಿಮಗೆ ಸಲಹೆ ಕೊಡುತ್ತೇನೆ, ನಾನು ನಿಮಗೆ ಟೀಕೆ ಮಾಡುವುದಿಲ್ಲ. ನೀವು ಪ್ರಾರಂಭಿಕ ದಿಸೆಯಲ್ಲಿದ್ದೀರಿ. ಪ್ರತಿಯೊಬ್ಬರೂ ಕೂಡ ಉತ್ತಮವಾಗಿ ಹೊರಬರುವುದಕ್ಕೆ ಅವಕಾಶ ಇರುತ್ತದೆ. ನಿಮ್ಮ ಅಂತಃಕರಣವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ, ನಿಮ್ಮ ಮುಂದೆ ನಮ್ಮ ಸಮಸ್ಯೆಗಳನ್ನು ಇಡುತ್ತಿದ್ದೇನೆ. ನೀವು ಕುರುಡು ಕುರುಡಾಗಿ ತಂದು ನಮ್ಮ ಮುಂದೆ ಇಷ್ಟು ಕೋಟಿ ರೂಪಾಯಿಬೇಕೆಂದು ಕೇಳುತ್ತಿದ್ದೀರಿ. ನೀವು ಕೇಳಿದಂತಹ ಹಣವನ್ನು ನಾವು ಒಪ್ಪಿಗೆ ಕೊಡದೆ ಹೊರತು ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಅದು ನಮಗೆ ಇರುವಂತಹ ಪವಿತ್ರವಾದಂತಹ ಹಕ್ಕು ಆಗಿದೆ. ನಾವು ನಮ್ಮ ಹಕ್ಕನ್ನು ಚಲಾಯಿಸುವ ಮೊದಲು ವಿವೇಚನೆಯುತವಾಗಿ ನಿಮ್ಮ ಗಮನಕ್ಕೆ ಆಗಿರುವಂತಹ ಲೋಪದೋಷಗಳನ್ನು ನಾವು ತರಲೇ ಬೇಕಾಗುತ್ತದೆ. ಮಾನ್ಯ ಹೆಚ್.ಡಿ. ರೇವಣ್ಣನವರು ಸಭೆಯಲ್ಲಿ ಇಲ್ಲ. ಈ ರಾಜ್ಯದಲ್ಲಿ ಯಾರಾದರೂ ಬಹಳ ನಿಷ್ಠೆಯಿಂದ

6.30 ಗಂಟೆಗೆ

ಮಂತ್ರಿಗಳಾಗಿ ಭೇದ ಭಾವವಿಲ್ಲದೆ, ಅತ್ಯಂತ ವಿಶಾಲವಾದ ಹೃದಯ, ಆಕಾಶದಷ್ಟು ವಿಶಾಲವಾದಂತಹ ಹೃದಯವನ್ನು ಇಟ್ಟುಕೊಂಡು, ತಮ್ಮ ಇಲಾಖೆಯಲ್ಲಿರುವಂತಹ ಎಲ್ಲಾ ಹಣವನ್ನು, ಇಡೀ ರಾಜ್ಯ ನಮ್ಮದು ಎಂಬ ಭಾವನೆಯಿಂದ ಕೆಲಸ ಮಾಡಿದರೆಂದರೆ ಅವರೊಬ್ಬರು. ನಮ್ಮ ಸಾರ್ವಜನಿಕ ರಸ್ತೆಗಳು ಯಾವುವು ಇವೆ, ಇವು ಇನ್ನು ಎರಡು, ಮೂರು ತಿಂಗಳು ಹೋದರೆ, ಆ ಬದಿಗೆ ಈ ಬದಿಗೆ ಮೂರು ಅಡಿ ಗೋಡೆಯನ್ನು ಕಟ್ಟುಬಿಟ್ಟರೆ, ಶಾಶ್ವತವಾಗಿ ನೀರನ್ನು storage ಮಾಡಿಕೊಳ್ಳುವುದಕ್ಕೆ ಆಗುತ್ತದೆ. ಮಾನ್ಯ ಯಡಿಯೂರಪ್ಪನವರೆ, ನಾನು ಈ ವಿಷಯವನ್ನು ಇಷ್ಟು ದುಃಖದಿಂದ ಹೇಳುತ್ತೇನೆ. ನಾವು 2002ನೇ ಇಸವಿಯಲ್ಲಿ ಚುನಾವಣೆಯಲ್ಲಿ ಗೆದ್ದು ಬಂದೆವು. ಸುಮಾರು ಐದು ಕೋಟಿ ರೂಪಾಯಿಗಳನ್ನು ನನ್ನ ಮತಕ್ಷೇತ್ರದ ರಸ್ತೆಗಳಿಗೆ ಮಂಜೂರು ಮಾಡಿತ್ತು. ಅವರು ಮಾಡಿರುವಂಥಾದ್ದು, ತಪ್ಪೆಂದು ಇವರು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಆಗಿ ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ, 3054ನಲ್ಲಿ ಇದನ್ನು ತೆಗೆದುಕೊಂಡು ಕೆಲಸ ಮಾಡುತ್ತೇನೆಂದು ಹೇಳಿದರು. ನಾನು ಅದಕ್ಕೆ ಇದರ ಬಗ್ಗೆ ಅಷ್ಟು ಗೊತ್ತಾಗುವುದಿಲ್ಲ. ನನಗೆ ರಸ್ತೆ ಕೆಲಸವಾದರೆ ಸಾಕು, ನಮಗೆ ಅಷ್ಟು ಮಾಡಿ ಕೊಡಿ, ನಿಮಗೆ ಪುಣ್ಯ ಬರುತ್ತೆ, ಆ ರಸ್ತೆ ಕೆಲಸವನ್ನು ಮಾಡಿಕೊಡಿ, ಎಂದು ಹೇಳಿದೆ. ಇದೆಲ್ಲಾ ಆಗಲು ಹತ್ತು ತಿಂಗಳು ಆಯಿತು, ಮತ್ತೆ 3054ನಲ್ಲಿ ಟೆಂಡರ್ಸ್‌ಗಳೆಲ್ಲವನ್ನೂ ಕರೆದು ಮಾಡುವಷ್ಟರಲ್ಲಿ, ಮತ್ತೆ ಟಾರ್ ರೇಟ್ ಜಾಸ್ತಿಯಾಯಿತು. ಟೆಂಡರ್ ಮಾಡಿಕೊಂಡಿದ್ದ ಕಂಟ್ರಾಕ್ಟ್‌ದಾರರೆಲ್ಲರೂ ತಮ್ಮ ಊರಿಗೆ ವಾಪಸ್ಸು ಹೋದರು. ನಮಗೆ ಬಜೆಟ್‌ನಲ್ಲೂ ದುಡ್ಡು ಇಲ್ಲ, 3054ನಲ್ಲೂ ಇಲ್ಲ. ಮಾನ್ಯ ಯಡಿಯೂರಪ್ಪನವರೇ, ತಾವು ಒಂದು ಕೆಲಸವನ್ನು ಮಾಡಿ. ತಾವು reply ಕೊಡುವಾಗ, ಕೋಲಾರ ಡಿವಿಜನ್‌ನಲ್ಲಿ ಶ್ರೀನಿವಾಸಪುರ ಸಬ್ ಡಿವಿಜನ್‌ಗೆ, ಈ 20 ತಿಂಗಳುಗಳಲ್ಲಿ ನಿಮ್ಮ ಸರ್ಕಾರ ಮಾತ್ರವಲ್ಲ, ಹಿಂದಿನ ಸರ್ಕಾರವನ್ನು ಸೇರಿಸಿಕೊಂಡು, ಕೇಳುತ್ತಿದ್ದೇನೆ. ಆ ಸರ್ಕಾರದಲ್ಲೂ ಅವರೇ P.W.D. Minister ಆಗಿದ್ದವರು. ಇನ್ನು ಯಾರು ಪರಿಣತಿ ಇರುವವರು ಇದ್ದಾರೆ? Energy, P.W.D. ಯನ್ನು handle ಮಾಡುವುದಕ್ಕೆ ಅಷ್ಟೋ ಇಷ್ಟೋ ವಿಚಾರ ಗೊತ್ತಿರುವವರೆಂದರೆ ಅವರೇ. ಇದನ್ನು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಕೊಟ್ಟರೆ ಏನು ಗೊತ್ತಾಗುತ್ತದೆ. ಏನೂ ಗೊತ್ತಾಗುವುದಿಲ್ಲ. ಆ ವಿಚಾರದಲ್ಲಿ ಪರಿಣತಿ ಇರುವಂಥಾದ್ದು ಅವರೊಬ್ಬರಿಗೆ, ಬಹಳ ಸಂತೋಷ. ಅವರು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದನ್ನು ಹೇಳಬೇಕು. ನನ್ನ ಮತದಾರರು ಈ ರಾಜ್ಯದ ಬೊಕ್ಕಸದ ಹಣವನ್ನು ಖರ್ಚು ಮಾಡಿಸಿಕೊಳ್ಳುವುದಕ್ಕೆ ಅರ್ಹರಿಲ್ಲವೇ? ನಾನು ಎರಡನೇ ದರ್ಜೆಯ ಶಾಸಕನೇ, ನಮಗೆ ಯೋಗ್ಯತೆ ಇಲ್ಲವೇ? ಇದೆಲ್ಲಾ ಏನು? ಈ ಅಧಿಕಾರ ಯಾರಿಗೆ ಶಾಶ್ವತ? ತುಪ್ಪ ತೆಗೆಯುವವನು, ಜೇನು ತೆಗೆಯುವವನು ಅದನ್ನು ಸ್ವಲ್ಪ ನೆಕ್ಕುತ್ತಾನೆ. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಆಯಿತು, ಈಗ ಶಿವಮೊಗ್ಗದಲ್ಲಿ Animal Husbandry Department ಗೆ ಸ್ವಲ್ಪ ಹೆಚ್ಚಿಗೆ ಹಣವನ್ನು ಹಾಕಿಕೊಂಡಿದ್ದೀರಿ. ಸಾರ್ವಜನಿಕ ಜೀವನದಲ್ಲಿ ಅವಕಾಶಗಳು ಅಪರೂಪಕ್ಕೆ ಬರುತ್ತದೆ. ನೀವು ಅಧಿಕಾರದಲ್ಲಿ ಇದ್ದಾಗ ಒಂದು ಕಾಲೇಜೋ,

ಯೂನಿವರ್ಸಿಟಿಯನ್ನು ಮಾಡುವಂಥಾದ್ದು ಬಹಳ ಸಂತೋಷ. ಅದು ಅವರ ನೆನಪಿಗೆ ಇರಬೇಕಾಗುತ್ತದೆ. ನಾವು ಕೂಡ ಅಂಥಾದ್ದನ್ನು tolerate ಮಾಡಬೇಕಾಗುತ್ತದೆ. ಇದೆಲ್ಲಾ ಸಾರ್ವಜನಿಕ ಜೀವನದಲ್ಲಿ ಆಗುವಂಥಾದ್ದು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಇದ್ದಾರೆ, ಬಳ್ಳಾರಿಯಲ್ಲೋ, ಹಡಗಲಿಯಲ್ಲೋ ಯಾವುದಾದರೂ ಒಂದು ಕೆಲಸವನ್ನು ಮಾಡಬೇಕೆಂದರೆ, ಇಷ್ಟು ದಿವಸ ಸಾರ್ವಜನಿಕ ಜೀವನದಲ್ಲಿ ಇದ್ದಂಥವರು, ನಿಮ್ಮ ನೆನಪಿಗಾಗಿ ಏನಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ, ಅದನ್ನೆಲ್ಲಾ ನಾವು ಸಣ್ಣತನದಲ್ಲಿ ನೋಡುವುದಿಲ್ಲ. ಆದರೆ ಇದು ಯಾವ ಲೆಕ್ಕ? ರಮೇಶ್‌ಕುಮಾರ್‌ಗೆ ಇಂಟು ಹಾಕು, ಇನ್ನೊಬ್ಬರಿಗೆ ಇಂಟು ಹಾಕು ಎಂದರೆ ರಾಮನಗರಕ್ಕೆ ಎಷ್ಟು ಖರ್ಚು ಮಾಡಿದ್ದೀರಿ? ರಾಮನಗರದಲ್ಲಿ ಬೆಂಕಿಪೊಟ್ಟಣ ತೆಗೆದುಕೊಳ್ಳುವವರು, ಉಪ್ಪು ತೆಗೆದುಕೊಳ್ಳುವವರು, ಜೀರಿಗೆ ಮೆಣಸು ತೆಗೆದುಕೊಳ್ಳುವವರು ಶ್ರೀನಿವಾಸಪುರದವರಿಗಿಂತ ಹೆಚ್ಚಿಗೆ ತೆರಿಗೆಯನ್ನು ಕಟ್ಟುತ್ತಾನಾ? ನನ್ನವರು ಕಳ್ಳರಾ? ಶ್ರೀನಿವಾಸಪುರದ ಜನರು ತೆರಿಗೆ ವಂಚಕರಾ? ಏಕೆ ಈ ರೀತಿಯಾಗಿ ತಾರತಮ್ಯವನ್ನು ಮಾಡುತ್ತೀರಿ? ಆ ಇಲಾಖೆಯಲ್ಲೂ ತಾವು ಹೆಚ್ಚಿಗೆ ಹಣವನ್ನು ಕೇಳಿದ್ದೀರಿ. ತಾವು ನಮ್ಮ ಮುಂದೆ ಲೆಕ್ಕವನ್ನು ತೋರಿಸಿ. ತಾವು ಇಷ್ಟೆಲ್ಲಾ ನ್ಯಾಯದ ವಿಚಾರವನ್ನು ಮಾತನಾಡುತ್ತೀರಲ್ಲಾ, ಸಮಾನತೆಯ ವಿಚಾರವನ್ನು ಮಾತನಾಡುತ್ತೀರಲ್ಲಾ, ದಕ್ಷತೆಯ ವಿಷಯವನ್ನು ಮಾತನಾಡುತ್ತೀರಲ್ಲಾ ತಾವು ನಮಗೆ ಅಂಕಿ ಅಂಶಗಳನ್ನು ಕೊಡಿ. ಮಾನ್ಯ ಅಧ್ಯಕ್ಷರೂ ಸಹ ಇದನ್ನೇ ಪಾಳೇಗಾರಿಕೆಯ ಮನೋಭಾವ ಎಂದು ಹೇಳಿದ್ದು. ಮಾವಳಂಕರ್‌ರವರು ಮೊದಲನೆಯ ಲೋಕಸಭೆಯ ಅಧ್ಯಕ್ಷರಾಗಿದ್ದಂಥವರು. ಅವರು ಒಂದು ಮಾತನ್ನು ಹೇಳುತ್ತಾರೆ ಮಾನ್ಯ ಎಂ.ಪಿ. ಪ್ರಕಾಶ್‌ರವರೇ, ತಾವು ಇದನ್ನು ಸ್ವಲ್ಪ ಗಮನಿಸಿ. ಮಾವಳಂಕರ್‌ರವರು ಏನು ಹೇಳಿದ್ದಾರೆ ಎಂಬುದು ತಮಗೆ ನೆನಪಿದೆ. ಕೌಲ್ ಅಂಡ್ ಶೆಕ್ದಾರ್‌ರ ಪುಸ್ತಕವನ್ನು ತೆಗೆದರೆ first preface ನಲ್ಲಿ ಬರೆದಿದ್ದಾರೆ ನೋಡಿ. ಶಾಸನ ಸಭೆಗಳು, ಸಂಸತ್ತು ತನ್ನ ಜವಾಬ್ದಾರಿಯನ್ನು ಮರೆತು ಸಂಖ್ಯಾ ಬಲದ ಮೇಲೆ ಕೆಲಸ ಮಾಡತಕ್ಕಂಥ ಒಂದು ಪ್ರವರ್ತನೆಯನ್ನು ಪ್ರಾರಂಭ ಮಾಡಿದರೆ ಆ ಸಂಸ್ಥೆಗಳು ತಮ್ಮ ಪಾವಿತ್ರತೆಯನ್ನು ಕಳೆದುಕೊಳ್ಳುತ್ತವೆ. ಪ್ರಜಾಪ್ರಭುತ್ವದಲ್ಲಿ ಜನರಿಗೆ ನಂಬಿಕೆಯು ನಶಿಸಿ ಹೋಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. If the numerical strength on the floor of the House that enables you to be in power provides you the arrogance, to go ahead as you like, you are not only paying the price for it, you are also simultaneously making attempts to kill and destroy these democratic institutions. We don't want such a thing to happen. I told you in the morning also, we are only beneficiaries. We are not the fighters. Fighters are else where. They are martyrs. They fought, they gave us freedom. We are enjoying the fruits of freedom. Let us not try to destroy this

fabric. ಅಧಿಕಾರ ಬರುತ್ತದೆ, ಅಧಿಕಾರ ಹೋಗುತ್ತದೆ. ಅಧಿಕಾರ ಕೈಯಲ್ಲಿದೆಯೆಂಬ ಒಂದೇ ಕಾರಣಕ್ಕೆ, ಪಾಳೆಗಾರಿಕೆ ಮನೋಭಾವದಿಂದ ರಾಜ್ಯದ ಹಿತವನ್ನು ಕಡೆಗಣಿಸಿ ವೈಯಕ್ತಿಕ ಇಷ್ಟಾ ಇಷ್ಟಗಳನ್ನು ನೆರವೇರಿಸುವುದಕ್ಕೋಸ್ಕರ ತಮ್ಮ ಮನಸ್ಸಿಗೆ ಬಂದಂತೆ ಆಡಳಿತವನ್ನು ನಡೆಸಿದರೆ ಅದಕ್ಕೆ ಅವರೂ ಬೆಲೆ ಕೊಡಬೇಕಾಗುತ್ತದೆ. ಅಂಥಾದ್ದಕ್ಕೆ ಅವಕಾಶವನ್ನು ಕೊಡಬಾರದು ಎನ್ನುವ ಮಾತನ್ನು ಹೇಳಿ ನನಗೆ ಈ ಪೂರಕ ಅಂದಾಜುಗಳ ವಿಚಾರದಲ್ಲಿ ನಮ್ಮ ಸಹಾಯವನ್ನು ಮಾನ್ಯ ಆರ್ಥಿಕ ಮಂತ್ರಿಗಳು ಯಾಚನೆ ಮಾಡಿದ್ದಾರೆ. ನಮ್ಮ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ತೀರ್ಮಾನದಂತೆ ನಾವು ಒಪ್ಪಿಗೆಯನ್ನು ಕೊಡುತ್ತೇವೆ ಅಥವಾ ಇಲ್ಲವೆನ್ನುವ ಮಾತನ್ನು ಹೇಳಬೇಕಾಗುತ್ತದೆ. ಆದರೆ ಒಬ್ಬ ಸದಸ್ಯನಾಗಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಿಕ್ಕಂಥ ಅವಕಾಶವನ್ನು ಉಪಯೋಗಿಸಿಕೊಂಡು ಅವರ ಹಿತೈಷಿಯಾಗಿ ಅವರನ್ನು ಬಲ್ಲವರಾಗಿ ಅವರಿಗೆ ಈ ಸಲಹೆಗಳನ್ನು ಕೊಟ್ಟಿದ್ದೇನೆ. ಸದುದ್ದೇಶದಿಂದ ನೀವು ಸ್ವೀಕರಿಸುವುದಾದರೆ ನಿಮಗೆ ಒಳ್ಳೆಯದಾಗುತ್ತದೆ. ನಾನು ಪಕ್ಷಭೇದವನ್ನು ಮರೆತು ಶುದ್ಧ ಅಂತಕರಣದಿಂದ ನನಗೆ ತೋಚಿರುವಂಥ ಅಭಿಪ್ರಾಯವನ್ನು ನಾನು ನಿಮ್ಮ ಮುಂದೆ ವ್ಯಕ್ತಪಡಿಸುವಂಥ ಪ್ರಯತ್ನವನ್ನು ಮಾಡಿದ್ದೇನೆ. ಆಡಳಿತ ನಡೆಸತಕ್ಕಂಥ ವಿಧಾನದಲ್ಲಿ ನೀವು ನಿಮ್ಮ ಸಂವಿಧಾನಿಕ ಜವಾಬ್ದಾರಿಗಳನ್ನು ಏನಾದರೂ ಮರೆತು ಪಕ್ಷ, ಜಾತಿ ಕುಲ, ದ್ವೇಷ, ಮತ್ಸರ ಇವುಗಳ ಮೇಲೆ ಹೊರಟರೆ ಸ್ವಲ್ಪ ಕಾಲ ನಿಮ್ಮ ಎದುರಾಳಿಗಳಿಗೆ ನಷ್ಟವಾಗುತ್ತದೆ. ಶಾಶ್ವತವಾದ ನಷ್ಟಕ್ಕೆ ನೀವು ಒಳಗಾಗುತ್ತೀರಿ. ಇಂಥ ವ್ಯವಸ್ಥೆಯಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು. ನೀವು ಇಡೀ ಸದನದ ಶ್ಲಾಘನೆಗೆ ಮೆಚ್ಚುಗೆಗೆ, ಗೌರವ ಪಾತ್ರಕ್ಕೆ ಒಳಗಾಗುವುದಂಥ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಪ್ರಕಾಶ ಬಿ. ಹುಕ್ಕೇರಿ (ಸದಲಗಾ): ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ಹೇಳಿ ನನ್ನ ಮಾತನ್ನು ಮುಗಿಸಿ ಬಿಡುತ್ತೇನೆ. ತಾವು ನೀಡಿರುವ ಪೂರಕ ಅಂದಾಜುಗಳ ಪುಸ್ತಕದಲ್ಲಿ ಪುಟ ಸಂಖ್ಯೆ 64 ರಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಾಲದೇ ಇರುವುದರಿಂದ ಹಾಸನ ಮತ್ತು ಶಿವಮೊಗ್ಗದ ವೈದ್ಯಕೀಯ ಕಾಲೇಜು ಎರಡನೆಯ ಹಂತದ ಕಾಮಗಾರಿಗಾಗಿ 30 ಕೋಟಿ ರೂ.ಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿ ಈ ಅಭಿಯಾಚನೆಯಲ್ಲಿ ಸೇರಿಸಲಾಗಿದೆ ಎಂದು ಹೇಳಿದ್ದೀರಿ. ನಾವು ವಿಧಾನಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನವನ್ನು ಕರೆಯುವುದು ಉತ್ತರ ಕರ್ನಾಟಕದ ಅಭಿವೃದ್ಧಿಗೋ ಅಥವಾ ಶಿವಮೊಗ್ಗ, ಹಾಸನದ ಅಭಿವೃದ್ಧಿಗೋ ಎನ್ನುವುದರ ಬಗ್ಗೆ ದಯಮಾಡಿ ತಾವು ಹೇಳಬೇಕು. ನಮ್ಮ ಮೆಡಿಕಲ್ ಕಾಲೇಜಿನ ಮೊದಲನೇ ಹಂತದ ಕಾಮಗಾರಿ ಮುಗಿದು ಎರಡನೇ ಹಂತದ ಕಾಮಗಾರಿ ಆರಂಭವಾಗಿದೆ. ಅದಕ್ಕೆ ದಯವಿಟ್ಟು ನಾವು ಕೇಳುತ್ತಿದ್ದೇವೆ. ಇದರಲ್ಲಿ ಬೆಳಗಾಂ ಸರ್ಕಾರಿ ಮೆಡಿಕಲ್ ಕಾಲೇಜ್‌ಗೆ ಏಕೆ ಹಣ ಸಿಗಲಿಲ್ಲ. ಇದಕ್ಕೆ ಕಾರಣವೇನು? ಉತ್ತರ ಕರ್ನಾಟಕದ ಇಲ್ಲಿ ಅಭಿವೃದ್ಧಿಯಾಗಬೇಕು. ಬೆಳಗಾಂ ಮೆಡಿಕಲ್

ಕಾಲೇಜು ಬಿಟ್ಟು ಬೇರೆ ಕಡೆ ಎಲ್ಲಿ ಇವೆ ಎನ್ನುವುದರ ದಯಮಾಡಿ ಉಪ ಮುಖ್ಯಮಂತ್ರಿಗಳು ಹೇಳಬೇಕು. ಅಲ್ಲಿ 100 ವಿದ್ಯಾರ್ಥಿಗಳ ಪ್ರವೇಶ ಕೂಡ ಆಗಿದೆ. ಈ ವರ್ಷ ಕಾಲೇಜು ಕೂಡ ಪ್ರಾರಂಭವಾಗಿದೆ. ಹಣ ಬಿಡುಗಡೆಯಾಗದಿರುವುದರಿಂದ ಆ ಕಾಲೇಜು ಕಟ್ಟಡ ಅರ್ಧಕ್ಕೆ ನಿಂತಿದೆ. ಇದಕ್ಕೆ ದಯವಿಟ್ಟು ನಮ್ಮ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಬೆಳಗಾಂನ್ನು ಇದರಲ್ಲಿ ಸೇರಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಅವಕಾಶವನ್ನು ಆ ಕಡೆ ಒಬ್ಬರಿಗೆ, ಈ ಕಡೆ ಒಬ್ಬರಿಗೆ ಕೊಟ್ಟರೆ ಒಳ್ಳೆಯದು. ನಾವೂ ಕೂಡ ಮಾತನಾಡಲು ಅನುಮತಿಗೋಸ್ಕರ ಕಳುಹಿಸಿದ್ದೇವೆ. ಒಬ್ಬರಿಗೆ ಆ ಕಡೆ, ಒಬ್ಬರಿಗೆ ಈ ಕಡೆ ಕೊಡಿ. ನಾವು ಆಡಳಿತ ಪಕ್ಷದವರು ಎಂದ ಕೂಡಲೇ ನಾವು ಮೂಕಪ್ರೇಕ್ಷಕರಾಗಿ ಕೈ ಎತ್ತಿ ಹೋಗುವಂಥ ಪರಿಸ್ಥಿತಿ ನಿರ್ಮಾಣ ಆಗುವುದಾದರೆ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಲಿಕ್ಕೆ ಅವಕಾಶಗಳೇ ಇಲ್ಲ ಎನ್ನುವುದಾದರೆ ಇದು ತುಂಬಾ ದುರ್ದೈವದ ಸಂಗತಿ. ಅವರಿಗೆ ಅವಕಾಶ ಕೊಡಿ. ಅವರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಹಿರಿಯ ಶಾಸಕರು, ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಆದರೆ ನಾವೂ ಇಲ್ಲಿದ್ದೇವಲ್ಲಾ. ನಮಗೆ ಅವಕಾಶ ಕೊಡದಿದ್ದರೆ, ಎಷ್ಟು ಹೊತ್ತಿಗೆ voting ಗೆ ಹಾಕುತ್ತೀರಿ ಎನ್ನುವುದನ್ನಾದರೂ ನಮಗೆ ಹೇಳಿ, ನಾವು ಅಷ್ಟು ಹೊತ್ತಿಗೆ ಬರುತ್ತೇವೆ. ಅದಾದರೂ ಒಂದು ನಿರ್ಣಯವಾಗಿ ಆಗಿ ಹೋಗಲಿ. ನಾವು ಆಡಳಿತ ಪಕ್ಷದವರು ಎಂದು ಕೂಡಲೇ ಬಾಯಿಗೆ ಹೊಲಿಗೆ ಹಾಕಿಕೊಂಡು stitch ಮಾಡಿಕೊಂಡು ಕುಳಿತುಕೊಳ್ಳಬೇಕು ಎನ್ನುವಂಥ ಪರಿಸ್ಥಿತಿ ನಮಗೆ ಬರಬಾರದು. ಕನಿಷ್ಠ bill ಗಳ ಮೇಲಾದರೂ ಮಾತನಾಡಲು ನಮಗೆ ಅವಕಾಶ ಕೊಡಬೇಕಲ್ಲವೇ? ಅಲ್ಲಿಂದ start ಆದರೆ ಒಂದು series ಅಲ್ಲಿ ಮುಗಿಯಬೇಕು. ಆಮೇಲೆ ಎರಡನೇ ದಿವಸವೋ, ಮೂರನೇ ದಿವಸವೋ ಸಮಯವಿದ್ದರೆ ಒಂದೈದು ನಿಮಿಷ ಅವಕಾಶವನ್ನು ಕೊಡುತ್ತೀರಿ. ಇಲ್ಲದಿದ್ದರೆ ನಮ್ಮ ಮಂತ್ರಿಗಳು, ಬೇಡ voteಗೆ ಹಾಕುತ್ತೇವೆ ಎಂದು ಹೇಳುತ್ತಾರೆ. ಹೀಗಾದರೆ ನಮ್ಮ ಪರಿಸ್ಥಿತಿ ಏನು? ದಯವಿಟ್ಟು ನೋಡಿ.

ಉಪಾಧ್ಯಕ್ಷರು : ಜ್ಞಾನೇಂದ್ರರವರೇ, ಒಂದು ನಿಮಿಷ ಕುಳಿತುಕೊಳ್ಳಿ. ನಿಮ್ಮನ್ನು ಕರೆಯುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, ನಮಗೂ ಅವಕಾಶ ಕೊಡಿ, ನಾವೂ ಒಂದು half an hour ಅಲ್ಲಿಗೆ ಹೋಗಿ ಕುಳಿತುಕೊಳ್ಳುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ನಾವು ಆಡಳಿತ ಪಕ್ಷದವರಾದ ಕೂಡಲೇ bill ಮೇಲೂ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಬಾರದು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಅವರ seat ಅನ್ನು ನಮಗೆ half an hour ಕೊಡಿ. ನಾವು exchange ಮಾಡಿಕೊಂಡು, ಅಲ್ಲಿ ಕುಳಿತುಕೊಂಡು ನಾವು ಮಾತನಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ರೂಲಿಂಗ್ ಪಾರ್ಟಿಯಲ್ಲಿ ಇದ್ದ ಮಾತ್ರಕ್ಕೆ ನಾವು ಮಾತನಾಡಬಾರದು ಎಂದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ ಆ ಕಡೆಯವರನ್ನೂ ಈ ಕಡೆಯವರನ್ನೂ mix ಮಾಡಿಬಿಡಿ.

ಶ್ರೀ ಹೆಚ್.ಡಿ. ಬಸವರಾಜು : ಅವರು ಸಲಹೆಗಳನ್ನು ಕೊಡುತ್ತಿದ್ದಾರೆ, ಒಪ್ಪಿಕೊಳ್ಳೋಣ. ಅವರು ಹಾಗೆ ಸಲಹೆಗಳನ್ನು ಕೊಡುವಂಥ ಸಂದರ್ಭದಲ್ಲಿ ಸರ್ಕಾರ ಏನೇನು ಮಾಡಿದೆ ಎನ್ನುವಂಥಾದ್ದನ್ನು ನಾವು ಇಲ್ಲಿ ಪ್ರತಿಪಾದನೆ ಮಾಡಲೇ ಬೇಕಾಗುತ್ತದಲ್ಲವೇ? ಅವರ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತೇವೆ. ಅವರು ವಿರೋಧ ಪಕ್ಷದಲ್ಲಿದ್ದಾರೆ ಎನ್ನುವ ಕಾರಣಕ್ಕೆ ಬರೀ ಅವರಿಗೆ ಮಾತನಾಡುವ ಹಕ್ಕಿದೆ ಎನ್ನುವಂಥ ಪ್ರತಿಪಾದನೆಯನ್ನು ನಾವು ಒಪ್ಪುವುದಿಲ್ಲ. ಮುಕ್ತವಾಗಿ ಚರ್ಚೆಯಾಗಬೇಕಾಗಿದೆ. ಮುಕ್ತವಾದಂಥ ಚರ್ಚೆಯಲ್ಲಿ ನಾವೂ ಭಾಗವಹಿಸಬೇಕಾಗಿದೆ. ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ನಾವೂ ಇಲ್ಲಿ ಹೇಳಬೇಕಾಗುತ್ತದೆ. ಅವರಿಗೆ ಹೇಗೆ ಅವಕಾಶವನ್ನು ಕೊಡುತ್ತಿದ್ದೀರೋ ಅದೇ ರೀತಿಯಲ್ಲಿ ನಮಗೂ ಅವಕಾಶವನ್ನು ತಾವು ಕೊಡುವಂಥಾದ್ದನ್ನು ತಾವು ಮಾಡಿದಾಗ ಮಾತ್ರವೇ ಇದಕ್ಕೆ ನ್ಯಾಯ ಸಿಗುತ್ತದೆ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ : ನಾವು ಉತ್ತರ ಕೊಡುವುದಿಲ್ಲ ಸ್ವಾಮಿ. ನಮ್ಮ ಅಭಿಪ್ರಾಯವನ್ನು ನಾವು ವ್ಯಕ್ತ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕಲ್ಲವೇ?

ಶ್ರೀ ಹೆಚ್.ಡಿ. ಬಸವರಾಜು : ನಾವು ಉತ್ತರ ಕೊಡಲು ಯಾವತ್ತೂ ಪ್ರಯತ್ನ ಮಾಡುತ್ತಿಲ್ಲ. ನಮ್ಮ ಅನಿಸಿಕೆಯನ್ನು, ಅಭಿಪ್ರಾಯವನ್ನು ಇಲ್ಲಿ ಮಂಡನೆ ಮಾಡಲಿಕ್ಕೆ ಅವಕಾಶವನ್ನು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು : ಆಯಿತು, ಆಮೇಲೆ ನಿಮ್ಮ ಅಭಿಪ್ರಾಯವನ್ನು ನೀವು ಕೊಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನೀವು ಹಿಂದುಗಡೆ ಇರುವವರಿಗೆ ಅವಕಾಶ ಕೊಡುತ್ತೀರೋ ಅಥವಾ ಬರೀ front ನಲ್ಲಿರುವವರಿಗೆ ಕೊಡುತ್ತೀರೋ ಎನ್ನುವುದನ್ನು decide ಮಾಡಿ.

ಉಪಾಧ್ಯಕ್ಷರು : ಇಲ್ಲಿಯವರೆಗೆ ಸಂಪ್ರದಾಯವನ್ನು ಹಾಗೆಯೇ ಬೆಳೆಸಿಕೊಂಡು ಬಂದುಬಿಟ್ಟಿದ್ದಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನೀವು ಆ ಸಂಪ್ರದಾಯವನ್ನು ಮುರಿಯಿರಿ. ನೀವು ಮುರಿಯಬೇಕಾಗುತ್ತದೆ.

ಉಪಾಧ್ಯಕ್ಷರು : ಅವರು ಮಾತನಾಡಿದ ಮೇಲೆ ನಾನು ಮುರಿಯುತ್ತೇನೆ. ಮಾಧುಸ್ವಾಮಿಯವರೇ, ಈಗ ನೀವು ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ನಾವು ಅಷ್ಟೇ senior ಇದ್ದೇವೆ. ನಾವೂ 2–3 ಸಲ ಗೆದ್ದು ಬಂದಿದ್ದೇವೆ. ನಾವೂ study ಮಾಡಿಕೊಂಡು ಬರುತ್ತೇವೆ. ನಾವೂ ನಮ್ಮ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು : ಜ್ಞಾನೇಂದ್ರವರೇ, ಅವರು ಮಾತನಾಡಿ ಮುಗಿಸಿಬಿಡಲಿ. ಆಮೇಲೆ ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರೂಲಿಂಗ್ ಪಾರ್ಟಿಯವರು ಅವರ Legislature Party Meeting ನಲ್ಲಿ ಇದಕ್ಕೆ ಒಪ್ಪಿಗೆ ಕೊಟ್ಟ ಮೇಲೆಯೇ ಇದು ಇಲ್ಲಿಗೆ ಬರುತ್ತದೆಂದು ನಾವು ಭಾವಿಸಿಕೊಂಡಿದ್ದೇವೆ.

ಉಪಾಧ್ಯಕ್ಷರು : ಈಗ subject ಆಗಬೇಕು. ಮಾಧುಸ್ವಾಮಿಯವರೇ, ನೀವು ಮಾತನಾಡಬೇಕಲ್ಲವೇ, ನೀವು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಪೂರಕ ಬೇಡಿಕೆಗಳನ್ನು ಏನು ಇಲ್ಲಿ ಹೇಳಿದ್ದಾರೆ. ಅದು ಅವರ Legislature Party Meeting ನಲ್ಲಿ ತೀರ್ಮಾನವಾಗಿರುತ್ತದೆ. ಅವರ ಒಪ್ಪಿಗೆಯನ್ನು ತೆಗೆದುಕೊಂಡು ಇಲ್ಲಿಗೆ ಬಂದಿರುತ್ತಾರೆ ಎಂದು ನಾವು ಭಾವಿಸಿಕೊಂಡು ಇಲ್ಲಿ ಮಾತನಾಡುತ್ತೇವೆ. ಅದರಲ್ಲಿರುವ ನ್ಯೂನ್ಯತೆಗಳನ್ನು ಅವರೂ ಟೀಕೆ ಮಾಡುವುದಾದರೆ ಅದಕ್ಕೆ ನಮ್ಮದೇನೂ ತಕರಾರಿಲ್ಲ. ನಾನೇಕೆ ಅದನ್ನು ಟೀಕೆ ಮಾಡಲಿ. ಇಲ್ಲಿ ಕುಳಿತಿರುವ ನಾವು ಅಕಸ್ಮಾತ್ ಅದರಲ್ಲಿ ವ್ಯತ್ಯಾಸಗಳೇನಾದರೂ ಇದ್ದರೆ ಅವುಗಳನ್ನು ಎತ್ತಿ ತೋರಿಸುವುದು. ಅವರು ತಿದ್ದುಪಡಿ ಮಾಡಿಕೊಳ್ಳುವುದು, ಅವರು ಉತ್ತರ ಕೊಡುವುದು ವಾಡಿಕೆ.

ಶ್ರೀ ಎಸ್.ಎ. ರವೀಂದ್ರನಾಥ್ : ವ್ಯತಿರಿಕ್ತವಾದುದು ಇದ್ದಾಗ ನಮ್ಮನ್ನು ನಾವು ಸಮರ್ಥನೆ ಮಾಡಿಕೊಳ್ಳಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಈಗ ಸದನ ಎಷ್ಟು ಹೊತ್ತಿನವರೆಗೆ ನಡೆಯುತ್ತದೆ ಎನ್ನುವುದನ್ನು ಹೇಳಬೇಕು.

ಉಪಾಧ್ಯಕ್ಷರು : 8.00 ಗಂಟೆಯವರೆಗೂ ನಡೆಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : 8.00 ಗಂಟೆಯವರೆಗೆ ಅಷ್ಟು ಬೇಗ ಮುಗಿಸುತ್ತೀರಾ?

ಉಪಾಧ್ಯಕ್ಷರು : ಆಗಲಿ, 10.00 ಗಂಟೆಯಾಗಲಿ. ಇದು ಮುಗಿಯುವವರೆಗೆ ಆದರೂ ಆಗಲಿ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಒಂದು ಕೆಲಸ ಮಾಡಿ. ಹೇಗಿದ್ದರೂ ಇದು ವಿಶೇಷ ಅಧಿವೇಶನ. ರಾತ್ರಿಯೆಲ್ಲಾ ಮಾಡಿ.

ಉಪಾಧ್ಯಕ್ಷರು : ಆಗಬಹುದು. ಇಡೀ ರಾತ್ರಿಯೆಲ್ಲಾ ಮಾಡೋಣ. ಈಗ ಅವರಿಗೆ ಮಾತನಾಡಲು ಒಂದು ನಿಮಿಷ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಬೆಳಗ್ಗೆ ಇಲ್ಲಿಗೆ ಬಂದಿದ್ದೇವೆ. ರಾತ್ರಿ 8–9 ಗಂಟೆ ಯವರೆಗೂ ಕುಳಿತುಕೊಳ್ಳಬೇಕೆಂದರೆ ಹೇಗೆ? ಪತ್ರಕರ್ತರು ಸುದ್ದಿಯನ್ನು ಕಳುಹಿಸತಕ್ಕಂಥಾದ್ದು ಹೇಗೆ? ಏನೂ ಆಗಲೇಬಾರದೇ?

ಉಪಾಧ್ಯಕ್ಷರು : ಸಮಯ ಇಲ್ಲದಿದ್ದ ಮೇಲೆ ನಾವೇನು ಮಾಡುವುದಕ್ಕಾಗುತ್ತದೆ? ಇನ್ನೊಂದು ವಾರ ಸಮಯವಿದ್ದಿದ್ದರೆ 4–5 ದಿವಸ ಇದನ್ನೇ ಮುಂದುವರೆಸಬಹುದಾಗಿತ್ತು. ಮಾಧುಸ್ವಾಮಿಯವರೇ, ನೀವು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಒಂದು ಸಾವಿರದ ನಾನೂರು ಚಿಲ್ಲರೆ ಕೋಟಿ ರೂಪಾಯಿಗಳ Supplementary Estimate ಅನ್ನು ಸನ್ಮಾನ್ಯ ಹಣಕಾಸು ಸಚಿವರು ಕೇಳಿದ್ದು, ಹಾಗೆ ಕೇಳುವ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಹೊಸ ಸೇವೆಗಳನ್ನು ಆರಂಭ ಮಾಡಿದ್ದೇವೆ. ಹೊಸ ಕಾರ್ಯಕ್ರಮಗಳನ್ನು ಆರಂಭ ಮಾಡಿದ್ದೇವೆ ಎಂದು ಹೇಳಿದ್ದಾರೆ. Supplementary Demands ಬರುವುದು ಹೇಗೆಂದರೆ, ಆಕಸ್ಮಾತ್ ಕೊಟ್ಟ ಹಣವೇನಾದರೂ ಸಾಕಾಗದೇ ಹೋದರೆ, ಹೊಸದಾಗಿ ಏನಾದರೂ ಆರಂಭ ಮಾಡಿದರೆ, ಆಕಸ್ಮಿಕವಾಗಿ ಅವರಿಗೆ ಗೊತ್ತಿಲ್ಲದಂಥ ಯಾವುದಾದರೂ expenditure ಆದರೆ Supplementary Demand ಅನ್ನು pass ಮಾಡಬೇಕಾಗುತ್ತದೆ. ನಾನೀಗ ಬಹಳ detailsಗೆ ಹೋಗುವುದಿಲ್ಲ. ಈಗಾಗಲೇ ಬಹಳ ಜನರು ಮಾತನಾಡಿದ್ದಾರೆ. ಮೊದಲನೆಯದಾಗಿ, ಅವರ ಮಾತನ್ನು ಇಟ್ಟುಕೊಂಡು ನಾನು ಮಾತನಾಡುತ್ತೇನೆ. ಸನ್ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿರಬೇಕು. ಈ ರಾಜ್ಯ fiscal deficit ಇರುವ budget ಅನ್ನು ಇಟ್ಟಿರುವುದು. ಈ ರಾಜ್ಯದಲ್ಲಿ revenue surplus ಆಗಿದೆ, fiscal surplus ಆಗಿಲ್ಲ. ನಾವು revenue surplus ನಲ್ಲಿ ಇರುವ stage ಬಿಟ್ಟರೆ in fiscal we are still in deficit. ನಾವು 2010ನೇ ವರ್ಷದಲ್ಲಿ ನಮ್ಮ ಎಲ್ಲಾ deficit ಅನ್ನು cover ಮಾಡುವವರೆಗೆ ನಾವು ಅಧೀನದಲ್ಲಿದ್ದೇವೆ. Now, we are subject to the Government of India. 2010ರಲ್ಲಿ ನಾವು deficit free budget ಅನ್ನು ಈ ರಾಜ್ಯಕ್ಕೆ ಇಡುತ್ತೇವೆ. ನಮ್ಮ ಹತ್ತಿರ ಹೇರಳವಾಗಿ ಹಣ ಇದೆ. ನಾವು ಎಲ್ಲಿ ಬೇಕೋ ಅಲ್ಲಿ ಖರ್ಚು ಮಾಡುತ್ತಿದ್ದೇವೆ. ನಾವು ಹೇಗೋ ಹೊಸ ಕಾರ್ಯಕ್ರಮಗಳನ್ನು ಮಾಡುತ್ತೇವೆ ಎನ್ನುವ ಸ್ಥಿತಿಯಲ್ಲಿ ಈ ರಾಜ್ಯ ಇದೆಯೋ, ಇಲ್ಲವೋ ಎನ್ನುವುದಕ್ಕೆ ಮೊದಲು ಇಲ್ಲಿ ಉತ್ತರವಾಗಬೇಕು. ನಾವು ಯಾವತ್ತು fiscally surplus ಸ್ಥಿತಿಗೆ ಬಂದಿದ್ದೇವೆ ಎನ್ನುವುದನ್ನು ಈ ಶಾಸನಸಭೆಯ ಮುಂದೆ ತಾವು ಹೇಳಬೇಕು. ನಾನು collections ಜಾಸ್ತಿ ಮಾಡಿದ್ದೇನೆ. ಹೇರಳವಾಗಿ ಉಳಿಸಿದ್ದೇನೆ ಎಂದು ಅವರು ಹೇಳಿದರು. ಇದೆಲ್ಲಾ ತೀರ್ಮಾನವಾಗುವುದು ಯಾವಾಗ? ಮುಂದಿನ ವರ್ಷ ಮಾರ್ಚ್ 31ನೇ ತಾರೀಖು ತಾವು regular budget ಇಟ್ಟಾಗ ಇದು ತೀರ್ಮಾನವಾಗುತ್ತದೆ. ತಾವು ಆದಾಯವನ್ನು ನಿರೀಕ್ಷೆಗಿಂತ ಜಾಸ್ತಿ ಮಾಡಿದ್ದೀರಾ ಅಥವಾ ಕೊರತೆ ಇದೆಯೇ, ಏನಿದೆ

ಎನ್ನುವುದು ಆಗ ಗೊತ್ತಾಗುತ್ತದೆ. As on now, as on that date, ನೀವು budget ಇಟ್ಟ ದಿವಸ ನಿಮ್ಮ ಹತ್ತಿರ ಇರುವುದು ಉಳಿತಾಯದ budget ಅಲ್ಲ. ಸಾಲ ಇದೆ, ಅದನ್ನು ಒಪ್ಪಿಕೊಂಡಿದ್ದಾರೆ. ಬಹುಶಃ ಅವರ ಗಮನದಲ್ಲಿದೆಯೋ, ಇಲ್ಲವೋ ಗೊತ್ತಿಲ್ಲ. Karnataka State fiscally surplus budget ಅನ್ನು ಈವರೆಗೆ ಇಟ್ಟಿಲ್ಲ. ಹಾಗಿದ್ದಾಗ ತಾವು ತಮ್ಮ ಕಾರ್ಯಕ್ರಮಗಳನ್ನು ಯಾವ ರೀತಿ ವಿಭಾಗಿಸುತ್ತೀರಿ ಎಂದು ನಾನು ಕೇಳುತ್ತೇನೆ. ಒಂದು ಒಳ್ಳೆಯ ಮಾತನ್ನು ಹೇಳಿದ್ದೀರಿ. 3054 grant ನಲ್ಲಿ ರಸ್ತೆಗಳ ವಿಚಾರದಲ್ಲಿ ನಾವು ಬಾಕಿ ಪಾವತಿ ಮಾಡಬೇಕಾಗಿದ್ದ bill ಗಳ ಪಾವತಿಯನ್ನು ಮಾಡಿದ್ದೇನೆ ಎಂದು ಹೇಳಿದ್ದೀರಿ. ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. Industrial Subsidy ಎಷ್ಟು ವರ್ಷದಿಂದ ಬಾಕಿ ಇದೆ? Industry ಮಾಡುವುದಕ್ಕೆ ಹೋಗಿ ಕೈಸುಟ್ಟುಕೊಂಡಿರುವವರ ಕಡೆಗೆ ತಾವು ನೋಡಿರುವಿರಾ? Industrial Subsidy ಯನ್ನು release ಮಾಡದೇ ಎಷ್ಟು ವರ್ಷವಾಯಿತು? ಅದನ್ನು ನಾವು ಕೊಡುತ್ತೇವೆ ಎಂದು ನೀವು ಎಷ್ಟು programme ಗಳಲ್ಲಿ ಹೇಳಿದಿರಿ? ಎರಡನೆಯದಾಗಿ, ನಾನು ನಿಮ್ಮನ್ನು ಕೇಳುತ್ತೇನೆ. ನೇಕಾರರ ಬಗ್ಗೆ ತಾವು package ಅನ್ನು announce ಮಾಡಿದಿರಿ. ಇವತ್ತು ಇಡೀ ರಾಜ್ಯದ ನೇಕಾರರನ್ನು ಗುಂಪುಗಳಾಗಿ ವರ್ಗೀಕರಣ ಮಾಡಿದ್ದೀರಿ. ಒಂದು ಕಡೆ ಅವರು Co-operative Bank ಗಳಿಂದ ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೀರಿ. ಆದರೆ KSFC ಯಿಂದ ಸಾಲ ತೆಗೆದುಕೊಂಡಂಥವರಿಗೆ ನೀವು ಇವತ್ತಿನವರೆಗೆ ಬಡ್ಡಿಯನ್ನಾಗಲೀ, ಸುಸ್ತಿ ಬಡ್ಡಿಯನ್ನಾಗಲೀ ವಜಾ ಮಾಡಲಿಲ್ಲ. ಇವತ್ತು ನೇಕಾರರು ಸತ್ತುಹೋಗಿಬಿಟ್ಟರು. ರಾಜ್ಯದ Finance Corporation ನಲ್ಲಿ ಸಾಲ ತೆಗೆದುಕೊಂಡಿರುವ ನೇಕಾರನ ಪರಿಸ್ಥಿತಿ ಏನಾಗಿದೆ ಎಂದು ನೀವು ನೋಡಿರುವಿರಾ? ಒಬ್ಬ ನೇಕಾರ Central Co-operative Bank ನಲ್ಲಿ ಅಥವಾ ಬೇರೆ ಯಾವುದೇ Co-operative Bank ನಲ್ಲಿ ಸಾಲ ತೆಗೆದುಕೊಂಡಿದ್ದರೆ, ಆ ಸಾಲದ ಮೇಲಿನ ಬಡ್ಡಿ, ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೀರಿ. ಆದರೆ ನಿಮ್ಮದೇ KSFC ಯಲ್ಲಿ ಸಾಲ ತೆಗೆದುಕೊಂಡವನಿಗೆ ವಜಾ ಮಾಡುವುದಿಲ್ಲ. ಇನ್ನೊಂದು ಕಡೆ ನೀವು KSFC ಗೆ provision ಮಾಡುತ್ತೀರಿ ಎಂದರೆ, ಯಾರೂ ಮಾಡದಿದ್ದ ಕಾಲದಲ್ಲಿ One Time Settlement provision ಮಾಡಿಕೊಡುತ್ತೀರಿ. ಬೇರೆ ಬೇರೆ industry ಗಳವರಿಗೆ KSFC ಗೆ One Time Settlement provision ಮಾಡಿ, ನೇಕಾರರಿಗೆ ಕೊಡದೇ, ನೇಕಾರರನ್ನು ಏಕೆ ಕೊಂದಿದ್ದೀರಿ? ಇವತ್ತು ನೀವು poultry ಮೇಲೆ, brick industry ಮೇಲೆ ಏಕೆ subsidy release ಮಾಡಲಿಲ್ಲ ಎಂದು ಹೇಳಿ. ಕೈಗಾರಿಕಾ ಸಚಿವರಾದ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಗಮನಕ್ಕೆ ತರುತ್ತೇನೆ. ನಾಯ್ಡು ಅವರ ಇಲಾಖೆಗೆ ಸರ್ಕಾರದ subsidy ಎಷ್ಟು ಬಾಕಿ ಇದೆ ಎನ್ನುವುದು ನಮಗೆ ಬೇಕು. ರೇವಣ್ಣನವರ ಇಲಾಖೆಯಲ್ಲಿರುವ contractor ಗಳ ಸಾಲವನ್ನು ತೀರಿಸಲಿಕ್ಕೆ ಬಹಳ ದೊಡ್ಡ ಮನಸ್ಸು ಮಾಡುವವರು ನೀವು. ರಾಜ್ಯ ಸರ್ಕಾರ 20 ರಿಂದ 25

percent subsidy ಕೊಡುತ್ತದೆ ಎನ್ನುವ ಘನ ಉದ್ದೇಶದಲ್ಲಿ industry ಮಾಡಿದವರನ್ನು ಏಕೆ ನೀವು ಕಡೆಗಣಿಸಿದ್ದೀರಿ? ನಿಮ್ಮ ಹತ್ತಿರ ಹಣವಿದ್ದರೆ ಆ ಸಾಲವನ್ನೂ ತೀರಿಸಬೇಕಲ್ಲವೇ? ನೀವು ಆ subsidy ಯನ್ನೂ ಕೊಡಬೇಕಲ್ಲವೇ? ನಾನು ಹೋದ budget ನಲ್ಲಿ ತಮಗೆ ಸ್ಪಷ್ಟವಾಗಿ ಹೇಳಿದೆ. ಸರ್ಕಾರ ಚುನಾವಣೆಗೆ ಹೋಗಬೇಕಾದರೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗಬೇಕು. ಆದರೆ ಪಕ್ಷಗಳು ಸರ್ಕಾರವನ್ನು ನಡೆಸಬೇಕಾದರೆ ಯೋಜನೆಗಳನ್ನು ಹಾಕಿಕೊಳ್ಳಬೇಕು ಎಂದು ಹೇಳಿದೆ. ರಾಜ್ಯದ ಅಭಿವೃದ್ಧಿ ವಿಚಾರ ನಿಮ್ಮ ತಲೆಯಲ್ಲಿದ್ದರೆ, go for projects, not for programmes. Programme oriented ಸರ್ಕಾರವನ್ನು ನೀವು ಎಷ್ಟು ದಿವಸ ನಡೆಸುತ್ತೀರಿ? ಇವತ್ತು ನಾವು ಯಾವ project ಅನ್ನು ದುಡ್ಡಿನಿಂದ ಮುಂದುವರೆಸಿಕೊಂಡು ಹೋಗುತ್ತೇವೆ. ಬೆಳಿಗ್ಗೆ ಇಲ್ಲಿ ಒಂದು ಪ್ರಶ್ನೆ ಕೇಳಿದರು. ಸಣ್ಣ ನೀರಾವರಿ ಇಲಾಖೆಗೆ ಹಣದ ಕೊರತೆ ಇದೆ ಎಂದು ಹೇಳಿದಾಗ ಈಶ್ವರಪ್ಪನವರು ಎದ್ದು ನಿಂತು, ನಾನು ಹಣ ಕೊಡುತ್ತೇನೆ. ನಾನು ಹೋಗಿ ಮುಷ್ಕರ ಮಾಡುತ್ತಿರುವವರಿಗೆ ಹೇಳುತ್ತೇನೆ ಎಂದು ಹೇಳಿದರೆ, ಯಡಿಯೂರಪ್ಪನವರು ಆಲೋಚನೆ ಮಾಡುತ್ತೇನೆ ಎಂದು ಹೇಳುವ ಸ್ಥಿತಿಯಲ್ಲಿದ್ದಾರೆ. ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಸಣ್ಣ ನೀರಾವರಿ ಇಲಾಖೆಗಳ ಯೋಜನೆಗಳಿಗೆ ನೀವು ಹಣವನ್ನು ಇಡಬೇಕಾದರೆ ಈ project ಗಳ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ? ನಾನು ನಿಮ್ಮನ್ನು ಮತ್ತೊಂದು ವಿಷಯ ಕೇಳುತ್ತೇನೆ. ಈ ರಾಜ್ಯದಲ್ಲಿ ಕುಡಿಯುವ ನೀರಿಗೆ task force ಮಾಡಿದ್ದೀರಿ. ಅದರ ಕೋಟ್ಯಾಂತರ ರೂಪಾಯಿಗಳ bill ಗಳು ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಬಾಕಿ ಇರುವಾಗ ನೀವು ಪ್ರತಿ ತಾಲ್ಲೂಕಿಗೆ 7 ಲಕ್ಷ ರೂ.ಗಳಂತೆ release ಮಾಡಿದ್ದೀರಿ. ನಿಮ್ಮ ಹತ್ತಿರ ಯಾವ ಹಣ ಇದೆ? ಎಲ್ಲಿದೆ ಹಣ ನಿಮ್ಮ ಹತ್ತಿರ? 2 ವರ್ಷಗಳಿಂದ ಯಾವ ಊರಿನಲ್ಲಿ ನೀವು over head tank ಕಟ್ಟಿದ್ದೀರಿ? 2 ವರ್ಷಗಳಿಂದ ಯಾವ ಊರಿನಲ್ಲಿ ನೀವು ARWS Scheme ತೆಗೆದುಕೊಂಡಿದ್ದೀರಿ? ಕುಡಿಯುವ ನೀರಿನ ಕಾರ್ಯಕ್ರಮಗಳನ್ನೆಲ್ಲಾ ಗ್ರಾಮಪಂಚಾಯಿತಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿ 25 ಸಾವಿರ ರೂ, 50 ಸಾವಿರ ರೂ ಹಣ ಕೊಟ್ಟರೆ, ಯಾರಾದರೂ tank ಗಳನ್ನು ಕಟ್ಟುತ್ತಾರೆಯೇ? ಅದರಿಂದ ಇವತ್ತು ಈ ರಾಜ್ಯದಲ್ಲಿ pipeline ಮಾಡುವುದಕ್ಕಾಗುತ್ತದೆಯೇ? ಇವತ್ತು ಈ ರಾಜ್ಯದ ಅಭಿವೃದ್ಧಿ ಎಲ್ಲಿಗೆ ಹೋಗುತ್ತಿದೆ? I demand a note here. Drinking water ಗೆ ತಾವು ಪ್ರತಿ ಜಿಲ್ಲೆಗೆ ಕೊಡಬೇಕಾಗಿದ್ದ ಹಣವೆಷ್ಟು? ನಿಮ್ಮ ಹತ್ತಿರ ಹಣ ಹೆಚ್ಚುವರಿಯಾಗಿದ್ದರೂ what prevented you in making the payment? ಇವತ್ತು ಮಾನ ಮರ್ಯಾದೆಯೆಲ್ಲಾ ಹೋಗಿದೆ. ಶಾಸಕರನ್ನು committee ಗೆ ಅಧ್ಯಕ್ಷರನ್ನು ಮಾಡಿದ್ದೀರಿ. ಒಬ್ಬನೇ ಒಬ್ಬ contractor ಯಾವುದೇ ತಾಲ್ಲೂಕಿಗೆ bore well ಹಾಕುವುದಕ್ಕೆ ಬರುತ್ತಿಲ್ಲ. ನಾವಿವತ್ತು drought ಅನ್ನು ನಿಭಾಯಿಸಬೇಕಾಗಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ, ಖಂಡಿತವಾಗಿ, ಒಂದು ರೂಪಾಯಿ ಹಣ release ಆಗಿಲ್ಲ. ಪ್ರತಿ ತಾಲ್ಲೂಕಿಗೆ ಸುಮಾರು 7 ಲಕ್ಷ ರೂಪಾಯಿಗಳಂತೆ ನಮಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. Pending bills ಒಂದು,

ಒಂದೂವರೆ, 2 ಕೋಟಿ ರೂಪಾಯಿಗಳವರೆಗೆ ಬಾಕಿ ಇದೆ. Bore well drill ಮಾಡಿರುವ agent ಇವತ್ತು hand pump ಹಾಕಿಲ್ಲ. ಬಾಕಿ ಕೊಡಲಿಲ್ಲವೆಂದು ಹೇಳಿ ಇವತ್ತು ಕೇವಲ bore drill ಮಾಡಿ ಹೋಗಿದ್ದಾರೆ. ಎಷ್ಟು? ಹಣ ಇರುವವರು, ಈ ಕಾರ್ಯಕ್ರಮಗಳನ್ನು ಏಕೆ ಮಾಡಲಿಲ್ಲ? ಮೂರನೆಯದು, 5054 ಅನ್ನು ತೆಗೆದಿರಿ. KRDCL ಮಾಡಿದ್ದೀರಲ್ಲಾ. KRDCL ನಲ್ಲಿ ನೀವು ಯಾವ ಆಧಾರದ ಮೇಲೆ ರಸ್ತೆಗಳನ್ನು ತೆಗೆದುಕೊಳ್ಳುತ್ತಿದ್ದೀರಿ? ಅದರ ಸ್ಥಿತಿಗತಿ ಮೇಲೆ ತೆಗೆದುಕೊಳ್ಳುತ್ತಿದ್ದೀರೋ? ಓ.ಮೀ. ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದೀರೋ? ನಮ್ಮ ತಾಲ್ಲೂಕಿನಲ್ಲಿ KRDCL roads ಅನ್ನು ನೋಡುವವರೇ ದಿಕ್ಕಿಲ್ಲ. ಮಾತೇ ಆಡಲ್ಲ. KRDCL ನವರನ್ನು ಹತ್ತು ಸಲ ಕೇಳಿದ್ದೇವೆ. ನಮ್ಮ ಹತ್ತಿರ ಹಣವಿಲ್ಲ. Finance Minister ರವರ ಹತ್ತಿರ ಹೋಗಿ ಹಣ ತರುವುದಾದರೆ, ನಾವು ಇವತ್ತು ನಿಮ್ಮ estimate pass ಮಾಡಿಕೊಡುತ್ತೇವೆ ಎನ್ನುವ ಸ್ಥಿತಿಯಲ್ಲಿ KRDCL ಇದೆ. ನಿಮ್ಮ ಕಾವೇರಿ ನಿಗಮ ಯಾವ ಸ್ಥಿತಿಯಲ್ಲಿದೆ ಸಾರ್? ನಿಮ್ಮ ಕಾವೇರಿ ನಿಗಮಕ್ಕೆ ನೀವು ಇಟ್ಟಿದ್ದ ಹಣವೆಷ್ಟು? ಇವತ್ತು ಅವರು ಇರುವ ಸ್ಥಿತಿ ಏನು? ಇದೇ ಕಾವೇರಿ ನಿಗಮ ಏನಾದರೂ ಒಂದೇ ಒಂದು ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಸ್ಥಿತಿಯಲ್ಲಿದೆಯೇ? ನಿಮ್ಮ ಹೇಮಾವತಿಯಲ್ಲಿ ಇನ್ನೂ ಆಗಬೇಕಾದ bill ಗಳ ಬಾಕಿ ಎಷ್ಟಿದೆ ಎಂದು ಈ ಸಭೆ ಮುಂದೆ ಲೆಕ್ಕ ಕೊಡುತ್ತೀರಾ? ರೇವಣ್ಣನವರು ಪ್ರಭಾವೀ ವ್ಯಕ್ತಿಗಳೆಂದು PWDಯದ್ದೆಲ್ಲಾ bill pass ಮಾಡುವುದು ಇದೆ. ಹಾಗಾದರೆ, ನೀರಾವರಿಯಲ್ಲಿ ಕೆಲಸ ಮಾಡಿದವರ ಗತಿ ಏನು? ಇವತ್ತಿನವರೆಗೆ ಕೊಟ್ಟಿಲ್ಲ. ಈ ಕಡೆ ಅವರು ಗಮನ ಕೊಡಬೇಕಾಗಿತ್ತು. ನಾನು ಈ ಸಭೆಯಲ್ಲಿ ಅವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ನಾವು ಬಡ್ಡಿ ದರವನ್ನು 4% ಗೆ ಇಳಿಸುತ್ತೇವೆಂದು ಹೇಳಿ ಅವರು budget ನಲ್ಲಿ ಭಾಷಣ ಮಾಡಿದ್ದು ಇದೆ. ಮಿತಿ ಹೇಳಲಿಲ್ಲ. 3 ಲಕ್ಷಕ್ಕೆ ಮಿತಿ ಮಾಡುತ್ತೇವೆಂದು ಅವರು ಈ ಸಭೆಯಲ್ಲಿ ಹೇಳಲಿಲ್ಲ. ಒಂದೇ ವರ್ಷದ ಸಾಲದ ಅವಧಿಗೆ ನಾನು ಕೊಡುತ್ತೇನೆಂದು ಅವರು ಈ ಸಭೆಯಲ್ಲಿ ಹೇಳಲಿಲ್ಲ. 6% ಇರುವ ಬಡ್ಡಿಯನ್ನು 4%ಗೆ ಇಳಿಸುತ್ತೇವೆಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಭೆ ಮುಂದೆ ಭಾಷಣ ಮಾಡಿದ್ದಾರೆ. ಸಿದ್ದರಾಮಯ್ಯನವರ ಕಾಲದಲ್ಲಿ 6% ಗೇನು ಆಯಿತು, ಅದನ್ನು 4%ಗೆ ಇಳಿಸುತ್ತೇವೆಂದರು. ಅದೂ ಕೂಡ ನಾವು ಹೇಳಿದ್ದೇವೆ. ಕೇಂದ್ರ ಸರ್ಕಾರ 9% ನಿಂದ 7%ಗೆ ಇಳಿಸಿರುವುದರಿಂದ ಆ benefit ಅನ್ನು ಇಲ್ಲಿಗೆ pass on ಮಾಡುತ್ತಿದ್ದೀರಿ. ಆನಂತರ, ಏನಾಯಿತು? 3 ಲಕ್ಷ ರೂಪಾಯಿಗಳಿಗೆ ಮಿತಿ, ಒಂದು ವರ್ಷಕ್ಕೆ ಮಾತ್ರ ಮಿತಿ, ಒಂದೇ ಒಂದು ದಿವಸ ರೈತ default ಆದರೆ next dayಗೆ entire interest subsidy ಯನ್ನು ನಾವು ತೆಗೆದು ಹಾಕಿಬಿಟ್ಟು ಅವನು full interest ಅನ್ನು ಕಟ್ಟಬೇಕೆಂದು ಎಂದು ಸರ್ಕಾರಿ ಆದೇಶ ಮಾಡುತ್ತೀರಿ. ರೈತರ ಪರ ಎಂದು ಇಲ್ಲಿ ಮಾತನಾಡುತ್ತೀರಿ. ಆ period ಆಗಿದ್ದ ದಿವಸದಿಂದ ಮುಂದಕ್ಕಾದರೂ regular interest ಅನ್ನು ವಸೂಲಿ ಮಾಡಿ ಎಂದು ಒಂದು ದಿವಸ ನಾವು ಕೇಳಿಕೊಂಡಿದ್ದೇವೆ. ಸನ್ಮಾನ್ಯ ಯಡಿಯೂರಪ್ಪನವರು ನಮ್ಮ ಕಡೆ

ಕುಳಿತುಕೊಂಡು ರೈತರ ಬಗ್ಗೆ ಅಹೋರಾತ್ರಿ ಹೋರಾಟ ಮಾಡುತ್ತಿದ್ದವರು ಹೀಗೆ ಮಾಡುತ್ತಿರುವ ಬಗ್ಗೆ ಹೇಳಬೇಕು. ಜ್ಞಾನೇಂದ್ರರವರು ಈಗ ಹೇಳಬೇಕು. ಈಗ ರವೀಂದ್ರನಾಥ್‌ರವರು ಹೇಳಬೇಕು. ನಮ್ಮ ಬಾಕಿ payment ಗೆ ಎಷ್ಟು ಹಣ ಕೊಟ್ಟಿದ್ದಾರೆಂದು ಅವರು ಇಲ್ಲಿ ಹೇಳಿಕೆ ಕೊಟ್ಟಿದ್ದಾರೆ. "I am in surplus. I have collected more money. That is why I have brought in new services" ಎಂದು ಅವರು ಹೇಳಿಕೆ ಮಾಡಿದ್ದಾರೆ. ನಾನು ಕೇಳುತ್ತಿದ್ದೇನೆ. ಕುಡಿಯುವ ನೀರಿಗಿಲ್ಲ. ಇವತ್ತು ನೀವು ರೈತನನ್ನು ಒಂದು ದಿವಸ ಅದ ತಕ್ಷಣ ಒಂದೇ ಒಂದು ದಿವಸವಾದರೂ entire year ದ್ದು without subsidy price ನಲ್ಲಿ ಆ rate of interest ಅನ್ನು fix ಮಾಡುವಂಥ ನಿರ್ದಿಷ್ಟವಾದ Merchant of Vennis. One pound flesh. ನೀನು ಬೆಳಿಗ್ಗೆ ಕಟ್ಟಿದರೆ ಪೂರಾ amount ಕಟ್ಟಬೇಕು. One pound flesh ಅನ್ನು ತೆಗೆದುಕೊಂಡು ಬಿಡಬೇಕು ನೀವು. ಎಲ್ಲಿದೆ ನಿಮ್ಮ ಹತ್ತಿರ ಹಣ? ಕಾವೇರಿ ನಿಗಮಕ್ಕೆ ಏನು ಸಬ್ಸಿಡಿ ಕೊಟ್ಟಿರಿ? Coffee ಯವರಿಗೆ ಏನು subsidy ಕೊಟ್ಟಿರಿ? Coconut ನವರಿಗೆ ಏನು ಸಬ್ಸಿಡಿ ಕೊಟ್ಟಿರಿ? ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 20 ಕೋಟಿ ರೂಪಾಯಿಗಳನ್ನು ನಿಗದಿ ಮಾಡುತ್ತಿದ್ದೇನೆಂದು ಹೇಳಿದಿರಿ. ನಾವು ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ meeting ಮಾಡಿದರೆ ನಮಗಿರುವ communication 9 ಕೋಟಿ ರೂಪಾಯಿಗಳು ಮಾತ್ರ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಶಾಸನ ಸಭೆಯಲ್ಲಿ ಒತ್ತಾಯ ಮಾಡಿದ ಮೇಲೆ, ತಾವು records ತೆಗೆ, ನಾನು 20 ಕೋಟಿ ರೂಪಾಯಿ ಮಾಡುತ್ತೇನೆಂದು ತಾವು ಹೇಳಿಕೆ ಕೊಟ್ಟಿದ್ದೀರಿ. ಒಬ್ಬ ಅರ್ಥ ಸಚಿವರು ಶಾಸನ ಸಭೆಯಲ್ಲಿ ನಿಮ್ಮ ಇಲಾಖೆಗೆ communicate ಆಗಿಲ್ಲ. ನಿಮ್ಮ Board ಗೆ communicate ಆಗಿಲ್ಲವೆಂದರೆ ನಾವು ಯಾರನ್ನು ನಂಬಬೇಕು? ಯಾರನ್ನು ಬಿಡಬೇಕು? ನಾವು ಆ ಇಡೀ ಸಭೆಯನ್ನು ಬಹಿಷ್ಕಾರ ಮಾಡಿ ಎದ್ದು ಹೋದೆವು. ಈ ಸಭೆಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಬರಬೇಕು ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ಬರಬೇಕು ಅಲ್ಲಿವರೆಗೆ, Dry land Development Board, ಒಣಭೂಮಿ ಅಥವಾ ನಮ್ಮ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಚರ್ಚೆಯಾಗುವುದು ಬೇಡ ಎಂದು ಹೇಳಿದೆವು. ನಿಜವಾಗಿ ನಿಮ್ಮ ಹತ್ತಿರ ಹಣವಿದ್ದಿದ್ದರೆ, ಈ ಕಾರ್ಯಕ್ರಮಗಳನ್ನೆಲ್ಲಾ ಏಕೆ ನೀವು ಬದಿಗಿಟ್ಟು ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡಿರಿ? ಎತ್ತು ಗಾಡಿಗೆ 10 ಸಾವಿರ ರೂಪಾಯಿ subsidy ಕೊಡಿ ಎಂದು ತಾವು ಹೇಳಿದಿರಿ. ನಾವು ಒಪ್ಪುತ್ತೇವೆ. ಆದರೆ, tractors, power tillers ಗೆ ಇವತ್ತಿನವರೆಗೆ ನಿರ್ದಿಷ್ಟವಾದ ಆದೇಶವಿಲ್ಲ. 3 ಕೊಡುತ್ತಾರೋ, 4 ಕೊಡುತ್ತಾರೋ? ತಾವು ಶಾಸನ ಸಭೆಯಲ್ಲಿ ಹೇಳಿದ್ದೀರಲ್ಲಾ. 10 tractor, 10 power tiller ಕೊಡುತ್ತೇವೆ ಎಂದು ಹೇಳಿದ್ದೀರಲ್ಲಾ. ಎಲ್ಲಿದೆ ಸಾರ್ ಆದೇಶ? 10 tractor, 10 power tiller ಅನ್ನು ನಮಗೆ ಕೊಟ್ಟಿಲ್ಲ. ಒಂದೊಂದು ತಾಲ್ಲೂಕಿಗೆ 3, 4 tractor ......

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಮಾಧುಸ್ವಾಮಿಯವರೇ, ಬಹಳ ಪ್ರಾಮಾಣಿಕವಾಗಿ ಒಂದು ಸಂಗತಿಯನ್ನು ನಿಮಗೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಆರ್ಥಿಕ ಸಚಿವನಾಗಿ ಆಯವ್ಯಯವನ್ನು ಮಂಡನೆ ಮಾಡಿದ ಮೇಲೆ ಆಯಾಯ ಇಲಾಖೆಯಲ್ಲಿ ನಾವೇನು ಹಣಕಾಸನ್ನು ಒದಗಿಸಿದ್ದೇವೆ. ಆ ಬಗ್ಗೆ ಸಹಜವಾಗಿ ಸರ್ಕಾರಿ ಆಜ್ಞೆ ಹೊರಬರಬೇಕು. ನಾನು ದುಃಖದಿಂದ ಹೇಳುತ್ತೇನೆ. ಕಳೆದ 3 ತಿಂಗಳಲ್ಲಿ Chief Secretary ಸೇರಿ ಆಯಾಯ ಇಲಾಖಾಧಿಕಾರಿಗಳನ್ನು 5–6 ಬಾರಿ ನಾವು ಸಭೆ ಸೇರಿರಬಹುದು, ಚರ್ಚೆ ಮಾಡಿರಬಹುದು. ಬೆನ್ನು ಹತ್ತಿ ಸರ್ಕಾರಿ ಆಜ್ಞೆಯನ್ನು ಹೊರಡಿಸುವಂಥ ಪ್ರಯತ್ನ ಮಾಡಿ 70% ಸರ್ಕಾರಿ ಆಜ್ಞೆ ಹೊರಡಿಸಿದ್ದೇನೆ.

(ಅಡಚಣೆ)

ಮಾಧುಸ್ವಾಮಿಯವರು tractor, tiller ಬಗ್ಗೆ ಹೇಳಿದರು. ನೀವು ಮಾತನಾಡಬೇಡಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ನಮ್ಮ ವ್ಯವಸ್ಥೆಯೇ ಹಾಗಿದೆ. ನಾನು ನಿಮಗೆ ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ನಿಮಗೆ, ನಮಗೆ ಇರುವ ಕಳಕಳಿ ಹಣಕಾಸಿನ ಇಲಾಖೆಯಲ್ಲಿ ಕೆಲವು ಪ್ರಾಮಾಣಿಕ ಅಧಿಕಾರಿಗಳು ಇದ್ದುದ್ದರಿಂದ ನಾನು budget ಮಂಡನೆ ಮಾಡುವುದಕ್ಕಾಯಿತು. ಸರ್ಕಾರಿ ಆಜ್ಞೆ ಹೊರಡಿಸುವುದಕ್ಕೆ ಕೆಲವು ಅಧಿಕಾರಿಗಳನ್ನು ಕಾಡಬೇಕು, ಬೇಡಬೇಕು. ಎಲ್ಲರೂ ಹಾಗೆ ಇಲ್ಲ. ಉದಾಹರಣೆಗೆ, ಭಾಗ್ಯಲಕ್ಷ್ಮಿ ಯೋಜನೆ. ಇದೊಂದು ನನ್ನ ಕನಸಿನ ಯೋಜನೆ. 1–04–2006 ರಿಂದ ಅದು ಅನುಷ್ಠಾನಕ್ಕೆ ಬಂದಿದೆ. 10 ಸಾವಿರ ರೂಪಾಯಿ ಇಡುತ್ತೇವೆ. ಸುಮಾರು 60 ಸಾವಿರ ಮಕ್ಕಳಿದ್ದಾರೆ. ಸರ್ಕಾರಿ ಆಜ್ಞೆ ಹೊರಬಂದಿಲ್ಲ. 10 ಬಾರಿ ಬೆನ್ನು ಹತ್ತಿದ್ದೇನೆ. ಈ ಸದನದಲ್ಲಿ ನೀವು ವಿರೋಧ ಪಕ್ಷ. ನಾನು ಆಡಳಿತ ಪಕ್ಷ ಎಂದು ಮಾತನಾಡುತ್ತಿಲ್ಲ. ಕೆಲವು ಅಧಿಕಾರಿಗಳಿಗೆ ಬಡವರ ಕಾರ್ಯಕ್ರಮ ಅನುಷ್ಠಾನಕ್ಕೆ ತರಬೇಕೆನ್ನುವುದಿಲ್ಲ. ಆದರೆ, ಏನು ಮಾಡುತ್ತೀರಿ? ಕೆಲವು ಅಧಿಕಾರಿಗಳನ್ನು ಮನೆಗೆ ಕಳುಹಿಸಬೇಕು. ಕಳುಹಿಸೋಣ. ನಾವು ಅದಕ್ಕೇನೂ ಹಿಂದೆ ಮುಂದೆ ನೋಡುವುದಿಲ್ಲ. Honestly I am accepting. ಇದನ್ನು ನಾನು honest ಆಗಿ ಹೇಳುತ್ತಿದ್ದೇನೆ. Please bear with me. ನಾನು ಪೂರ್ಣ ಮಾಡುವುದಕ್ಕೆ ಬಿಡುತ್ತೀರೋ? ಇಲ್ಲವೋ? ಯಡಿಯೂರಪ್ಪನವರೇ, ಎಲ್ಲಾ ಮುಚ್ಚಿಡಿ ಎಂದರೆ ನಾನು ಮುಚ್ಚಿಡುವುದಕ್ಕೆ ನಾನು ready. ಇಷ್ಟು ಪ್ರಾಮಾಣಿಕವಾಗಿ ಯಾರೂ ಮಾತನಾಡುವುದಿಲ್ಲ. ಇಷ್ಟು ಹೊತ್ತು ಚರ್ಚೆಯಾಯಿತು. ನಾನು

(ಅಡಚಣೆ)

ಆಡಳಿತ ಪಕ್ಷದಲ್ಲಿದ್ದೇನೆ. ಹಣಕಾಸು ಸಚಿವನಾಗಿದ್ದೇನೆ. ವಾಟಾಳ್ ನಾಗರಾಜ್‌ರವರೇ, ನನಗೆ ಜವಾಬ್ದಾರಿಯ ಅರಿವಿದೆ. ಇಲ್ಲಿ ಅನೇಕ ವಿಷಯಗಳು ಚರ್ಚೆಯಾದವು. ನಾನು ಉತ್ತರ ಕೊಡುತ್ತೇನೆ. ಏಕೆ ಉಳಿದುಕೊಂಡು ಬಂತು? ಎಷ್ಟು ಬಾಕಿ ಉಳಿದುಕೊಂಡು ಬಂತು? ಈ ಕಳಕಳಿ ಅವತ್ತು

ಏಕೆ ಇರಲಿಲ್ಲ? ಹಣವನ್ನು ಬಿಡುಗಡೆ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇನೆ. ನೀವು ಕೊಡುವಂಥ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುತ್ತೇನೆ. ಹಣಕಾಸು ಇರುವುದು treasury ಯಲ್ಲಿಟ್ಟು ಪೂಜೆ ಮಾಡುವುದಕ್ಕೇನು? ಅದನ್ನು ಬಿಡುಗಡೆ ಮಾಡಿ ಬಡವರಿಗೆ ತಲುಪಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. ಇನ್ನೂ ನಾನು ಅನೇಕ ವಿಷಯಗಳನ್ನು ಮಾತನಾಡುವವನಿದ್ದೇನೆ. ನೊಂದು ಈ ಮಾತು ಹೇಳುತ್ತಿದ್ದೇನೆ. 70 ಭಾಗ ಅಧಿಕಾರಿಗಳು ಯೋಜನೆಯನ್ನು ಜಾರಿಗೆ ತರಬೇಕೆಂದು ಇದ್ದರೆ, ಇನ್ನೂ ಕೆಲವು ಅಧಿಕಾರಿಗಳು ಕುಂಭಕರ್ಣ ನಿದ್ರೆಯಲ್ಲಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಒಂದು ಸರ್ಕಾರಿ ಆಜ್ಞೆ ಹೊರಬರಬೇಕಾದರೆ 6 ತಿಂಗಳು ಬೇಕೆ? ಬಡವರು ಯಾರಿರುತ್ತಾರೆ. ಯಾರಿಲ್ಲ ಎಂದು ಅವರೇನು ಮಾಡುತ್ತಾರೆ? ಆಜ್ಞೆ ಹೊರಬರಬೇಕಲ್ಲಾ? ಏನು ಯಡಿಯೂರಪ್ಪನವರೆ, ನೀವು ಹಣಕಾಸು ಸಚಿವರು, ಹೀಗೆ ಮಾತನಾಡುತ್ತಿದ್ದೀರೆಂದು ಮಾಧುಸ್ವಾಮಿಗಳಿಗೆ ಅನ್ನಿಸಬಹುದು. ವಾಸ್ತವಿಕ ಸತ್ಯ ಸಂಗತಿ ಇದೂ ಇದೆ. ನಾವು, ನೀವೆಲ್ಲಾ ಒಟ್ಟಾಗಿ ಕುಳಿತು ಚರ್ಚೆ ಮಾಡಬೇಕಾಗುತ್ತದೆ. ಯೋಜನೆಗಳನ್ನು ಜನರಿಗೆ ತಲುಪಿಸುವಂಥ ಕೆಲಸ ಮಾಡಬೇಕಾಗುತ್ತದೆ. ಬಡವರಿಗೆ ಬರಬೇಕಾದ ಯಾವ ಕಾರ್ಯಕ್ರಮಗಳಿವೆ, ಹಣ ಬಿಡುಗಡೆ ಮಾಡುವುದಕ್ಕೆ, ತಲುಪಿಸುವುದಕ್ಕೆ ನಾವು ಸಿದ್ಧರಿದ್ದೇವೆ. ನಾವು ಯಾವುದಕ್ಕೂ ಹಿಂದೆ ಮುಂದೆ ನೋಡುವುದಿಲ್ಲ. ಆದರೆ, ಆಕಾಶದಿಂದ ಏನೂ ಉದುರಿ ಬರುವುದಿಲ್ಲ. ಈಗಿರುವ ವ್ಯವಸ್ಥೆಯಲ್ಲಿ ಎಷ್ಟು ವ್ಯವಸ್ಥಿತವಾಗಿ ಎಷ್ಟು ಮಾಡುವುದಕ್ಕೆ ಸಾಧ್ಯವಿದೆಯೋ, ಇರುವ ಒಳ್ಳೆಯ ಅಧಿಕಾರಿಗಳನ್ನು ಕಟ್ಟಿಕೊಂಡು ಮಾಡುವಂಥ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲರಿಗೂ ಅಷ್ಟೇ ಕಳಕಳಿ ಇದೆ ಎಂದು ತಿಳಿದುಕೊಂಡಿದ್ದೀರಾ? ಈ ಎಲ್ಲದರ ಮಧ್ಯೆ ನಾವು ಕೆಲಸ ಮಾಡಬೇಕು. ನಾನು ಈಗ ಬೆನ್ನು ತೋರಿಸುತ್ತಿಲ್ಲ. ಯಡಿಯೂರಪ್ಪ ಏನು ಎಂದು ತೋರಿಸುವಂಥ ಕಾಲ ಬಂದಾಗ ನಾನು ತೋರಿಸುತ್ತೇನೆ. ಯಾರೂ ಹಗುರವಾಗಿ ತೆಗೆದುಕೊಳ್ಳಲಾಗುವುದಿಲ್ಲ. ಆದರೆ, ಕೆಲವು ವಿಷಯಗಳಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಇದಕ್ಕೆ ನಾನೂ ಹೊಸಬ. ಯಾರು ಯಾರು ಎಲ್ಲೆಲ್ಲಿ ಏನೇನು ಮಾಡುತ್ತಿದ್ದಾರೆ. ಈ ಸರ್ಕಾರಕ್ಕೆ ಯಾವ ರೀತಿ ಸಹಕಾರ ಕೊಡುತ್ತಿದ್ದಾರೆಂದು ಇವೆಲ್ಲವನ್ನೂ ಗಮನಿಸುತ್ತಿದ್ದೇನೆ. ಆದ್ದರಿಂದ, ನಾನು ನಿಮಗೇನು ಹೇಳುತ್ತಿದ್ದೇನೆ. ಈ ಚರ್ಚೆಗೆ ನಾನು ಉತ್ತರ ಕೊಡುತ್ತೇನೆ. ಬರಗಾಲ, ಅತೀವೃಷ್ಟಿ ಬಗ್ಗೆ ಚರ್ಚೆಯಾಗುತ್ತದೆ. ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ನೀವು ಚರ್ಚೆ ಮಾಡುವವರಿದ್ದೀರಿ. ಈ ಹಣಕಾಸಿನ ಪರಿಸ್ಥಿತಿಯಲ್ಲಿ ಇನ್ನೇನು ಅನುಕೂಲ ಮಾಡಿಕೊಡಬೇಕು ಎನ್ನುವ ಬಗ್ಗೆ ನೀವು ಕೊಡುವಂಥ ಸಲಹೆ ಮೇಲೆ ಹಣ ಬಿಡುಗಡೆ ಮಾಡುವುದಕ್ಕೂ ನಾವು ಸಿದ್ಧರಿದ್ದೇವೆ. ಆದರೆ, ಇವತ್ತು ಇಷ್ಟಾದರೂ ಇಷ್ಟು ಹೊತ್ತು ಹೇಳಬೇಕಾಗಿದೆ. ಹಣಕಾಸಿನ ಸೋರಿಕೆಯನ್ನು ತಡೆದು ಬೊಕ್ಕಸಕ್ಕೆ ಹೆಚ್ಚು ಹಣವನ್ನು ತಂದು ಈ ಹೊಸ ಹೊಸ ಕಾರ್ಯಕ್ರಮಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇನೆ. ನನಗೆ ಅದಕ್ಕೆ ಸಮಾಧಾನವಿದೆ. ತೃಪ್ತಿ ಇದೆ. ಅದರ ಇನ್ನೊಂದು ಮುಖವನ್ನೂ ತಾವು ನೋಡಬೇಕೆಂದು ನಾನು ಎದ್ದು ನಿಂತುಕೊಂಡೆ ಅಷ್ಟೆ.

7.00 ಗಂಟೆ

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ನಿಮಗೆ ಸ್ಪಷ್ಟವಾಗಿ ಹೇಳುತ್ತೇವೆ. ಲಾಭ ಮಾಡಿದ್ದೇವೆ. ಹೆಚ್ಚು ವಸೂಲಿ ಎನ್ನುವ ಮಾಹಿತಿಯನ್ನು interim ಆಗಿ ಹೇಳುವುದಕ್ಕಾಗುವುದಿಲ್ಲ ವೆಂಬುದು ನನ್ನ ಅಭಿಪ್ರಾಯ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಗೆ ಹೋಗಲಿ. ನೀವು ಹೇಳಿರಬಹುದು. ಯಡಿಯೂರಪ್ಪನವರೆ, ಈ ಹಣಕಾಸನ್ನು ಎಲ್ಲಿಂದ ತಂದಿರಿ? ನಮ್ಮೆಲ್ಲಾ ಶಾಸಕರು ಗಮನಿಸಬೇಕು. ನಾನು ನಂತರ ಉತ್ತರ ಕೊಡಬೇಕಾದರೆ further details ಕೊಡುತ್ತೇನೆ. ನೀವು ಕೇಳಿದ್ದಕ್ಕೆ ನಾನು ಉತ್ತರ ಕೊಡುತ್ತೇನೆ. Commercial Tax – ಹಣಕಾಸಿನ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನಮ್ಮ ಅಧಿಕಾರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಾವು 15% growthನ್ನು ನಿರೀಕ್ಷೆ ಮಾಡಿದ್ದೆವು. As on today 32.16% growth ಇದೆ. For example commercial tax, ಈ ವರ್ಷ ಆಗಸ್ಟ್ ಕೊನೆಯವರೆವಿಗೂ 5589.44 ಕೋಟಿ ರೂ. ಸಂಗ್ರಹ ಮಾಡಿದ್ದೇವೆ. ಹೋದ ವರ್ಷ ಇದೇ ಸಮಯಕ್ಕೆ 4474.07 ಕೋಟಿ ರೂ. ಸಂಗ್ರಹ ಮಾಡಿದ್ದೆವು. ಅಂದರೆ growth 24.93 State Excise, ಈ ವರ್ಷ ಆಗಸ್ಟ್ ಕೊನೆಯವರೆಗೆ 1713.29 ಕೋಟಿ ರೂ. ನಾವು ಸಂಗ್ರಹ ಮಾಡಿದ್ದೇವೆ. ಹೋದ ವರ್ಷ ಇದೇ ಸಮಯದಲ್ಲಿ 1250.72 ಕೋಟಿ ರೂ. ಸಂಗ್ರಹ ಮಾಡಿದ್ದರು. Growth rate is 36.98, Motor Vehicle ಈ ವರ್ಷ ಆಗಸ್ಟ್ ಕೊನೆಯವರೆವಿಗೆ 540.43 ಕೋಟಿ ರೂ. ಸಂಗ್ರಹ ಮಾಡಿದ್ದೇವೆ. ಹೋದ ವರ್ಷ 449.44 ಕೋಟಿ ರೂ. ಸಂಗ್ರಹ ಮಾಡಿದ್ದರು. growth rate is 20.25, ಬಹಳ ಮುಖ್ಯವಾಗಿ Stamps and Registration, ಈ ವರ್ಷ ಆಗಸ್ಟ್ ಕೊನೆಯವರೆಗೆ 1412.03 ಕೋಟಿ ರೂ. ಸಂಗ್ರಹ ಆಗಿದೆ. ಹೋದ ವರ್ಷ ಬರಿ 813.92 ಕೋಟಿ ರೂ. ಆಗಿತ್ತು. growth rate is 73.49. ಒಂದೇ ಒಂದರಲ್ಲಿ ಹಿಂದೇಟು ಆಗಿರುವುದು ಎಂದರೆ, land revenue ಹೋದ ವರ್ಷ 51 ಕೋಟಿ ರೂ. ಸಂಗ್ರಹ ಆಗಿತ್ತು. ಈ ವರ್ಷ 47 ಕೋಟಿ ರೂ. ಸಂಗ್ರಹ ಆಗಿದೆ. 6.71 ಒಟ್ಟಾರೆ ಈ ವರ್ಷ ಆಗಸ್ಟ್ ಕೊನೆಯವರೆಗೆ ಈ ಐದು ಪ್ರಮುಖ ಇಲಾಖೆಯಲ್ಲಿ 9302.85 ಕೋಟಿ ರೂ. ಸಂಗ್ರಹ ಆಗಿದ್ದರೆ, ಹೋದ ವರ್ಷ 7039.23 ಕೋಟಿ ರೂ. ಸಂಗ್ರಹ ಆಗಿತ್ತು. The growth rate is 32.16. ಇದರ ಆಧಾರದ ಮೇಲೆ ಈ ಹಣವನ್ನು ಹೆಚ್ಚು ಹೆಚ್ಚು ಬಾಬುಗಳಿಗೆ ನಾನು ಹಣವನ್ನು ಬಿಡುಗಡೆ ಮಾಡಿದ್ದೇನೆ. ಬಜೆಟ್ಟಿನಲ್ಲಿ ಅಲೋಕೇಷನ್ ಮಾಡಿರತಕ್ಕಂಥದ್ದಕ್ಕೆ ಒಂದು ಪೈ ಯಾವುದೇ ಯೋಜನೆಗೆ ಕಡಿಮೆಯಾಗುವ ಪ್ರಶ್ನೆಯಿಲ್ಲ. fiscal deficit ಆಗಲು ಬಿಡುವುದಿಲ್ಲ. over draft ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾವೇನು ಘೋಷಣೆ ಮಾಡಿದಂಥ ಕಾರ್ಯಕ್ರಮಗಳಿಗೆ ನಾವು ಹಣವನ್ನು ಕೊಡುತ್ತೇವೆ. ಇದನ್ನು ನಾನು ತಮಗೆ ಚರ್ಚೆ ಮಾಡಲಿಕ್ಕೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ ಅಷ್ಟೇ. ಎಲ್ಲಿ ಬಂತು ಯಡಿಯೂರಪ್ಪನವರೆ, ಆರು ತಿಂಗಳಲ್ಲಿ ಹೇಳಿದಿರಿ ಎಂದರೆ, ಆರು ತಿಂಗಳು growth ಆದ ಮೇಲೆ ಆಧಾರದ ಮೇಲೆ ತಮಗೆ ಹೇಳುತ್ತಿದ್ದೇನೆ ಅಷ್ಟೇ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ತಾವು ಅಂಕಿ ಅಂಶ ಕೊಟ್ಟು ನಮ್ಮನ್ನು ಕನ್‌ವಿನ್ಸ್ ಮಾಡತಕ್ಕಂಥ ಪ್ರಯತ್ನ ಮಾಡಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಒಂದು ನೀವು ಮರೆಯಬಾರದು. ಇವತ್ತು ನಿಮಗೆ ಅಂಕಿ ಸಂಖ್ಯೆ ಕೊಡುವವರು ಈ ಹಿಂದೆ ನಮಗೆ ಅವರೇ ಕೊಡುತ್ತಿದ್ದರು. ಬೇರೆ ಏನೂ ಇಲ್ಲ. ಅಥವಾ ಬೇರೆ ಅಧಿಕಾರಿಗಳೇನೂ ಬರಲಿಲ್ಲ. ಆದರೆ, ನಾವೂ ಕೂಡ ನೋಡಬೇಕು, inflation ಎಷ್ಟು? ನೀವು ಕೊಟ್ಟಂಥ financial target ನಲ್ಲಿ ಇವತ್ತಿನ fiscal target achieve ಮಾಡುವುದಕ್ಕೆ ಹೇಗೆ ಸಾಧ್ಯ? ಇವತ್ತಿನ steel rate ಏನು? ಇವತ್ತಿನ ಸಿಮೆಂಟ್ ರೇಟ್ ಏನು? ನ್ಯಾಚ್ಯೂರಲಿ ಇದರ ಆಧಾರದ ಮೇಲೆ ಅನೇಕ ವಿಷಯಗಳು ಅವಲಂಬಿಸಿರುತ್ತವೆ. ಇದು ತಮಗೆ ಗೊತ್ತಿದೆ. ನೀವು ಏನು ಇಲ್ಲವೆಂದರೂ ಮಿನಿಮಮ್ inflation rate ಆರೇಳು ಪರ್ಸೆಂಟ್ ಆದರೂ ಇದೆ. ಕೆಲವಂತೂ ಅದರಲ್ಲೂ ಸ್ಟೀಲ್, ಸಿಮೆಂಟ್ ಅಂಥ ವಸ್ತುಗಳಲ್ಲಿ ಸುಮಾರು 30% ಹೋಗಿದೆ. ಅದಕ್ಕೆ ಕೆಲವು ನಾವು ನೋಡಿ ಮಾತನಾಡೋಣ. ನಾನು ನೀವು ಮಾಡಿಲ್ಲ. ಅದರಲ್ಲಿ ಹೋಗಿದೆ ಎಂದಲ್ಲ. ಆದರೆ ಎಲ್ಲವೂ ಕೂಡ ನನ್ನ ಕಾಲದಲ್ಲಿ ಆಗಿದೆ ಅನ್ನುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಆ ರೀತಿ ಹೇಳಲೇ ಇಲ್ಲಾ. ಇಷ್ಟು ಆಗಿದೆ ಎಂದು ಹೇಳಿದೆ ಅಷ್ಟೇ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಸ್ವಲ್ಪ ಸ್ವಲ್ಪ ಕೇಳಿ ಸ್ವಾಮಿ, ಈಗ ನೀವು ಉಪ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರಲ್ಲ. ಏಕೆಂದರೆ 30 ವರ್ಷಗಳ ಕಾಲ ಈ ಕಡೆ ಇದ್ದಿರಲ್ಲಾ, ಅದಕ್ಕೆ ಹಾಗೆ ಆಗುತ್ತದೆ. ಆದರೆ ನಾವು ಕೇಳಿದ್ದು ಏಕೆಂದರೆ, ಒಂದು ವರ್ಷದಲ್ಲಿ ನೀವು ಈಗಾಗಲೇ budget work ಕೊಟ್ಟಿದ್ದಿರಿ. ಈಗ ನೀವು ಕೊಡುತ್ತಿರತಕ್ಕಂಥ ಬಜೆಟ್ ಅಡಿಷನಲ್. ಸಪ್ಲಿಮೆಂಟರಿ ಬಜೆಟ್ ಎಷ್ಟು 1500 ಕೋಟಿ ರೂ. ಎಂದು ತಿಳಿದುಕೊಳ್ಳಿ. 1500 ಕೋಟಿ ರೂ.ನೂ ಕೂಡ ನೀವು ಕ್ರೋಢೀಕರಿಸಬೇಕು. ಇಲ್ಲಾಂದ್ರೆ ನೀವು ಹೇಳಿದ ಹಾಗೆ sales tax ನಲ್ಲಿ ಹೆಚ್ಚಿಗೆ ಮಾಡಿಯಾದರೂ ತೋರಿಸಬೇಕು. ಇಲ್ಲ ಸೋರಿಕೆಯಾಗುವುದನ್ನಾದರೂ ನಿಲ್ಲಿಸಬೇಕು. ಇಲ್ಲ ಯಾವ್ಯಾವುದು ಎಕ್ಸ್‌ಸೈಜ್‌ನಲ್ಲೂ transport ನಲ್ಲೂ ನೀವು ಎಲ್ಲೆಲ್ಲಿ ನಂಬಿಕೆ ಇಟ್ಟಿದಿರಿ ಆ ಕ್ಷೇತ್ರದಲ್ಲಿ ಆದರೂ ಜಾಸ್ತಿ ಹಣ ಬರಬೇಕು. ಅದರ ಜೊತೆ ಜೊತೆಯಲ್ಲಿ ನೀವು ಹಣ ಇಷ್ಟು ಕೊಟ್ಟರೂ ಕೂಡ ನಿಮ್ಮ fiscal target ಏನು ಅಚೀವ್ ಮಾಡಬೇಕು ಎನ್ನತಕ್ಕಂಥದ್ದು ಇರುತ್ತದಲ್ಲಾ, ಅದು ಅಚೀವ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ನೀವು ಮೆಡಿಕಲ್ ಕಾಲೇಜಿಗೆ 20 ಕೋಟಿ ರೂ. ಎಂದು ಎಸ್ಟಿಮೇಟ್ ಇಡುತ್ತಿರಿ. ಅದು ಈಗಿನ ಅಂದಾಜಿನ ಪ್ರಕಾರ 20 ಕೋಟಿ ರೂ.ಗೆ ಮುಗಿಯುವುದಿಲ್ಲ. 40 ಕೋಟಿ ರೂಪಾಯಿ ಆಗಬೇಕು. ಇವೆಲ್ಲವೂ ಕೂಡ ಇವೆ. ನೋಡೋಣ ಆಮೇಲೆ ಮುಂದಿನ ಸಲ ಡಿಟೈಲ್ ಮಾತನಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಉಪ ಮುಖ್ಯಮಂತ್ರಿಗಳಿಗೆ ನಾನು ಕೇಳಿದ್ದು ಬೇರೆ. ನೀವು ಈಗಾಗಲೇ ಏನು ಬಜೆಟ್‌ನಲ್ಲಿ ಹೇಳಿದ್ದೀರಿ. ಆ ಕಾರ್ಯಕ್ರಮಗಳೇ ಸರಿಯಾಗಿ ಅನುಷ್ಠಾನ ಆಗಲಿಲ್ಲ ಎಂದು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಾವು ನಿಮ್ಮ ಗಮನಕ್ಕೆ ತರುವುದು ನಮ್ಮ ಕೆಲಸ. ನಾನು ಹೇಳುವುದಕ್ಕೆ ಹೊರಟಿದ್ದೆ. Volume of business ಜಾಸ್ತಿಯಾದಾಗ ಯಾವುದಾದರೂ ಒಂದು produce ದು ರೇಟ್ ಜಾಸ್ತಿಯಾದಾಗ ನ್ಯಾಚ್ಯೂರಲಿ ರೆವಿನ್ಯೂ ಜಾಸ್ತಿ ಆಗುತ್ತದೆ. ಡೀಸೆಲ್ ಜಾಸ್ತಿ ಆದರೆ, ನಿಮ್ಮ ಅಧಿಕಾರಿಗಳೇನು ಮಾಡಬೇಕಾಗಿಲ್ಲ. Automatic ಆಗಿ income ಜಾಸ್ತಿ ಆಗುತ್ತದೆ. ಯಾವುದಾದರೂ ಒಂದು freight ಮೇಲೆ tax ಬರುವುದು ಜಾಸ್ತಿಯಾದರೆ automatic ಆಗಿ ನಿಮಗೆ income ಬರುತ್ತದೆ. ಈಗ ನೀವು ಮತ್ತು ನಿಮ್ಮ ಮುಖ್ಯಮಂತ್ರಿಗಳ ಮಧ್ಯೆ ಗೊಂದಲ ಇದೆ. ಅವರು ಮುಂದಿನ ವರ್ಷದಿಂದ ನಾವು ಸಾರಾಯಿಯನ್ನು ರದ್ದು ಮಾಡುತ್ತೇವೆಂದು ಹೇಳಿದ್ದಾರೆ. ತಾವು ಹೇಳಿದ್ದೀರಿ. ಸಾರಾಯಿ ರದ್ದು ಮಾಡಲು ಆಗುವುದಿಲ್ಲ. ಇದರಿಂದ state exchequer ಮೇಲೆ ಬಾರಿ ಬರ್ಡನ್ ಆಗುತ್ತದೆಂದು ಹೇಳಿದ್ದಿರಿ. ಹಾಗಾದರೆ ಅಷ್ಟು ಚೆನ್ನಾಗಿರುವ ಸ್ಥಿತಿಯಲ್ಲಿದ್ದರೆ ನೀವು ಹಾಗೂ ಮುಖ್ಯಮಂತ್ರಿಗಳು ಮಾತನಾಡಿಕೊಂಡು ಒಂದು ಹೇಳಿಕೆ ಕೊಡಬಹುದಾಗಿತ್ತಲ್ಲಾ. ಬ್ಯಾನ್ ಮಾಡುವುದು ಅದು ನಮ್ಮ ಪಾಲಿಸಿ, you have accepted it. ನಾವು ಅದನ್ನು ಒಪ್ಪುತ್ತೇವೆ. ಸಾರಾಯಿಯಾಗಲಿ IML ಆಗಲಿ ಒಂದೇ ಸಾರಿ ಬ್ಯಾನ್ ಮಾಡಿಬಿಟ್ಟರೆ ನಿಮ್ಮ exchequer imbalance ಆಗುತ್ತದೆ. ಅದು ಆಗುವುದಕ್ಕೆ ಸಾಧ್ಯ ಕೂಡ. ನೀವು ಹೇಳಿದ್ದರಿಂದ, ನೀವು ಸ್ಪಷ್ಟವಾಗಿ ಹೇಳಿದ್ದಿರಿ. ನಾವು ಆ ಸ್ಥಿತಿನಲ್ಲಿ ಇಲ್ಲ. ತಕ್ಷಣ ನಾನು ಸಾರಾಯಿಯನ್ನು ಬ್ಯಾನ್ ಮಾಡುತ್ತೇನೆಂದು ಹೇಳುವುದಕ್ಕೆ ಆಗುವುದಿಲ್ಲ. ಕುಳಿತು ಆಲೋಚನೆ ಮಾಡಬೇಕೆಂದು ಹೇಳಿದ್ದೀರಿ. Yes that is the point. That is a duty of the Finance Minister. ತಾವು ಹಣಕಾಸಿನ ಮಂತ್ರಿಯಾಗಿ ಆ ಕೆಲಸ ಮಾಡಿದಿರಿ. ನಾನು ಈ ಕಡೆ ಕೇಳುವುದು, industrial subsidy ತಾವು ಯೋಚನೆ ಮಾಡಿ, ಎಷ್ಟು ವರ್ಷದಿಂದ? What is the fate of that entrepreneur? ಬಡ್ಡಿ ಕಟ್ಟುವುದು ಬಿಟ್ಟಿದಿರಾ? ವಸೂಲಿ ಮಾಡುವುದು ಬಿಟ್ಟಿದಿರಾ? ಅದರ ಮೇಲೆ ಸುಸ್ತಿ ಬಡ್ಡಿ ಹಾಕುವುದು ಬಿಡುತ್ತೀರಾ? ನೀವು ಕೊಡಬೇಕಾದ 25% ಸಬ್ಸಿಡಿ ಕೊಟ್ಟಿದ್ದರೆ, fruitful industry ಆಗಿರುವುದು, ಸ್ಟೇಟ್ ಬೆಳೆದಿರುವುದು, tax ಜಾಸ್ತಿಯಾಗಿರುವುದು, ಆ industry ಗಳೆಲ್ಲಾ thrive on ಆಗಿದ್ದರೆ, ನ್ಯಾಚ್ಯೂರಲಿ ಅಲ್ಲಿಂದ ಬೆನಿಫಿಟ್ tax ಜಾಸ್ತಿಯಾಗಿರುವುದು, ಆ ಸಬ್ಸಿಡಿ ತಾವು ಕೊಡಲೇ ಇಲ್ಲ. ಬಾಂಡ್ ಎತ್ತುಕೊಂಡು ಕೊಡುತ್ತೇನೆಂದು ಹೇಳಿದಿರಿ. ಮತ್ತೊಂದು ಎತ್ತುಕೊಂಡು ಕೊಡುತ್ತೇವೆಂದು ಹೇಳಿದಿರಿ. ಇವತ್ತಿನವರೆಗೆ ಕೊಡಲಿಲ್ಲ. ಅಕಸ್ಮಾತ್ ಕೊಟ್ಟಿದ್ದನ್ನು KSFC ಸಾಲಕ್ಕೆ adjust ಮಾಡಿರುವುದು ಬಿಟ್ಟರೆ, ಇನ್ಯಾರಿಗೂ ಇವತ್ತಿನವರಿಗೆ industries ರವರಿಗೆ ತಾವು ಸಬ್ಸಿಡಿಯನ್ನು ರಿಲೀಸ್ ಮಾಡಲಿಲ್ಲ. ಅನೇಕ ಸಲ ನಾವು ಈ ಸುದ್ದಿಯನ್ನು ಮಾತನಾಡಿದ್ದೇವೆ. ನಿಮ್ಮದು poultry ನಮ್ಮ ರಾಜ್ಯದಲ್ಲಿದ್ದಂಥ ಎಲ್ಲಾ poultry

ಗಳು ಆಂಧ್ರಪ್ರದೇಶಕ್ಕೆ ಹಾಗೂ ಮಹಾರಾಷ್ಟ್ರಕ್ಕೆ shift ಆಗಿವೆ. ತಾವು ಹಣಕಾಸಿನ ಮಂತ್ರಿಗಳು ಅಲ್ಲವೆ? Poultry ಯಿಂದ ನಮಗೆ ಬರುತ್ತಿದ್ದ income ಏನು? ಉದ್ಯೋಗ ಸೃಷ್ಟಿ ಏನು? ಎಷ್ಟು ಬಡ ಕುಟುಂಬಗಳು ಬದುಕುತ್ತಿದ್ದವು? ಎಷ್ಟು ಕುಟುಂಬಗಳು ಜೀವನ ಮಾಡುತ್ತಿದ್ದವು ಎಂಬುದನ್ನು ತಾವು ಆಲೋಚನೆ ಮಾಡಬೇಕು ಅಲ್ಲವೆ? ಎಷ್ಟು ಜನ ನೇಕಾರರು ಕರ್ನಾಟಕದಿಂದ ನಿರ್ನಾಮ ಆಗಿ ಆಚೆ ಹೋಗುತ್ತಿದ್ದಾರೆ. ಕಸುಬು ಎಲ್ಲಾ ತಮಿಳುನಾಡಿಗೆ shift ಆಗಿದೆ. ನಿಮ್ಮ ಪಕ್ಕ ತಿರುಪ್ಪೂರು ಏಕೆ ಬೆಳೆಯುತ್ತಿದೆ? ಕೊಯಮತ್ತೂರು ಏಕೆ ಬೆಳೆಯುತ್ತದೆ? ನಿಮ್ಮ ಪಕ್ಕ ಇನ್ನೊಂದು state ಏಕೆ ಬೆಳೆಯುತ್ತಿದೆಂದು ಯೋಚನೆ ಮಾಡಬೇಕಲ್ಲವೆ? ತಾವೇನು ನೇಕಾರರಿಗೆ package ಹೇಳಿದಿರಿ. ಅದು ತಪ್ಪಾಗಿದೆ. KSFC ನಲ್ಲಿ ಸಾಲ ತೆಗೆದುಕೊಂಡ ಒಬ್ಬನೇ ಒಬ್ಬ ನೇಕಾರರಿಗೆ ಒಂದು ರೂಪಾಯಿ ರಿಬೇಟ್ ಸಿಕ್ಕಿಲ್ಲ. KSFC ಯಿಂದ ಸಾಲ ತೆಗೆದುಕೊಂಡಿದ್ದೇ ತಪ್ಪಾ? ತಾವು ಒಂದು ಮನಸ್ಸು ಮಾಡಬೇಕು. ಧಾರವಾಡದಲ್ಲಿ Central Co-operative Bank ನಲ್ಲಿ ಸಾಲ ತೆಗೆದುಕೊಂಡ ನೇಕಾರರಿಗೆ ಬಡ್ಡಿಯನ್ನು ಮತ್ತು ಸುಸ್ತಿ ಬಡ್ಡಿಯನ್ನು ಮಜಾ ಮಾಡುತ್ತೇನೆಂದು ಹೇಳುತ್ತೀರಿ, KSFC ಯಿಂದ ತೆಗೆದುಕೊಂಡವನಿಗೆ ನೀವು ಏಕೆ package ಕೊಡುತ್ತಿಲ್ಲ? ನೀವು ಅವನನ್ನು ಏಕೆ ಕೃಷಿ ಕಾರ್ಮಿಕರ ತರಹ treat ಮಾಡುತ್ತಿಲ್ಲ? ತಮಗೆ ಏನಾದರೂ ಆ ಕಸಬಿನ ಮೇಲೆ ಒಂದು ಆಸಕ್ತಿ ಇದ್ದರೆ, ಸುಮಾರು ಕರ್ನಾಟಕದಲ್ಲಿ ಒಂದು ಲಕ್ಷ ನೇಕಾರರ ಕುಟುಂಬಗಳು ಇದ್ದವು. ಈಗ ಸೊನ್ನೆಯಾಗಿದ್ದಾರೆ. ಹಾಸನದಲ್ಲಿ ಬರುತ್ತಿರುವ ನಿಮ್ಮ garment plant ರೆಡಿ ಆಗಿದೆ ಅದು ಬಂದು ಬಿಟ್ಟರೆ ಇಡೀ ತುಮಕೂರು ಭಾಗದಲ್ಲಿದ್ದ ನೇಕಾರರು ಎಲ್ಲಾ ಮತ್ತೆ ನಿರ್ನಾಮವಾಗಿ ಹೋಗುತ್ತಾರೆ. ಆ ನೇಕಾರರನ್ನು ಏನು ಮಾಡಿದಿರಿ? ಆ ಸಮುದಾಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ lead ಮಾಡುತ್ತಿದ್ದಿರಿ ಎಂಬುದನ್ನು ತಾವು Finance Minister ಆಗಿ ನಿಮಗೆ ನೀವು guide ಮಾಡಬೇಕು ಅಲ್ಲವೆ? ನಾನು ನಿಮಗೆ demand ಮಾಡುವುದು KSFC ನಲ್ಲೂ ಕೂಡ ನೀವು ಅವರಿಗೆ package ಕೊಡಬೇಕು, KSFC ಯನ್ನು ತೆಗೆದುಕೊಂಡು ಹೋಗಿ ಸಾಲದ ಮೇಲೆ ಬಡ್ಡಿಯನ್ನು ಅಥವಾ ಸುಸ್ತಿ ಬಡ್ಡಿಯನ್ನು ಅಥವಾ partial principle waive ಮಾಡಲಿಕ್ಕೆ ನೀವು ಅಧಿಕಾರ ಕೊಡಬೇಕು. ನಿಮ್ಮ KSFC Board ಕುಳಿತುಕೊಂಡು ಕೋಟಿಗಟ್ಟಲೆ 40 ಲಕ್ಷ 50 ಲಕ್ಷದವರಿಗೆ One Time Settlement ಎಂದು ಮಾಡಿದೆ. ನೇಕಾರರ ವಿಷಯ ಬಂದಾಗ Government Order ಇಲ್ಲವೆಂದು ಹೇಳಬೇಕಾ? ತಾವು ಹೇಳಿದ್ದು ನಿಜ. ಅಧಿಕಾರಿಗಳು ಯಾರ್ಯಾರಿಗೆ ಮಾಡಿದ್ದಾರೆನ್ನುವ list ಅನ್ನು ನಾವು ಕೊಡಬೇಕಾ? ಬೇಕಾದರೆ ನಾವು list ಕೊಡುತ್ತೇವೆ. ಮಾನ್ಯ ಕಟ್ಟಾ ಸುಬ್ರಮಣ್ಯಂ ನಾಯ್ಡುರವರೇ, ನೋಡಿ ನಿಮ್ಮ ಮಂತ್ರಿಗಳ ಸ್ಥಿತಿ, ತಾವು ನೇಕಾರರಿಗೆ KSFC ನಲ್ಲಿ ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿ, ಸುಸ್ತಿ ಬಡ್ಡಿ ಮಜಾ ಮಾಡಿಸಿಕೊಡಿ. ನೇಕಾರರು ನಾಶ ಆಗುತ್ತಿದ್ದಾರೆ. ಅದೊಂದು ಕಸುಬು, ಅದೊಂದು ಉದ್ಯಮವೆಂದು ನಾನು ಅವರಿಗೆ ಆಗಿನಿಂದ ಕನ್‌ವಿನ್ಸ್ ಮಾಡುತ್ತಿದ್ದೇನೆ. Poultry ಅವರಿಗೆ ಮಾಡಿ ಕೊಡಿ ಎಂದು

ಹೇಳಿದ್ದಕ್ಕೆ ನೀವು ಒಪ್ಪಿದ್ದಿರಿ. Rural based brick industries ಗೆ ಮಾಡಿಕೊಡಿ ಎಂದು ಹೇಳಿದ್ದಕ್ಕೆ ತಾವು ಒಪ್ಪಿದ್ದಿರಿ. ಇದು ಯಾವುದರ ಮೇಲೂ ಸರ್ಕಾರ ಈವರೆಗೆ ಲವಲೇಶವಾದ ಆಸಕ್ತಿಯನ್ನು ತೋರಿಸಿಲ್ಲ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿರುವ ಪೌಲ್ಟ್ರಿ ನಿರ್ನಾಮವಾಗುತ್ತಿದೆ. ಇವತ್ತಿನ ದಿವಸ 10 ಕೋಳಿ ಕೂಡ ಹೊಸೂರಿನಿಂದ ಮತ್ತು ಸತ್ಯಮಂಗಲದಿಂದ ಬರಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಪೌಲ್ಟ್ರಿಗಳು ಬದುಕುವುದಕ್ಕೆ ಆಗದೇ ಇರತಕ್ಕಂಥ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ಅದು ಇದ್ದಿದರೆ ನಿಮಗೆ ಆದಾಯ ಜಾಸ್ತಿ ಆಗುತ್ತಿರಲಿಲ್ಲವೆ? ವರ್ಕಿಂಗ್ ಅವರ್ಸ್ ಇಂಪ್ರೂವ್ ಆಗುತ್ತಿರಲಿಲ್ಲವೇ ಮತ್ತು ಮ್ಯಾನ್ ಪವರ್ ಜಾಸ್ತಿ ಆಗುತ್ತಿರಲಿಲ್ಲವೆ? ನಿಮ್ಮ ಘನವಾದ ಉದ್ದೇಶ ಏನೆಂಬುದನ್ನು ತಾವು ಹೇಳಬೇಕು? ಮನುಷ್ಯರ ಕೈಗೆ ಶಕ್ತಿ ಕೊಟ್ಟು ಆತನಿಗೆ ಕೆಲಸ ಕೊಡಬೇಕು. ಎಲ್ಲರೂ ಕುಳಿತುಕೊಂಡು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ ಮತ್ತೆ ಮೈನ್ಸ್ ಮೇಲೆ ರಾಯಲ್ಟಿ ಜಾಸ್ತಿ ಮಾಡಿ. ಆತನ ಮೇಲೆ ಏನಾದರೂ ಎಕ್ಸ್ಟ್ರ ಟ್ಯಾಕ್ಸ್ ಹಾಕತಕ್ಕಂತಹ ಸ್ಥಿತಿ ನಿರ್ಮಾಣ ಮಾಡಿ, ಇವತ್ತಿನ ದಿವಸ ಕರ್ನಾಟಕದ ಸಂಪತ್ತೆಲ್ಲ ಲೂಟಿಯಾಗುತ್ತಿದೆ ಎಂದು ನಾವು ಹಲವಾರು ಬಾರಿ ಹೇಳಿದ್ದೇವೆ. ಮತ್ತೆ ರಾಜ್ಯಕ್ಕೆ ಬರಬೇಕಾಗಿರತಕ್ಕಂಥ ವರಮಾನವನ್ನು ಹೆಚ್ಚು ಮಾಡಿಕೊಳ್ಳಿ ಎಂದು ಹೇಳಿದ್ದೇವೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : 1999 ರಿಂದ 250 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಹಣ ಬಾಕಿ ಇತ್ತು. ಸಬ್ಸಿಡಿ ಹಣವನ್ನು ಕೊಡಲಿಲ್ಲವೆಂದು ತಾವು ಹೇಳಿದ್ದೀರಿ. ಈ ಸರ್ಕಾರ ಹೊಸದಾಗಿ ಅಸ್ತಿತ್ವಕ್ಕೆ ಬಂದ ಕೂಡಲೇ 85 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕೋಳಿ ಸಾಕಾಣಿಕೆಗೆ ಮತ್ತು ಇಟ್ಟಿಗೆ ಫ್ಯಾಕ್ಟರಿಗೆ ಸಬ್ಸಿಡಿ ಹಣ ನೀಡಿಲ್ಲವೆಂದು ತಾವು ಹೇಳಿದ್ದೀರಿ. ಈಗಾಗಲೇ ಅದಕ್ಕೆ 29 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿಕೆ ಹಣವನ್ನು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹಂತ ಹಂತವಾಗಿ ಬಿಡುಗಡೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇವೆ. ಅಷ್ಟು ವರ್ಷದಿಂದ ಬಾಕಿ ಉಳಿದಂತಹ ಹಣವನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ. ಅದಕ್ಕೆ ತಾವು ನಮ್ಮನ್ನು ಅಪ್ರೀಶಿಯೆಟ್ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಅಪ್ರೀಶಿಯೇಟ್ ಮಾಡತಕ್ಕಂಥ ದಿಕ್ಕಿನಲ್ಲಿ ಕುಳಿತಿಲ್ಲ. ಟೀಕೆ ಮಾಡುವ ದಿಕ್ಕಿನಲ್ಲಿ ಕುಳಿತುಕೊಂಡಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಒಳ್ಳೆಯ ಕೆಲಸ ಮಾಡಿರುವುದನ್ನು ಸ್ವಲ್ಪ ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮ ಕೆಎಸ್‌ಎಫ್‌ಸಿ ಯನ್ನು ಜೀವಂತವಾಗಿಡುವುದಕ್ಕೆ ಸಬ್ಸಿಡಿಯನ್ನು ನೀವು ಕೊಟ್ಟಿದ್ದೀರಿ. ಉದ್ದಿಮೆದಾರರನ್ನು ಬದುಕಿಸುವುದಕ್ಕೆ ತಾವೇನೂ ಕೊಟ್ಟಿಲ್ಲ. Entire thing is adjusted to KSFC account. ಬೇಕಾದರೆ ತೆಗೆದು ನೋಡಿ? ಆಮೇಲೆ ಅಕಸ್ಮಾತ್ ಉಳಿದಿಕೊಂಡಿರತಕ್ಕಂಥದ್ದು ನ್ಯಾಷನಲೈಜ್ಡ್ ಬ್ಯಾಂಕ್ ಅಕೌಂಟ್.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕೆಎಸ್‌ಎಫ್‌ಸಿ ಜೊತೆಗೆ ಅವರಿಗೂ ಕೂಡ ಹಣ ತಲುಪಿದೆ.

(ಅಡಚಣೆ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಕೆಎಸ್‌ಎಫ್‌ಸಿ ಯವರು ಸಿಡ್ಬಿಯಿಂದ ಸಾಲ ತಂದು ಆ ಸಂಸ್ಥೆಯನ್ನು ನಡೆಸುತ್ತಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕೊನೆ ಪಕ್ಷ ನಾವು ಸಾಲವನ್ನಾದರೂ ತೀರಿಸಿದ್ದೇವೆ. ಅದಕ್ಕಾದರೂ ತಾವು ಖುಷಿಪಡಿ. ಸಾಲದ ಹೊರೆ ಹಾಗೆಯೇ ಇದ್ದಿದ್ದರೆ, ಅವರು ಮನೆ ಮಠವೆಲ್ಲವನ್ನೂ ಹರಾಜು ಮಾಡಿಕೊಳ್ಳಬೇಕಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಬಾಲಕೃಷ್ಣರವರು ತಮ್ಮ ಮನೆಯಿಂದ ತಂದು ಯಾವುದಾದರೂ ಕೊಟ್ಟಿದ್ದರೆ ಖುಷಿ ಪಡಬಹುದಿತ್ತು. ಇದು ಸ್ಟೇಟ್ ಎಕ್ಸ್‌ಚೆಕರ್ ದುಡ್ಡು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದು ಸರ್ಕಾರದ ದುಡ್ಡೆಂದು ನನಗೂ ಕೂಡ ಗೊತ್ತಿದೆ. ಆದರೆ, ಹಿಂದೆ ಇದ್ದಂಥ ಸರ್ಕಾರ ಕೂಡ ಇದನ್ನು ಕೊಡಬಹುದಾಗಿತ್ತು. ನಮ್ಮ ಮತ್ತು ನಿಮ್ಮ ಮನೆಯಿಂದ ಕೊಡುವಂಥ ದುಡ್ಡು ಏನೂ ಅಲ್ಲ. ಸರ್ಕಾರದಿಂದ ಕೊಡತಕ್ಕಂಥ ಹಣ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಕೆಎಸ್‌ಎಫ್‌ಸಿಯವರು ಸಬ್ಸಿಡಿಯಿಂದ ಸಾಲ ತಂದು ಬೇರೆ ಬೇರೆ ಸಣ್ಣ ಕೈಗಾರಿಕೆಗಳಿಗೆ ಸಾಲ ಕೊಡುತ್ತಾರೆ. ಯಾರು ಸಾಲ ತೆಗೆದುಕೊಂಡಿರುತ್ತಾರೆಯೋ ಅವರು ಆ ಹಣವನ್ನು ಮರುಪಾವತಿಸುವುದು ಅವರ ಡ್ಯೂಟಿಯಾಗಿದೆ. ನಾವು ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಿದಾಗ ಅವರಿಗೆ ಬರಬೇಕಾಗಿರತಕ್ಕಂಥ ಹಣವನ್ನು ಸ್ವಲ್ಪ ಹಿಡಿದುಕೊಳ್ಳುತ್ತಾರೆ ಮತ್ತು ಸ್ವಂತವಾಗಿ ಬಂಡವಾಳ ಹೂಡಿಕೆ ಮಾಡಿರುವವರಿಗೆ ಮತ್ತು ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡಿರುವವರೆಲ್ಲರಿಗೂ ಕೂಡ ಹಣವನ್ನು ನೀಡಿದ್ದಾರೆ. ಮತ್ತೆ ಈಗ ಹೊಸದಾಗಿ ಒಂದು ಪ್ಯಾಕೇಜ್‌ನ್ನು ಕೆಎಸ್‌ಎಫ್‌ಸಿರವರು ತಂದಿದ್ದಾರೆ. ನಶಿಸಿ ಹೋಗಿರತಕ್ಕಂಥ ಸಣ್ಣ ಕೈಗಾರಿಕೆಗಳಿಗೆ ಸುಮಾರು 120 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಕೂಡ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ಯೀಲ್ಡ್ ಆಗಿ. ಒಂದು ಇಂಡಸ್ಟ್ರೀ thrive on ಆಗಬೇಕಾದರೆ ಅದಕ್ಕೆ initial days ಮುಖ್ಯ. ಅದಕ್ಕೆ ನಾವು moratorium ಕೊಡುತ್ತೇವೆ. ಎರಡರಿಂದ ಮೂರು ವರ್ಷ ಮಾರಟೋರಿಯಂ ಏಕೆ ಕೊಡುತ್ತೇವೆಂದರೆ, ಆತನಿಗೆ ಬರ್ಡನ್ ಇರುವುದೇ ಆ ಸಮಯದಲ್ಲಿ, 1995–1996 ರಿಂದ ನೀವು ಆತನಿಗೆ ಸಬ್ಸಿಡಿ ಕೊಡುತ್ತಾ ಬರುತ್ತಿದ್ದೀರಿ. ಆದರೆ, 60% ಅವನು ನಿರ್ಮಾಣವಾದ ಮೇಲೆ ಸಬ್ಸಿಡಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ನಾನು ತಮಗೆ ಕೇಳುವುದೇನೆಂದರೆ, ಸರ್ಪ್ಲಸ್ ಸ್ಥಿತಿಯಲ್ಲಿದ್ದೇವೆಂದು ತಾವು ಹೇಳುವಾಗ ಇನ್ನೂ ಕೊಡಬೇಕಾಗಿರತಕ್ಕಂಥ ಸಬ್ಸಿಡಿ ಹಣವನ್ನು ಈಗಾಗಲೇ PWD ಗುತ್ತಿಗೆದಾರರಿಗೆ ಕೊಟ್ಟ ಹಾಗೆ ಅವರಿಗೂ ಕೊಡಬಹುದಲ್ಲವೆಂದು ನಾನು ಕೇಳುತ್ತಿದ್ದೇನೆ. ತಾವು ಕೊಟ್ಟಿಲ್ಲವೆಂದು ನಾನೇನೂ

ಹೇಳುತ್ತಿಲ್ಲ. 150 ಕೋಟಿ ರೂಪಾಯಿಗಳಷ್ಟು PWD ಗುತ್ತಿಗೆದಾರರ ಬಿಲ್ ಹಾಕಿ ಇರತಕ್ಕಂಥದನ್ನು ಕೊಟ್ಟಿರುವುದಕ್ಕೆ ನಾನು ಅಪ್ರೀಶಿಯೇಟ್ ಮಾಡುತ್ತೇನೆ. ಏಕೆಂದರೆ ಇದು ನಿಮ್ಮ ಜವಾಬ್ದಾರಿಯೆಂದು ಕಳೆದ ಸಲ ಇದೇ ಶಾಸನಸಭೆಯಲ್ಲಿ ಈ ವಿಷಯವನ್ನು ಕೇಳಿದ್ದೆ. That adds on to your fiscal deficit ಅದನ್ನು ಕ್ಲಿಯರ್ ಮಾಡಿಕೊಂಡು ಲಾಭ ಮಾಡಿದ್ದೇವೆಂದು ತಾವು ಹೇಳಬೇಕಾಗಿತ್ತು. Yes. I appreciate the Finance Minister for clearing those bills. ಅದೇ ರೀತಿಯಾಗಿ ಇಂಡಸ್ಟ್ರೀಸ್‌ಗೆ ಕೊಡಬೇಕಾಗಿರತಕ್ಕಂಥ ಸಬ್ಸಿಡಿಯನ್ನು ತಾವು ಕ್ಲಿಯರ್ ಮಾಡಿದ್ದರೆ ಉದ್ದಿಮೆದಾರರು ಬದುಕುತ್ತಿದ್ದರು. ಮತ್ತೆ ಅದೇ ರೀತಿ ಪೌಲ್ಟ್ರಿ ಮತ್ತು ಬ್ರಿಕ್ ಇಂಡಸ್ಟ್ರೀಸ್‌ಗೆ ಸಬ್ಸಿಡಿ ಕೊಡತಕ್ಕಂಥದರ ಬಗ್ಗೆ ತೀರ್ಮಾನ ಮಾಡಬೇಕಾಗಿತ್ತು. ನೇಕಾರರು KSFC ಮತ್ತು Industrial Bank ನಿಂದ ಸಾಲ ತೆಗೆದುಕೊಂಡರು. ಆದರೆ, ಕೆಲವು ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್‌ಗಳಿಂದ ಮಾತ್ರ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಆದರೆ ಕೆಎಸ್‌ಎಫ್‌ಸಿ ಹಾಗೂ Nationalised Banks ಅವರಿಗೆ ಕ್ಲಿಯರೆನ್ಸ್ ಕೊಟ್ಟಿಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ಪಾಲಿಸಿಯನ್ನು ತಂದು ಅವರನ್ನು ಬದುಕಿಸಿ ಎಂದು ವಾದ ಮಾಡುತ್ತಿದ್ದೇನೆ. ಬೇರೇನೂ ಉದ್ದೇಶ ಇಲ್ಲ. ನಿಮ್ಮ ಹತ್ತಿರ ಹಣ ಇದೆ ಎಂದು ಹೇಳಿದ್ದಕ್ಕೋಸ್ಕರ ಹೇಳುತ್ತಿದ್ದೇನೆ. ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈ ಹಣವನ್ನು ಇರುವ ಕಾರಣಗಳಿಗೋಸ್ಕರ ಕೊಡುವುದಕ್ಕಾಗಿ ಏಳು ವರ್ಷ ತೆಗೆದುಕೊಂಡಿದ್ದೀರಿ. ಆದ್ದರಿಂದ ನಾನು ಯಾರನ್ನೂ appreciate ಮಾಡುವುದಕ್ಕಾಗುವುದಿಲ್ಲ. The Financial discipline started seven years ago. It has to be completed in 2010. 2010ಗೆ fiscal deficit ಇರಲಾರದಂಥ ಸ್ಥಿತಿಗೆ ರಾಜ್ಯವನ್ನು ತರುತ್ತೇವೆಂದು ತೀರ್ಮಾನವಾಗಿದೆ. ಆ ಹೆಜ್ಜೆಯಲ್ಲಿ ತಾವು ಹೋಗಬೇಕಾದರೆ, ನೀವು ಇರುವುದು revenue surplus ನಲ್ಲಿ, fiscal surplus ನಲ್ಲಿ ಅಲ್ಲ. ಏನು ಕಲೆಕ್ಷನ್ ಇಂಪ್ರೂವ್ ಆಗಿದೆ ಅದು depending on the diesel price, petrol price. ಬೇರೆ produce price ಮೇಲೆ tax ಕೂಡ ಜಾಸ್ತಿಯಾಗುತ್ತದೆ. Steel and Cement price ಜಾಸ್ತಿಯಾದರೆ ನಮಗೆ ಟ್ಯಾಕ್ಸ್ ಕೂಡ ಜಾಸ್ತಿ ಬರುತ್ತದೆ. That never means to say that you have saved so much. ಹಾಗಾದರೆ ಸಿಮೆಂಟ್, ಸ್ಟೀಲ್, ಡೀಸೆಲ್ ಬೆಲೆಯನ್ನು ಇಳಿಸಿದರೆ ನಿಮಗೆ ಟ್ಯಾಕ್ಸ್ ಜಾಸ್ತಿ ಬರುತ್ತದೆಯೇ? ಮತ್ತೆ ವಿಸ್ಕಿ, ಬ್ರಾಂದಿ ಮೇಲಿನ ರೇಟ್ ಅನ್ನು ಇಳಿಸಿದರೆ ಅಷ್ಟೇ ಟ್ಯಾಕ್ಸ್ ಬರುತ್ತದೆಯೇ ಎಂದು ಹೇಳಿ. See, when the price of a produce rises up, automatically exchequer ಗೆ ಟ್ಯಾಕ್ಸ್ ಜಾಸ್ತಿ ಬರುತ್ತದೆ. ಹಾಗೆಂದು ಹೇಳಿ, we cannot forget the service areas where they are thriving since more than ten years. ಆ ಉದ್ದಿಮೆದಾರರ ಕಡೆಗೆ ಗಮನ ಕೊಡಬೇಕಾಗಿತ್ತೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗ

ಪೂರಕ ಬೇಡಿಕೆಯ ಮೇಲೆ practical ಆಗಿ ಕೆಲವು ವಿಷಯಗಳ ಬಗ್ಗೆ ಹೇಳುತ್ತೇನೆ. ದೆಹಲಿಯಲ್ಲಿ ಅಧಿಕಾರಿಗಳಿಗೆ quarters ತೆಗೆದುಕೊಳ್ಳುವುದಕ್ಕೋಸ್ಕರ ಇಪ್ಪತ್ತು ಕೋಟಿ ರೂ. ಹಣವನ್ನು ಇಟ್ಟಿದ್ದೇವೆಂದು ಇಲ್ಲಿ ಹೇಳಿದ್ದೀರಿ. ದೆಹಲಿಯಲ್ಲಿ quarters ತೆಗೆದುಕೊಳ್ಳುವುದಕ್ಕೋಸ್ಕರ ಇಪ್ಪತ್ತು ಕೋಟಿ ರೂ. ಹಣವನ್ನು ಇಡತಕ್ಕಂಥ ಅಗತ್ಯತೆ ಇತ್ತೇ? ಇವತ್ತು ಮೂರನೇ ಕರ್ನಾಟಕ ಭವನವಾದ ಭೀಮಾ ಅವರಿಗೆ ಮೀಸಲಾಗಿದೆ. ಆದ್ದರಿಂದ ಈ ಹಣವನ್ನು ಯಾರಿಗೋಸ್ಕರ ಇಟ್ಟಿದ್ದೀರಾ? ಇಂಥ ಸ್ಥಿತಿಯಲ್ಲಿ how long you keep on investing in cities like Delhi? ಎಷ್ಟು ಜನ staff ಅನ್ನು ದೆಹಲಿಗೆ ಹಾಕುತ್ತೀರಿ ಎಂಬುದಕ್ಕೆ ಉತ್ತರ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿಂದ ಹೋಗತಕ್ಕ MLA ಗಳು ಓಡಾಡುವುದಕ್ಕೋಸ್ಕರ ಮಾಡಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ನಮಗೆ ಅಲ್ಲ. Officials ಗೆ, residential quarters ಅನ್ನು ತೆಗೆದುಕೊಳ್ಳುವುದಕ್ಕೆ ಹಣ ಕೊಟ್ಟಿದ್ದೀರಿ. MLAಗೆಂದು ತಾವು ಇದರಲ್ಲಿ ಹೇಳಿಲ್ಲ. MLAಗಳನ್ನು ಅಶೋಕ ಹೋಟೆಲ್‌ನಲ್ಲಿಡುತ್ತಿದ್ದೀರಿ. ನಾವೇನಾದರೂ ಅಲ್ಲಿಗೆ ಡೆಲಿಗೇಶನ್ ಹೋದರೆ ಅಲ್ಲಿ ಉಳಿದುಕೊಳ್ಳುವುದಕ್ಕೆ ಇವತ್ತು ಕೂಡ ಅಲ್ಲಿ ರೂಮ್ ಇಲ್ಲ. ಭೀಮ ಭವನದಲ್ಲಿ ಇವತ್ತಿನ ದಿವಸ ಪರ್ಮೆಂಟ್ ಆಗಿ ನಿಮ್ಮ ಆಫೀಸರ್ಸ್ ವಾಸ ಮಾಡುತ್ತಿದ್ದಾರೆ. ತಾವು ಇದರ ಬಗ್ಗೆ ಗಮನ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಇವತ್ತು ನನ್ನ ಅನುಭವಕ್ಕೆ ಬಂದಿರತಕ್ಕಂಥದ್ದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಡಿ.ಸಿ. ಹತ್ತಿರ ಇರತಕ್ಕಂಥ ಹಳೆಯ ಕಾಂಟೆಸ್ಸಾ ಕಾರುಗಳು ರಸ್ತೆಯ ಬದಿಯಲ್ಲಿ ನಿಂತಿರುತ್ತವೆ. ಅವರಿಗೆ ಒಳ್ಳೆಯ ಕಾರುಗಳನ್ನು ಕೊಡಲೇಬೇಕಾಗುತ್ತದೆ. ದೆಹಲಿಯಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳು ಕಾರು ಇಲ್ಲವೆಂದು ಹೇಳಿದರು. ನಾವು ಅಲ್ಲಿಗೆ ಹೋದಾಗ ಅವರಿಗೆ ಕೊಡಬೇಕೆಂದು ಅನಿಸಿತು. ಮತ್ತೆ ಅಗತ್ಯತೆ ಇತ್ತು ಎಂದು ಅನಿಸಿದ್ದರಿಂದ ಅವರಿಗೆ ಕೊಟ್ಟಿದ್ದೇವೆ. ಇದನ್ನು ತಾವು ಅಪ್ರೀಶಿಯೇಟ್ ಮಾಡಬೇಕಾಗಿತ್ತು. ಮತ್ತೆ ಕೋರ್ಟ್‌ನ ಜಡ್ಜ್‌ಗಳ ಹತ್ತಿರ ಹಳೆಯ ಕಾಲದ ಕಾರುಗಳು ಇತ್ತು. ಒಳ್ಳೆಯ ಕಾರುಗಳು ಬೇಕೆಂದು ಕೇಳಿದರು. ಅದಕ್ಕೆ ಹೊಸ ಕಾರು ತೆಗೆದುಕೊಳ್ಳುವುದಕ್ಕೆ ಹಣ ಕೊಟ್ಟಿದ್ದೇವೆ. ಅವರಿಗೆ ಕೊಟ್ಟು ಉಳಿದವರಿಗೆ ಕೊಟ್ಟಿಲ್ಲವೆಂದು ಹೇಳತಕ್ಕಂಥ ನಿಮ್ಮ ಅಬ್ಜೆಕ್ಷನ್‌ನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವಶ್ಯಕತೆದ ಇರತಕ್ಕಂಥ ಕಡೆ ಕೊಟ್ಟಿರುವುದನ್ನು ತಾವು ಒಪ್ಪಿಕೊಳ್ಳದಿದ್ದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಕರ್ನಾಟಕ ರಾಜ್ಯದ ಹೈಕೋರ್ಟ್‌ cadre and strength ಅಲ್ಲಿ 32 ಜನ ಜಡ್ಜ್‌ಸ್ ಇದ್ದಾರೆ. ಕಾರು ತೆಗೆದುಕೊಳ್ಳುವುದಕ್ಕೆ 3 ಕೋಟಿ 60 ಲಕ್ಷ ರೂಪಾಯಿ ಇಟ್ಟಿದ್ದೀರಿ. How many cars and what type of cars? ಹಳೆಯ ಕಾರುಗಳು ಏನಾಯಿತ್ತೆಂದು ಕೇಳಬೇಕಲ್ಲವೆ? [32 ಜನ ಜಡ್ಜ್‌ಸ್ ಇರತಕ್ಕಂಥ ಕೋರ್ಟ್‌ಗೆ 3 ಕೋಟಿ 60 ಲಕ್ಷ

ರೂ. ಕೊಟ್ಟಿದ್ದೀರಿ. ಅಂದರೆ, ಪ್ರತಿ ಜಡ್ಜ್‌ಗೆ 12 ಲಕ್ಷ ರೂಪಾಯಿಯ ಹೊಸ ಕಾರುಗಳನ್ನು ನೀಡಲಾಗಿದೆ. ಅಂದರೆ, ಎಲ್ಲಾ ಜಡ್ಜ್‌ಗೆ ಹೊಸ ಕಾರುಗಳನ್ನು ಕೊಡತಕ್ಕಂಥ ಸ್ಥಿತಿ ಬಂತೇ? ಮಂತ್ರಿ ಆಗಿರತಕ್ಕಂಥವರೆಲ್ಲಾ ತಕ್ಷಣ ಹೊಸ ಕಾರುಗಳನ್ನು ತೆಗೆದುಕೊಂಡು ಮಂತ್ರಿಗಿರಿ ಮಾಡಿದ್ದೀರಾ? ನಾನು ಡಿಮ್ಯಾಂಡ್ ಮಾಡುವುದೇನೆಂದರೆ, 32 ಜನರಲ್ಲಿ 2 ವೇಕೆನ್ಸಿ ಇಟ್ಟುಕೊಂಡು x] ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಎಷ್ಟು ಜನ ಜಡ್ಜ್ ಇದ್ದಾರೆ ಎಂದು ಪ್ರಶ್ನೆ ಕೇಳಬೇಕು ಮತ್ತೆ 3 ಕೋಟಿ 60 ಲಕ್ಷ ರೂಪಾಯಿಗಳನ್ನು ಏತಕ್ಕಾಗಿ ಪ್ರಾವಿಜನ್ ಮಾಡಿದ್ದೀರೆಂದು ತಾವು ಹೇಳಬೇಕು. ನಾನು ಕೇಳುವುದೇನೆಂದರೆ, I have a right to ask. 32 ಜಡ್ಜ್‌ಸ್ ಇರತಕ್ಕಂಥ ಹೈಕೋರ್ಟ್‌ನಲ್ಲಿ, how many new cars are purchased and for what reasons? Yes. Mr. Ramesh Kumar was right. ಅವರು ದೆಹಲಿಯಿಂದ ಆಚೆಗೆ ಹೋಗುವುದು ಯಾವಾಗ? ಒಂದು ತಿಂಗಳಲ್ಲಿ ಅಡ್ಮಿನಿಸ್ಟ್ರೇಟೀವ್ ಜಡ್ಜ್‌ಸ್ ಡಿಸ್ಟ್ರಿಕ್ಟ್ ಪ್ಲೇಸ್‌ಗೆ ಅಥವಾ ಮಫಸಿಲ್ ಕೋರ್ಟ್ ನೋಡುವುದಕ್ಕೆ ಮೂರು ತಿಂಗಳಲ್ಲಿ ಒಂದು ಅಥವಾ ಎರಡು ವಿಸಿಟ್ ಮಾಡಬಹುದಷ್ಟೆ. ಇದ್ದಂತೆ ಆ ಕಾರು ಏನಾಗುತ್ತದೆ? ನಾವು ಇವತ್ತು ಕೇಂದ್ರ ಸರ್ಕಾರವನ್ನು ಅಪ್ರೀಶಿಯೇಟ್ ಮಾಡುತ್ತೇವೆ. ಸೆಂಟ್ರಲ್ ಗೌರ್ನಮೆಂಟ್ ನೌಕರರಿಗೆ ಈ ರೀತಿಯಾಗಿ ವಾಹನಗಳನ್ನು ಕೊಟ್ಟಿಲ್ಲ. ಎಲ್ಲರಿಗೂ ಕಾಮನ್ ಮಾಡಿ ಎಲ್ಲರೂ ಪೂಲ್‌ನಲ್ಲಿ ಬರಬೇಕೆಂದು ಹೇಳಿದರು. 5 ಜನ ಜಡ್ಜ್‌ಗಳು ಒಂದು ವಾಹನದಲ್ಲಿ ಬರಬೇಕೆಂದು ಹೇಳುತ್ತಾರೆ. 6 ಜನ ಆಫೀಸರ್ಸ್‌ನ್ನು ಒಂದು ವಾಹನದಲ್ಲಿ ಬರಬೇಕೆಂದು ಹೇಳುತ್ತಾರೆ. ಎಲ್ಲರನ್ನೂ ಪೂಲ್ ಮಾಡಿ ಒಂದು ಮಿನಿ ಬಸ್ ಕೊಡುತ್ತಾರೆ. ಆಫೀಸ್‌ಗೆ ಇಷ್ಟು ಹಣ ಉಳಿಸಿ ಎಂದು ಕೇಳುತ್ತಾರೆ. Are we not bound by that? ಕೊಡಬಾರದೆಂದು ನಾವು ಹೇಳುವುದಿಲ್ಲ. ಮತ್ತೆ ನಾವ್ಯಾರೂ ಜಡ್ಜ್‌ಗಳ ವಿರೋಧಿಗಳಲ್ಲ. ಮತ್ತೆ ಅದನ್ನು DPAR ನಿಂದ ಏಕೆ ಕೊಡುತ್ತೀರಿ? Judicially allocation ನಿಂದ ಕೊಡಿ. ನೀವು ಕೋರ್ಟ್‌ನವರಿಗೆ ಪ್ರತ್ಯೇಕ ಹೆಡ್ ಆಫ್ ಅಕೌಂಟನ್ನು ಇಟ್ಟುಕೊಂಡು, ಜ್ಯುಡಿಶಿಯರಿಯವರಿಗೆ ಕಾನ್‌ಸ್ಟಿಟ್ಯೂಶನಲ್ ಪ್ರಾವಿಜನ್ ಪ್ರಕಾರದ ಪ್ರಾವಿಜನ್ ಮಾಡಿ ಅಲ್ಲಿ ಸಾಲದೆಂದು ಇಲ್ಲಿಂದ ಕೊಟ್ಟಿದ್ದೀರಿ. ಮತ್ತೆ KPSC officeನ in-aurguration ಫಂಕ್ಷನ್‌ಗೆ 10 ಲಕ್ಷ ರೂಪಾಯಿಗಳನ್ನು ತಾವು ಇಡಬಹುದಾ? ತಾವು ನಿಜವಾಗಿ concern ಇರುವವರಾಗಿದ್ದರೆ, ಆ ಕಮೀಷನ್‌ನ್ನು ನಿಲ್ಲಿಸಬೇಕಾಗಿತ್ತು. ಇಬ್ಬರನ್ನು ಇಟ್ಟುಕೊಂಡು ಇಡೀ ಕಮೀಷನ್ ನಡೆಯುತ್ತಿದೆ. ರಾಜ್ಯದಲ್ಲಿ ಆಗಬಾರದ ಎಲ್ಲಾ ನೇಮಕಾತಿಗಳು ಇಲ್ಲಿ ಇಚ್ಛಾನುಸಾರ ಆಗುತ್ತಿವೆ. I am not here to criticize any statutory organization or constitutional organization. But how long will you see that the Commission runs only with two Members? ತಾವು ಅಧಿಕಾರಕ್ಕೆ ಬಂದ ಮೇಲೆ

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

Backward classes Commission ಅಪಾಯಿಂಟ್ ಮಾಡಿದಿರಾ? ಆ ಸೇವಿಂಗ್ಸ್ ಎಲ್ಲಾ ಏನು ಮಾಡುತ್ತೀರಿ ಎಂಬುದನ್ನು ನಮಗೆ ಹೇಳಿ. K.P.S.C. ಸದಸ್ಯರನ್ನು ಅಪಾಯಿಂಟ್ ಮಾಡುವುದಿಲ್ಲ. Backward Classes Commission appointment ಮಾಡುವುದಿಲ್ಲ. ಇಡೀ ರಾಜ್ಯದಲ್ಲಿ Government Backward Classes Commission ಇರಬೇಕಾಗುತ್ತದೆ. ಇವತ್ತು ಒಂದು ರೂ. ನಿಮಗೆ ಸಂಭಾವನೆ ಖರ್ಚಾಗುತ್ತಿಲ್ಲ. What prevented you? ಕೊಡಿ. ಹಾಗಾದರೆ ನಾನು ಡಿಮಾಂಡ್ ಮಾಡುತ್ತೇನೆ. ಇವತ್ತು ಉತ್ತರ ಕರ್ನಾಟಕದಲ್ಲಿ ಶಾಸನಸಭೆ ನಡೆಸಿದ ಒಂದು ಘನ ಕಾರ್ಯಕ್ಕೆ ಈ ಕಡೆಯವರನ್ನು K.P.S.C. ಗೆ ಸದಸ್ಯರನ್ನು ಆಗಿ ಮಾಡಿ. Spare all the four numbers from North Karnataka. ಇಲ್ಲಿಂದ 4 ಜನರನ್ನು ಸದಸ್ಯರನ್ನಾಗಿ ಏತಕ್ಕಾಗಿ ಮಾಡಿಲ್ಲವೆಂಬುದಕ್ಕೆ ಉತ್ತರವನ್ನು ಹೇಳಬೇಕು. Till then, what is the function of K.P.S.C.? ಹಾಗಾದರೆ K.P.S.C. ಬಗ್ಗೆ ನಾವು ಕೇಳಬಾರದೇ? ಅದು Inaugural function ಗೆ 10 ಲಕ್ಷ ರೂ.ಗಳನ್ನು State Exchequer ದಿಂದ ಕೊಡುತ್ತೀರೆಂದರೆ, ನಾವು M.L.A. ಗಳಾಗಿ ನಾವು ಇಲ್ಲಿ ಕುಳಿತುಕೊಂಡು ಕೇಳಬೇಕಾ? ಆಮೇಲೆ drip irrigation. ರಾಜ್ಯದಲ್ಲಿ ಇವತ್ತು ಏನಾಗಿದೆ. ನಾನು ಇಲ್ಲಿ Horticulture Minister ಇದ್ದರೆ ಒಂದು ಡಿಮಾಂಡ್ ಮಾಡುತ್ತೇನೆ. ಎಷ್ಟು ಬಾಕಿ ಇದೆ ಎಂದು ಉತ್ತರದಲ್ಲಿ ಹೇಳಬೇಕು. What prevented you in paying that amount? ರೈತರು ನಾಶವಾಗಿ ಹೋಗಬೇಕಾ ಮಾನ್ಯ ಯಡಿಯೂರಪ್ಪನವರೇ. ನೀವು ಒಬ್ಬ ರೈತರ ಚಿಂತಕ ಎಂದು ನಾನು ಮಾತನಾಡುತ್ತಿದ್ದೇನೆ. ಉದ್ವೇಗದಲ್ಲಿ ಅಲ್ಲ. Drip irrigation ಗೆ ಇವತ್ತಿನವರೆಗೂ ಹಣ ಬಿಡುಗಡೆಯಾಗಲಿಲ್ಲ. ಎರಡು–ಮೂರು ವರ್ಷದ್ದು ಬಾಕಿ ಇದೆ. ಇಡೀ ವರ್ಷ ತೋಟಗಾರಿಕೆ ಇಲಾಖೆಯಿಂದ ಒಂದು ಅರ್ಜಿಯನ್ನು ತೆಗೆದುಕೊಂಡಿಲ್ಲ. ಇದೆಲ್ಲಾ ನಾವು ಹೇಳಬಾರದಾ? ನಿಮ್ಮ ಹತ್ತಿರ ಹಣ ಇದ್ದರೆ ಏಕೆ ರೈತರಿಗೆ ಕೊಡುತ್ತಿಲ್ಲ? ನಾವು ಏನು ಪಾಪ ಮಾಡಿದ್ದೇವೆ? ನಾನು ನಿಮಗೆ ಕೇಳುತ್ತೇನೆ. ಪವರ್ ಟಿಲ್ಲರ್ ಬಗ್ಗೆ, ನಿಮಗೆ ಎತ್ತಿನ ಗಾಡಿ ಕೊಡುವುದಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೇವೆಂದು ಹೇಳಿದಿರಿ. ಪವರ್ ಟಿಲ್ಲರ್ ಬಗ್ಗೆ ಮತ್ತು ಟ್ರ್ಯಾಕ್ಟರ್ ಬಗ್ಗೆ ತಾವು ಒಂದು ವ್ಯವಸ್ಥೆಯನ್ನು ಮಾಡಿ. ಒಂದು ತಾಲ್ಲೂಕಿನಿಂದ 90 ರವರೆಗೆ ಅಪ್ಲಿಕೇಶನ್‌ಗಳು ಬರುತ್ತಿವೆ. ದಿವಸ ಬೆಳಿಗ್ಗೆ ಟ್ರಾಕ್ಟರ್ ಡೀಲರ್ ಏಜೆಂಟ್ 60 ಸಾವಿರ ರೂ.ಗಳು ನಿಮಗೆ ಸರ್ಕಾರದಿಂದ ಸಬ್ಸಿಡಿ ಸಿಗುತ್ತದೆಂದು ಹೇಳುತ್ತಾರೆ. ಇದನ್ನು ಯಾರು ತೀರ್ಮಾನ ಮಾಡುವುದು? ಯಾರಿಗೆ ಈ ಅಧಿಕಾರವನ್ನು ಕೊಟ್ಟಿದ್ದೀರಿ? ನಾಳೆ ಪ್ರಶ್ನೆಯನ್ನು ಮಾಡಿದರೆ, ನಾವು ಹಾಗೂ ಅಧಿಕಾರಿಗಳು ಏನು ಉತ್ತರವನ್ನು ಹೇಳುವುದು? ಅವರು ಯಾರಿಗೆ ಕೊಡಬೇಕು? ಅದಕ್ಕಾಗಿ ಸಣ್ಣ ಹಿಡುವಳಿದಾರರಿಗೂ ಟ್ರಾಕ್ಟರ್ ಕೊಡಬೇಕೆಂದು ಹೇಳಿದ್ದು. ಅವರಿಗೆ 5 ರಿಂದ 6 ಲಕ್ಷ ರೂ.ಗಳನ್ನು ಖರ್ಚು ಮಾಡಿ ಟ್ರಾಕ್ಟರ್ ತೆಗೆದುಕೊಳ್ಳುವುದಕ್ಕೆ ಎನ್‌ಕರೇಜ್ ಮಾಡುತ್ತೀರಾ? ಎಷ್ಟು ವರ್ಷಕ್ಕೆ ಅವನು ಸಾಲವನ್ನು ತೀರಿಸುತ್ತಾನೆ? ಇದೆಲ್ಲವನ್ನೂ ತಾವು ಗಮನಕ್ಕೆ ತೆಗೆದುಕೊಳ್ಳಬೇಕು.

10 ಟ್ರಾಕ್ಟರ್ 10 ಪವರ್ ಟಿಲ್ಲರ್ ಕೊಡುತ್ತೇವೆಂದು ಹೇಳಿರುವುದಕ್ಕೆ ನಾವು ಸ್ವಾಗತವನ್ನು ಮಾಡುತ್ತೇವೆ. ಆದರೆ ಎಲ್ಲಿಯಾದರೂ ಒಂದು ಕಡೆ ಗೈಡ್‌ಲೈನ್ಸ್ ಕೊಡಬೇಕು. ಅದರ ಬಗ್ಗೆ ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಯಾರಿಗೂ BPL ಕಾರ್ಡ್ ತೋರಿಸಿ ಕನೆಕ್ಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಮಗೆ ಒಂದು ತಾಲ್ಲೂಕನ್ನು ಕೊಟ್ಟಿದ್ದೀರಿ. 2 ರಿಂದ 3 ಸಾವಿರಕ್ಕೆ ಕನೆಕ್ಷನ್ ಕೊಡುವ ಅವಕಾಶವನ್ನು ಕೊಟ್ಟರೂ ಕೂಡ identification is very big task. BPL ದವರು almost all ಕವರಾಗಿ ಬಿಟ್ಟಿದ್ದಾರೆ. ಅದನ್ನು ತೆಗೆದು ಹಾಕಿ. ಬಡವರಿಗೆ ಕೊಡಿ ಎಂದು ಹೇಳಿ, ಒಂದು ಲೈಟ್ ಇರುವಂಥವನಿಗೆ ಕೊಡಿ ಎಂದು ಹೇಳಿ. Not more than a light ಕೊಡುತ್ತೇವೆ ಎಂದು ನೀವು ಹೇಳುವಾಗ BPL ಏಕೆ ಇನ್‌ಸಿಸ್ಟ್ ಮಾಡುತ್ತಿದ್ದೀರಿ? How will you progress in this? ಒಂದು ಮಾತು ತಾವು ಹೇಳಿದ ಮೇಲೆ BPL ಕಾರ್ಡ್ ಏಕೆ insist ಮಾಡುತ್ತಿದ್ದೀರಿ. ನಿಮಗೆ ಏನು progress ಸಿಗುತ್ತದೆ. ಏನು ಈ ಕಾರ್ಯಕ್ರಮ ನಿನ್ನೆ start ಆಗಿದೆಯಾ ರಾಜ್ಯದಲ್ಲಿ ಈ ಭಾಗ್ಯಜ್ಯೋತಿ ಸ್ಕೀಮ್? ತಾವು ಆ ನಿಬಂಧನೆಯನ್ನು ತೆಗೆದು ಹಾಕಬೇಕು. ಬಡವರು ಇರುವುದನ್ನು ಗುರುತು ಮಾಡಿಕೊಡಿ. ಒಂದು ಲೈಟ್‌ಗೆ ಮಾತ್ರ ತಾವು ಅವಕಾಶವನ್ನು ಮಾಡಿ ಒಂದು ಆದೇಶವನ್ನು ಕೊಟ್ಟರೆ ಮಾತ್ರ ಆ ಕಾರ್ಯಕ್ರಮವಾಗುತ್ತದೆ. ಅದನ್ನು ಬಿಟ್ಟರೆ BPL ಇರುವವರಿಗೆ ಮಾತ್ರ ಕೊಡಿ ಎಂದರೆ 90% ಆ ಕಾರ್ಯಕ್ರಮ ವಿಫಲವಾಗುತ್ತದೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಮನೆಗಳನ್ನು ಇನ್ನೂ ಕೊಡುತ್ತಿಲ್ಲ. ಆಶ್ರಯ ಮನೆಗಳಿಗೆ ನೀವು ಇನ್ನು ದುಡ್ಡನ್ನು ಕೊಡುತ್ತಿಲ್ಲ. ಅಂಬೇಡ್ಕರ ಮನೆ, ಇಂದಿರಾ ಆವಾಜ್ ಮನೆಗಳ ದುಡ್ಡು ಬಾಕಿ ಇದೆ. ಇದನ್ನು ನೀವು ಎಲ್ಲಿಯಾದರೂ ಹೇಳಬೇಕಲ್ಲಾ? Contingency fund ನಿಂದ ನೀವು ಅಮೌಂಟ್ ಡ್ರಾ ಮಾಡಿದರೆ ಅದರ ಪೂರ್ಣ ಡಿಟೇಲ್ಸ್‌ನ್ನು ಅಸೆಂಬ್ಲಿ ಮುಂದೆ ಕೊಡಬೇಕು. ಅದು statutory requirement ಅಭಿಯಾನದಲ್ಲಿ ದುಡ್ಡು ಸಾಕಾಗಲಿಲ್ಲ. ಅದಕ್ಕೆ ಕೊಡುತ್ತಿದ್ದೇವೆ. ಅದರಲ್ಲಿಯೂ ನಿಮ್ಮ finance department ನವರು ಯಾವುದೇ excess expenditure ಗೆ extra demand ಗೆ detailsನ್ನು ಒದಗಿಸಿಲ್ಲ. ಬೇರೆ ಇಲಾಖೆಯವರು ಏತಕ್ಕೆ ಹಣವನ್ನು ಕೇಳುತ್ತಿದ್ದೇವೆಂದು ಹೇಳಿದ್ದಾರೆ. ನಿಮ್ಮ ಕೆಳಗಡೆ ಇರುವ finance ನವರು ಯಾವುದೇ ಒಂದು ಬಾಬತ್ತಿನಲ್ಲಿ ಅಭಿಯಾಚನೆ ಸಾಲಲಿಲ್ಲ ಹಾಗೂ ಅನುದಾನ ಸಾಲಲಿಲ್ಲ. ಏನು ಸ್ಕೀಮ್ ಮಾಡುವುದಕ್ಕೆ ಹೊರಟಿದ್ದೀರಿ? ಏನು ಸಬ್ಸಿಡಿ ಅದು? ನಮಗೆ ಪೂರಕವಾದ ಏನೂ materials ಇಲ್ಲಿ ಇಲ್ಲ. ಬೆಂಗಳೂರಿನಿಂದ ಬಂದು ಇಲ್ಲಿ Assembly ನಡೆಸುತ್ತಿದ್ದೇವೆ. ಏನಕ್ಕೆ ಕೇಳುತ್ತಿದ್ದೀರಿ Department of Finance ಎಂದು ಕೇಳಬೇಕಾಗುತ್ತದೆ. ಆ ಕಡೆ ತಾವು ಗಮನವನ್ನು ಕೊಡಬೇಕೆಂದು ಹೇಳಿ ಈ Personnel administration ದಲ್ಲಿ ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದನ್ನು ತಾವು ಏನಾದರೂ ಹಿಡಿತಕ್ಕೆ ತರಲೇಬೇಕು. ಎಲ್ಲಿಯವರೆಗೆ ನೀವು ಆಫೀಸರ್ಸ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸವನ್ನು ಮಾಡಿಕೊಂಡು ಹೋಗುತ್ತೀರಿ ಎಂಬುದು ನನಗೆ ಗೊತ್ತಿಲ್ಲ. ಜಡ್ಜ್‌ಗಳಿಗೆ ಕೊಟ್ಟಿದ್ದೀರಿ, ಆಫೀಸರ್ಸ್‌ಗೆ

ಕೊಟ್ಟಿದ್ದೀರಿ. ಅವರಿಗೆ ಕೊಡುವುದು ಬೇಡವಾ ಅವರು ಕೆಲಸ ಮಾಡುವುದು ಬೇಡವಾ? ಯಾರಿಗಾದರೂ ಇವತ್ತು ಕೊರತೆ ಇದೆಯಾ? ನಾನು ಒಂದು ದುರಂತವನ್ನು ಹೇಳುತ್ತಿದ್ದೆ. ನಾಳೆ ಏನಾದರೂ ನೀವು Pay Commission appoint ಮಾಡಿದರೆ ಆ ವರದಿಗೆ ನೀವು ಎಲ್ಲಿಂದ ಹಣವನ್ನು ತರುತ್ತೀರಿ. Minimum 5% hike ಕೊಟ್ಟರೆ ನೀವು ಎಷ್ಟು ಹಣವನ್ನು ಕೊಡಬೇಕಾಗುತ್ತದೆ? State Pay Commission ಏನು ಅಪಾಯಿಂಟ್ ಆಗಿದೆ. ಬರೀ 5% ಜಾಸ್ತಿ ಮಾಡಬೇಕೆಂದರೂ ನಿಮ್ಮ ಎಕ್ಸ್‌ಚೆಕ್ಕರ್ ಗತಿ ಏನು? ಎಲ್ಲಿ ಹೋಗಿ ನಿಲ್ಲುತ್ತದೆ ನಿಮ್ಮ ರಾಜ್ಯ? ತಾವೇ ಆಲೋಚನೆಯನ್ನು ಮಾಡಬೇಕಾಗುತ್ತದೆ. ಈ ಕಡೆ ಹೆಚ್ಚು ಆಲೋಚನೆಯನ್ನು ಮಾಡಿಬಿಟ್ಟರೆ ನಿಜವಾಗಲೂ ಒಳ್ಳೆಯ ಹಣಕಾಸಿನ ಸಚಿವರು ಆಗುತ್ತೀರಿ ಎಂದು ಹೇಳುತ್ತಾ, ದೆಹಲಿ ಬಗ್ಗೆ reconsider ಮಾಡಬೇಕೆಂದು ಹೇಳುತ್ತೇನೆ. 20 ಕೋಟಿ ರೂ.ಗಳು ಭಾರತೀಯ ರಿಸರ್ವ್ ಬ್ಯಾಂಕ್ 96 ವಸತಿ ಸಮುಚ್ಛಯಗಳ ಕಟ್ಟಡಗಳ ಖರೀದಿಗಾಗಿ ಸಾದಿಲ್ವಾರು ನಿಧಿಯಿಂದ contingency fund ದಿಂದ ಕೊಡುತ್ತಿದ್ದೀರಿ. ದೆಹಲಿಯಲ್ಲಿ ಇರುವವರಿಗೆ ಇದು ಬೇಕಾ? ಇದರ ಬಗ್ಗೆ ತಾವು ಹೇಳಿ. ದೆಹಲಿ ರೇಟ್‌ಗೆ ನೀವು ಹಾಕುವ ದುಡ್ಡಿನ ರೇಟ್ ಏನಾಗುತ್ತದೆ ಹೇಳಿ. ಹಾಗಾದರೆ ಬೆಂಗಳೂರಿನಲ್ಲಿ ಎಲ್ಲಾ MLA ಗಳಿಗೆ ಬೆಂಗಳೂರಿನಲ್ಲಿ ಒಂದೊಂದು ಮನೆಗಳನ್ನು ಕೊಟ್ಟು ಬಿಡಿ. ಎಲ್ಲಾ ಆಫೀಸರ್‌ಗಳಿಗೆ ಒಂದೊಂದು ಮನೆಗಳನ್ನು ಕೊಟ್ಟು ಬಿಡಿ. ದೆಹಲಿಯಲ್ಲಿರುವವರಿಗೆ ನೀವು ಮನೆಗಳು ಬೇಕು ಎಂದು ಹೇಳುತ್ತೀರಿ. ನಿಮ್ಮ ಬೆಂಗಳೂರಿನಲ್ಲಿರುವ ಅಧಿಕಾರಿಗಳ ವಸತಿ ಸ್ಥಿತಿ ಗೊತ್ತೇ? 14 ಅಥವಾ 15 P.W.D. Quarters ಗಳು ಖಾಲಿ ಇದ್ದರೆ 6 ಸಾವಿರ ಅಪ್ಲಿಕೇಶನ್‌ಗಳು ಇವೆ. ಇಡೀ ಬೆಂಗಳೂರಿನಲ್ಲಿ ವಾಸ ಮಾಡತಕ್ಕಂಥ ಸರ್ಕಾರಿ ವಸತಿ ಗೃಹ available ಇಲ್ಲ. ಅಲ್ಲಿರುವ 70 ರಿಂದ 80 ಜನರ ಸಲುವಾಗಿ 90 Quarters ಗಳನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. Whether this is required? ಇದನ್ನು ನೀವು ಒಪ್ಪುತ್ತೀರಾ? ತಾವೇ ಇದನ್ನು ಮರು ಪರಿಶೀಲನೆ ಮಾಡಬೇಕೆಂದು ಹೇಳಿ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜಲಸಂಪನ್ಮೂಲಕ್ಕೆ ಅದರಲ್ಲೂ ಕಾವೇರಿ ಜಲಾನಯನ ಪ್ರದೇಶಕ್ಕೆ ಸಣ್ಣ ನೀರಾವರಿ ಕೆರೆಗಳಿಗೆ, ನೀವು ನೀರು ಏನಾದರೂ ಕೊಡಲಿಕ್ಕೆ ತಾವು ಹಣವನ್ನು ಇಡಬೇಕು. ಇದರ ಬಗ್ಗೆ ತಾವು ಅನೇಕ ಸಲ ನಮ್ಮ ಜೊತೆಯಲ್ಲಿ ಮಾತನಾಡಿದ್ದೀರಿ. ಬರಗಾಲವನ್ನು ಶಾಶ್ವತವಾಗಿ ಪರಿಹಾರ ಮಾಡಬೇಕಾದರೆ ಹೇಗಾದರೂ ಮಾಡಿ ಅಲ್ಲಿರುವ ಕೆರೆಗಳಲ್ಲಿ ನೀರನ್ನು ತುಂಬಿಸಬೇಕು. ಭೂಗರ್ಭದಲ್ಲಿರುವ ಜಲವನ್ನು ಹೆಚ್ಚು ಮಾಡಬೇಕು. ಈ ಕಡೆ ಹೆಚ್ಚಿನ ಆಸಕ್ತಿಯನ್ನು ತೋರಿಸಬೇಕೆಂದು ಹೇಳಿ. ಪ್ರತಿ ವರ್ಷ ಬರಗಾಲ ಪರಿಹಾರಕ್ಕಾಗಿ ಹಣ ಖರ್ಚು ಮಾಡಿಕೊಂಡು ಹೋಗುತ್ತೀರಾ. ಪ್ರತಿ ವರ್ಷ ಬೋರ್‌ವೆಲ್‌ನ್ನು ಕೊರೆಯುವುದಕ್ಕೆ ನೀವು ಹಣವನ್ನು ಕೊಟ್ಟುಕೊಂಡು ಹೋಗುತ್ತೀರಾ? ಪ್ರತಿ ವರ್ಷ ನಾವು ಹೊಸ ಪಂಪ್‌ಸೆಟ್‌ನ್ನು ಬಿಡಬೇಕಾ? ಪ್ರತಿ ವರ್ಷ ಕೆ.ಇ.ಬಿ. ಹೊಸ ಸರ್ವೀಸ್‌ನ್ನು ತೆಗೆದುಕೊಳ್ಳಬೇಕಾ? ರೀಚಾರ್ಜ್ ಮಾಡಬೇಕೆನ್ನುವ ಕಲ್ಪನೆ ಈ ಸರ್ಕಾರಕ್ಕೆ ಬರುವುದು ಬೇಡವಾ?

7.30 ಗಂಟೆಗೆ

ನಾನು ತಮಗೆ ಕೇಳುತ್ತೇನೆ. ಎಲ್ಲೆಲ್ಲಿ ಸಾಧ್ಯ ಲಿಸ್ಟ್ ಹಾಕಿ ಏನೂ ತಪ್ಪಿಲ್ಲ. ಕೆರೆಗಳನ್ನು ತುಂಬಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕಾಗಿತ್ತು. ಆದರೆ ಕಾರ್ಯಕ್ರಮ ನಿಶೇಷವಾಗಿದೆ. ಇಡೀ ಕಾವೇರಿ ಜಲಾನಯನ ಪ್ರದೇಶ ಒಂದು ರೂಪಾಯಿ ಕೆಲಸ ಇಲ್ಲದೆ ಸ್ಥಗಿತವಾಗಿದೆ. ತಾವು ಸ್ವಲ್ಪ ಆ ಕಡೆ ಆಲೋಚನೆಯನ್ನು ಮಾಡಬೇಕು. ಇವತ್ತು ಏನು ನೀವು ಜಲಸಂಪನ್ಮೂಲವೆಂದು ಹೇಳುತ್ತಿದ್ದೀರಿ. ಅಲ್ಲಿ ಏನು ಕೆಲಸವಾಗುತ್ತಿದೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನಾನು M.D. ಯವರಿಗೆ ಕೇಳಿದೆ. ನಾನು ಏನು ಮಾಡಲಿ ಫಂಡ್ ಇಲ್ಲವೆಂದು ಹೇಳಿದರು. ಇಂತಹ ಸ್ಥಿತಿಯಲ್ಲಿಟ್ಟು ಗ್ರಾಮೀಣ ಪ್ರದೇಶದ ಭಾಗಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗುವುದಿಲ್ಲವೆಂದು ಹೇಳಿ ಈ ಸಪ್ಲಿಮೆಂಟರಿ ಡಿಮಾಂಡ್ ಏನಿದೆ, ಇದನ್ನು ತಾವು ಕಡಿಮೆ ಮಾಡುತ್ತಾ ಹೋಗಬೇಕು. 1400 ಕೋಟಿ ರೂ.ಗಳನ್ನು ಕೊಡುವುದು. 1500 ಕೋಟಿ ರೂ.ಗಳನ್ನು ಸಪ್ಲಿಮೆಂಟರಿ ಡಿಮಾಂಡ್‌ನಲ್ಲಿ ಸೇರಿಸುವುದು ಯಾವುದೇ ಘನತೆವೆತ್ತ ಸರ್ಕಾರಕ್ಕೆ ಗೌರವ ತರುವುದಿಲ್ಲವೆಂದು ಹೇಳಿ. ನಾನು ತಮಗೆ ಸ್ಪಷ್ಟವಾಗಿ ಕೇಳುವುದು, ಶಾಸಕರಿಗೆ ಲ್ಯಾಪ್‌ಟಾಪ್ ಕೊಡುತ್ತೇವೆಂದು ಹೇಳಿರುತ್ತೀರಿ. ಇದನ್ನು ಯಾರು ಕೇಳಿದ್ದು ಅಂತ?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಲ್ಯಾಪ್‌ಟಾಪ್ ನಾವು ಕೇಳಿದ್ದು ಅಲ್ಲ. ಮಾನ್ಯ ರಾಷ್ಟ್ರಪತಿಗಳು ಬಂದಾಗ ಅಂದಿನ ವಿಧಾನ ಪರಿಷತ್ತಿನ ಛೇರ್ಮನ್‌ರು announce ಮಾಡಿದ್ದು. ನಾನು ಹೇಳುವುದು ಕೊಡುತ್ತೇವೆಂದರೆ ಮಾತ್ರ ಕೊಡಿ ಎಂದು ಹೇಳಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರಿ. ಇಷ್ಟು ಮಾತುಗಳನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಸರ್ ಒಂದು ನಿಮಿಷ. ಲ್ಯಾಪ್‌ಟಾಪ್ ಬಗ್ಗೆ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ದಯಮಾಡಿ ಬೇಡ ಸರ್. ಅದರ ಬಗ್ಗೆ ತೀರ್ಮಾನವಾಗಿದೆ ಕುಳಿತುಕೊಳ್ಳಿ ಸರ್. ಕಾಂಟ್ರವರ್ಸಿಯಾಗುವುದು ಬೇಡ. ದಯವಿಟ್ಟು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇದು supplementary budget ಏನಿದೆ ಹೋದ ಸಲ supplementary budget ಅನ್ನು place ಮಾಡಿದಾಗಲೇ ನಾನು ಹೇಳಿದ್ದೆ. Supplementary budget ಬಗ್ಗೆ ಯಾವುದೇ ಸರ್ಕಾರ ಮಂಡಿಸಿದರೂ ಕೂಡ ಅದರ ಅರ್ಥ ಏನೆಂದರೆ, it is an unplanned budget ಎಂದು ಅದನ್ನು ನೀವೇ ಒಪ್ಪಿದ್ದೀರಿ. ಯೋಜನೇತರಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ತಾವು ಕೇಳಿದ್ದೀರಿ? Non-plan ಗೆ ಹಣವನ್ನು ನೀವು ಕೇಳಿದ್ದೀರೆಂದರೆ ನಿಮ್ಮ ಹತ್ತಿರ ಯೋಜನೆ ಇಲ್ಲ ಎಂದು ಅರ್ಥ. ಯಾವುದಾದರೂ minimum financial discipline ಇರತಕ್ಕಂತಹ ಒಂದು ಸರ್ಕಾರ ಅಥವಾ ಒಂದು minimum economic programme ಬಗ್ಗೆ ಬದ್ಧತೆ ಇರುವಂತಹ ಒಂದು ಸರ್ಕಾರ ಈ ಬಜೆಟ್ ಮಂಡಿಸುವಂತಹ ಸಂದರ್ಭದಲ್ಲಿ ಒಂದು vision ಇಟ್ಟುಕೊಳ್ಳಬೇಕು. ಈ ವರ್ಷದಲ್ಲಿ ನಾವು

ಇಷ್ಟು ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು. ಇದಕ್ಕೆ ಇಷ್ಟು ಹಣ ಬೇಕು ಎಂದು ಹೇಳುವಂತಹ ಒಂದು minimum vision ಇರಬೇಕು. ಆ vision ಇಲ್ಲದೇ ಇರುವಂತಹ ಸರ್ಕಾರ ಏನಾಗುತ್ತದೆಂದು ಹೇಳಿದರೆ, ಬೇಕಾಬಿಟ್ಟಿಯಾಗಿ ತನಗೆ ಮನಸೋ ಇಚ್ಛೆ ರೀತಿಯಲ್ಲಿ ಹಣ ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡಿ financial indiscipline ಪ್ರಾರಂಭವಾಗುತ್ತದೆ. ಇವತ್ತು supplementary budget ಇದರ ಅರ್ಥ ಏನು? ನೀವು plan ಮಾಡದೇ ಇರತಕ್ಕಂಥದ್ದು ಅದಕ್ಕೋಸ್ಕರ non-plan budget ಗೆ ಹಣ ಬೇಕೆಂದು ಹೇಳುತ್ತಿರುವುದು. ಇದು ಗೌರವ ತರುವಂತಹ ವಿಚಾರವೇ? ಹೌದು, ಕೆಲವು ಇರುತ್ತದೆ. ಯಾವುದು? ಕೆಲವು unforeseen developments ಬಂದಂತಹ ಸಂದರ್ಭದಲ್ಲಿ ಅಂದರೆ natural calamities ಆಗಬಹುದು, unforeseen ವಿಚಾರಗಳು ಬರುತ್ತದೆ. ಅದಕ್ಕಾಗಿ ನಾವು natural ಆಗಿ ಹಣ ಖರ್ಚು ಮಾಡಬೇಕಾಗುತ್ತದೆ. ಅಥವಾ ತುರ್ತಾಗಿ ಏನಾದರೂ ನಾವು ಮಾಡಬೇಕಾದಂತಹ ಸಂದರ್ಭದಲ್ಲಿ ಬೆಳಗಾಂನಲ್ಲಿ ಅಧಿವೇಶನ ಕರೆಯಬೇಕೆಂದು ತುರ್ತು ತೀರ್ಮಾನ ಮಾಡಿದಿರಿ. ಇದಕ್ಕೆ ಹಣಬೇಕು ಅಂತಹದರಲ್ಲಿ ಏನು ಸಮಸ್ಯೆಯಾಗುವುದಿಲ್ಲ. ನಾನು ಒಂದು ಉದಾಹರಣೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೊಡುತ್ತೇನೆ. ಬಡ ಹೆಣ್ಣು ಮಕ್ಕಳಿಗೆ ಸೈಕಲ್ ಕೊಡತಕ್ಕಂತಹ ಕಾರ್ಯಕ್ರಮ, ಬಜೆಟ್‌ನ್ನು ಮಂಡಿಸುವಂತಹ ಸಂದರ್ಭದಲ್ಲಿ ನೀವು ಆಶ್ವಾಸನೆಯನ್ನು ಕೊಟ್ಟು ಬಜೆಟ್‌ನಲ್ಲಿ ಹೇಳಿದ್ದೀರಿ. ಬಡ ಹೆಣ್ಣು ಮಕ್ಕಳಿಗೆ ಸೈಕಲ್‌ನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ನಾನು ರೂಪಿಸುತ್ತಿದ್ದೇನೆ. ನೀವು ಮತ್ತೆ ಏತಕ್ಕಾಗಿ supplementary budget ನಲ್ಲಿ ಅದನ್ನು ತೆಗೆದುಕೊಂಡು ಬಂದಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಅದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿತ್ತು. ಅಲ್ಲಿಂದ ಇದನ್ನು ಶಿಕ್ಷಣ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ. ಅದು ಬುಕ್ ಅಡ್ಜೆಸ್ಟ್‌ಮೆಂಟ್. ಅದು ನಮ್ಮ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಅಡ್ಜೆಸ್ಟ್‌ಮೆಂಟ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಬಜೆಟ್ ಅನ್ನು ಮಂಡಿಸುವಾಗಲೇ ಸೈಕಲ್ ಅನ್ನು ಕೊಡುತ್ತೇನೆಂದು ಹೇಳಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಲೂ ಅದೇ ಹಣವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಶಿಕ್ಷಣ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆದರೆ ಅದು ಬೇರೆ ಪ್ರಶ್ನೆ. ನಾನು ಒಂದು ಉದಾಹರಣೆಯನ್ನು ಮಾತ್ರ ಹೇಳಿದ್ದು. ಅದೇ ರೀತಿಯಲ್ಲಿ ಹಲವಾರು ಖರ್ಚುಗಳನ್ನು ತೆಗೆದುಕೊಂಡು ಬಂದಿದ್ದೀರಿ. ಕೆಲವು ವಾಸ್ತವಿಕವಾಗಿ ಯಾವುದಕ್ಕೆ ಹಣವನ್ನು ಕೊಡಬೇಕಾಗಿತ್ತೋ ಅದಕ್ಕೆ ಹಣವನ್ನೇ ಕೊಟ್ಟಿಲ್ಲ. ಬಯಲು ಸೀಮೆಗೆ ಇಪ್ಪತ್ತು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು

ಹೇಳಿದ್ದೀರಿ. ಅದಕ್ಕೆ ಇಪ್ಪತ್ತು ಲಕ್ಷ ರೂ. ಕೂಡ ಕೊಟ್ಟಿಲ್ಲ. ಮೊನ್ನೆ ಮೀಟಿಂಗ್ ಮಾಡಿ ಎಷ್ಟಿದೆ ಹಣವೆಂದು ಕೇಳಿದರೆ, ಸಂಬಳವೆಲ್ಲಾ ಹೋಗಿ ಒಂದು ಕೋಟಿ ರೂಪಾಯಿಗಳು ಉಳಿಯುತ್ತದೆಂದು ಹೇಳುತ್ತಾರೆ. ಇನ್ನು ಎರಡನೆಯದಾಗಿ, ಗಡಿ ಪ್ರದೇಶಾಭಿವೃದ್ಧಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಹಿಂದಿನ ಸರ್ಕಾರಗಳು ಅಂದರೆ, 1994 ರಿಂದ ಇದ್ದಂಥ ಸರ್ಕಾರಗಳು ಒಂದೊಂದು ತಾಲ್ಲೂಕಿಗೆ ಒಂದೊಂದು ವರ್ಷಕ್ಕೆ ಕನಿಷ್ಠ 25 ರಿಂದ 30 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ನೀವು 75 ಸಾವಿರ ರೂಪಾಯಿಗಳು. 1 ಲಕ್ಷದ 50 ಸಾವಿರ ರೂಪಾಯಿಗಳನ್ನು ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದೀರಿ. ಆದರೆ ಗಡಿಪ್ರದೇಶವನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತೀರಿ? ನೀವು ಮಲೆನಾಡು ಅಭಿವೃದ್ಧಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಬಯಲು ಸೀಮೆಗೆ ಎಷ್ಟು ಹಣವನ್ನು ಇಟ್ಟಿದ್ದೀರಿ? Border Area Development ಗೆ ಎಷ್ಟು ಹಣವನ್ನು ಇಟ್ಟಿದ್ದಿರಿ? Hyderabad-Karnataka Development ಗೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಹೇಳಿ ಸಾರ್ ನೀವು? ಸಮತೋಲನದ ಬಗ್ಗೆ ಮಾತನಾಡುತ್ತೀರಿ. ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಮಾತನಾಡುತ್ತೀರಿ? ಎಲ್ಲದರ ಬಗ್ಗೆ ಮಾತನಾಡುತ್ತೀರಿ, ಬಯಲು ಸೀಮೆ ಅಭಿವೃದ್ಧಿಗೆ ಕರ್ನಾಟಕ ರಾಜ್ಯದಲ್ಲಿ 75 ತಾಲ್ಲೂಕುಗಳು ಬರುತ್ತದೆ. ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಮಲೆನಾಡು ಪ್ರದೇಶಾಭಿವೃದ್ಧಿಗೆ ಎಷ್ಟು ತಾಲ್ಲೂಕುಗಳು ಬರುತ್ತದೆ? ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಹೈದರಾಬಾದ್ ಕರ್ನಾಟಕಕ್ಕೆ ಎಷ್ಟು ತಾಲ್ಲೂಕುಗಳು ಬರುತ್ತದೆ? ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ನೀವು ಈ ತಾರತಮ್ಯವನ್ನು ಮಾಡಿ ಇವತ್ತು ಎಲ್ಲಾ ಸಮಾನಾಂತರ ಬೆಳವಣಿಗೆಯನ್ನು ಮಾಡುತ್ತೇವೆಂದು ಹಣವನ್ನು ಕೇಳುತ್ತಿದ್ದೀರಿ. ಸೋಶಿಯಲ್ ವೆಲ್‌ಫೇರ್ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು. ಮತ್ತೆ ನಾನು ಪುನರಾವರ್ತನೆಯನ್ನು ಮಾಡುವುದಿಲ್ಲ. ನಾನು ಒಂದೇ ಒಂದು ಮನವಿಯನ್ನು ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ಮಾಡಿಕೊಳ್ಳುತ್ತೇನೆ. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಇವಾಲ್ಯುವೇಶನ್ ಮಾಡಿ. ನೀವು ತೀರಾ ಹಿಂದಕ್ಕೆ ಹೋಗಬೇಡಿ. ಈ 10 ವರ್ಷಗಳಲ್ಲಿ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ನೀವು ಕೊಟ್ಟಿರುವ ಹಣವೆಷ್ಟು? ಆ ಹಣದಲ್ಲಿ ಎಷ್ಟು ಖರ್ಚಾಗಿದೆ? ಎಷ್ಟು ಖರ್ಚಾಗಿಲ್ಲ? ಎಷ್ಟು ಉಪಯೋಗವಾಗಿದೆ? ಎಷ್ಟು ದುರುಪಯೋಗವಾಗಿದೆ? ಯಾರಿಗೋಸ್ಕರ ಹಣ ಖರ್ಚು ಮಾಡಿದ್ದೀರಿ? ಅದು ನಿಜವಾದಂಥ ಫಲಾನುಭವಿಗಳಿಗೆ ಹೋಗಿದೆಯಾ ಅಥವಾ ಇಲ್ಲವೋ ಎಂಬ ಬಗ್ಗೆ ಒಂದು ಇವಾಲ್ಯುವೇಶನ್ ಮಾಡಿ ಬಿಡಿ. ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದರ ಬಗ್ಗೆ ಟೀಕೆ ಮಾಡಿದರೆ ಒಂದು ಕಷ್ಟ, ಟೀಕೆ ಮಾಡದೇ ಹೋದರೆ ಇನ್ನೊಂದು ಕಷ್ಟ. ನಿಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ. ಒಂದು ವೈಟ್ ಪೇಪರನ್ನು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಕೊಡಿ. ಹೌಸ್‌ಗೆ ಅದನ್ನು ಪ್ರೆಸೆಂಟ್ ಮಾಡಿ, 10 ವರ್ಷದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಎಷ್ಟು ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ? ಅದರ ರಿಯಲ್ ಬೆನಿಫಿಟ್

ಫಲಾನುಭವಿಗಳಿಗೆ ಏನಾದರೂ ಹೋಗಿದೆಯಾ? ಹೋಗಿದ್ದರೆ ಎಷ್ಟು ಹೋಗಿದೆ? ಎಲ್ಲೆಲ್ಲಿ ಏನಾಗಿದೆ ಹಣ? ಸೆಂಟ್ರಲ್ ಗೌರ್ನಮೆಂಟ್‌ನಿಂದ ಸಮಾಜ ಕಲ್ಯಾಣ ಇಲಾಖೆಗೆ ಎಷ್ಟು ಹಣ ಬಂದಿದೆ? ಅದರಲ್ಲಿ ಎಷ್ಟು ಖರ್ಚು ಮಾಡಿದಿರಿ? ನೀವು ಎಷ್ಟು ರಾಜ್ಯ ಸರ್ಕಾರದವರು ಖರ್ಚು ಮಾಡಿದ್ದೀರಿ? ಅದು ಎಷ್ಟು ಖರ್ಚಾಗಿದೆ? ಆ ಬಡ ಮಕ್ಕಳಿಗೆ ಮಿಡಲ್ ಕ್ಲಾಸ್ ಸ್ಕೂಲ್ ಮಕ್ಕಳಿಗೆ ಎಷ್ಟು ಹಣ ಹೋಗಿದೆ ಎನ್ನುವ ಬಗ್ಗೆ ಒಂದು ವೈಟ್ ಪೇಪರನ್ನು ಪ್ರೆಸೆಂಟ್ ಮಾಡಿ. ಅಷ್ಟೇ ಸಾಕು, ಬೇರೆ ಏನು ಹೇಳಬೇಡಿ. ವೈಟ್ ಪೇಪರನ್ನು ಕೊಟ್ಟರೆ ಅದರ ಬಂಡವಾಳ ಏನು ಎನ್ನುವುದು ಗೊತ್ತಾಗಿ ಬಿಡುತ್ತದೆ. ಬಹಳ ನೋವಿನಿಂದ ನಾನು ಹೇಳಬೇಕಾಗುತ್ತದೆ. ನಿನ್ನೆ ನಾನು ಒಂದು ಪತ್ರಿಕೆಯಲ್ಲಿ ಓದಿದೆ. ಅದೇನೆಂದರೆ 'Fastest growing India' ಯಾವುದರಲ್ಲಿ ಎಂದು ಹೇಳಿದರೆ, ಮಿಲಿಯನೇರ್ಸ್ ಅನ್ನು ತಯಾರು ಮಾಡುವುದರಲ್ಲಿ ಭಾರಿ ಫಾಸ್ಟ್ ಆಗುತ್ತಿದೆ ಇಂಡಿಯಾ ದೇಶ. ಅಂದರೆ ಬಡವರನ್ನು ಹೆಚ್ಚು ಮಾಡುತ್ತಾರೆಂದು ಹೇಳುತ್ತಿಲ್ಲ. ಮಿಲಿಯನೇರ್ಸ್ ಅನ್ನು ಜಾಸ್ತಿ ಮಾಡುತ್ತಿದ್ದಾರೆ. ಇರಲಿ, ಅದಕ್ಕೆ ಮಿಲಿಯನೇರ್ಸ್ ಅನ್ನು ಹೆಚ್ಚು ಮಾಡುವಂಥ fastest growth Country ಯ ರಸ್ತೆಗಳ ಪರಿಸ್ಥಿತಿಯನ್ನು ನೋಡಿ ನೀವು. ಬೆಂಗಳೂರಿನಿಂದ ಬೆಳಗಾಂ 510 ಕಿ.ಮೀ. ಇದೆ. ಟು ವೀಲರ್ ವಾಹನದಲ್ಲಿ ಎಷ್ಟು ಗಂಟೆಗಳ ಕಾಲ ಪ್ರಯಾಣ ಮಾಡುತ್ತೇವೆಂದು ನೀವು ಲೆಕ್ಕವನ್ನು ತೆಗೆದುಕೊಳ್ಳಿ. ಎಷ್ಟು ಮ್ಯಾನ್ ಪವರ್ ಎಷ್ಟು ಎನರ್ಜಿ ಎಷ್ಟು ಟೈಮ್ ವೇಸ್ಟಾಗುತ್ತದೆ. ಕೇವಲ 510 ಕಿ.ಮೀ. ದೂರ ಬರಲಿಕ್ಕೆ ಎನ್ನುವುದರ ಬಗ್ಗೆ ಒಂದು ಅಂದಾಜು ಮಾಡಿ ನೋಡಿ. ನಾವು ಎಲ್ಲಿ failure ಆಗಿದ್ದೇವೆಂದು ಹೇಳಿದರೆ ಇಂಡಿಯಾ ದೇಶ failure ಆಗಿರುವುದು ಎಲ್ಲಿ ಎಂದರೆ ರಸ್ತೆಗಳಲ್ಲಿ, ನಿಮಗೆ ನಾನು ಒಂದು ಜ್ಞಾಪಕ ಮಾಡಿ ಕೊಡುತ್ತೇನೆ. 1964ನೇ ಇಸವಿಯಲ್ಲಿ ಚೈನಾ ಮತ್ತು ಇಂಡಿಯಾ ದೇಶದ ಯುದ್ಧ ನಡೆಯಿತು. ಆಗ ಚೌಎನ್‌ಲಾಯ್ ಅವರು ಒಂದು ಮಾತನ್ನು ಹೇಳಿದರು. If any Country wants to win the war, the only reason is the roads. Because that roads have to reach the remotest places. ಅದಕ್ಕೋಸ್ಕರ ಯುದ್ಧ ಗೆಲ್ಲುವುದಕ್ಕೆ ಸಾಧ್ಯವಾಗುವುದು. ನಮ್ಮ ದೇಶದಲ್ಲಿ ಯುದ್ಧವನ್ನು ಗೆಲ್ಲುವುದು ಬಿಡಿ. ನಾವು ಓಡಾಡುತ್ತೇವಲ್ಲಾ ರಸ್ತೆಗಳು, 500 ಕಿ.ಮೀ.ಗೆ 8 ರಿಂದ 10 ಗಂಟೆಗಳ ಕಾಲ ಜರ್ನಿ ಮಾಡುತ್ತೇವೆ. ಎಷ್ಟು manpower waste, ಎಷ್ಟು energy weste ಎಷ್ಟು time waste ಅದರ ಬಗ್ಗೆ ಲೆಕ್ಕ ಹಾಕಿ, ಮಾನ್ಯ ಸುಬ್ರಮಣ್ಯ ನಾಯ್ಡುರವರಿಗೆ ಲೆಕ್ಕ ಹಾಕುವುದು ಚೆನ್ನಾಗಿ ಗೊತ್ತು. ನೀವು ಅವರನ್ನು ಕೇಳಿ ಅವರು ಲೆಕ್ಕವನ್ನು ಕೊಡುತ್ತಾರೆ. ಅಂದರೆ ಇಷ್ಟು manpower, ಇಷ್ಟು energy ಇಷ್ಟು time waste ಮಾಡಿಕೊಂಡು ನಾವು ಈ ರಾಜ್ಯವನ್ನು ಏನು ಅಭಿವೃದ್ಧಿ ಮಾಡುತ್ತೇವೆ? ಹೇಳಿ.

ಶ್ರೀ ಎಸ್. ರಾಜೇಂದ್ರನ್ : ಫಾಸ್ಟ್ ಆಗಿ ಹೋಗಿ accident ಏನೂ ಆಗಬಾರದು, ಮೆತ್ತಗೆ slow ಆಗಿ 8 hour ನಲ್ಲಿ ಹೋಗಬೇಕು ಎಂದು ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮತ್ತು ರಾಜೇಂದ್ರನ್‌ರವರು ಚೈನಾದೇಶಕ್ಕೆ ಹೋಗಿದ್ದೆವು. 470 ಕಿ.ಮೀ.ನ್ನು 3 ಗಂಟೆಯಲ್ಲಿ ಅವನು ಕರೆದುಕೊಂಡು ಹೋಗಿದ್ದಾನೆ. 470 Kms, in only three hours. ನಾವು ಬೆಂಗಳೂರಿನಿಂದ ಬೆಳಗಾಂಗೆ ಬರುವುದಕ್ಕೆ ಇಷ್ಟು ಕಷ್ಟವಾದರೆ ನಾವು ಏನು ಅಭಿವೃದ್ಧಿ ಮಾಡುತ್ತೇವೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬೆಂಗಳೂರಿನಿಂದ ಬೆಳಗಾಂಗೆ ಬರುವುದಕ್ಕೆ ಕಷ್ಟವಾದರೆ ಒಂದು ಸಲ ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡ ಮತ್ತು ಸಕಲೇಶಪುರದ ಕಡೆಗೆ ಬರಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಚಾರ್ಮಡಿ ಘಾಟ್ ರಸ್ತೆ ಹೇಗಿದೆ ಸಾರ್? ಶಿರಾಡಿಘಾಟ್ ರಸ್ತೆ, ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಬೇಕು. ಮಂಗಳೂರು ಬಾರಿ commercially viable ಆಗಿರುವಂತಹ ಸಿಟಿ ಅದು. Costal belt ನ್ನು link ಮಾಡುವಂತಹದ್ದು. ಶಿರಾಡಿಘಾಟ್‌ನಲ್ಲಿ 40–50 ವರ್ಷಗಳಿಂದ ಅಲ್ಲಿ accident ನಿಂದ ಎಷ್ಟು ಸಾವಿರ ಜನರು ಸತ್ತಿದ್ದಾರೆಂಬುದನ್ನು ಲೆಕ್ಕ ಹಾಕಿ ನೋಡಿ. ಇಷ್ಟು ಸಾವಿರ ಜನರು ಸತ್ತರೂ ಕೂಡ ಅಲ್ಲಿಯ ರಸ್ತೆಯನ್ನು ಸರಿಯಾದಂತಹ ರಸ್ತೆಯನ್ನು ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ನೀವು ಎಷ್ಟು ಸಾವಿರ ಕೋಟಿ ರೂ.ಗಳನ್ನು ರಸ್ತೆಗಾಗಿ ಖರ್ಚು ಮಾಡಿದ್ದೀರಿ? ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ನೀವು ಭಾಷಣ ಮಾಡುತ್ತೀರಿ, ನೀವು ರಸ್ತೆಗಳಿಗಾಗಿ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೀರಿ ಎಂಬುದನ್ನು ಹೇಳಬೇಕು. ಈಗ PWD ಯವರು ಹಣವನ್ನು ಕೇಳಿದ್ದಾರೆ.

PWD ಯವರು 98.00 ಕೋಟಿ ರೂ.ಗಳನ್ನು ಕೆ.ಆರ್.ಡಿ.ಸಿ.ಎಲ್. ನವರು ಕೇಳಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳೇ ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ರಸ್ತೆಗಳು ಮತ್ತು ಸೇತುವೆಗಳ ಬಗ್ಗೆ ನೀವು ಒಂದು information ತೆಗೆದುಕೊಳ್ಳಿ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಯೋಗ್ಯವಾಗಿರುವಂಥ ರಸ್ತೆಗಳು ಎಷ್ಟು? ಮೋಟರಬಲ್ ರಸ್ತೆಗಳು, ಮತ್ತೆ ಸೇತುವೆಗಳು ಎಷ್ಟು? ನಮಗೆ ಆಶ್ಚರ್ಯವಾಗುತ್ತದೆ, ಇಷ್ಟು ವರ್ಷಗಳಾದರೂ ನಮ್ಮ ಇಂಜಿನಿಯರ್‌ಗೆ ಒಂದು ರಸ್ತೆ ಹೇಗಿರಬೇಕು ಎಂಬ concept develop ಆಗಿಲ್ಲ. ಹಾಗಾಗಿ ನೀವು ಇವತ್ತು ಏನು ಮಾಡುತ್ತಿದ್ದೀರಿ? PWD ಯವರು ಚಿಪ್‌ಕಾರ್ಪೆಟ್‌ಗೆ ಹಣವನ್ನು ಕೊಡುತ್ತಾರೆ. ಅವರು ಕೊಡತಕ್ಕಂಥ ರೇಟ್‌ಗೆ ಚಿಪ್‌ಕಾರ್ಪೆಟ್ 6 ತಿಂಗಳು ಇದ್ದು ನಂತರ ಹಾಳಾಗಿ ಹೋಗುತ್ತದೆ, ಮತ್ತೆ ದುಡ್ಡು ಕೊಡುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜು : ಸರ್, ನೀವು ಬೇಡಿಕೆಗಳ ಮೇಲೆ ಚರ್ಚೆ ಮಾಡುತ್ತಿದ್ದೀರಾ ಹೇಗೆ? ಮೂಲಭೂತವಾಗಿ ಪೂರಕ ಅಂದಾಜುಗಳಲ್ಲಿ ಏನು ನ್ಯೂನತೆ ಇದೆ, ಏನು ಸಲಹೆ ಕೊಡಬಹುದು ಅದರ ಬಗ್ಗೆ ಮಾತನಾಡಿ, ನಿಮ್ಮ ಸಲಹೆಗಳು ಬಹಳ ಚೆನ್ನಾಗಿವೆ. ಆದರೆ ನಾವು ಬೇಡಿಕೆಗಳ ಮೇಲೆ ಅಥವಾ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ, ಈ ರೀತಿ ಮಾತನಾಡಿದರೆ ಬಹಳ ಉತ್ತಮವಾಗಿರುತ್ತದೆ. ನೀವು ಪುಸ್ತಕವನ್ನು ಇಟ್ಟುಕೊಂಡಿದ್ದೀರಿ, ಅದರ

ಬಗ್ಗೆ ಮಂಡನೆ ಮಾಡಿ. ನಿಮಗೆಲ್ಲಾ ಅಡ್ವೈಸ್ ಮಾಡುವಂಥ ಶಕ್ತಿ ನನಗಿಲ್ಲ. ನಿಮ್ಮಿಂದ ಕಲಿಯಬೇಕು ಎಂದೇ ನಾನು ಇಲ್ಲಿಗೆ ಬಂದಿದ್ದೇನೆ. ಕಲಿಯಲಿಕ್ಕೆ ಪ್ರಯತ್ನಿಸುತ್ತಿದ್ದೇನೆ. ಆದರೆ ಈ ರೀತಿ ಮಾತನಾಡುವಂಥ ಸಂದರ್ಭದಲ್ಲಿ ಇದು ಸರಿಯೇ ತಪ್ಪೇ ಎಂದು ವಿಮರ್ಶೆ ಮಾಡಲಿಕ್ಕೆ ನಾನು ಪ್ರತಿಪಾದನೆ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಬಸವರಾಜ್‌ರವರು ಇದನ್ನು ಓದಲಿಲ್ಲವೆಂದು ಕಾಣುತ್ತದೆ. ಪಿ.ಡಬ್ಲ್ಯೂ.ಡಿ.ಯವರು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಣ ಕೇಳಿದ್ದಾರೆ. ನೀವು ದಯವಿಟ್ಟು ಓದಿ ನಂತರ ಮಾತನಾಡಿ. ನಾನು ಬೇಡಿಕೆಯ ಮೇಲೆ ಮಾತನಾಡುತ್ತಿದ್ದೇನೆಯೇ, ಸಪ್ಲಿಮೆಂಟರಿ ಬಜೆಟ್ಟಿನ ಮೇಲೆ ಮಾತನಾಡುತ್ತಿದ್ದೇನೆಯೇ ಎಂಬುದು ನಿಮಗೆ ಗೊತ್ತಾಗುತ್ತದೆ.

ಉಪಾಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ಈ ಕಡೆ ನೋಡಿ, ಸಪ್ಲಿಮೆಂಟರಿ ಬಜೆಟ್ ಮೇಲೆ ಡಿಮ್ಯಾಂಡ್ ಮೇಲೆ ಮಾತನಾಡುವಂತೆ ಒಂದೊಂದು ಗಂಟೆ ಮಾತನಾಡಿದರೆ ಹೇಗೆ? ತಾವೇ ಹೇಳುತ್ತೀರಿ ಬೇಗ ಮುಗಿಸಬೇಕು ಎಂದು. ಬಹಳ ಜನ ಮಾತನಾಡಬೇಕೆಂದು ಇಷ್ಟ ಪಡುತ್ತಾರೆ. ನೀವು ಹೇಳಿ ಎಷ್ಟು ಹೊತ್ತು ಮಾತನಾಡಬೇಕು ಎಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಪ್ಲಿಮೆಂಟರಿ ಬಜೆಟ್‌ನಲ್ಲಿ ಪಿ.ಡಬ್ಲ್ಯೂ.ಡಿಯವರು ಹಣವನ್ನು ಕೇಳಿದ್ದಾರೆಯೇ ಇಲ್ಲವೇ?

ಉಪಾಧ್ಯಕ್ಷರು : ಸಪ್ಲಿಮೆಂಟರಿ ಬಜೆಟ್ ಬಗ್ಗೆ ಅಷ್ಟು ಡಿಟೇಲ್ ಆಗಿ ಮಾತನಾಡಿದರೆ ಹೇಗೆ? ಬೇಗ ಮಾತನಾಡಿ ಮುಗಿಸಿ. ಬಹಳಷ್ಟು ಜನ ಮಾತನಾಡುವವರಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಡಿಮ್ಯಾಂಡ್ಸ್ ಮೇಲೆ ಮಾತನಾಡುತ್ತಿಲ್ಲ. ಸಪ್ಲಿಮೆಂಟರಿ ಬಜೆಟ್ ಮೇಲೆ ಹಣವನ್ನು PWD ಯವರು ಕೇಳಿದ್ದಾರೆಯೇ ಇಲ್ಲವೇ? ನೀವು ಆ ರೀತಿ remark ಮಾಡಿದರೆ ನಾನು ಒಪ್ಪುವುದಿಲ್ಲ.

ಉಪಾಧ್ಯಕ್ಷರು : ಇಲ್ಲ, ನಾನು ನಿಮ್ಮ ಬಗ್ಗೆ remark ಮಾಡುತ್ತಿಲ್ಲ. ಮಾತನಾಡಿ ಆದಷ್ಟು ಬೇಗ ಮುಗಿಸಿಬಿಡಿ.

SRI G.V. SRIRAMA REDDY : No, No I am sorry to say that I can't accept this remark. I am not speaking on demands. I am speaking on only supplementary budget. ಸಪ್ಲಿಮೆಂಟರಿ ಬಜೆಟ್‌ನಲ್ಲಿ PWD ಯವರು ಹಣವನ್ನು ಕೇಳಿದ್ದಾರೆಯೇ ಇಲ್ಲವೇ?

(ಅಡಚಣೆ)

ಉಪಾಧ್ಯಕ್ಷರು : ನಿಮಗೆ ಕೇಳೋ ಹಕ್ಕಿದೆ, ನೀವು ಮಾತನಾಡಿ. ಆದರೆ ಬೇಗ ಮುಗಿಸಿಬಿಡಿ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು out of the context ಮೇಲೆ ಮಾತನಾಡುತ್ತಿಲ್ಲ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅವರು ಹಣ ಕೇಳಿದ್ದಾರೆಯೇ ಇಲ್ಲವೇ?

ಶ್ರೀ ಕೆ. ವೆಂಕಟೇಶ್ : ಕನ್ನಡದಲ್ಲಿ ಮಾತನಾಡಿ. ಇವೆಲ್ಲಾ ಮಾತನಾಡುವ ಅವಶ್ಯಕತೆ ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೇ, ವಿಶೇಷವಾಗಿ ಹಿಂದೆ ಕುಳಿತಿರುವಂಥ ಸದಸ್ಯರಿಗೆ ಬೆಳಗಾವಿ ಅಧಿವೇಶನದಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆಂದು ಕನಸು ಕಾಣುತ್ತಾ ಕುಳಿತಿದ್ದೇವೆ. ಬೆಂಗಳೂರಿನಲ್ಲಿ ಅದೇ ಕಥೆ, ಇಲ್ಲಿಯೂ ಇದೇ ಕಥೆಯಾದರೆ, ಉತ್ತರ ಕರ್ನಾಟಕದ ಜಿಲ್ಲೆಯ ಸದಸ್ಯರಿಗೆ ಮಾತನಾಡಲಿಕ್ಕಾದರೂ ಅವಕಾಶ ಸಿಗುತ್ತದೆಯೇ ಇಲ್ಲವೇ? ಆ ಬಗ್ಗೆ ಚಿಂತನೆ ಮಾಡಬೇಕಾಗಿದೆ, ದಯವಿಟ್ಟು ಸಮಯವನ್ನು ನಿಗದಿ ಮಾಡಿ.

ಉಪಾಧ್ಯಕ್ಷರು : ಆಯಿತು. ಮಾತನಾಡಿ.

ಒಬ್ಬ ಮಾನ್ಯ ಸದಸ್ಯರು : ಇರುವ ಸಮಯವೇ ನಾಲ್ಕು ದಿವಸ, ಇಲ್ಲಿ ಎಲ್ಲಾ ಜಿಲ್ಲೆಗಳ ಸಮಸ್ಯೆಗಳಿವೆ. ಸಮಯ ನಿಗದಿ ಮಾಡಿ. ಒಬ್ಬ ಶಾಸಕರು ಇಡೀ ಸಭೆಯ ಸಮಯವನ್ನು ಹಾಳುಮಾಡುವುದು.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಪ್ಲಿಮೆಂಟರಿ ಬಜೆಟ್‌ನಲ್ಲಿ ಆರೋಗ್ಯ ಇಲಾಖೆಗೆ ಮೂರು ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ನೀವು ಈಗ ಹಣ ಖರ್ಚು ಮಾಡುತ್ತಿದ್ದೀರಿ. ಹಳ್ಳಿಗಾಡಿನಲ್ಲಿ ಆಸ್ಪತ್ರೆಗಳಿಗೆ ಔಷಧಿಗಳನ್ನು ಕೊಡಲಿಕ್ಕೆ ಎಷ್ಟು ಖರ್ಚು ಮಾಡಿದ್ದೀರಿ? ಆ ಹಣ ಇವತ್ತು ಉಪಯೋಗವಾಗುತ್ತಿದೆಯೇ? ಈಗ ನೀವು ಏನು ಬಜೆಟ್‌ನಲ್ಲಿ ಕೊಟ್ಟಿದ್ದೀರಿ, ಹುಚ್ಚು ನಾಯಿ ಕಡಿದರೆ, ಹಾವು ಕಡಿದರೆ ಅಲ್ಲಿ ಔಷಧಿಗಳಿಲ್ಲ. ನಮ್ಮ ಜಿಲ್ಲೆಯ ಆಸ್ಪತ್ರೆಗೆ ಬನ್ನಿ ಸರ್, I will give a challenge, ನೀವು ಎಲ್ಲಾದರೂ ಔಷಧಿ ಇದ್ದರೆ ತೋರಿಸಿ. ರಾಮಚಂದ್ರಗೌಡರೇ, ನಿಮ್ಮ ಬಗ್ಗೆ ಬಹಳ ಗೌರವವಿದೆ ನನಗೆ, ನಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೂ ಕರೆದುಕೊಂಡು ಹೋಗುತ್ತೇನೆ. ಎಷ್ಟು ಆಸ್ಪತ್ರೆಗಳಲ್ಲಿ ಹುಚ್ಚುನಾಯಿ, ಹಾವು ಕಡಿದದ್ದಕ್ಕೆ ಔಷಧಿ ಇದೆ. ತೋರಿಸಿ. ಹಾಗಾಗಿ ಈ ಪೂರಕ ಬಜೆಟ್ ಮಂಡಿಸುವಾಗ, ಯಾವುದಕ್ಕೆ ಅವಶ್ಯಕತೆ ಇದೆ. ನೀವು ಕೇಳಿರುವುದು ಯಾವುದಕ್ಕೆ? ಇನ್ನೊಂದು, ಎಲ್ಲಾ ಡಿಮ್ಯಾಂಡ್ಸ್‌ನಲ್ಲಿ ಬೆರಳಚ್ಚು ತಪ್ಪಿನಿಂದಾಗಿ ಆಗಿದೆ ಎಂದು ಇದೆ. ಇದೇನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ತಾವು ಹೇಳಬೇಕು. ಬೆರಳಚ್ಚು ತಪ್ಪಿನಿಂದಾಗಿ ಹಣ ಕೊಡಬೇಕಾಗಿದೆ ಎಂದು ಬರೆದಿದ್ದೀರಿ, ಇದು ನನಗೆ ಅರ್ಥವಾಗುತ್ತಿಲ್ಲ. typing error ನಿಂದಾಗಿ ಎಂದರೆ ಏನಿದು? ಏನಿದರ ಅರ್ಥ? ಬಜೆಟ್ ತಯಾರು ಮಾಡುತ್ತೀರೋ ಬೇರೆ ಏನು ತಯಾರು ಮಾಡುತ್ತೀರಿ? ಯಾವ ರೀತಿಯಲ್ಲಿ ಟ್ಯಾಲಿ ಮಾಡಿದಿರಿ? ದಯವಿಟ್ಟು ಇದಕ್ಕೆ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಹಾಗಾಗಿ ನೀವು ಪೂರಕ ಬೇಡಿಕೆಗಳನ್ನು ಕೇಳತಕ್ಕಂಥ

ಸಂದರ್ಭದಲ್ಲಿ ಯಾವುದಕ್ಕೆ ಅತ್ಯಂತ ಅವಶ್ಯಕವಾಗಿದೆಯೋ ಅದನ್ನು ಕೇಳುವುದನ್ನು ಬಿಟ್ಟು ಜನರಲ್ ಆಗಿ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ನೀವು ಸಪ್ಲಿಮೆಂಟರಿ ಬಜೆಟ್ ಕೇಳಿದ್ದೀರಿ. ಇದರಲ್ಲಿ 28 ಡಿಮ್ಯಾಂಡ್ಸ್ ಇದೆ, 28 ಇಲಾಖೆಗಳಿಗೂ ನೀವು ಹಣವನ್ನು ಕೇಳುತ್ತಿದ್ದೀರಿ. ಹಾಗಾದರೆ 28 ಇಲಾಖೆಗಳಿಗೂ ಪ್ಲಾನ್ ಮಾಡುವಂಥ, ಬಜೆಟ್ ತಯಾರು ಮಾಡುವಂಥ ಸಂದರ್ಭದಲ್ಲಿ ಇದಕ್ಕೆ ಏನು ಯೋಜನೆಯೇ ಇರಲಿಲ್ಲವೇ? ಹಾಚ್ ಪಾಚ್‌ಆಗೆ ತಲೆಗೆ ಏನೇನು ಆಲೋಚನೆ ಬಂದರೆ ಆ ರೀತಿ ಹಣ ಖರ್ಚು ಮಾಡಿಕೊಂಡು ಹೋಗುತ್ತೀರಾ? ಇದು ಸರ್ಕಾರಕ್ಕೆ ಮತ್ತು ಆರ್ಥಿಕ ಇಲಾಖೆಗೆ ಯಾವುದೇ ರೀತಿಯಲ್ಲಿಯೂ ಶೋಭೆ ತರತಕ್ಕಂಥದ್ದಾಗಲಿ ಅದರಲ್ಲಿ ಶಿಸ್ತು ಮೂಡಿಸಲಿಕ್ಕೆ ಸಾಧ್ಯವಾಗುತ್ತದೆಯೇ? ನನಗೆ ಗೊತ್ತಿದೆ, ಮಾನ್ಯ ಉಪ ಮುಖ್ಯಮಂತ್ರಿಗಳು ಫೈನಾನ್ಸ್ ಕಮಿಷನ್‌ನವರು ನಮಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ಹೇಳಿದರು. ಆ ಸರ್ಟಿಫಿಕೇಟ್ ಹೇಗೆ ಬರುತ್ತದೆ ಯಾವ ರೀತಿ ಯಾವ ಕಾರಣಕ್ಕೆ ಆ ಸರ್ಟಿಫಿಕೇಟ್ ಕೊಡುತ್ತಾರೆ ಎಂಬುದು ನನಗೆ ಗೊತ್ತಿದೆ. ಅದರ ಬಗ್ಗೆ ನಾನು ಇಲ್ಲಿ ವಿವರಣೆ ಕೊಡಲಿಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ಏನು ಇವತ್ತು ಸಪ್ಲಿಮೆಂಟರಿ ಬಜೆಟ್ ಇಲ್ಲಿ ಮಂಡಿಸಿದ್ದೀರಿ. ಇದಕ್ಕೆ ಯಾವುದೇ ರೀತಿಯಾದಂಥ ಕಿಮ್ಮತ್ತು ಇಲ್ಲ. It has no financial validity. ಎಲ್ಲಾ ಇಲಾಖೆಗೂ, ಎಲ್ಲಾ ರೀತಿಯಲ್ಲಿಯೂ ಕೇಳುತ್ತಾ ಬಂದಿದ್ದೀರಿ. ನೀರಾವರಿಗೆ ಕೇಳಿದ್ದೀರಿ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ minor irrigation ಇಲಾಖೆ ಇರುವ ಪರಿಸ್ಥಿತಿಯಲ್ಲಿ ನೀವೇ ಅದರ ಮಂತ್ರಿಗಳಾಗಿದ್ದೀರಿ, ನೀವೇ ಪ್ರಾಮಾಣಿಕವಾಗಿ ಹೇಳಿ. ಇವತ್ತಿಗೂ ಕೂಡ ನೀವು ಹಣಕಾಸಿನ ಮಂತ್ರಿಗಳಾದ ಮೇಲೆ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು minor irrigation ಗೆ ಕೊಟ್ಟಿದ್ದೀರಿ? ಅದಕ್ಕೆ ಎಷ್ಟು ಪೂರಕವಾಗಿ ಬೇಕಾದಂಥ ಹಣವನ್ನು ಇದರಲ್ಲಿ ಕೇಳಿಲ್ಲ. ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಕೆರೆಗಳಿಗೆ ಹೂಳು ಎತ್ತುವುದಕ್ಕೆ, ಕ್ಲೀನ್ ಮಾಡಲಿಕ್ಕಾದರೂ ಆಗಬಹುದು, ನಾಲಾಗಳಲ್ಲಿ ಕ್ಲೀನ್ ಮಾಡಲಿಕ್ಕಾಗಬಹುದು. ಯಾವುದಕ್ಕೆ ಹಣ ಕೇಳಿದ್ದೀರಿ? ನನ್ನ ಪ್ರಶ್ನೆ ಏನೆಂದರೆ ಯಾವ ಇಲಾಖೆಗೆ ಮೂಲಭೂತವಾಗಿ ಅವಶ್ಯಕತೆ ಇದೆ, ಅದಕ್ಕೆ ಹಣವನ್ನು ಕೇಳದೆ ಯಾವ್ಯಾವುದಕ್ಕೋ ನೀವು administrative expenditure, ಯಾವ್ಯಾವುದಕ್ಕೋ ಪೂರಕ ಅಂದಾಜಿನಲ್ಲಿ ಹಣವನ್ನು ಕೊಡುತ್ತಾ ಹೋದರೆ, ಈ ರಾಜ್ಯದ ಹಣಕಾಸಿನ ಸ್ಥಿತಿ ಏನು? ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ನಾವು ಹಣಕಾಸಿನ ಸ್ಥಿತಿಯನ್ನು ಬಹಳ ಉತ್ತಮಪಡಿಸಿದ್ದೇವೆಂದು ಉಪ ಮುಖ್ಯಮಂತ್ರಿಗಳು ಹೇಳಿದರು. ಆದರೆ ಇನ್ನೊಂದು ಹೇಳಲಿಲ್ಲ. ಕರ್ನಾಟಕ ರಾಜ್ಯಕ್ಕೆ ಸಾಲ ಎಷ್ಟಿದೆ, ಅದಕ್ಕೆ ಬಡ್ಡಿಯನ್ನು ಎಷ್ಟು ಕೊಡುತ್ತಿದ್ದೇವೆಂದು ಮಾತ್ರ ಹೇಳಲಿಲ್ಲ. ಸಾಲ ಕೊಡುತ್ತಿರುವ IMF, ADB, World Bank ಎಲ್ಲೆಲ್ಲಿ ಸಾಲ ತಂದಿದ್ದೇವೆ, ಅದಕ್ಕೆ ಎಷ್ಟು ಬಡ್ಡಿ ಕಟ್ಟುತ್ತಿದ್ದೇವೆ? ಅದರ ಬಗ್ಗೆ ಏನೂ ಪೂರಕ ಅಂದಾಜುಗಳಿಲ್ಲ. ಇಲ್ಲಿ ಇರಬೇಕಾದ ಅವಶ್ಯಕತೆಯೂ ಇಲ್ಲ. ಏಕೆಂದರೆ ನಮಗೆ ಅದರ ಬಗ್ಗೆ ಮೊದಲೇ ಗೊತ್ತಿರುತ್ತದೆ. ಸಾಲ ತಂದಾಗಲೇ ಬಡ್ಡಿ ನಿಗದಿಯಾಗಿರುತ್ತದೆ.

ಆದ್ದರಿಂದ ಈ ಸರ್ಕಾರ ಆರ್ಥಿಕ ವಿಚಾರದಲ್ಲಿ ಎಲ್ಲಿ ಎಡವುತ್ತಿದೆಯೆಂದರೆ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. ಇವರು ಯಾವುದಾದರೂ ಜಿಲ್ಲೆಗೆ ಅಥವಾ ಒಂದು ಹಳ್ಳಿಗೆ ಭೇಟಿ ಕೊಟ್ಟುಬಿಟ್ಟರೆ ಅಲ್ಲೊಂದು 50., 100 ಕೋಟಿ ರೂ.ಗಳ ಕೆಲಸ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟುಬಿಡುವುದು. ಈ ರೀತಿ ಆಶ್ವಾಸನೆ ಕೊಡುತ್ತಾ ಹೋದರೆ ಹಣವನ್ನು ಎಲ್ಲಿ ತರುತ್ತೀರಿ? ಎರಡನೆಯದು, ನಿಮಗೆ ಇದು credibility question. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಯಾವುದಾದರೊಂದು ಯೋಜನೆಯನ್ನು ಅನೌನ್ಸ್ ಮಾಡಿದರೆ ಅಥವಾ ಇಂತಹ ಕೆಲಸಗಳನ್ನು ತೆಗೆದುಕೊಂಡರೆ, ಅದು ತಕ್ಷಣ ಜಾರಿಯಾಗಬೇಕು. ಆಗಲೇ ನಿಮಗೆ credibility ಹೆಚ್ಚಾಗುತ್ತದೆ. ನಾನು ಹೇಳುವುದೇನೆಂದರೆ ಯಾವುದೋ ಒಬ್ಬ ಮಂತ್ರಿ ಸಾರ್ವಜನಿಕವಾಗಿ ಏನಾದರೂ ಹೇಳಿದರೆ ಅದು ಒಂದು ಕಾನೂನು ಆಗಿ ಜಾರಿಯಾಗಬೇಕಾಗುತ್ತದೆ. ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂತ್ರಿಗಳೇನಾದರೂ ಆಶ್ವಾಸನೆ ಕೊಟ್ಟರೂ ಜಾರಿಯಾಗುವುದಿಲ್ಲ. ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರೂ ಜಾರಿಯಾಗುವುದಿಲ್ಲ. ಉಪ ಮುಖ್ಯಮಂತ್ರಿಗಳೂ ಆಶ್ವಾಸನೆ ಕೊಟ್ಟರೂ ಜಾರಿಯಾಗುವುದಿಲ್ಲ. ಆಶ್ವಾಸನೆಗಳನ್ನು ಕೊಡುವುದೇ ಕೆಲಸವಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ನೋವಿನಿಂದ ಹೇಳಿದರು. ನಾನೂ ಕೂಡ ಅದಕ್ಕೆ ಒಪ್ಪುತ್ತೇನೆ. ಅಧಿಕಾರಿಗಳಲ್ಲಿ ಕೆಲವರು ಈ ರೀತಿಯಿದ್ದಾರೆ. ನಿಮ್ಮ ಗಮನಕ್ಕೆ ಬಂದಿದೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಯಾರು ಅಡ್ಡ ಬಂದಿದ್ದಾರೆ? ಸರ್ಕಾರದ ಕಾರ್ಯಕ್ರಮಗಳನ್ನು, ಸರ್ಕಾರದ ತೀರ್ಮಾನವನ್ನು ಜಾರಿ ಮಾಡಲಿಕ್ಕೆ ಹಿಂದೇಟು ಹಾಕುವಂಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ನಿಮಗೆ ಯಾರೂ ಅಡ್ಡಿ ಬಂದಿದ್ದಾರೆ? ಏತಕ್ಕೆ ನೀವು ಸುಮ್ಮನೆ ಕುಳಿತಿದ್ದೀರಿ? ಸರ್ಕಾರದ ಆಜ್ಞೆ ಹೊರಡಿಸಲಿಕ್ಕೆ ನಾಲ್ಕು ತಿಂಗಳುಗಳಾಗಿದೆ ಎಂದು ಉಪ ಮುಖ್ಯಮಂತ್ರಿಗಳಾಗಿ ನೀವು ಹೇಳಿದರೆ ನಮ್ಮಂಥ ಶಾಸಕರ ಗತಿಯೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಒಂದು ನಿಮಿಷ ಯೀಲ್ಡ್ ಆಗಿ. ದಾಖಲೆಗಳನ್ನು ತೆಗೆದು ಪರಿಶೀಲನೆ ಮಾಡಿದರೆ ಕಳೆದ ಮೂರು ನಾಲ್ಕು ವರ್ಷಗಳಿಂದ ಆಯವ್ಯಯದಲ್ಲಿ ಏನೇನು ಭರವಸೆಗಳನ್ನು ನಾವು ಕೊಟ್ಟಿದ್ದೆವು. ಎಷ್ಟು ಇಂಪ್ಲಿಮೆಂಟ್ ಆಗಿದೆ, ಎಷ್ಟು ಸರ್ಕಾರಿ ಆಜ್ಞೆ ಹೊರಟಿದೆ ಎಂಬ ಬಗ್ಗೆ ವಾಸ್ತವಿಕ ಸಂಗತಿಯೇನು ಎಂಬುದು ನಿಮಗೂ ಗೊತ್ತಾಗುತ್ತದೆ. ನಾನೂ ತಿಳಿದುಕೊಳ್ಳುವಂಥ ಪ್ರಯತ್ನ ಮಾಡಿದ್ದೇನೆ. ನಾನೇನು ಹೇಳುತ್ತೇನೆಂದರೆ, ಹಣಕಾಸಿನ ಸಚಿವನಾಗಿ ಒಂದು ಆಯವ್ಯಯವನ್ನು ಮಂಡನೆ ಮಾಡಿದ ಮೇಲೆ ನನ್ನ ಕೆಲಸ ಮುಗಿಯಿತು; ಆಯಾಯ ಇಲಾಖೆಯವರು ಅದನ್ನು ಇಂಪ್ಲಿಮೆಂಟ್ ಮಾಡುವ ಪ್ರಯತ್ನ ಮಾಡಬೇಕು. ನಾಲ್ಕೈದು ಬಾರಿ ಮೊದಲ ವಾರದಿಂದ ಬಜೆಟ್ ಮಂಡನೆ ಮಾಡಿದಾಗಿನಿಂದ ಇವತ್ತಿನವರೆಗೆ ನಾಲ್ಕೈದು ಬಾರಿ ಅಧಿಕಾರಿಗಳ ಸಭೆ, ಮಂತ್ರಿಗಳ ಸಭೆ ಮಾಡಿ ಸರ್ಕಾರಿ ಆಜ್ಞೆ ಹೊರಡಿಸಿ ಇಂಪ್ಲಿಮೆಂಟ್ ಮಾಡುವಂಥ ಪ್ರಯತ್ನ ಮಾಡಿದ್ದೇನೆ. ಕೆಲವರಿಗೆ ಈ ಯೋಜನೆಗಳನ್ನು

ಜಾರಿಗೆ ತರಲಿಕ್ಕೆ ಆಸಕ್ತಿ ಕಾಣುತ್ತಿಲ್ಲ. ಅಂಥ ಒಂದು ಉದಾಹರಣೆಯಾಗಿ, ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ಬಹಿರಂಗವಾಗಿ ಇದರ ಬಗ್ಗೆ ಉಪ ಮುಖ್ಯಮಂತ್ರಿ, ಹಣಕಾಸಿನ ಸಚಿವರಾಗಿ, ಯಡಿಯೂರಪ್ಪನಾಗಿ, ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಅವರನ್ನು ನಾವು ಸುಮ್ಮನೆ ಬಿಡುತ್ತೇವೆಂದು ಅಲ್ಲ, ಕಾದು ನೋಡಿ ನೀವು. ನನ್ನ ಮನದಾಳದಲ್ಲಿದ್ದ ನೋವನ್ನು ವ್ಯಕ್ತಪಡಿಸುತ್ತಾ ಇಲ್ಲಿ ಯಾವರೀತಿ ಶಕ್ತಿಗಳಿವೆ, ವ್ಯವಸ್ಥೆಗಳಿವೆ ಎಂಬ ಬಗ್ಗೆ ಹೇಳಿದ್ದೇನೆಯೇ ಹೊರತು ನಾವು ಬೆನ್ನು ತೋರಿಸುತ್ತಿದ್ದೇವೆ. ಬಿಗಿ ತರಲಿಕ್ಕೆ ಆಗಲಿಲ್ಲವೆಂದು ಹೇಳುತ್ತಾ ಇಲ್ಲ. ಇಂಥವರೂ ಇದ್ದಾರೆ, ನೂರಕ್ಕೆ ಎಪ್ಪತ್ತು ಜನ ಪ್ರಾಮಾಣಿಕರು ಇದ್ದಾರೆ. ಹಣಕಾಸಿನ ಇಲಾಖೆಯಲ್ಲಿ ಅಂಥವರು ಇದ್ದುದ್ದಕ್ಕೆ ಹೆಚ್ಚು ಹಣಕಾಸು ಸಂಗ್ರಹ ಮಾಡಲಿಕ್ಕೆ ಸಾಧ್ಯವಾಯಿತು. ಒಳ್ಳೆಯ ಬಜೆಟ್ ಕೊಡಲಿಕ್ಕೆ ಸಾಧ್ಯವಾಯಿತು. ಇವತ್ತು ನೀವು ಅಪ್ರೀಶಿಯೇಟ್ ಮಾಡಬೇಕು. ಈ ಪೂರಕ ಬೇಡಿಕೆಯಲ್ಲಿ ಇಷ್ಟು ಒಳ್ಳೊಳ್ಳೆ ಕಾರ್ಯಕ್ರಮಗಳಿವೆ, ಒಂದೆರಡು ಮೂರು ನೀವು ಅಬ್ಸರ್‌ವೇಷನ್ ಮಾಡಿದ್ದೀರಿ. ಏಕೆ ಅಗತ್ಯವಿರುವುದನ್ನು ಮಾಡಿಲ್ಲವೆಂದು ಹೇಳಿದ್ದೀರಿ, ಅದನ್ನು ನಾನು ಒಪ್ಪುತ್ತೇವೆ. ಉಳಿದಂತಹ ಬೇಡದ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದ್ದೇವೆ ಹೇಳಿ ನೋಡೋಣ. Please tell me, ನೀವು appreciate ಮಾಡಬೇಕಾಗಿತ್ತು. ಆರೇ ತಿಂಗಳಲ್ಲಿ ಹೆಚ್ಚು ಹಣವನ್ನು ಸಂಗ್ರಹವನ್ನು ಮಾಡಿ ಇಷ್ಟು ಯೋಜನೆಗಳಿಗೆ ನಾವು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆಂದು ನೀವು ಶಹಬಾಷ್‌ಗಿರಿಯನ್ನು ಕೊಡುತ್ತೀರಿ ಎಂದು ತಿಳಿದುಕೊಂಡಿದ್ದೆ. ಕಾಂಗ್ರೆಸ್‌ನವರಿಗೆ ಶಹಭಾಸ್‌ಗಿರಿಯನ್ನು ಕೊಡಲಿಕ್ಕೆ ಮುಜುಗರವಾಗಬಹುದು, ನಿಮಗ್ಯಾಕೆ ಮುಜುಗರವಾಗುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಿಮ್ಮ ಪ್ರಾಮಾಣಿಕತೆಯನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. Appreciate ಮಾಡುತ್ತೇನೆ. ಏಕೆಂದರೆ ಇರತಕ್ಕಂಥ ವಿಚಾರವನ್ನು ಹೇಳಿದ್ದೇನೆ. ನನ್ನ ಪ್ರಶ್ನೆ ಇಷ್ಟೇ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಆಗುತ್ತಿಲ್ಲ. ನೀವು ಹೊಸ ಕಾರ್ಯಕ್ರಮವನ್ನು ಹೇಳುತ್ತಿದ್ದೀರಿ. ಸಂತೋಷ, ಆದರೆ ಅದಕ್ಕೆ ಬಜೆಟ್‌ಗೆ ಸಪೋರ್ಟ್ ಎಲ್ಲಿದೆ? ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೊಸ ಕಾರ್ಯಕ್ರಮಗಳನ್ನು ನೀವು ರೂಪಿಸುತ್ತೀರಾ? ಅದು ಯಾವುದಾದರೂ ಒಂದು ಆರ್ಥಿಕ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ವಿಧಾನವೇ ಅದು? ಹೊಸ ಕಾರ್ಯಕ್ರಮಗಳನ್ನು ಅನೌನ್ಸ್ ಮಾಡಿದರೆ ಸಂತೋಷ, ಇದಕ್ಕೆ ಬಜೆಟ್ಟಿನಲ್ಲಿ ಪ್ರಾವಿಷನ್ ಹೇಗೆ ಮಾಡುತ್ತೀರಿ? ಸಪ್ಲಿಮೆಂಟರಿಯಲ್ಲಿ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡು ಬರಲಿಕ್ಕಾಗುವುದಿಲ್ಲ. ತುರ್ತು ಯೋಜನೆಗಳಿಗೆ ಮಾತ್ರ ತೆಗೆದುಕೊಂಡು ಬರಬಹುದೇ ಹೊರತು ಹೊಸ ಯೋಜನೆಗಳಿಗೆ ಈ ಬಜೆಟ್ಟಿನಲ್ಲಿ ತರಲಿಕ್ಕೆ ಬರುವುದಿಲ್ಲ. ಅದು ಸಪ್ಲಿಮೆಂಟರಿ ಬಜೆಟ್ ಆಗುವುದಿಲ್ಲ. ಆದ್ದರಿಂದ ಅಧ್ಯಕ್ಷರೇ, ಹಣಕಾಸಿನ ಶಿಸ್ತನ್ನು ತರಬೇಕಾದರೆ ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಏನು ಅವರು ಪ್ರಾವಿಷನ್ಸ್ ಕೇಳುತ್ತಿದ್ದಾರೆ. ಅದನ್ನು ಕನಿಷ್ಠ 50% reduce ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ 1400 ಕೋಟಿ ರೂ. ಯನ್ನು ಅವರು ಕೇಳಿದ್ದಾರೆ. ಹಾಗಾಗಿ 1400 ಕೋಟಿ ರೂ.ಗಳನ್ನು ಈ ರೀತಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೇಳುವುದು

ಆರೋಗ್ಯಕರವಾದಂಥ ಆರ್ಥಿಕ ವ್ಯವಸ್ಥೆಯಲ್ಲ. ಇನ್ನು ಮುಂದಾದರೂ ಈ ಸರ್ಕಾರ ಅದನ್ನು ಅರ್ಧಕ್ಕಾದರೂ ಅಂದರೆ 50% ಗೆ ಇಳಿಸಬೇಕು. ಇಲ್ಲದೇ ಹೋದರೆ 2010ನೇ ಇಸವಿಯೊಳಗೆ ಈ ಸರ್‌ಪ್ಲಸ್ ಬಜೆಟ್ ಆಗಬೇಕೆಂದು ಕೇಂದ್ರ ಸರ್ಕಾರ ತೀರ್ಮಾನಿಸಿದೆ; ಈ ರೀತಿ ಆದರೆ ಅದನ್ನು ಮೀಟ್ ಮಾಡಲಿಕ್ಕಾಗುವುದಿಲ್ಲ ಮತ್ತು ಇವರು ಏನು ಸರ್‌ಪ್ಲಸ್ ಬಜೆಟ್ ಎಂದು ಹೇಳುತ್ತಿದ್ದಾರೆ. ಅದು ವಾಸ್ತವವಾಗಿ ಸರ್‌ಪ್ಲಸ್ ಬಜೆಟ್ ಅಲ್ಲ. ಏಕೆಂದರೆ ಕಡಿಮೆ ಹಣವನ್ನು ಬಜೆಟ್ಟಿನಲ್ಲಿ ತೋರಿಸುವಂಥಾದ್ದು ಮತ್ತೆ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ 1500 ಕೋಟಿ ರೂ. increase ಮಾಡತಕ್ಕಂಥಾದ್ದು, ಇದು ಯಾವತ್ತಿಗೂ ಕೂಡ ಸರ್‌ಪ್ಲಸ್ ಬಜೆಟ್ ಆಗಲಿಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ಆರ್ಥಿಕ ನಿರ್ವಹಣೆಯನ್ನು ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಮಾಡಬೇಕು. ಆದ್ದರಿಂದ ಅದು ರೆವಿನ್ಯೂ ಸರ್‌ಪ್ಲಸ್ ಆಗುತ್ತದೆಯೇ ಹೊರತು Financial surplus ಆಗುವುದಿಲ್ಲ. ಆದ್ದರಿಂದ ಇಂಥ ಸಪ್ಲಿಮೆಂಟರಿ ಬಜೆಟ್ಟನ್ನು ಮಂಡಿಸಬಾರದೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಅಧ್ಯಕ್ಷರೇ, ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೇ, ನಾವು ಎರಡೆರಡು ನಿಮಿಷ ಮಾತನಾಡಿ ಮುಗಿಸಿಬಿಡುತ್ತೇವೆ. ಎಲ್ಲರೂ ಸೇರಿದರೆ 20 ನಿಮಿಷ ಆಗುತ್ತದೆ ಅಷ್ಟೇ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಹಿಂದೆ ಇರುವವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು : ನಿಮಗೂ ಅವಕಾಶವನ್ನು ಕೊಡುತ್ತೇನೆ. ಒಂದು ನಿಮಿಷ ಸಮಾಧಾನದಿಂದ ಕುಳಿತುಕೊಳ್ಳಿ. ಮಾತನಾಡುವವರು 5–5 ನಿಮಿಷದಲ್ಲಿ ಮಾತನಾಡಿ ಮುಗಿಸಿ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಏನಾಗಿದೆ ಅಧ್ಯಕ್ಷರೇ,

ಶ್ರೀ ಬಿ.ಎಸ್. ಯಡಿಯೂರಪ್ಪ : ದೇಶಪಾಂಡೆಯವರೇ, ಒಂದು ನಿಮಿಷ. ಆರಗ ಜ್ಞಾನೇಂದ್ರರವರು ಮಾತನಾಡಲಿಕ್ಕೆ ಕಾದುತ್ತಿದ್ದಾರೆ, ಬೇಡುತ್ತಿದ್ದಾರೆ. ಅವರಿಗೆ ಅವಕಾಶವನ್ನು ಕೊಡಿ, ಇದು ಸರಿಯಾದ ಕ್ರಮವಲ್ಲ.

(ಅಡಚಣೆ)

ಉಪಾಧ್ಯಕ್ಷರು : ಆಯಿತು, ಕೊಡುತ್ತೇನೆ. ಸ್ವಲ್ಪ ಸಹಕಾರ ಕೊಡಿ.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಉಪ ಮುಖ್ಯಮಂತ್ರಿಗಳ ಅವರ ಭಾಗದಲ್ಲಿರುವವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ಅಂತ ಕೇಳಿದರು. ಎಲ್ಲರೂ ಭಾಗವಹಿಸಬೇಕು, ಅದರಲ್ಲಿ ತಪ್ಪೇನೂ ಅಲ್ಲ, 3–4 ದಿವಸ ಸೆಷನ್ extend ಮಾಡಿ. ನಮ್ಮದೇನೂ ತಕರಾರಿಲ್ಲ. ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಎಲ್ಲರಿಗೂ ಅವಕಾಶ ಸಿಗುತ್ತದೆ, ನಾನು ಒಪ್ಪಿಕೊಳ್ಳುತ್ತೇನೆ,

ಅವರಿಗೂ ಸಿಗಬೇಕು ಅವರಿಗೆ ಅಧಿಕಾರವಿದೆ. ಮುಖ್ಯವಾಗಿ ಒಂದು ಮುಂಗಡ ಪತ್ರ ಎಂದರೆ ಏನು? ಮೊದಲು ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಮೊದಲು ಮುಂಗಡ ಪತ್ರದ ಪಾವಿತ್ರ್ಯತೆಯನ್ನು ನಾವು ಕಾಪಾಡಿಕೊಂಡು ಹೋಗುತ್ತಿದೇವೆಯೋ? ಅಥವಾ ನಮ್ಮ ಮನಸ್ಸು ಬಂದಾಗ, ಅಥವಾ finance minister ಮನಸ್ಸಿನಲ್ಲಿ ಏನೇನು ವಿಚಾರ ಬರುತ್ತದೆ. ಹಾಗೆ implement ಮಾಡಲಿಕ್ಕೆ supplementary budget ಎಷ್ಟು ತೆಗೆದುಕೊಂಡು ಬರುತ್ತೀರಿ ಎಂಬ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಮುಖ್ಯವಾಗಿ ಇವತ್ತು ತಾವೇ ಈ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಏನು ಹೇಳಿದಿರಿ? Article 205 (1) (a) ಪ್ರಕಾರ Constitution provides for Supplementary Estimate. ಇದು ಎರಡು ವಿಧದಲ್ಲಿ ಆಗುತ್ತದೆ. ಕೆಲವು ಸಾರಿ ಈಗಾಗಲೇ ನೀವು ಏನು ಬಜೆಟ್ಟಿನಲ್ಲಿ ಪ್ರಾವಿಷನ್ಸ್ ಮಾಡುತ್ತೀರಿ. ಅಲ್ಲೇನಾದರೂ ಕೊರತೆಯಿದೆ ಎಂದಾಗ Supplementary Estimate ಮಾಡಿ ಮಂಜೂರಿ ಮಾಡಿಕೊಳ್ಳುತ್ತೀರಿ ಅಥವಾ ಹೊಸ ಸ್ಕೀಮ್‌ಗಳು ಬಂದಾಗ ತಾವು ಇಂಥ ಪ್ರಸ್ತಾವನೆ ತರುತ್ತೀರಿ. ಇವತ್ತು Article 204 ಪ್ರಕಾರ ಎರಡೂ ಸದನಗಳು ನಿಮಗೆ ಮುಂಗಡ ಪತ್ರವನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ಅದಕ್ಕೆ ರಾಜ್ಯಪಾಲರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇವತ್ತು ಎಷ್ಟು schemes ಇವೆ, ಅದು ಸೈಕಲ್ Bullock, Carts schemes ಇರಬಹುದು, ಪ್ರತಿಯೊಂದು schemeಗೂ ನೀವು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ತೆಗೆದುಕೊಂಡು ಬಂದಿರಿ. ಅದರ ಅರ್ಥ ಏನು? ಅಂದರೆ ತಾವು ಬಜೆಟ್ ಮಂಡನೆ ಮಾಡುವಾಗ ತಮ್ಮ mind apply ಮಾಡಿಲ್ಲ. ನಿಮ್ಮ ಅಧಿಕಾರಿಗಳೂ ಸಹ mind apply ಮಾಡಿಲ್ಲ. ಏನೋ ಒಂದು ಅಂದಾಜು, ಒಂದು ಒಳ್ಳೆಯ ಸ್ಕೀಮ್ ತರಬೇಕು, ಚಪ್ಪಾಳೆ ತಟ್ಟಿಸಿಕೊಳ್ಳಬೇಕೆಂದು, ಒಳ್ಳೆಯ ಬಜೆಟ್ ಎಂದು ಹೇಳಿಸಿಕೊಳ್ಳಬೇಕೆಂದು ನೀವು ತಂದಿದ್ದೀರಿ. ಇವತ್ತು ನನ್ನ ಪ್ರಕಾರ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ Article 205 ಕೆಳಗೆ ಏನು ಮಂಜೂರಾತಿ ಕೇಳುತ್ತಿದ್ದೀರಿ ಅದು ನ್ಯಾಯಬದ್ಧವಾಗಿಲ್ಲವೆಂದು ನಾವು ಭಾವಿಸುತ್ತೇವೆ. ಹೊಸ ಸ್ಕೀಮ್ ಕಳೆದ ಮೂರ್‍ನಾಲ್ಕು ತಿಂಗಳುಗಳಲ್ಲಿ ಏನಾದರೂ ಮಾಡಿದರೆ ಅದಕ್ಕೆ projection ಇಲ್ಲವೆಂದು ಹೇಳಬಹುದು, ಆದರೆ ಯಾವ ಸ್ಕೀಮ್ಸ್‌ಗಳನ್ನು ತಾವು ಬಜೆಟ್ಟಿನಲ್ಲಿ ಅನೌನ್ಸ್ ಮಾಡಿದ್ದೀರಿ. ಬಜೆಟ್ಟಿನಲ್ಲಿ ಏತಕ್ಕೆ ನೀವು ಹಣವನ್ನು ಇಟ್ಟಿದ್ದೀರಿ. ಆ ಹಣ expenditure ಆಗುವುದಕ್ಕಿಂತ ಮುಂಚೆ you can't come to the House for supplementary estimate. Article 205(b) is very clear. ಬಜೆಟ್ಟಿನಲ್ಲಿ suppose bullock Carts scheme ಇದೆ. cycle scheme ಇದೆ. ಅದಕ್ಕೆ ನೀವೇನು ಹಣ ಇಟ್ಟಿದ್ದೀರಿ. ಆ ಹಣವನ್ನು ನೀವು ಖರ್ಚು ಮಾಡಿ, "ಮತ್ತು ಒಂದು ವೇಳೆ ನೀವು ಮುಂಗಡ ಪತ್ರದಲ್ಲಿ ಇಟ್ಟ ಹಣಕ್ಕಿಂತ ಹೆಚ್ಚು ಹಣ ಖರ್ಚು ಮಾಡಿದ್ದರೆ, ತಾವು supplementary ಮುಖಾಂತರ ಈ ಮನೆಗೆ ಮಂಜೂರು ಪ್ರಸ್ತಾಪ ತೆಗೆದುಕೊಂಡು ಬರಬೇಕಾಗುತ್ತದೆ. ನೀವು 20.00 ಕೋಟಿ ರೂ.ಗಳನ್ನೇ ಖರ್ಚು ಮಾಡಿಲ್ಲ. ಯಾವ ಅಂದಾಜು ಇದು?

(ಅಡಚಣೆ)

8.00 ಗಂಟೆ

ಶ್ರೀ ಆರ್.ವಿ. ದೇಶಪಾಂಡೆ : ಯಾವ example?

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದಾದರೂ ಒಂದು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ fertilizer subsidy. ನಾವು finance ನಲ್ಲಿ ನಾವೂ ಸ್ವಲ್ಪ ತಿಳಿದುಕೊಂಡಿದ್ದೇವೆ. ಗೊತ್ತಿಲ್ಲಾ, subsidy for seed. ನೀವು ಏಕೆ ಕೇಳಿದಿರಿ? ನಾನು ಏನು ಕೇಳುತ್ತಿದ್ದೇನೆಂದರೆ, ಬಜೆಟ್‌ನಲ್ಲಿ ತಾವು ಏನು ಹಣವನ್ನು ಇಟ್ಟಿದ್ದೀರಿ, ಅದಕ್ಕೆ ಮೊದಲು ನೀವು expenditure ಮಾಡಬೇಕು. ಒಂದು ಅಂದಾಜು ತಪ್ಪಬಹುದು. ಆದರೆ ಅಂದಾಜುಗಳು ತಪ್ಪುತ್ತಾ ಹೋದರೆ ಮತ್ತೆ ತಾವು supplementary ತೆಗೆದುಕೊಂಡು ಬಂದರೆ ಅದು financial mismanagement ಆಗುತ್ತದೆ. Finance Department ತನ್ನ mind apply ಮಾಡುತ್ತಿಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ನಾನು ಒಂದು ವಿಚಾರವನ್ನು ತರುತ್ತಿದ್ದೇನೆ. ಒಂದು ರಾಜ್ಯ ಪ್ರಗತಿಯಾಗಬೇಕಾದರೆ, ಮಾನವ ಸಂಪನ್ಮೂಲ ಬೆಳೆಯಬೇಕು. ಒಂದು ರಾಜ್ಯ ಪ್ರಗತಿಯಾಗಿ ಬೆಳೆಯಬೇಕಾದರೆ, ಮೂಲಭೂತ ಸೌಲಭ್ಯ ಬೆಳೆಯಬೇಕು. Only when there is infrastructure development and when you make your human resource rich, ಒಂದು ರಾಷ್ಟ್ರ, ಒಂದು ರಾಜ್ಯ, ಸಂಪನ್ನ ಆಗುವುದಕ್ಕೆ ಸಾಧ್ಯ ಮತ್ತು investments ಬರಬೇಕು. Investment can create wealth. ಜನರ ಕೈಯಲ್ಲಿ purchasing power ಹೆಚ್ಚಾಗಬೇಕು. ಆ ದೃಷ್ಟಿಯಿಂದ ನಿಮ್ಮ ಕಾರ್ಯಕ್ರಮಗಳು ಏನಿವೆ ಹೇಳಿ? ಇವತ್ತು ನಿಮ್ಮ ಮುಂಗಡ ಪತ್ರದಲ್ಲಿ ಮೂಲಭೂತ ಸೌಕರ್ಯದ ಮೇಲೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರಿ? ಹೇಳಿ. ಈಗಾಗಲೇ ನಮ್ಮ ರೆಡ್ಡಿಯವರು ಹೇಳಿದರು. ನಾನು ಚೈನಾಕ್ಕೆ ಹೋಗಿದ್ದೆ. 500 ಕಿ.ಮೀ. ಅನ್ನು ನಾನು 3 ಗಂಟೆಯಲ್ಲಿ ಹೋಗಿದ್ದೆ. ದುಬೈನಲ್ಲಿ 300 ಕಿ.ಮೀ. ಅನ್ನು ಒಂದು ಗಂಟೆಯಲ್ಲಿ ಹೋಗುತ್ತಾನೆ. ಈ ದೇಶದಲ್ಲಿಯೂ ಆಗಬೇಕಲ್ಲವೇ? ನಿಮ್ಮ N.D.A. ಸರ್ಕಾರ ಇದ್ದಾಗ, ಮಾನ್ಯ ವಾಜಪೇಯಿಯವರು ಒಳ್ಳೆಯ ಕಾರ್ಯಕ್ರಮಗಳನ್ನು ತಂದರು. ಇವತ್ತು ಮಾನ್ಯ ಮನಮೋಹನ್‌ಸಿಂಗ್‌ರವರು ಹಲವಾರು ಕಾರ್ಯಕ್ರಮಗಳನ್ನು ತರುತ್ತಿದ್ದಾರೆ. ತಾವೂ ಸಹ ಒಬ್ಬ ಹಣಕಾಸಿನ ಸಚಿವರಾಗಿ ತಮ್ಮ ಮುಂಗಡ ಪತ್ರದಲ್ಲಿ, ಮೂಲಭೂತ ಸೌಕರ್ಯಗಳ ಬೆಳೆಸಲು ಹೆಚ್ಚಿನ ಒತ್ತನ್ನು ನೀಡಬೇಕು. ಪೋರ್ಟ್ ಡೆವಲಪ್ ಆಗಬೇಕು. ಯಾವ ಪೋರ್ಟ್ ಡೆವಲಪ್‌ಮೆಂಟ್‌ಗೆ ನೀವು 5 ರೂ.ಗಳನ್ನು ಇಟ್ಟಿದ್ದೀರಿ? ಎಲ್ಲಾ ವಿಮಾನ ನಿಲ್ದಾಣಗಳು ಡೆವಲಪ್ ಆಗಬೇಕು. ಅದಕ್ಕೆ ನೀವು ಎಷ್ಟು ಹಣವನ್ನು ಇಟ್ಟಿದ್ದೀರಿ? 10, 20, 30 ಕೋಟಿ ರೂ.ಗಳು ಎಲ್ಲಿ ಆಗಬೇಕು ಅದು? ಹಾಸನ್‌ಗೆ Air port ಆಗಬೇಕೆಂದು ಹೇಳುತ್ತೀರಿ. ಗುಲ್ಬರ್ಗಾಕ್ಕೆ ಆಗಬೇಕೆಂದು ಮಾನ್ಯ ಖರ್ಗೆಯವರು ಹೇಳುತ್ತಾರೆ. ನಾನು ಕಾರವಾರಕ್ಕೆ ಆಗಬೇಕೆಂದು ಹೇಳುತ್ತೇನೆ. ಯಡಿಯೂರಪ್ಪನವರು ಶಿವಮೊಗ್ಗಕ್ಕೆ ಆಗಬೇಕೆಂದು ಹೇಳುತ್ತಾರೆ? ಮತ್ತೊಬ್ಬರು ಬಿಜಾಪುರಕ್ಕೆ

ಆಗಬೇಕೆಂದು ಹೇಳುತ್ತಾರೆ. Where is the money? ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. Hear me. ನಾನು ಬಹಳ ಜವಾಬ್ದಾರಿಯಿಂದ ಮಾತನಾಡುತ್ತೇನೆ. I am not against any place. ಶಿವಮೊಗ್ಗದಲ್ಲಿಯೂ ಆಗಲಿ, ಹಾಸನ್‌ದಲ್ಲಿಯೂ ಆಗಲಿ, I am not against any place. ಆದರೆ ಬಜೆಟ್ ಪ್ರಾವಿಷನ್ ಏನು? ಇವತ್ತು ಮೂಲಭೂತ ಸೌಕರ್ಯಕ್ಕೆ ಬಜೆಟ್‌ನಲ್ಲಿ ಯಾವುದಕ್ಕೂ ಪ್ರಾವಿಷನ್ ಇಲ್ಲ. ಟೋಕನ್ ಪ್ರಾವಿಷನ್ ಇರಬಹುದು. ಅದಕ್ಕೆ 30, 40 ಕೋಟಿ ರೂ.ಗಳನ್ನು ಇಟ್ಟಿರಬಹುದು. ಅದರಿಂದ ಯಾವ ಸಾಧನೆ ಮಾಡುವುದಕ್ಕಾಗುವುದಿಲ್ಲ. ನಿಮಗೆ ನಾನು ಸಲಹೆ ಕೊಡುತ್ತೇನೆ. ಹೆಚ್ಚಿನ ನಿಮ್ಮ thrust should be on infrastructure and human resource development. ಇದಕ್ಕೆ bullock cart ಬೇಕು. ಸೈಕಲ್ ಬೇಕು. ನಾನು ವಾದ ವಿವಾದ ಮಾಡುತ್ತಿಲ್ಲ. ಇದರ ಜೊತೆಗೆ ತಮ್ಮ ಸಂಪನ್ಮೂಲಗಳು ಹೆಚ್ಚಾಗಬೇಕಾದರೆ investments ಅನ್ನು attract ಮಾಡಬೇಕಾದರೆ, ಜನರಲ್ಲಿ ನೀವು ವಿಶ್ವಾಸವನ್ನು ಮೂಡಿಸಬೇಕು. ನಾವು investments attract ಮಾಡಲಿಕ್ಕೆ ಈ ತರಹದ ಪ್ರೋಗ್ರಾಂ ಅನ್ನು ಹಾಕಿಕೊಳ್ಳುತ್ತೇವೆಂದು ತಾವು ಹೇಳಬೇಕಾಗುತ್ತದೆ. ಹಾಗಾಗಿ ಆ ತರಹದ ಯಾವ ಪ್ರೋಗ್ರಾಂಗಳೂ ನಿಮ್ಮ ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ. ಇವತ್ತು ರೋಡ್ ಡೆವಲಪ್‌ಮೆಂಟ್‌ಗೆ ಎಷ್ಟು ಹಣ ಒದಗಿಸಿದ್ದೀರಿ? ಮಾನ್ಯ ಉಪ ಮುಖ್ಯಮಂತ್ರಿಗಳೇ, ರೋಡ್ ಪರಿಸ್ಥಿತಿ ಹೇಗೆ ಇದೆ? ದಯಮಾಡಿ ತಾವು ಹೇಳಿ? ನನ್ನ ಜಿಲ್ಲೆಯಲ್ಲಿ one of the best roads ಅನ್ನು maintain ಮಾಡಿದ್ದೇವೆ. ಇವತ್ತು ಯಾವ ಒಂದು ರಸ್ತೆಯ ಮೇಲೆ ನಡೆಯುವುದಕ್ಕೆ ಆಗುತ್ತಿಲ್ಲ. ಮಾನ್ಯ ಉದಾಸಿಯವರು ನಮ್ಮ ಪಕ್ಕದ ಜಿಲ್ಲೆಯಾದ ಹಾವೇರಿಯವರು ಅವರು ಏನು ಮಾಡಿದ್ದಾರೋ ಗೊತ್ತಿಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ, ನಾನು citicize ಮಾಡುವುದಕ್ಕೆ ಹೇಳುತ್ತಿಲ್ಲ. ನೀವು ರಸ್ತೆಯನ್ನು ಹಾಳು ಮಾಡಿದ್ದೀರೆಂದು ನಾನು ಹೇಳುತ್ತಿಲ್ಲ. Mining traffic, heavy rains. ಇವತ್ತು pot holes ಸರಿ ಮಾಡುವುದಕ್ಕಾಗುತ್ತಿಲ್ಲ. ಅದನ್ನು ತಾವು check up ಮಾಡಿ. ಧಾರವಾಡ–ಹಲಿಯಾಳ ರೋಡ್ ನೋಡಿ. ಕಲಘಟಗಿ ರೋಡ್ ನೋಡಿ. What is the situation? ಕಾರವಾರ ರೋಡ್, ADB funds ನಲ್ಲಿ ಮಾಡಿದ್ದು. One of the best roads of Hubli-Karwar, ಅಂಕೋಲ; ಇವತ್ತು ಪರಿಸ್ಥಿತಿ ಏನಿದೆ? ಅದು ghat sections ಇದೆ. ನಾನು Mining transport ಮೇಲೆ ಸೆಸ್ ಹಾಕಿ ಎಂದು ಸಲಹೆ ಕೊಟ್ಟೆ. You recover money from them. ನಿಮಗೆ ಯಾರೂ ಬೇಡವೆಂದು ಹೇಳುತ್ತಾರೆ. ಈ traffic ದಿಂದ ರೋಡ್‌ಗಳು ಹಾಳಾಗಿ ಹೋಗುತ್ತಿವೆ. ಇವರ ಮೇಲೆ control ಬೇಕು ಅಲ್ಲವೆ? ಹಾಗಾಗಿ ತಾವು ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಸೈಕಲ್ ಸ್ಕೀಮ್‌ನಲ್ಲಿ ಹಣವನ್ನು ಕೊಟ್ಟಿದ್ದೀರಿ. ಎತ್ತಿನಗಾಡಿಯ ಮೇಲೆ ಹಣವನ್ನು ಕೊಟ್ಟಿದ್ದೀರಿ. ಎತ್ತು ಕೊಟ್ಟರೆ ಚಕ್ಕಡಿ ಕೊಡುವುದಿಲ್ಲ. ಚಕ್ಕಡಿ ಕೊಟ್ಟರೆ ಎತ್ತು ಕೊಡುವುದಿಲ್ಲ. ಅದು ನಿಮ್ಮ ಸ್ಕೀಮ್, ಸಂತೋಷ. ನೀವು ಬಡವರಿಗೆ ಸಹಾಯ ಮಾಡಬೇಕಾಗುತ್ತದೆ. ನೀವು ಸಹಾಯವನ್ನು ಮಾಡುವಾಗ,

ಇದರ ಕಡೆಯೂ ಲಕ್ಷವನ್ನು ಕೊಡಬೇಕು. ತಾವೇ ನೋಡಿ, In one rupee, what is the percentage going for infrastructure? What is the percentage going for human resource development? Education Department ನಲ್ಲಿ 92% ಸಂಬಳಕ್ಕೆ ಹೋಗುತ್ತದೆ. ಅದು ಕೇಂದ್ರ ಸರ್ಕಾರದ್ದು, ಆ ಹೊಸ ಸ್ಕೀಮ್, ಸರ್ವಶಿಕ್ಷಣ ಅಭಿಯಾನ ಬಂದಿರುವುದರಿಂದ ನಿಮ್ಮ ನಮ್ಮ ಮರ್ಯಾದೆ ಉಳಿದಿದೆ. ಆ ಸರ್ವಶಿಕ್ಷಣ ಅಭಿಯಾನ ಸ್ಕೀಮ್ ಬಂದಿಲ್ಲವೆಂದರೆ ಮುಖ ತೋರಿಸುವುದು ಕಷ್ಟವಿತ್ತು. ನಮ್ಮ ಕಾಲದಲ್ಲಿ ನಾವು ಮಾಡಿದ್ದೇವೆ, ನೀವು ಏನು ಮಾಡುತ್ತಿದ್ದೀರೆಂದು ನಾನು ಪ್ರಶ್ನೆ ಮಾಡುತ್ತಿಲ್ಲ. I am telling of my period only. ಆ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಬಂದು ಇವತ್ತು school rooms, compound wall, ಹಾಗೂ ಲಾವೆಟ್ರಿ ಮತ್ತೊಂದು ಆಗುತ್ತಿವೆ. Where is the money in education? ಟೀಚರ್ ಸಂಬಳ ಅಷ್ಟೆ. ಹಾಗಾಗಿ ನಮ್ಮ ಮಕ್ಕಳ ಭವಿಷ್ಯ ರಾಷ್ಟ್ರದಲ್ಲಿ ಉಜ್ವಲ ಆಗಬೇಕಾದರೆ human resourceಗೆ, infrastructureಗೆ ಮುಂಗಡ ಪತ್ರದಲ್ಲಿ ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ, ತಾವು ತೆಗೆದು ನೋಡಿ. How much money is given for infrastructure in education? how much is the money for ports, how much is for Air ports? How much is for roads? ಜಿಲ್ಲಾ ಪಂಚಾಯಿತಿಗೆ ರೋಡ್ ರಿಪೇರಿ ಸಲುವಾಗಿ ಹಣವನ್ನು ಕೊಟ್ಟಮೇಲೆ infrastructure develop ಮಾಡುವುದಕ್ಕಾಗುವುದಿಲ್ಲ. Infrastructure is a department. What are we doing? ಅದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಿ ಎಂದು ನಾನು ಹೇಳುತ್ತಿದ್ದೇನೆ. ತಾವು ಮುಖ್ಯವಾಗಿ ಈ bullock cart scheme ತಂದಿರುತ್ತೀರಿ. Subject to correction, as a Deputy Chief Minister, ತಾವು ಅದನ್ನು ಕರೆಕ್ಟ್ ಮಾಡಬೇಕು. ಪ್ರತಿ ತಾಲ್ಲೂಕಿಗೆ 30 ಯೂನಿಟ್‌ನ್ನು ಕೊಟ್ಟಿರುತ್ತೀರಿ. Small and marginal farmersಗೆ ಎಷ್ಟು ಜನರಿಗೆ ನಾವು ಸಹಾಯಕ್ಕೆ ಮಾಡುವುದಕ್ಕಾಗುತ್ತದೆ? Maximum subsidy 20 ಸಾವಿರ ರೂ. ಚಕ್ಕಡಿ ತೆಗೆದುಕೊಂಡರೆ ಎತ್ತು ಸಿಗುವುದಿಲ್ಲ. ಎತ್ತು ತೆಗೆದುಕೊಂಡರೆ ಚಕ್ಕಡಿ ಸಿಗುವುದಿಲ್ಲ. ಇದು ಯಾವ ಸ್ಕೀಮ್? I don't know. Subject to correction, ನಾವೇನೂ ಚಕ್ಕಡಿ ಗಾಡಿಯನ್ನು ಖರೀದಿ ಮಾಡಿದ್ದೇವಾ? ನಮಗೆ ಹೇಳುತ್ತಾರೆ. ನಿಮ್ಮ ಚಕ್ಕಡಿ ಗಾಡಿಯ ಪರ್ಚೇಸ್ ರೇಟ್ ಏನು ಇದೆ, ಅದಕ್ಕಿಂತ cheap rateನಲ್ಲಿ marketನಲ್ಲಿ ಚಕ್ಕಡಿ ಗಾಡಿಗಳು ಸಿಗುತ್ತವೆ. ಅವರು ಹೇಳುತ್ತಾರೆ. Subject to correction, you correct me if I am wrong. ತದನಂತರದ ಸೈಕಲ್ ಸ್ಕೀಮ್ ಅನ್ನು ತಂದಿರುತ್ತೀರಿ. ಇದೊಂದು ಒಳ್ಳೆಯ ಸ್ಕೀಮ್ ನಾನು ಮೆಚ್ಚುತ್ತೇನೆ. ಆದರೆ ಈ ಸ್ಕೀಮ್‌ನಿಂದ ಲಾಭ ಯಾರಿಗೆ ಆಗಿದೆ? 8ನೇ ತರಗತಿಗೆ ಹೋಗುವ ಹೆಣ್ಣು ಮಕ್ಕಳಿಗೆ ಬಿಪಿಎಲ್ ಕಾರ್ಡ್ ಇದ್ದವರಿಗೆ ನೀವು ಸೈಕಲ್‌ನ್ನು ಕೊಡುತ್ತೀರಿ. ಇವತ್ತು ಬಿಪಿಎಲ್ ಕಾರ್ಡ್ 100ಕ್ಕೆ 40 ರಷ್ಟು ಕಡಿಮೆ ಮಾಡಿದ್ದೀರಿ. ನಮ್ಮ ಮುಂಡಗೋಡ ಬಗ್ಗೆ

ಹೇಳಿದೆ. ನಿಮ್ಮ ಸ್ಕೀಂನಲ್ಲಿ ಸೈಕಲ್‌ನ್ನು distribute ಮಾಡಿದಿರಿ. ನಾನು ಒಂದು ಸೈಕಲ್‌ನ್ನು ಕೂತು ನೋಡಿದೆ. ಎಲ್ಲಿ 70% ಬಿ.ಪಿ.ಎಲ್. ಕಾರ್ಡ್ ಕೊಡಬೇಕು, ಅಲ್ಲಿ 30% ಕಾರ್ಡ್ ಕೊಟ್ಟಿದ್ದೀರಿ. ಒಂದು ಕಡೆ ನೀವು ಬಿಪಿಎಲ್ ಕಾರ್ಡ್ ಹೋಲ್ಡರ್‌ಗೆ ಕೊಡಬೇಕೆಂದು ಹೇಳುತ್ತೀರಿ. ಮತ್ತೊಂದು ಕಡೆ ಬಿ.ಪಿ.ಎಲ್. ಕಾರ್ಡ್ ಹೋಲ್ಡರ್‌ಗೆ ರೇಷನ್ ಕಾರ್ಡ್ ಕೊಡದೇ ಅನ್ಯಾಯವನ್ನು ಮಾಡಿ, ಇವತ್ತು ಮುಂಡಗೋಡಿನಂತಹ ದೊಡ್ಡ ತಾಲ್ಲೂಕಿನಲ್ಲಿ 250 ಸೈಕಲ್‌ಗಳು ಅರ್ಹತೆ ಇರುವವರಿಗೆ ವಿತರಣೆ ಆಗಿದೆ. ಯಾಕೆ 252 cycles in Murugod taluk? ಯಾಕೆ ಇಂತಹ ಕಾರ್ಯಕ್ರಮವನ್ನು ಮಾಡುತ್ತೀರಿ? ಬಿಪಿಎಲ್ ಕಾರ್ಡ್‌ನಲ್ಲಿ ಇವತ್ತು ಅನ್ಯಾಯವಾಗಿದೆ. ಅದನ್ನು ತಾವು ಮಾನ್ಯ ಮುಖ್ಯಮಂತ್ರಿಗಳು ಸರಿಪಡಿಸುತ್ತೇವೆಂದು ಹೇಳಿದಿರಿ ಅದನ್ನು ಸರಿಪಡಿಸಿ. Cards restore ಮಾಡಿಸಿ. ಮತ್ತೊಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ ನಾವು ಅಕ್ಷರದಾಸೋಹ ಕಾರ್ಯಕ್ರಮವನ್ನು ತಂದೆವು. ನಾವು ಈ ಕಾರ್ಯಕ್ರಮ ತಂದಾಗ ಶಾಲೆಯಲ್ಲಿ BPL card holders, ಶ್ರೀಮಂತರು, ಬಡವರು ಎಂದು distinction ಮಾಡಿಲ್ಲ. ತಾವು ಸ್ವಲ್ಪ ವಿಚಾರ ಮಾಡಿ ನೋಡಿ. ಈ ಸ್ಕೀಮ್ ಅನ್ನು extend to all other students. 8ನೇ ತರಗತಿಯಲ್ಲಿರುವ ಎಲ್ಲಾ ಮಕ್ಕಳಿಗೆ ಇದನ್ನು extend ಮಾಡಿ. ಬಹಳ ಅನ್ಯಾಯ ಮತ್ತು ಕೆಟ್ಟ ಪರಿಣಾಮವಾಗುತ್ತಿದೆ. ನಾನು ಒಂದೆರಡು ಕಡೆ, I refused. Governmentಗೆ ಬೇಜಾರಾಗಬಹುದು. ನಾನು ಒಂದು ಕಡೆ participate ಮಾಡಿದೆ. In other places, I told that I am not coming. ನಾನು ಬರುವುದಿಲ್ಲ. you may distribute, ಚೆನ್ನಾಗಿ ಮಾಡಿ ಎಂದು ನಾನು ಹೇಳಿದೆ, ಏಕೆಂದರೆ we cannot face. ಅಲ್ಲಿ ಬೇರೆ ಸಮಾಜದ ಬಡ ಮಕ್ಕಳು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಾರೆ. ಅವರು ಲಿಂಗಾಯಿತರು ಇರಬಹುದು, ಬ್ರಾಹ್ಮಣರು ಇರಬಹುದು. ಮತ್ತೊಂದು ಜಾತಿಯವರು ಇರಬಹುದು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಇರಬಹುದು, ಮುಸಲ್ಮಾನರು ಇರಬಹುದು, ನಮ್ಮ ಮಕ್ಕಳಿಗೆ ಏಕೆ ಸೈಕಲ್ ಇಲ್ಲವೆಂದು ಕೇಳುತ್ತಾರೆ. ಅದಕ್ಕೆ ಉತ್ತರವನ್ನು ಯಾರು ಕೊಡಬೇಕು? ಹಾಗಾಗಿ ಈ ಸ್ಕೀಂನ್ನು ಎಲ್ಲಾ ಮಕ್ಕಳಿಗೂ extend ಮಾಡಿ. ಏನೂ ತಪ್ಪಿಲ್ಲ. ಹಣ ಬಹಳ ಇದೆ ಎಂದು ಹೇಳುತ್ತೀರಿ. ಬಹಳ ಹಣವಿದ್ದರೆ ಖರ್ಚು ಮಾಡಿ, extend ಮಾಡಿ. ನಿಮ್ಮ replyಯಲ್ಲಿ "I am extending the scheme to everybody" ಎಂದು announce ಮಾಡಿ. ಇದಕ್ಕೆ ರಾಮಚಂದ್ರಗೌಡರು, ಉದಾಸಿಯವರು ಮತ್ತು ಸಾರಿಗೆ ಸಚಿವರು ಬೆಂಬಲ ಕೊಡುತ್ತಾರೆಂದು ಭಾವಿಸುತ್ತೇನೆ. ಅದೇ ಪ್ರಕಾರ ರಸ್ತೆಗಳ ಅಭಿವೃದ್ಧಿ, ಪಿಡಬ್ಲ್ಯೂಡಿ ಮಿನಿಸ್ಟರ್ ಏನು ಹೇಳಿದರು ಎಂದರೆ, ನಮಗೆ ಡಿ.ಸಿ.ಎಂ. ಯವರು ಹಣ ಕೊಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅವರು 5 ಸಾವಿರ ಕೋಟಿ ರೂಪಾಯಿಗಳು ಬೇಕಾಗಿದೆ ಎಂದರು. ಎಷ್ಟು ಏಕೋ ನನಗೆ ಗೊತ್ತಿಲ್ಲ. ಅವರ ಜೊತೆ ಮಾತನಾಡಿ ಏನು ಕೊಡಬೇಕೋ ಕೊಟ್ಟು ರಸ್ತೆ ಕೆಲಸ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ಅದೊಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ. ನಂತರ ತಾವು ಹೇಳಿದಿರಿ. ಈ ಸಪ್ಲಿಮೆಂಟರಿ ಎಸ್ಟಿಮೇಟ್ ಮಂಡಿಸುವಾಗ ಶಿವಮೊಗ್ಗ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಏನು ನೀರಾವರಿ ಇದೆಯೆಂದು ಹೇಳಿ. ಸಣ್ಣ ನೀರಾವರಿಗೆ ಹಣ ಇಲ್ಲ. ನಮ್ಮ ಗೋಕುಲ್‌ರಾಂ ಸಾಹೇಬರು ಅಲ್ಲಿ ಕುಳಿತಿದ್ದಾರೆ. ಮೇಜರ್ ಇರಿಗೇಶನ್‌ಗೆ ಇಷ್ಟು ಹಣ ಒದಗಿಸದಿದ್ದರೆ what can we do ಎನ್ನುತ್ತಾರೆ. So, the minor irrigation is suffering. ನೀವೇ ಹೇಳಿದಂತೆ ಸಮುದ್ರಕ್ಕೆ ನಮ್ಮ ಕಾಳಿ, ಬೇಡ್ತಿ, ಅಘನಾಶಿನಿ ಈ ಎಲ್ಲಾ ನದಿಗಳ ನೀರು ಹರಿದು ಹೋಗುತ್ತಿದೆ. ಕಳೆದ ಆರೇಳು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಸಮುದ್ರಕ್ಕೆ ಹರಿದು ಹೋಗುತ್ತಿರುವ ನೀರನ್ನು ನೀವು ಡೈವರ್ಟ್ ಮಾಡುವ ಮೂಲಕ ಅದನ್ನು ನೀರಾವರಿಗೆ ಉಪಯೋಗಿಸಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅದಕ್ಕೆ ತಾವೂ ಸಹ ಸ್ಪಂದಿಸಿದ್ದೀರಿ. ಅದರ ಬಗ್ಗೆ ತಾವು ಸ್ವಲ್ಪ ಚಿಂತನೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇದೂ ಒಂದು ತಮ್ಮ ಬಹಳ ಪ್ರೀತಿಯ ಸ್ಕೀಮ್. ರೈತರಿಗೆ ನಾಲ್ಕು ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಡಿ, ಸಂತೋಷ ಅಭಿನಂದಿಸುತ್ತೇನೆ. ಆದರೆ, ನಿಮಗೆ ಕೇಂದ್ರ ಸರ್ಕಾರವೂ ಸಹಾಯ ಮಾಡಿತು. ಒಳ್ಳೆಯ ಟೈಮ್‌ನಲ್ಲಿ ನೀವು Finance Minister ಆಗಿದ್ದೀರಿ. Government of Indiaದವರು 7% ನಂತೆ interest rate scheme ತಂದಿದ್ದಾರೆ. ಹಾಗಾಗಿ, ನಿಮ್ಮ ಮೇಲೆ ಇವೊತ್ತು ಸಬ್ಸಿಡಿ ಬರ್ಡನ್ ಕಡಿಮೆ ಬೀಳುತ್ತಿದೆ. ಆದರೆ, ನೀವು ಎರಡು ಕೆಲಸಗಳನ್ನು ಮಾಡಬೇಕು. ಎರಡು ತಪ್ಪುಗಳನ್ನು ಮಾಡಿದ್ದೀರಿ. ಏನು ಮಾಡಿದ್ದೀರೆಂದರೆ, ಒಬ್ಬ ರೈತ ಕೇವಲ ಮೂರು ಲಕ್ಷ ರೂಪಾಯಿಗಳ ತನಕ ಸಾಲ ಪಡೆದು ಕೊಳ್ಳಬಹುದೆಂದು ನೀವು ಲಿಮಿಟೇಶನ್ ಹಾಕಿದ್ದೀರಿ. ಈ ಲಿಮಿಟೇಶನ್ ನಮ್ಮ ಕಾಲದಲ್ಲಿ ಇರಲಿಲ್ಲ. ಆ ಮೂರು ಲಕ್ಷ ರೂಪಾಯಿಗಳ ಲಿಮಿಟೇಶನ್ ತೆಗೆದು ಹಾಕಬೇಕು. ಲಾಂಗ್ ಟರ್ಮ್ ಲೋನ್‌ನಲ್ಲಿ ಒಂದು ಟ್ರ್ಯಾಕ್ಟರ್ ತೆಗೆದುಕೊಳ್ಳಬೇಕಾದರೆ, ಒಂದು ಪವರ್ ಟಿಲ್ಲರ್ ತೆಗೆದುಕೊಳ್ಳಬೇಕಾದರೆ, ಅದರ ಬೆಲೆಯೇ ಮೂರು ಲಕ್ಷ, ನಾಲ್ಕು ಲಕ್ಷ ರೂಪಾಯಿಗಳಾಗುತ್ತದೆ. ನೀವು ರೈತರಿಗೆ ಯಾವ ರೀತಿ ಸಹಾಯ ಮಾಡುತ್ತಿದ್ದೀರಿ? ನನಗೆ ಬಂದಿರುವ information ಪ್ರಕಾರ loaning has come down. Loans have come down. ಇದೇ ಪಿರಿಯಡ್‌ಗೆ ಲಾಸ್ಟ್ ಟೈಮ್‌ನಲ್ಲಿ ಏನು ನಾವು ಸಾಲ ಕೊಟ್ಟಿದ್ದೆವು. ಈ ವರ್ಷ loan has come down. ಇದಕ್ಕೆ ಬೇರೆ ಬೇರೆ ಕಾರಣ ಗಳಿರಬಹುದು. One of the reasons is, ಮುಂಚೆ ಏನಿತ್ತೆಂದರೆ, ನಾವು ಈ ಲಿಮಿಟೇಶನ್ ಹಾಕಿರಲಿಲ್ಲ. ಈಗ ನಿಮ್ಮಲ್ಲಿ ಸಾಕಷ್ಟು ಹಣ ಇದೆಯೆಂದು ಹೇಳುತ್ತಿದ್ದೀರಿ, ಏಕೆ ಲಿಮಿಟೇಶನ್ ಹಾಕುತ್ತೀರಿ ಸ್ವಾಮಿ? ರೈತರ ಪ್ರತಿನಿಧಿಗಳು ಅಂತ ಹೇಳಿ ಈ ಸೈಡ್‌ಗೆ ಬಂದು 'ರೈತರು, ರೈತರು', ಎಂದು ಹೇಳುತ್ತೀರಿ. ಅಲ್ಲಿ ಹೋಗಿ ರೈತರನ್ನು ನೋಡಿ, ಅವರು ಕಷ್ಟದಲ್ಲಿ ಇದ್ದಾರೆ. ಅದೇ ಪ್ರಕಾರದ ರೈತರಿಗೆ ನಾವು interest subsidy ಕೊಡುವಾಗ entire year we have to give subsidy. ಉದಾಸಿಯವರೆ, ಯಾವ ದಿನ ಅಂತ defaulter ಆಗುತ್ತಾನೆ,

only from that period he has to pay interest. ನಿಮ್ಮದು ಹಾಗಿಲ್ಲ. 1st April ನಿಂದ 31st March ತನಕ ಹಣ ಕೊಟ್ಟರೆ ಸಬ್ಸಿಡಿ ಸಿಗುತ್ತದೆ. ಆದರೆ, entire yearಗೆ ಸಬ್ಸಿಡಿ ಇಲ್ಲ. He has to pay penal interest. ಏನು ಮಾಡುತ್ತೀರಿ? ನಮ್ಮ ಸ್ನೇಹಿತರುಗಳಾದ ನೀವು ರೈತರ ಪ್ರತಿನಿಧಿಗಳು ಎಂದು ಹೇಳಿಕೊಳ್ಳುತ್ತೀರಿ. ಯಡಿಯೂರಪ್ಪನವರು ಮುಂಜಾನೆ ಸಹ 'ರೈತರು, ರೈತರು' ಎನ್ನುತ್ತಿದ್ದರು. ಆತ ಅಲ್ಲಿ ನೀರು ಕುಡಿಯುತ್ತಿರುತ್ತಾನೆ! ಸ್ವಲ್ಪ ಸರಿಯಾಗಿ ಬುದ್ಧಿ ಹೇಳಿ. ಒಳ್ಳೆಯ ಕೆಲಸ ಮಾಡಿ. ಜನರು ನಿಮಗೆ ಓಟು ಕೊಡಲಿ, ನಮ್ಮ ತಕರಾರೇನಿಲ್ಲ. ಆದರೆ, ಕೆಲಸ ಮಾಡಿ. ಮಾತನಾಡುವುದೊಂದು ಹೇಳುವುದೊಂದು ಬೇಡ. ಹಾಗಾಗಿ, ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈಗ ಕೊನೆಯದಾಗಿ ಒಂದೆರಡು ಮಾತು.......

ಶ್ರೀ ಹೆಚ್.ಡಿ. ಬಸವರಾಜು : ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಹಾಗೂ ಎಲ್ಲಾ ಕಡೆಗಳಲ್ಲೂ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಮೂರು ಲಕ್ಷಕ್ಕಿಂತಲೂ ಹೆಚ್ಚು ನಿಗದಿ ಮಾಡಿದಲ್ಲಿ, ಅದರಲ್ಲಿ 0.12%ಗೂ ಹೆಚ್ಚು ಜನರು ಬರುವುದಿಲ್ಲ. ದೊಡ್ಡ ದೊಡ್ಡ ಶ್ರೀಮಂತರೆನಿಸಿಕೊಂಡ ಯಾರಾದರೂ ಒಂದು ಪರ್ಸೆಂಟ್ ಉಳಿಯಬಹುದೇ ಹೊರತು, ಇನ್ನುಳಿದಂತೆ 99%ವರೆಗೂ ಮೂರು ಲಕ್ಷದೊಳಗೆ ತೆಗೆದುಕೊಳ್ಳಬೇಕು. ಹೋದ ಸಲ 6 ಪರ್ಸೆಂಟ್ ಇದ್ದಾಗ ಏನು ಕಂಡಿಷನ್ ಇತ್ತೆಂದರೆ, ನಿಗದಿತ ಅವಧಿಯೊಳಗೆ ಕಟ್ಟದಿದ್ದರೆ, ಅವನು ಡಿಫಾಲ್ಟರ್ ಆಗುತ್ತಾನೆ. ಮತ್ತು ಮೊದಲಿನಿಂದ ಕೊನೆವರೆಗೂ ಬಡ್ಡಿ ಕಟ್ಟಬೇಕೆಂದು ಏನಿದೆ, ಅದನ್ನು ನಾವು ರಿಲ್ಯಾಕ್ಸ್ ಮಾಡುತ್ತೇವೆ. ಇದರ ಬಗ್ಗೆ ನಮ್ಮ ಎಲ್ಲಾ ಶಾಸಕರುಗಳ ಒತ್ತಾಯ ಇದೆ. ಇದನ್ನು ರಿಲ್ಯಾಕ್ಸ್ ಮಾಡುವ ಮೂಲಕ ಒಂದು ಸರ್ಕಾರಿ ಆಜ್ಞೆ ಹೊರಡಿಸುತ್ತೇವೆ. ಒಂದು ತಿದ್ದುಪಡಿ ತರುತ್ತೇವೆ. ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಅದನ್ನು ಕಾರ್ಯರೂಪಕ್ಕೆ ತರುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನೀವು ಬಹಳ ಜಾಣರು. ನಿಮ್ಮ ಶಾಸಕರು ಹೇಳುತ್ತಿದ್ದಾರೆಂದು......

ಶ್ರೀ ಬಿ.ಎಸ್. ಯಡಿಯೂರಪ್ಪ : ದೇಶಪಾಂಡೆಯವರು ಹೇಳಿದರು ಅಂತಲೂ ಮಾಡುತ್ತೇನೆ. ಎಲ್ಲಾ ಕಡೆಗಳಲ್ಲೂ ಚರ್ಚೆಯಾಗಿ ಇವತ್ತು ಅನೌನ್ಸ್ ಮಾಡಬೇಕು ಅಂತಿದ್ದೆವು. ಹಿರಿಯರಾದ ನೀವು ಸಲಹೆ ಕೊಟ್ಟಾಗ ಅದನ್ನು ಯಡಿಯೂರಪ್ಪನವರು accept ಮಾಡಿಕೊಂಡರು ಎಂದಾದರೂ ಬರಲಿ. ಅದರಲ್ಲಿ ತಪ್ಪೇನಿದೆ? ಹಾಗಾಗಿ, ಮೂರು ಲಕ್ಷ ರೂಪಾಯಿಗಳವರೆಗೆ ಏನು ಒಂದು ಮಿತಿ ಇತ್ತು. ಅದನ್ನು ರಿಲ್ಯಾಕ್ಸ್ ಮಾಡುವುದಿಲ್ಲ. Interest rate ಏನಿದೆ, ಆತ ಡಿಫಾಲ್ಟರ್ ಆದ ಮೇಲೆ ಇನ್‌ಸ್ಟೈಮ್‌ನಲ್ಲಿ ಕಟ್ಟದಿದ್ದರೆ ಆತ ಹಳೆಯ ಬಡ್ಡಿಯನ್ನು ಏನು ಕಟ್ಟಬೇಕಾಗಿತ್ತು, ನೀವು ಆರು ಪರ್ಸೆಂಟ್‌ಗೆ ಏನು ಹೇಳಿದ್ದೀರಲ್ಲಾ, ಅದೇ, ಕಂಡಿಷನ್ಸ್ ಜಾರಿಗೊಳಿಸುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಮೂರು ಲಕ್ಷ ಎಂದರೆ, ಬಹಳ ಶ್ರೀಮಂತ ರೈತರು ಅಲ್ಲ. ಆದರೆ ನಿಮ್ಮ ಕೆಲವು ಅಧಿಕಾರಿಗಳು ರೈತರಿಗೆ ಸಾಕಷ್ಟು ಕಷ್ಟವನ್ನು ಕೊಡುತ್ತಿದ್ದಾರೆ. ಇದೂ ಅಡ್ಡ ಹೋಗುತ್ತಿದ್ದಾರೆ. Sir, what is Rs. 3 lakhs today? ಒಂದು ಕಾಲದಲ್ಲಿ ಲಕ್ಷಾಧಿಪತಿ ಎಂದರೆ, ಒಬ್ಬಿಬ್ಬರೋ ಇದ್ದರು. ಸ್ವಾಮಿ, ಲಕ್ಷಾಧೀಶ್ವರರು ಎಂದರೆ, ಒಂದು ಊರಿನಲ್ಲಿ ಒಬ್ಬರೋ ಇಬ್ಬರೋ ಇರುತ್ತಿದ್ದರು. ಇವೊತ್ತು ಬಹಳಷ್ಟು ಜನರು ಲಕ್ಷಾಧಿಪತಿಗಳಿದ್ದಾರೆ. ಒಬ್ಬ ಸಾಮಾನ್ಯನೂ ಸಹ ಲಕ್ಷಾಧಿಪತಿಯಾಗಿದ್ದಾನೆ. ನಮ್ಮ ಊರಿನಲ್ಲಿ ಒಬ್ಬ ಹೆಣ್ಣುಮಗಳಿದ್ದಾಳೆ. ಪಾತ್ರೆ ತಿಕ್ಕುತ್ತಾಳೆ. ಆಕೆಯ ಬ್ಯಾಂಕ್ ಬ್ಯಾಲೆನ್ಸ್ ಐವತ್ತು ಸಾವಿರ ರೂಪಾಯಿಗಳಿದೆ. ಹಾಗಾಗಿ, ನಿಮ್ಮ ಆಫೀಸರ್ಸ್ ನಿಮಗೆ ಮಿಸ್‌ಗೈಡ್ ಮಾಡುತ್ತಾರೆ. ಒಳ್ಳೆಯ ಕೆಲಸ ಮಾಡಬೇಕೆಂದು ನಿಮಗೆ ಚಿಂತನೆ ಇದೆ. ದಯಮಾಡಿ ಮೈಂಡ್ ಅಪ್ಲೈ ಮಾಡಿ, ಈ ಲಿಮಿಟೇಶನ್ ತೆಗೆಯಿರಿ.

ಶ್ರೀ ಎನ್. ಚಲುವರಾಯಸ್ವಾಮಿ : ಸ್ವಾಮಿ, ಎಲ್ಲರೂ ಶ್ರೀಮಂತರಿದ್ದಾರೆ, ಇದ್ಯಾವ ಸ್ಕೀಮುಗಳೂ ಯಾರಿಗೂ ಬೇಡ, ತೆಗೆದುಬಿಡಿ ಅಂತಲೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಚಲುವರಾಯಸ್ವಾಮಿಯವರು, ನಾವುಗಳು, ಎಲ್ಲರೂ ಕುಳಿತು ಈಗ ಏನು ಬಡ್ಡಿ ಬಾರ ಬೀಳುತ್ತದೆ, ಆತ ಡಿಫಾಲ್ಟರ್ ಆದಲ್ಲಿ ಅದು ಸರಿಯಲ್ಲ. ಆ ಅವಧಿ ಮುಗಿದ ನಂತರವೂ ಆತ ಕಟ್ಟದಿದ್ದರೆ, ದಂಡ ಹಾಕಬೇಕೆಂದು ಚರ್ಚೆ ಮಾಡಿ ಅನೌನ್ಸ್ ಮಾಡಬೇಕೆಂದಿದ್ದೇವೆ. ನೀವು ಸಹಕರಿಸಿ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಅದಕ್ಕೆ ಉಪ ಮುಖ್ಯಮಂತ್ರಿಗಳಾದ ತಮ್ಮನ್ನು ಅಭಿನಂದಿಸುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಯಡಿಯೂರಪ್ಪನವರಿಗೆ ಸಿಕ್ಕಿರುವ ಅವಕಾಶದಲ್ಲಿ maximum ಆಗಿ ಗ್ರಾಮೀಣ ಜನರಿಗೆ ಅನುಕೂಲ ಮಾಡುತ್ತಿದ್ದಾರೆ ಎಂಬುದನ್ನು ಸ್ವಲ್ಪ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ನಾನು ಅವರನ್ನು ಅಭಿನಂದಿಸಿದ್ದೇನಲ್ಲಾ. ಆ ಮೂರು ಲಕ್ಷ ರೂ. ಲಿಮಿಟ್ ಹಾಕಿರುವುದನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೂ ಸ್ವಲ್ಪ ಒಳ್ಳೆಯ ಬಜೆಟ್ .... ಈಗ ನೀವು ಹೇಳಿದ್ದೆಲ್ಲವನ್ನೂ ಸರಿ ಎನ್ನುವ ಹಾಗೆ ಮಾಡುವ ಮೂಲಕ ನಾಳಿದ್ದು ಉತ್ತರ ಕೊಡುತ್ತೇನೆ. ನೀವು ಪರ್ಮನೆಂಟಾಗಿ ವಿರೋಧ ಪಕ್ಷದಲ್ಲಿರಬೇಕಾಗುತ್ತದೆ. ಅದರ ಬಗ್ಗೆ ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ನೋಡಿ, ರಾಜ್ಯಕ್ಕೆ ಒಳ್ಳೆಯದಾಗುವುದಿದ್ದರೆ, ರಾಜ್ಯದ ಜನತೆಗೆ ಒಳ್ಳೆಯದಾಗುವುದಿದ್ದರೆ, permanently we are willing to sit in the opposition. ಒಬ್ಬರೂ ಕೆಲಸ ಮಾಡುತ್ತಿಲ್ಲ. ನೀವು ಇಲ್ಲಿ ಬರುವುದು ಗ್ಯಾರಂಟಿನೇ ಅದರಲ್ಲಿ ಪ್ರಶ್ನೆಯಿಲ್ಲ. ಚುನಾವಣೆ ಡೇಟ್ ಗೊತ್ತು ಮಾಡಿಬಿಡಿ. ನೀವು ಇಲ್ಲಿಗೆ ಬರುತ್ತೀರಿ. ನಾವು ಅಲ್ಲಿಗೆ ಹೋಗುತ್ತೇವೆ.

ಇನ್ನು ಕೊನೆಯದಾಗಿ, ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾ, ನನ್ನ ರೆವಿನ್ಯೂ resource mobilization 72% ಹೆಚ್ಚಾಗಿದೆ ಎಂದು ಹೇಳಿದಿರಿ, ಬಹಳ ಸಂತೋಷ. ತಾವು ಒಂದು ವಿಷಯ ತಿಳಿದುಕೊಳ್ಳಬೇಕು. ಒಂದು ಮಗು ಹುಟ್ಟಬೇಕಾದರೂ ಸಹ ಕನಿಷ್ಠ ಒಂಬತ್ತು ತಿಂಗಳು ಬೇಕು. ಕೆಲವು ಸಲ ಏಳು ತಿಂಗಳಿಗೇ ಹುಟ್ಟಿರುವ ಮಗುವಿನ ಬಗ್ಗೆ ನನಗೆ ಗೊತ್ತಿದೆ. ಹಾಗಾಗಿ, ಇದರ ರಿಸಲ್ಟ್ ಇದೆಯಲ್ಲಾ, ತಾವು ಒಳ್ಳೆಯ ಕೆಲಸ ಮಾಡಿಲ್ಲವೆಂದು ನಾನು ಹೇಳುವುದಿಲ್ಲ.

But, it is a foundation of last 10 to 15 years which the other Finance Ministers have laid. The credit should go to everybody, it may be S.M. Krishna, Siddaramaiah, Ramakrishna Hegde, whoever it is. ಆ ಕಾರಣದಿಂದ ನಿಮಗೆ ಸಾಧ್ಯವಾಯಿತು. ಇದು ಮೊದಲನೆಯ ವಿಚಾರ. ಎರಡನೆಯ ವಿಚಾರ, ಈ Fiscal Responsibility and Budget Management Act ಅನ್ನು ಕೃಷ್ಣರವರ ಕಾಲದಲ್ಲಿ ತಂದೆವಲ್ಲಾ, ಅದರಿಂದ ಆರ್ಥಿಕ ಇಲಾಖೆಯಲ್ಲಿ ಸಾಕಷ್ಟು ಶಿಸ್ತು ಬಂತು, financial discipline ಬಂತು. ಹಾಗಾಗಿ, ಇವೊತ್ತು ಕೇಂದ್ರ ಸರ್ಕಾರದ Planning Commission, ಪ್ರತಿ ವರ್ಷ ಕರ್ನಾಟಕ ಸರ್ಕಾರವನ್ನು ಮೆಚ್ಚುತ್ತಿದೆ. You are doing good work. ಅಂತ ನಿಮ್ಮ ರೆವಿನ್ಯೂ ಹೆಚ್ಚಿಗೆ ಹೇಗಾಯಿತು? Economy is booming. ದೆಹಲಿಯಿಂದ ಚಿದಂಬರಂರವರು ಹೇಳುತ್ತಿದ್ದಾರೆ. "My economy, GDP growth is 9%" ಆರ್.ಬಿ.ಐ.ನ ರೆಡ್ಡಿಯವರು ಹೇಳುತ್ತಿದ್ದಾರೆ. 'It will be 9.2%.' ಹಾಗಾಗಿ, the entire economy is also booming. ಅದರ ಲಾಭ ನಿಮಗೆ ಸಿಕ್ಕಿದೆ. ವ್ಯಾಟ್‌ನಿಂದ ನಿಮಗೆ 100% compansation ಸಿಕ್ಕಿದೆ. ಈ ವರ್ಷ ನಿಮಗೆ 75% compensation ಕೊಡುತ್ತಿದ್ದಾರೆ. ವ್ಯಾಟ್‌ನಿಂದ your scope has enlarged. Lot of things have come into tax net. ಅದರ ಬೆನಿಫಿಟ್ ನಿಮಗೆ ಸಿಕ್ಕಿದೆಯೆಂದು ನೀವು ತಿಳಿದುಕೊಳ್ಳಬೇಕು. ಹಾಗಾಗಿ, 75% ಆಗಿದೆ ಎಂದು ನೀವು ಮಲಗುವುದು ಬೇಡ. ಮಲಗಿದರೆ ನಿಮ್ಮನ್ನು ಹಾಗೆಯೇ ಮಲಗಿಸಿಬಿಡುತ್ತಾರೆ. You take it as a challenge and I am cautioning you. ಇದು ಕೇವಲ ಈ ಬಜೆಟ್‌ನ ಪರಿಣಾಮವಲ್ಲ. It a foundation laid 10 years back and you have to be very cautions. Economy boom ಆಗುತ್ತಿದೆ. Go to UP. Go to Maharastra. Everywhere the economy is booming. Itn the world, after China, India is growing to-day. Indiac is the fastest growing economy after China. ಹಾಗಾಗಿ ಅದರ ಲಾಭ, ಅದರ ಪರಿಣಾಮ ನಿಮ್ಮ ಸರ್ಕಾರಕ್ಕೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಎರಡನೆಯದಾಗಿ, 2–3 ಸಲಹೆಗಳನ್ನು ಕೊಡಬಯಸುತ್ತೇನೆ. ಈ ರಾಜೀವ್‌ಗಾಂಧಿ ಕುಟೀರ ಜ್ಯೋತಿ ಯೋಜನೆ ಏನಿದೆ, ಇದು ಕೇಂದ್ರ ಸರ್ಕಾರದ ಯೋಜನೆ. ನಮ್ಮ ಬೆಳಗಾವಿ ಜಿಲ್ಲೆಯಲ್ಲಿ Session ನಡೆಯುತ್ತಿದೆಯಲ್ಲಾ,

ಈ ಜಿಲ್ಲೆಗೆ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಇದು ಮಂಜೂರಾಗಿರಲಿಲ್ಲ. ನಾವು ಅಲ್ಲಿಗೆ ಹೋಗಿ ಅದನ್ನು ಮಂಜೂರು ಮಾಡಿಸಿಕೊಂಡು ಬಂದೆವು. ಆದರೆ ಈ ಬಗ್ಗೆ Government of Indiaದ REC ಕಡೆಯಿಂದ final ಆಗಿ ಒಂದು letter ಬರಬೇಕಾಗಿದೆ. ಒಬ್ಬ ಬಡವರಿಗೂ ಕುಟೀರ ಜ್ಯೋತಿ ಕೊಡಲಿಕ್ಕೆ ಆಗಿಲ್ಲ. ತಾವು ಅದರ ಬಗ್ಗೆ in anticipation of Government of India's clearance money ತಾವು ಹಣ ಬಿಡುಗಡೆ ಮಾಡಬೇಕು. ಒಬ್ಬ ಬಡವರಿಗೆ ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಂದು ಕುಟೀರ ಜ್ಯೋತಿ ಮನೆ ಸಿಕ್ಕಿಲ್ಲ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರ ನಂತರ ತಾವು ಹೇಳಿದಿರಿ. ನಮ್ಮಲ್ಲಿ ಇಷ್ಟು ಹಣ ಇದೆ, 14 ಸಾವಿರ ಕೋಟಿ ರೂ....., ಸ್ವಾಮಿ, ತಾವು ಇನ್ನೂ ಸೇವಿಂಗ್ಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಬಡವರಿಗೆ ಇವತ್ತು ರೇಷನ್ ಕಾರ್ಡ್ ಇಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ವಿನಂತಿ ಇದೆ. ನಾನೇನಾದರೂ ಮಾತನಾಡಿದರೆ, ಹಿರಿಯರು ಮಾತನಾಡುತ್ತಿದ್ದಾರೆ. ಆ ತರಹ, ಈ ತರಹ ಎಂದು ಟೀಕೆ ಮಾಡುತ್ತಾರೆ. ಬಜೆಟ್ ಮೇಲೆ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆಯೇ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಸಮಯ ನೋಡಿ. ನಾವು ಬೆಳಿಗ್ಗೆಯಿಂದ ಕುಳಿತಿದ್ದೇವೆ. ಈಗಾಗಲೇ 8.20 ಗಂಟೆ ಇನ್ನೂ ಮಾತನಾಡುವವರು ಎಷ್ಟು ಜನರಿದ್ದಾರೆ? ಒಂದು ಪಕ್ಷದ ವತಿಯಿಂದ ಎಷ್ಟು ಜನರು ಮಾತನಾಡಬೇಕು? ತಾವು ಮಾತನಾಡುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಸೀಮಿತವಾಗಿ ಮಾತನಾಡಬೇಕಲ್ಲವೇ?......

(ಅಡಚಣೆ)

ಉಪಾಧ್ಯಕ್ಷರು : ಆಯಿತು, ಬಸವರಾಜ್‌ರವರೆ, ಅವರು ಮುಗಿಸುತ್ತಾರೆ.

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜ್ : ನಾವು ಮಧ್ಯೆ ಪ್ರವೇಶ ಮಾಡಿದರೆ ಅದಕ್ಕೆ ಬಹಳ ಟೀಕೆ ಮಾಡುತ್ತೀರಿ.

ಉಪಾಧ್ಯಕ್ಷರು : ಆಯಿತು, ಬಸವರಾಜ್‌ರವರೆ, ಒಂದು ನಿಮಿಷದಲ್ಲಿ ಮುಗಿಸುತ್ತಾರೆ. ಈಗಾಗಲೇ ಅವರು ತಮ್ಮ ಭಾಷಣದ ಕೊನೆಗೆ ಬಂದಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜ್ : ತಾವು ಸರಿಯಾದ ವ್ಯವಸ್ಥೆಯಲ್ಲಿ ಎರಡು ಬಾರಿ ಬೆಲ್ ಮಾಡಿದ್ದೀರಿ. ಎರಡು ಬಾರಿ ಬೆಲ್ ಮಾಡಿದರೂ ಕೂಡ ಅವರು ಅರ್ಥ ಮಾಡಿ ಕೊಳ್ಳಲಿಲ್ಲವೆಂದರೆ ನಾವು ಮಧ್ಯಪ್ರವೇಶ ಮಾಡುವುದು ಅನಿವಾರ್ಯವಲ್ಲವೇ? ತಾವು ಎರಡು ಬಾರಿ ಬೆಲ್ ಮಾಡಿದ್ದಕ್ಕೂ ಅವರು ಮಾನ್ಯತೆ ಕೊಡಲಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು : ಆಯಿತು, ಒಂದು ನಿಮಿಷದಲ್ಲಿ ಅವರು ಮುಗಿಸುತ್ತಾರೆ. ದೇಶಪಾಂಡೆಯವರೇ, ಇನ್ನೂ ಬಹಳ ಮಾತನಾಡುವವರು ಇದ್ದಾರೆ. ಬೇಗ ಮುಗಿಸಿ.

SRI R.V. DESHPANDE : I am sorry, ನಾನು ಬೇಗ ಮುಗಿಸುತ್ತೇನೆ. ರೇಷನ್ ಕಾರ್ಡ್‌ಗಳ ವಿತರಣೆಯಲ್ಲಿ ಅನ್ಯಾಯವಾಗಿದೆ. ದಯಮಾಡಿ ಬಡವರ ಹೊಟ್ಟೆ ಮೇಲೆ ಕಾಲು ಹೊಡೆಯಬೇಡಿ. ಇದರಲ್ಲಿ ಬಹಳ ಅನ್ಯಾಯವಾಗಿದೆ. ಆಶ್ರಯ ಯೋಜನೆಯಲ್ಲಿ ಬಹಳ ಅನ್ಯಾಯವಾಗಿದೆ. ಒಂದು ಮನೆ ಕೂಡ ಕೊಡಲಿಕ್ಕೆ ಬರುತ್ತಿಲ್ಲ. ನಿಮ್ಮ 14 points ಅನ್ನು withdraw ಮಾಡಿ. ನಾನೇನು ಮಾತನಾಡುತ್ತಿದ್ದೇನೋ, ಅದು ಸದನದ ಪರವಾಗಿ ಮಾತನಾಡುತ್ತಿದ್ದೇನೆ. ಎಲ್ಲಾ ಸದಸ್ಯರೂ ಅದನ್ನು ತಿಳಿದುಕೊಳ್ಳಬೇಕು......

ಶ್ರೀ ಸಿದ್ದು ಸವದಿ : 14 points ನಮ್ಮವು ಅಲ್ಲ, ನಿಮ್ಮವು, ಅದು ಕೇಂದ್ರ ಸರ್ಕಾರದ್ದು.

ಶ್ರೀ ಆರ್.ವಿ. ದೇಶಪಾಂಡೆ : ಆ 14 pointsನ್ನು withdraw ಮಾಡಿಕೊಳ್ಳಬೇಕೆಂದು ನಾನು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಉಪಾಧ್ಯಕ್ಷರು : ಈಗ ಮಾನ್ಯ ಜ್ಞಾನೇಂದ್ರರವರು ಮಾತನಾಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನೀವು criticize ಮಾಡುವುದಿದ್ದರೆ ಮಾತನಾಡಿ. ಹೊಗಳುವಂತಿದ್ದರೆ ತಾವು ಮಾತನಾಡುವುದು ಬೇಡ.

ಉಪಾಧ್ಯಕ್ಷರು : ಸ್ವಲ್ಪ ಬೇಗ ಮುಗಿಸಿ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬಹಳ ಸಮಯವಾಗಿದೆ.

ಉಪಾಧ್ಯಕ್ಷರು : ಏನು ಮಾಡಲಿಕ್ಕಾಗುತ್ತದೆ?

ಶ್ರೀ ಎಂ. ಮಹದೇವ್ : ಮಾನ್ಯ ದೇಶಪಾಂಡೆಯವರು ಮಾತನಾಡುವಾಗ ಸಮಯವಾಗಿತ್ತು. ಈಗ ಜ್ಞಾನೇಂದ್ರರವರು ಮಾತನಾಡಲು ಆರಂಭಿಸುತ್ತಿದ್ದಾರೆ.

ಉಪಾಧ್ಯಕ್ಷರು : ಜ್ಞಾನೇಂದ್ರರವರು ಬೇಗ ಮುಗಿಸುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಜ್ಞಾನೇಂದ್ರರವರೇ, ಪೂರಕ ಅಂದಾಜುಗಳ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ವಿರೋಧ ಪಕ್ಷಗಳಿಗೆ ಅವಕಾಶ ಕೊಟ್ಟರೆ ಒಳ್ಳೆಯದು.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದು ಒಂದು ರೀತಿಯಿಂದ ಅತ್ತೂ ಕರೆದೂ ನಾವು ಔತಣಕ್ಕೆ ಹೇಳಿಸಿಕೊಂಡಂತಾಯಿತು. ಇಂತಹ ಪರಿಸ್ಥಿತಿ ನಮಗೆ ಬರಬಾರದಾಗಿತ್ತು.

ಶ್ರೀ ಆರ್.ವಿ. ದೇಶಪಾಂಡೆ : ಹಾಗಾದರೆ ತಾವು ಬೇಗನೇ ಇಲ್ಲಿಗೆ ಬಂದು ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೆ, ಜ್ಞಾನೇಂದ್ರರವರು really ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾನು ಕಳೆದ 10–12 ವರ್ಷಗಳಿಂದ ಅವರ ಭಾಷಣಗಳನ್ನು ಕೇಳುತ್ತಿದ್ದೇನೆ. ದುರ್ದೈವದಿಂದ ಒಳ್ಳೆಯ ಭಾಷಣ ಮಾಡುವುದರಿಂದಲೂ ಅವರು deprive ಆಗಿದ್ದಾರೆ. ಅವರು ಮಂತ್ರಿಗಳೂ ಸಹ ಆಗಲಿಲ್ಲ. ಅವೆರಡೂ ಅವರಿಗೆ ಸಿಕ್ಕಿಲ್ಲ. ಅವರು ಈ ಕಡೆಗೆ ಬಂದರೆ ಕನಿಷ್ಠ ಅವರಿಗೆ ಮಾತನಾಡಲಿಕ್ಕಾದರೂ chance ಸಿಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ಸಾರ್, ನೀವು ಇಲ್ಲಿದ್ದಾಗಲೂ ಕೂಡ ಕೆಲವರನ್ನು ಅಲ್ಲೆಲ್ಲಾ ತಳ್ಳಿ ಬಿಟ್ಟಿದ್ದೀರಿ.

ಉಪಾಧ್ಯಕ್ಷರು : ಜ್ಞಾನೇಂದ್ರರವರೆ, ತಾವು ಮತ್ತೆ ಅಲ್ಲಿಗೆ ಹೋಗಬೇಡಿ. ಇಲ್ಲಿಗೆ ಬನ್ನಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಇದರ ಮೇಲೆ ನಮ್ಮ ಅನೇಕ ಹಿರಿಯರು ಮಾತನಾಡಿದ್ದಾರೆ. ಪೂರಕ ಅಂದಾಜುಗಳನ್ನು ಎಲ್ಲಾ ಸರ್ಕಾರಗಳೂ ಮಂಡಿಸುತ್ತಿವೆ. ಒಂದು ಸಾರಿ ಮಂಡಿಸುತ್ತದೆ, ಎರಡು ಸಾರಿ ಮಂಡಿಸುತ್ತದೆ. ಅಗತ್ಯತೆ ಇರುವಾಗಲೆಲ್ಲಾ ಅದನ್ನು ಮಂಡಿಸಿರತಕ್ಕದ್ದನ್ನು ನಾನು ನೋಡಿದ್ದೇನೆ. ಇದೇನು ಹೊಸದೇನೂ ಅಲ್ಲ. ಮಾನ್ಯ ಯಡಿಯೂರಪ್ಪನವರು ಮಂಡಿಸಿದ್ದಾರೆ ಎಂಬುದು ಆಶ್ಚರ್ಯಕರ ಸಂಗತಿ ಏನೂ ಅಲ್ಲ. ಇದರಲ್ಲಿ ಅವರು 1409 ಕೋಟಿ ರೂಪಾಯಿಗಳ ಪೂರಕ ಅಂದಾಜನ್ನು ಮಂಡಿಸಿದರೂ ಕೂಡ, 1243 ಕೋಟಿ 41 ಲಕ್ಷದ 78 ಸಾವಿರ ರೂಪಾಯಿಗಳು ಮಾತ್ರ ರಾಜಸ್ವದಿಂದ ಹೊರ ಹೋಗುವಂತಹ ಮೊಬಲಗು ಆಗುತ್ತದೆ. ನಾನು ಹೆಚ್ಚು ಉದ್ದ ಮಾತನಾಡಲಿಕ್ಕೆ ಹೋಗುವುದಿಲ್ಲ. ಇದರಲ್ಲಿ ವಿಶೇಷವಾಗಿ, ಒಂದು ನಾಗರಿಕ ಸರ್ಕಾರ ಬಂದಾಗಲೆಲ್ಲಾ popular programmes announce ಮಾಡುವಂಥಾದ್ದು ಸಹಜ. ಏಕೆಂದರೆ, ನಾವು ಏನೇನೋ ಹೇಳಿಕೊಂಡು ಬಂದಿರುತ್ತೇವೆ. ಬಡವರಿಗೆ ಅದು ಮಾಡುತ್ತೇವೆ, ಇದು ಮಾಡುತ್ತೇವೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ ಎಂದು ಹೇಳಿರುತ್ತೇವೆ. ಹೀಗೆ ನಮ್ಮ ಸರ್ಕಾರವೂ ಕೂಡ ಮಾಡಿದೆ. ಉದಾಹರಣೆಗೆ ಭಾಗ್ಯಲಕ್ಷ್ಮಿ ಯೋಜನೆ, ಸೈಕಲ್‌ಗಳನ್ನು ಕೊಡುವಂಥಾದ್ದು. ಇದೆಲ್ಲವೂ ಕೂಡ ಯೋಜನೆಗಳು. ನೀವು ಇಲ್ಲಿದ್ದಾಗಲೂ ಕೂಡ ಅನೇಕ ಯೋಜನೆಗಳನ್ನು ಮಾಡಿದ್ದೀರಿ. ಶ್ರಮಶಕ್ತಿ ಯೋಜನೆ, ನಮ್ಮ ಹೊಲ, ನಮ್ಮ ರಸ್ತೆ, SC/ST ಮಕ್ಕಳಿಗೆ fee reimbursement, BCM ಮಕ್ಕಳಿಗೆ fee reimbursement ಇವೆಲ್ಲಾ ನಿಮ್ಮ ಸರ್ಕಾರದ popular ಯೋಜನೆಗಳಾಗಿದ್ದವು. ಈ ಯೋಜನೆಗಳನ್ನು announce ಮಾಡುವುದು ಮಾತ್ರವಲ್ಲ, ಯೋಜನೆಗಳು ಬಜೆಟ್ ಮಂಡಿಸುವ ದಿವಸ ಹುಟ್ಟುತ್ತವೆ ಮತ್ತು ಅನೇಕ ಯೋಜನೆಗಳು ಅವತ್ತೇ ಸತ್ತು ಹೋಗುತ್ತವೆ. ಅದನ್ನು ಜಾರಿಗೆ ಕೊಡಬೇಕೆನ್ನುವ ಬದ್ಧತೆ ಯಾವ ಸರ್ಕಾರಕ್ಕೆ ಇರುತ್ತದೋ ಅದು ನಿಜವಾದಂತಹ ಜನಪರ ವಾಗಿರತಕ್ಕಂತಹ ಸರ್ಕಾರವಾಗುತ್ತದೆ. ಈ ಬಜೆಟ್‌ನಲ್ಲೂ ಕೂಡ ನಾವು ನೋಡಬಹುದು. ಯಾವ್ಯಾವುದಕ್ಕೆಲ್ಲಾ ಹಣ ಕೊಟ್ಟಿದ್ದಾರೆ ಎಂದರೆ ಇವರದು ಹಳೆಯ ಸಾಲ ತೀರಿಸುವುದಕ್ಕೆ ಕೊಟ್ಟಿದ್ದಾರೆ. ಬಹಳಷ್ಟು ಹಳೆಯ ಸಾಲಗಳನ್ನು ತೀರಿಸಲಿಕ್ಕೆ ಹಣ ಒದಗಿಸಲಾಗಿದೆ. ನಮ್ಮ ಹೊಸ ಯೋಜನೆಗಳಿಗಿಂತ ಹಳೆಯ ಸಾಲಗಳನ್ನು ತೀರಿಸಿ, ಒಂದು ಸರ್ಕಾರದ ಮರ್ಯಾದೆ ಉಳಿಸಿಕೊಳ್ಳುವುದಕ್ಕೋಸ್ಕರ ಹಣವನ್ನು ಒದಗಿಸಬೇಕಾಯಿತು. SC/ST & BCM ವಿದ್ಯಾರ್ಥಿಗಳ fee reimbursement ಗೋಸ್ಕರ ಹಣವನ್ನು ಇಡಲಾಗಿದೆ. ನಾನು ಕೇಳುತ್ತೇನೆ. ಇವೆಲ್ಲವೂ ಕೂಡ 2002ನೇ ಇಸವಿಯಲ್ಲಿ

ಬಾಕಿ ಇತ್ತು. ಅಲ್ಲಿಂದ ಕೊಡಲೇ ಇಲ್ಲ. BCM ಮತ್ತು SC/ST ವಿದ್ಯಾರ್ಥಿಗಳಿಗೆ ಮುಂಗೈಗೆ ತುಪ್ಪ ಹಚ್ಚಿ ಆ ಸಂಸ್ಥೆಗಳಿಗೆ ನಾವು ಕೊಡುತ್ತೇವೆ ಎಂದು ಹೇಳಿದಿರಿ. ನಿಮ್ಮ ಸರ್ಕಾರದ ಮೇಲಿರುವಂತಹ ನಂಬಿಕೆಯಿಂದ ಅನೇಕ ಖಾಸಗಿ ಶಾಲೆಗಳವರು ನಿಮ್ಮಿಂದ ದುಡ್ಡು ಬರುತ್ತದೆಂದು ವಿದ್ಯಾರ್ಥಿಗಳನ್ನು ಸೇರಿಸಿಕೊಂಡರು, ಆದರೆ ಹಣ ಬರಲಿಲ್ಲ. ಇವತ್ತೂ ಕೂಡ ನಿಮ್ಮ ಸರ್ಕಾರ ಅಥವಾ ನಮ್ಮ ಸರ್ಕಾರ ಆ ಖಾಸಗಿ ಸಂಸ್ಥೆಗಳಿಗೆ defaulter ಆಗಿದೆ. ಆ ಹಣವನ್ನು ಬಿಡುಗಡೆ ಮಾಡದೇ, ಒಂದು ನಾಗರಿಕ ಸರ್ಕಾರದ ನಂಬಿಕೆಯನ್ನು ನಿಮ್ಮ ಸರ್ಕಾರ ಕಳೆದಿದೆ; ಇದರ ಪರಿಣಾಮ ಏನೇನಾಯಿತು ಎಂಬುದನ್ನು ನಾವು ಅನುಭವಿಸುತ್ತಿದ್ದೇವೆ. ನಮ್ಮ ಮನೆಯ ಪಕ್ಕದ ಒಬ್ಬ ವಿದ್ಯಾರ್ಥಿ ಬೆಂಗಳೂರಿನ ಕಾಲೇಜ್‌ವೊಂದರಲ್ಲಿ Engineering Degree ಮಾಡಿದ. ಅವನದ್ದು First Class ನಲ್ಲಿ ಪಾಸಾಯಿತು. ಅವನಿಗೆ Private Company ವೊಂದರಲ್ಲಿ ಕೆಲಸವೂ ಸಿಕ್ಕಿತು. ಕಾಲೇಜ್ ಅವನಿಗೆ Marks Card ಅನ್ನು ಕೊಡದೇ ತಡೆ ಹಿಡಿದರು. ಏಕೆಂದರೆ 25 ಸಾವಿರ ರೂಪಾಯಿಗಳನ್ನು ಅವನ ಸಂಬಂಧ BCM Department ನವರು Engineering Collegeಗೆ ಕಟ್ಟಬೇಕಾಗಿತ್ತು. ಅದನ್ನು ಕಟ್ಟಲಿಲ್ಲ. ಒಂದು ಉದಾಹರಣೆಯನ್ನು ಮಾತ್ರ ನಾನಿಲ್ಲಿ ಹೇಳುತ್ತಿದ್ದೇನೆ. ನಾನು ಈ ಬಗ್ಗೆ ಸಾಕಷ್ಟು ಮಂತ್ರಿಗಳಿಗೆಲ್ಲಾ ಹೇಳಿಯಾಯಿತು. ಹಿಂದೆ ಸಿದ್ದರಾಮಯ್ಯನವರು ಇದ್ದರು, ಅವರಿಗೆ ನಾನು ಬಹಳಷ್ಟು ಸಾರಿ ಹೇಳಿದ್ದೆ. ಅವರು ಒಳ್ಳೆಯ Finance Minister ಆಗಿದ್ದರು. ನಾನು ಹೇಳಿದರೂ release ಆಗಲಿಲ್ಲ. ಅವತ್ತು ಇದ್ದಂತಹ ನಮ್ಮ ಹಣಕಾಸು ಇಲಾಖೆಯ ಕಾರ್ಯದರ್ಶಿಗಳಿಗೆ ನಾನು ಈ ಬಗ್ಗೆ ಸಾವಿರ ಸಲ ಹೇಳಿದೆ. ಸ್ವಾಮಿ, ಬಡ ವಿದ್ಯಾರ್ಥಿಗಳ ಜೀವನದ ಪ್ರಶ್ನೆ ಇದಾಗಿದೆ, ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ದಯವಿಟ್ಟು ಕೊಟ್ಟು ಕಳುಹಿಸಿ ಎಂದು ನಾನು ಅವರಿಗೆ ಹೇಳಿದೆ. ಒಂದು ಪೈಸೆ ಸಹ ಬಿಡುಗಡೆ ಆಗಲಿಲ್ಲ. ನೀವು ಇವತ್ತು ಅಲ್ಲಿ ಕುಳಿತು ಟೀಕೆ ಮಾಡುತ್ತಿದ್ದೀರಲ್ಲಾ, ನಿಮ್ಮ ಸರ್ಕಾರದಲ್ಲಿ ನಿಮ್ಮ ಮುಖ್ಯಮಂತ್ರಿಗಳಾಗಲಿ, ನಿಮ್ಮ Finance Minister ಆಗಲಿ ಕೇಳುವಂತಹ ಕಾಳಜಿಯನ್ನು ತೋರಿಸಲಿಲ್ಲ. ನಾನು ಅದಕ್ಕಾಗಿ ಖರ್ಗೆ ಸಾಹೇಬರು ಎದ್ದು ನಿಂತಾಗ ಹೇಳಿದೆ. ಅವರಿಗೆ ಬೇಸರವಾಗಿರಬಹುದು. ಅವರು ಆ ವರ್ಗದಿಂದ ಬಂದಿರುವವರು ಆಗಿದ್ದರಿಂದ ಅಂತಹವರು ಆ ಕ್ಯಾಬಿನೆಟ್‌ನಲ್ಲಿ ಇದ್ದಾಗಲೂ ಕೂಡ ಆ ಹಣ ಏಕೆ ಬಿಡುಗಡೆ ಆಗಲಿಲ್ಲ. xx ಇವತ್ತೂ ಕೂಡ ನಮ್ಮ ಎದುರುಗಡೆ ಆ ಬಗ್ಗೆ figures ಇದೆ. 60 ಕೋಟಿ ರೂಪಾಯಿಗಳ balance ಅನ್ನು ಆ institutions ಗಳಿಗೆ ಕೊಡಬೇಕಾಗಿದೆ. ನಮ್ಮ Finance Department ಪ್ರಧಾನ ಕಾರ್ಯದರ್ಶಿಯವರನ್ನು BCM Committee ಗೆ ಕರೆಸಿಕೊಂಡು ಎರಡೆರಡು ದಿವಸ ಹಿಗ್ಗಾಮುಗ್ಗಾ ಗೋಳಾಡಿಸಿದೆವು. ಶ್ರೀ ಗೋಕುಲ್‌ರಾಂರವರೆ,

---

xx ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಕೊಡುವುದಿಲ್ಲ? ನೀವು ಇಲ್ಲಿ ಹೇಳಿ ಹೋಗಿ, ಸರ್ಕಾರದ ಪರವಾಗಿ ರೆಕಾರ್ಡ್ ಮಾಡಿ ಎಂದು ಅವರಿಗೆ ಹೇಳಿದೆವು. ಅವರು ಏನು ಮಾಡಬಹುದು? ಸ್ವಾಮಿ, ನಮ್ಮ ಹಿಂಸೆಯನ್ನು ತಾಳಲಾರದೆ ಬಹುಶಃ ಎಂಟೂವರೆ ಕೋಟಿ ರೂಪಾಯಿಗಳನ್ನು ಪೂರಕ ಅಂದಾಜುಗಳಲ್ಲಿ ಸೇರಿಸಿ, ಮಾನ್ಯ ಯಡಿಯೂರಪ್ಪನವರು ಅವರಿಗೆ ಸ್ಪಂದಿಸಿ, ಈ ವರ್ಷದ ಅನುದಾನವನ್ನು ಅವರಿಗೆ ಕೊಟ್ಟಿದ್ದಾರೆ. ಇದಕ್ಕಾಗಿ ನೀವು ಎದ್ದು ಮಾನ್ಯ ಯಡಿಯೂರಪ್ಪನವರನ್ನು ಅಭಿನಂದಿಸಬೇಕಾಗಿತ್ತು. ನಮ್ಮ Finance Department ಅನ್ನು ಅಭಿನಂದಿಸಬೇಕಾಗಿತ್ತು. ಬದಲಾಗಿ ನೀವು ಹಾಗೆ, ಹೀಗೆ ಎಂದು ಎಷ್ಟೆಷ್ಟೋ ಹೇಳುತ್ತಿದ್ದೀರಿ......

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ಜ್ಞಾನೇಂದ್ರರವರೆ, ದಯವಿಟ್ಟು ಯೀಲ್ಡ್ ಆಗಿ. I am on a Point of Order. ಮಾನ್ಯ ಉಪಾಧ್ಯಕ್ಷರೆ, ಸಮಿತಿಯಲ್ಲಿ ನಡೆದಂಥ ವಿಚಾರಗಳನ್ನು ಸದನದಲ್ಲಿ ನೇರವಾಗಿ ಪ್ರಸ್ತಾಪ ಮಾಡಲು ಬರುವುದಿಲ್ಲ. ಆದರೆ ಆ ರೀತಿ ಅವರು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಸಮಿತಿಗೆ ಗೋಕುಲ್‌ರಾಂರವರನ್ನು ಕರೆಸಿದ್ದೆ, ನಾನು ಅವರಿಗೆ ಹೇಳಿದ್ದೆ ಎನ್ನುತ್ತಿದ್ದಾರೆ, ಅಂದರೆ. Has it become an extra constitutional authority?

ಶ್ರೀ ಹೆಚ್.ಡಿ. ಬಸವರಾಜು : ಸಮಿತಿ ರಿಪೋರ್ಟ್ ಈಗಾಗಲೇ ಕೊಟ್ಟಾಗಿದೆ. ಅವರು ಸದನಕ್ಕೆ ವಸ್ತುಸ್ಥಿತಿಯನ್ನು ಹೇಳುತ್ತಿದ್ದಾರೆ.

SRI C.S. NADAGOUDA APPAJI : No, you cannot make a reference, you can only submit a report. You cannot discuss on that.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಅವರು ನಿಯಮಾವಳಿ ಏನಿದೆ, ಅದನ್ನು ಆ ಪ್ರಕಾರವೇ ಅವರು ಪಾಲನೆ ಮಾಡಲಿ. ಅದನ್ನು ಬಿಟ್ಟು ಸುಮ್ಮನೆ ಅವರು ಅದನ್ನು ಮಾಡಿದೆ, ಇದನ್ನು ಮಾಡಿದೆ ಎನ್ನುವುದು ಸರಿಯಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಬಿ.ಸಿ.ಎಂ. ಸಮಿತಿ ರಿಪೋರ್ಟ್‌ನ್ನು ಈಗಾಗಲೇ ಈ ಸದನದಲ್ಲಿ ಮಂಡನೆ ಮಾಡಲಾಗಿದೆ. ನಾನು ಈಗ ಎಲ್ಲಿ ಬೇಕಾದರೂ ಹೇಳಬಹುದು. ಆದುದರಿಂದ ದಯವಿಟ್ಟು ವಾಸ್ತವಿಕ ಸಂಗತಿಯನ್ನು ಅವರು ಒಪ್ಪಿಕೊಳ್ಳಬೇಕು. ಸುಮ್ಮನೆ ಪಾಯಿಂಟ್ ಆಫ್ ಆರ್ಡರ್ ಮತ್ತು ಅದು ಇದು ಎಂದು ನೀವು ಏನು ಬೇಕಾದರೂ ನನಗೆ ಅಡಚಣೆ ಮಾಡಿ. ಆದರೆ ನಮ್ಮ ಸರ್ಕಾರ ಏನು ಮಾಡಿದೆ ಎಂಬುದನ್ನು ನೀವು ಒಪ್ಪಿಕೊಳ್ಳಿ. ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ, ಎಸ್.ಸಿ., ಎಸ್.ಟಿ., ವಿದ್ಯಾರ್ಥಿಗಳಿಗೆ ಸರ್ಕಾರ ಮಾಡಿರತಕ್ಕಂಥದ್ದು ಒಪ್ಪಿಕೊಳ್ಳಿ. ಇದನ್ನೆಲ್ಲಾ ಹೇಳುವುದರ ಮೂಲಕ ಸರ್ಕಾರವನ್ನು ಸಮರ್ಥನೆ ಮಾಡುವುದು ತಪ್ಪೇನಲ್ಲ.

ಉಪಾಧ್ಯಕ್ಷರು : ಬೇರೆ ಸದಸ್ಯರು ಕುಳಿತುಕೊಳ್ಳಿ. ಜ್ಞಾನೇಂದ್ರರವರು ಮಾತನಾಡಿದ ಮೇಲೆ ಮಾತನಾಡುವಿರಂತೆ.

ಶ್ರೀ ಆರಗ ಜ್ಞಾನೇಂದ್ರ : ಹಿಂದೆ ಸರ್ಕಾರ ಒಂದು ಪಾಪ್ಯುಲರ್ ಪ್ರೋಗ್ರಾ ಅನ್ನು ಅನೌನ್ಸ್ ಮಾಡಿದ ಮೇಲೆ ಅದನ್ನು ಅವರ ಕಾಲದಲ್ಲಿಯೇ ಜನರಿಗೆ ತಲುಪಿಸಬೇಕು ಎಂಬ ಬದ್ಧತೆಯನ್ನು ಇಟ್ಟುಕೊಂಡಿರಬೇಕಾಗಿತ್ತು. ಆ ನಿಟ್ಟಿನಲ್ಲಿ ಈ ಸರ್ಕಾರ ಯಾವ ರೀತಿ ಅದನ್ನು ಪ್ರಕಟಿಸಿದೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಈಗಾಗಲೇ ಮಾರ್ಚ್‌ನಿಂದ ನಂತರ ಹುಟ್ಟಿರತಕ್ಕಂಥ ಹೆಣ್ಣು ಮಕ್ಕಳ ಹೆಸರಿನಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಏನು ಇಡಬೇಕಾಗಿತ್ತೋ ಆ ಬಗ್ಗೆ ಈಗಾಗಲೇ ಕಾಳಜಿಯನ್ನು ನಮ್ಮ ಹಣಕಾಸು ಮಂತ್ರಿಗಳು ತೋರಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಈಗಾಗಲೇ ಸೈಕಲ್‌ಗಳು ವಿತರಣೆಯಾಗಿದೆ. ನಾವು ಬಂದು ಇನ್ನೂ ಒಂದು ವರ್ಷವಾಗಿಲ್ಲ. ಶ್ರಮ ಶಕ್ತಿ ಯೋಜನೆಯ ಹಣ ಒಂದೂವರೆ ವರ್ಷದ ನಂತರ ಬಿಡುಗಡೆಯಾಯಿತು. ಶ್ರಮ ಶಕ್ತಿ ಯೋಜನೆಯನ್ನು ಬಜೆಟ್‌ನಲ್ಲಿ ಅನೌನ್ಸ್ ಮಾಡಿದ ನಂತರ ಅದರ ಹಣ ಬಿಡುಗಡೆಯಾಗಲು ಒಂದೂವರೆ ವರ್ಷ ಬೇಕಾಯಿತು. ಅಂದರೆ ಇವರದೇನು ಎಂದರೆ ಪಾಪ್ಯುಲರ್ ಪ್ರೋಗ್ರಾಂ ಅನ್ನು ಅನೌನ್ಸ್ ಮಾಡುವುದು, ಬಜೆಟ್‌ನ ದಿವಸ ಭಾರಿ ದೊಡ್ಡ ಪ್ರಚಾರ, ಈ ಸರ್ಕಾರ ಬಡವರ ಪರವಾಗಿರುವಂಥ ಸರ್ಕಾರ, ಇಂಥಿಂಥ ಯೋಜನೆಗಳನ್ನು ಮಾಡಿದೆ, ಆಮೇಲೆ ಅದು ಮುಗಿಯಿತು, ಅದು ಅನುಷ್ಠಾನ ಆಗಿದೆಯೋ ಅಥವಾ ಇಲ್ಲವೋ ನೋಡುವುದೇ ಇಲ್ಲ. ಆ ಮಾಧ್ಯಮದವರೂ ಅದನ್ನು ನೋಡುವುದಕ್ಕೆ ಹೋಗುವುದಿಲ್ಲ. ಪಾಪ ಅವರಿಗೆ ಅದು ಅನಗತ್ಯ. ಆದರೆ ಸರ್ಕಾರ ಕೂಡ ಅದಕ್ಕೆ ಬದ್ಧವಾಗಿರುವುದಿಲ್ಲ. ಇದು ಪರಿಸ್ಥಿತಿ. ಇಷ್ಟು ವರ್ಷ ಈ ರೀತಿಯೇ ನಡೆದುಕೊಂಡು ಬಂದಿರತಕ್ಕಂಥದ್ದು. ಆದರೆ ಈಗಿರುವ ಸರ್ಕಾರ ನುಡಿದಂತೆ ನಡೆದಂಥ ಪ್ರಥಮ ಸರ್ಕಾರ ಎಂದು ಹೇಳುವುದಕ್ಕೆ ನನಗೆ ಅತ್ಯಂತ ಸಂತೋಷವಾಗುತ್ತಿದೆ ಎಂದು ಹೇಳಬಯಸುತ್ತೇನೆ. ಹಿಂದಿನ ಸರ್ಕಾರ ವೀರಪ್ಪನ್ ಅನ್ನು ಮಟ್ಟ ಹಾಕಿದ ಪೊಲೀಸ್‌ರವರುಗಳಿಗೆ ಅವಾರ್ಡ್‌ನ್ನು ಕೊಡುವುದಾಗಿ ಬಹಳ ಶೌರ್ಯದಿಂದ ಘೋಷಣೆ ಮಾಡಿದರು. ಘೋಷಣೆ ಮಾಡಿ ನಮ್ಮ ಪೊಲೀಸ್‌ನವರಿಗೆ ಸಾಕಷ್ಟು ಹಣವನ್ನು ಕೊಡುತ್ತೇವೆ ಎಂದು ಹೇಳಿ ಜನರಿಂದ ಶಹಭಾಸ್‌ಗಿರಿಯನ್ನು ಗಳಿಸಿಕೊಂಡರು. ಕಾಡುಮೇಡುಗಳಲ್ಲಿ ಅಲೆದು ಅಂಥ ಒಬ್ಬ ದುಷ್ಟನನ್ನು ಅಂತ್ಯ ಮಾಡಿ ಬಹಳ ದೊಡ್ಡ ಸಾಧನೆ ಮಾಡಿದೆ ಎಂದು ಹೇಳಿ ಘೋಷಣೆಯನ್ನು ಮಾಡಿದರು. ಘೋಷಣೆ ಮಾಡಿದರೇ ಹೊರತು ನಿಮ್ಮ ಕಾಲದಲ್ಲಿ ಅದು ಬಿಡುಗಡೆಯಾಯಿತೇ? ಏಕೆ ನೀವು ಪ್ರಕಟ ಮಾಡಿದಿರಿ? ಏಕೆ ನೀವು ಪ್ರಕಟ ಮಾಡಿ ಮಾಧ್ಯಮದಲ್ಲಿ ಕ್ರೆಡಿಟ್‌ನ್ನು ತೆಗೆದುಕೊಂಡಿರಿ?

ಶ್ರೀ ಎಂ. ಮಹದೇವು : ಜ್ಞಾನೇಂದ್ರರವರೆ, ನಿಮ್ಮ ಪ್ರೆಸೆಂಟ್ ಕೊಯಲೇಶನ್ ಪಾರ್ಟನರ್ ಹಳೇ ಗೌವರ್ನ್‌ಮೆಂಟ್‌ನಲ್ಲಿ ಇದ್ದವರು. ಇದನ್ನು ತಾವು ತಮ್ಮ ಗಮನದಲ್ಲಿಟ್ಟುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು : ನಿಮ್ಮ ಮುಖ್ಯಮಂತ್ರಿಗಳೇ ಆಗ ಪಾರ್ಟ್‌ನರ್ ಇದ್ದರು.

ಶ್ರೀ ವಿ. ಸೋಮಣ್ಣ : ಉಪಾಧ್ಯಕ್ಷರೇ, ಜ್ಞಾನೇಂದ್ರರವರು ಹೇಳುತ್ತಿರುವುದು ಏನೆಂದರೆ, ಅವರದ್ದು "ಪೂರ್ತಿ ಬಿ.ಜೆ.ಪಿ. ಸರ್ಕಾರವೇ ಇದೆ" ಯಡಿಯೂರಪ್ಪ ಸಾಹೇಬರು ಒಬ್ಬರೇ ಎನ್ನುವಂಥ

ಭಾವನೆಯಲ್ಲಿ ಹೇಳುತ್ತಿರುವಂತಿದೆ. ಯಡಿಯೂರಪ್ಪನವರ ಬಗ್ಗೆ ನಮಗ್ಯಾರಿಗೂ ಬೇಸರ ಇಲ್ಲ. ನೀವು ಮಾತನಾಡುವಾಗ ಸರಿಯಾಗಿ ಮಾತನಾಡಿ. ನಾವು ಹರಿಶ್ಚಂದ್ರರು ಬೇರೆಯವರು ಕಳ್ಳರು ಎನ್ನುವಂತೆ ಹೇಳಬಾರದು.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ನೀವು ಕಾಂಗ್ರೆಸ್‌ನವರ ಜೊತೆಗೆ ಇದ್ದಾಗ ಪಾಪ ಕಾಂಗ್ರೆಸ್ ಮನಸ್ಥಿತಿಯ ನಿಮ್ಮಂಥವರೂ ಕೂಡ ಅಲ್ಲಿ ಇದ್ದರು. ಏನೂ ಮಾಡುವುದಕ್ಕೆ ಆಗಲಿಲ್ಲ. ಈಗ ಕುಮಾರಸ್ವಾಮಿಯವರು ಮತ್ತು ನಾವು ಒಟ್ಟಿಗೆ ಸೇರಿಕೊಂಡ ಮೇಲೆ ಇವೆಲ್ಲವನ್ನೂ ಕೂಡ ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವುದಕ್ಕೆ ಆಯಿತು. ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ಸ್ವಚ್ಛ ಗ್ರಾಮ ಯಾರ ಕೂಸು ಹೇಳಿ? ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಇಟ್ಟುಕೊಂಡು ಹೇಳುತ್ತಿದ್ದೇನೆ. ಸ್ವಚ್ಛ ಗ್ರಾಮ ಅದು ನಿಮ್ಮ ಕೂಸು. ಆದರೆ ನೀವೇನು ಮಾಡಿದಿರಿ? ನೀವು ಅದಕ್ಕೆ ಹಣವನ್ನು ಕೊಡಲಿಲ್ಲ. 5400 ಲಕ್ಷ ರೂಪಾಯಿಗಳನ್ನು ಸ್ವಚ್ಛ ಗ್ರಾಮ ಯೋಜನೆಗೆ ಈ ಪೂರಕ ಅಂದಾಜುಗಳಲ್ಲಿ ಇಡಲಾಗಿದೆ. ಸ್ವಲ್ಪ ಈ ಕಡೆಗೆ ಗಮನಿಸಿ. ನೀವು ಪಾಪ್ಯುಲರ್ ಪ್ರೋಗ್ರಾಂಗಳಲ್ಲಿ ಅನೌನ್ಸ್ ಮಾಡುವುದು ಸುಲಭ. ಆದರೆ ಇದಕ್ಕೆ ಕೊಡಬೇಕಾದ ಹಣವನ್ನು ಕೊಡುವ ಕೆಲಸವನ್ನು ನೀವು ಪ್ರಾಮಾಣಿಕವಾಗಿ ಮಾಡಲಿಲ್ಲ.

ಶ್ರೀ ಎಂ. ಮಹದೇವು : ಜ್ಞಾನೇಂದ್ರರವರೆ, ನೀವು ನಿಮ್ಮ ಅಚೀವ್‌ಮೆಂಟ್ಸ್‌ನ್ನು ಹೇಳಿ ತೊಂದರೆಯಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಕೃಷ್ಣಾರವರ ಕಾಲದಿಂದ, ಕೇವಲ ಧರ್ಮಸಿಂಗ್ ಕಾಲದಲ್ಲಿ ಸ್ವಾಮಿ, ಕೃಷ್ಣಾ ಕಾಲದ್ದೂ ಕೂಡ ಬಾಕಿ ಹಾಗೆಯೇ ಇದೆ, ಅದನ್ನು ಈ ಸರ್ಕಾರ ಇವತ್ತು ತೀರುವಳಿ ಮಾಡುತ್ತಿದೆ, ಇಷ್ಟರ ಮಟ್ಟಿಗೆ ನೀವು ಸಂತೋಷ ಪಡಬೇಕಾಗಿದೆ.

ಶ್ರೀ ಎಂ. ಮಹದೇವು : ಜ್ಞಾನೇಂದ್ರರವರೆ, ನೀವು ನಿಮ್ಮ ಅಚೀವ್‌ಮೆಂಟ್ ಬಗ್ಗೆ ಹೇಳಿ. blame gameಗೆ ದಯವಿಟ್ಟು ಹೋಗಬೇಡಿ. Blame gameಗೆ ಹೋದರೆ ಎಲ್ಲರೂ ಶುರು ಮಾಡುತ್ತಾರೆ. ಕೃಷ್ಣಾರವರ ಸರ್ಕಾರದ್ದೂ ಚರ್ಚೆಯಾಗುತ್ತದೆ. ಧರ್ಮಸಿಂಗ್ ಸರ್ಕಾರದ್ದೂ ಚರ್ಚೆಯಾಗುತ್ತದೆ. ಆದ್ದರಿಂದ ತಾವು ದಯವಿಟ್ಟು blame game ಗೆ ಹೋಗಬೇಡಿ.

(ಅಡಚಣೆ)

ಉಪಾಧ್ಯಕ್ಷರು : ಬೇರೆಯವರು ಆಮೇಲೆ ಮಾತನಾಡಿ. ಈಗ ಮಧ್ಯೆ ಮಾತನಾಡಿದರೆ ಅವರು ಮುಗಿಸುವುದಕ್ಕೆ ತೊಂದರೆಯಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ : ಜ್ಞಾನೇಂದ್ರರವರು ಇಷ್ಟು ಹೊತ್ತು ಸರ್ಕಾರವನ್ನು ಹೊಗಳುತ್ತಲೇ ಇದ್ದಾರೆ. ಅವರ ಸರ್ಕಾರದ ಸಾಧನೆ ಇವತ್ತು CNN:IBN ನಲ್ಲಿ ಬರುತ್ತಾ ಇದೆ. ಹೋಗಿ

ನೋಡಿಕೊಂಡು ಬರಲಿ ಪಾಪ ಜ್ಞಾನೇಂದ್ರರವರು, ನನಗೆ ಗೊತ್ತಿಲ್ಲ. ಆದರೆ ನನಗೆ ಕೆಲವರು ಹೇಳಿದ್ದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅವರು ಈಗ ಸಮ್ಮಿಶ್ರ ಸರ್ಕಾರ ರಾಮರಾಜ್ಯ ಎಂದು ಹೇಳುತ್ತಿದ್ದಾರೆ. ಆದರೆ ಹಿಂದಿನ ಸರ್ಕಾರದ blame game ಮಾಡುವುದು ಬೇಡ. ಅವರು ಏನೋ ಮ್ಯಾನ್‌ದೇಟ್ ಹೇಳಿದ್ದಾರೆ, ಅದರಲ್ಲಿ ಏನೋ ಘೋಷಣೆ ಮಾಡಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ ಎಂಬುದನ್ನು ಅವರು ಹೇಳಲಿ. ಹಿಂದಿನ ಸರ್ಕಾರ ಏನು ಮಾಡಿತು, ಅವರು ಏನು ಬಾಕಿ ಉಳಿಸಿದರು ಎಂಬುದನ್ನು ಹೇಳುವುದು ಬೇಡ. ಸ್ವಚ್ಛ ಗ್ರಾಮ ಯೋಜನೆಗೆ ಇಲ್ಲಿಯವರೆಗೂ ದುಡ್ಡು ಇಟ್ಟಿರಲಿಲ್ಲ. ಈಗ ದುಡ್ಡನ್ನು ಇಟ್ಟಿದ್ದಾರೆ.

(ಅಡಚಣೆ)

ಉಪಾಧ್ಯಕ್ಷರು : ಮಧ್ಯೆ ಯಾರೂ ಮಾತನಾಡಬೇಡಿ. ಜ್ಞಾನೇಂದ್ರರವರು ಮಾತನಾಡಲಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ಶಾಲೆಯ ಹೆಣ್ಣು ಮಕ್ಕಳಿಗೆ ಸೈಕಲ್ ಕೊಡುವ ಕಾರ್ಯಕ್ರಮ ಒಳ್ಳೆಯ ಕಾರ್ಯಕ್ರಮವೇ ಆಗಿದೆ. ಅದನ್ನು ಎಲ್ಲಾ ಪಕ್ಷಗಳವರೂ ಸ್ವಾಗತಿಸುತ್ತಾರೆ. ಮಾನ್ಯ ಖರ್ಗೆಯವರೂ ಸ್ವಾಗತಿಸುತ್ತಿದ್ದಾರೆ. ಆರಗ ಜ್ಞಾನೇಂದ್ರ ಒಬ್ಬರೇ ಅದನ್ನು ಸ್ವಾಗತಿಸಿದರೆ ಸಾಲದು. ಹೀಗೆ ಒಳ್ಳೆಯ ಕಾರ್ಯಕ್ರಮ ಮಾಡಿರುವುದನ್ನು ಹೇಳಬೇಕೇ ಹೊರತು ಹಿಂದಿನ ಸರ್ಕಾರವನ್ನು blame ಮಾಡುವುದಕ್ಕೆ ಹೋಗಬಾರದು. ಅಂದರೆ ಇವರ ಪ್ರಕಾರ ಹಿಂದಿನ ಸರ್ಕಾರಗಳು ಇದುವರೆಗೆ ಏನೂ ಮಾಡಿಲ್ಲವೇ? ಹಿಂದಿನ ಸರ್ಕಾರದಲ್ಲಿ ಜೆ.ಡಿ.ಎಸ್. ನವರು ಇದ್ದರು, ಆಗ ಏನೂ ಕೆಲಸ ತೀರ್ಥಹಳ್ಳಿಯಲ್ಲಿ ಆಗಲಿಲ್ಲವೇ

ಶ್ರೀ ಆರಗ ಜ್ಞಾನೇಂದ್ರ : ನೀವು ಮಾತನಾಡಬೇಕಾದರೆ ಆ ಬಗ್ಗೆ ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅವರು ಮಾತನಾಡುವಾಗ ಅವರ ಸರ್ಕಾರದ ಸಾಧನೆಗಳನ್ನು ಹೇಳಲಿ. ಈಗ ನೋಡಿ. ದೇಶಪಾಂಡೆಯವರು ಮಾತನಾಡುವಾಗ ಶೇ. 4 ರಂತೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುವ ಬಗ್ಗೆ ಹೇಳಿದ್ದಿರಿ, 3 ಲಕ್ಷ ಲಿಮಿಟ್ ಮಾಡಿದ್ದೀರಿ ಎಂದು ಹೇಳಿದರು. ಅದನ್ನು ಮಾನ್ಯ ಯಡಿಯೂರಪ್ಪನವರು ಒಪ್ಪಿಕೊಂಡರು. ನಾವೂ ಕೂಡ ಒಪ್ಪಿಕೊಳ್ಳುತ್ತೇವೆ. ರೈತ ಎಂದ ಮೇಲೆ ಸಣ್ಣ ರೈತನೂ ರೈತನೇ, ದೊಡ್ಡ ರೈತನೂ ರೈತನೇ.

ಶ್ರೀ ಆರಗ ಜ್ಞಾನೇಂದ್ರ : ನೀವು ಈಗ ಮಾತನಾಡಬೇಡಿ. ನಾನು yield ಆಗಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : yield ಆಗಿ ನೀವು.

ಶ್ರೀ ಆರಗ ಜ್ಞಾನೇಂದ್ರ : ನಾನು yield ಆಗೋಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : x ಅವರು ಏನೂ ಮಾಡಲಿಲ್ಲ ಎಂದು ಹೇಳುವುದಕ್ಕೆ ನೀವ್ಯಾರು? x ಏನೂ ಮಾಡಲಿಲ್ಲವೆಂದು ಅವತ್ತೇ ಏಕೆ ನೀವು ಕೇಳಲಿಲ್ಲ?

ಶ್ರೀ ಆರಗ ಜ್ಞಾನೇಂದ್ರ : ನಾವೂ ಅವತ್ತೂ ಕೇಳಿದ್ದೇವೆ. ಅವತ್ತೂ ಕೇಳಿದ್ದೇವೆ ಎಂದು ನಾನು ಹೇಳುತ್ತಿದ್ದೇನೆ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಸ್ವಾಮಿ ನಾನು ಯೀಲ್ಡ್ ಆಗಿಲ್ಲ. ತಮಗೆ ಅವಕಾಶ ಸಿಕ್ಕಿದ ಕೂಡಲೇ ಮಾತನಾಡಿ. ಸಾರ್ ಅವರಿಗೆ ದಯವಿಟ್ಟು ಹೇಳಿ. ನೋಡಿ ಸಾರ್, ಅವರು ಪ್ರಾಮಾಣಿಕವಾಗಿ ಕುಳಿತುಕೊಂಡಿದ್ದಾರೆ. ಅವರಿಗೆ ಗೊತ್ತಿದೆ. ಅವರೆಲ್ಲಾ ಪ್ರಾಮಾಣಿಕವಾಗಿ ಕುಳಿತುಕೊಂಡಿದ್ದಾರೆ. ಅವರಿಗೆ ತಪ್ಪಿನ ಅರಿವು ಇದೆ.

(ಅಡಚಣೆ)

ಶ್ರೀ ಎನ್.ಎಸ್. ಭೋಸರಾಜು : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವರಾಜುರವರು ನಮ್ಮವರೆಲ್ಲರಿಗೂ ಬಜೆಟ್ ಮೇಲೆ ಮಾತನಾಡಿ ಎಂದು ಬುದ್ಧಿ ಹೇಳಿದ್ದಾರೆ. ಹಳೇ ಸರ್ಕಾರಗಳ ಹೆಸರು ಹೇಳಿ ಸಮಯ ಹಾಳು ಮಾಡುವುದು ಬೇಡ. ಬಜೆಟ್ ಮೇಲೆ ಮಾತನಾಡಲಿ. ಸೀನಿಯರ್ ಮೆಂಬರ್ಸ್ ಎಲ್ಲರಿಗೂ ಎಚ್ಚರಿಕೆ ಕೊಟ್ಟರು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಿದ್ದಾಗ ಹೇಳಿದರು. ಮಾನ್ಯ ದೇಶಪಾಂಡೆಯವರು ಮಾತನಾಡುತ್ತಿದ್ದಾಗ ಹೇಳಿದರು. ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಿದ್ದಾಗ ಹೇಳಿದರು. ಎಲ್ಲರಿಗೂ ಅವರು ಬಜೆಟ್ ಮೇಲೆ ಮಾತನಾಡಿ ಎಂದು ಬುದ್ಧಿ ಹೇಳಿದರು. ಇದು ಬಜೆಟ್ ಮೇಲಿನ ಚರ್ಚೆನಾ?

(ಅಡಚಣೆ)

ಶ್ರೀ ಎನ್.ಎಸ್. ಬೋಸರಾಜು : ನೀವು ಏನು ಮಾಡಿದರೂ ಮಂತ್ರಿಯಾಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ನನಗೆ ಅವಕಾಶ ಕೊಡುತ್ತೀರೋ ಇಲ್ಲವೋ ಹೇಳಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೇ, ಒಂದು ಗಮನದಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಆರಗ ಜ್ಞಾನೇಂದ್ರ : ಇಲ್ಲಪ್ಪ ನಾನು ಯೀಲ್ಡ್ ಆಗಲಿಲ್ಲ. ನೀವು ಮಾತನಾಡುವಾಗ ಮಾತನಾಡಿ. ನಾನು ಯೀಲ್ಡ್ ಆಗುವುದಿಲ್ಲ ಸಾರಿ. ನಾನು ಯೀಲ್ಡ್ ಆಗಲಿಲ್ಲ.

(ಅಡಚಣೆ)

ಒಬ್ಬರು ಮಾನ್ಯ ಸದಸ್ಯರು : ಜ್ಞಾನೇಂದ್ರರವರೇ, ಸ್ವಲ್ಪ ತಾವು ಯೀಲ್ಡ್ ಆಗಿ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲ, ನೀವು ಮಾತನಾಡುವಾಗ ಮಾತನಾಡಿ. ಸಾರ್ ನಾನು ಯೀಲ್ಡ್ ಆಗಲಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಸಾರ್ ಪಾಯಿಂಟ್ ಆಫ್ ಆರ್ಡರ್......

ಶ್ರೀ ಆರಗ ಜ್ಞಾನೇಂದ್ರ : ಯಾವ ಪಾಯಿಂಟೂ ಇಲ್ಲ. ಯಾವ ಆರ್ಡರೂ ಇಲ್ಲ.

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಅಡಚಣೆ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ. ನೀವು ಕಡತದಿಂದ ತೆಗೆಸಿ ಹಾಕಬೇಕು. ಮಾನ್ಯ ಸಿದ್ಧರಾಮಯ್ಯನವರು ಇಲ್ಲಿ ಈಗ ಹೌಸ್‌ನಲ್ಲಿ ಇಲ್ಲ. ಅವರು ಡಿಪೆಂಡ್ ಮಾಡುವುದಕ್ಕೆ ಆಗುವುದಿಲ್ಲ. X ಆದ್ದರಿಂದ ಅವರ ಬಗ್ಗೆ X ಅವರು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಕಡತದಿಂದ ತೆಗೆದುಹಾಕಬೇಕು. ಏಕೆಂದರೆ ಮೆಂಬರ್ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸದನದಲ್ಲಿ ಇಲ್ಲ. ಆ ರೀತಿ ಮನಸ್ಸಿಗೆ ಬಂದ ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಅನ್‌ಪಾರ್ಲಿಮೆಂಟರಿ ವರ್ಡ್ ಅನ್ನು ನಾನು ಹೇಳಲಿಲ್ಲ.

ಉಪಾಧ್ಯಕ್ಷರು : ಇಲ್ಲ. ಇದು ಬಹಳ ಅತಿಯಾಯಿತು. ಎಂಟೂ ಮುಕ್ಕಾಲು ಗಂಟೆ ಆಯಿತು. ಇದನ್ನು ನಾಲ್ಕು ಗಂಟೆಯುವರೆಗೆ ಚರ್ಚೆ ಮಾಡಿದಿರಿ. ಸ್ವಲ್ಪವಾದರೂ ಅರ್ಥವಾಗುತ್ತದೆಯೇ? ಇಲ್ಲವೇ? ಇನ್ನು ಐದಾರು ಜನರಿದ್ದಾರೆ ಮಾತನಾಡುವವರು. ಈಗ ಸದನ ನಡೆಸಬೇಕು ಎಂದು ಇದ್ದೀರೋ ಇಲ್ಲವೋ?

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ನಾನು ಯಾವುದೇ ಅನ್‌ಪಾರ್ಲಿಮೆಂಟರಿ ವರ್ಡ್ ಅನ್ನು ಉಪಯೋಗ ಮಾಡಲಿಲ್ಲ. ಆಗಿರತಕ್ಕಂಥಾದ್ದನ್ನು ನಾನು ಹೇಳಿದ್ದೇನೆ. ಈಗಾಗಲೇ ಉದಾಹರಣೆಗೆ,

ಉಪಾಧ್ಯಕ್ಷರು : ಜ್ಞಾನೇಂದ್ರರವರೆ, ತಾವು ಬೇಗ ಮುಗಿಸಿಬಿಡಿ.

ಶ್ರೀ ಆರಗ ಜ್ಞಾನೇಂದ್ರ : ನಾನು ಮಾತನಾಡುವುದಕ್ಕೆ ಬಿಡುತ್ತಿಲ್ಲ.

ಉಪಾಧ್ಯಕ್ಷರು : ನೀವು ಸಬ್ಜೆಕ್ಟ್ ಬಗ್ಗೆ ಮಾತನಾಡಿ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಉದಾಹರಣೆಗೆ, ನಬಾರ್ಡ್ ಯೋಜನೆಯಲ್ಲಿ ರಸ್ತೆಗೆ.....

(ಅಡಚಣೆ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೆ, X ಹೆಸರನ್ನು ಕಡತದಿಂದ ತೆಗೆಯಬೇಕು. ಮಾನ್ಯ ಯಡಿಯೂರಪ್ಪನವರು ಒಪ್ಪಿಕೊಂಡಿದ್ದಾರೆ, ಹಿಂದಿನ ಸರ್ಕಾರದ ಸಂಗ್ರಹಣೆ, ಈಗಿನ ಸರ್ಕಾರದ ಸಂಗ್ರಹಣೆ ಬಗ್ಗೆ...

ಉಪಾಧ್ಯಕ್ಷರು : ಕಡತದಿಂದ ತೆಗೆದು ಹಾಕುತ್ತೇನೆ.

X ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲ, ಇಲ್ಲ, ಅನ್‌ಪಾರ್ಲಿಮೆಂಟರಿ ವರ್ಡ್ ಯಾವುದನ್ನೂ ನಾನು ಹೇಳಲಿಲ್ಲ.

(ಅಡಚಣೆ)

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ತಾವು ಅನೌನ್ಸ್ ಮಾಡಬೇಕು.

ಉಪಾಧ್ಯಕ್ಷರು : ಆಯಿತು.

(ಅಡಚಣೆ)

ಒಬ್ಬರು ಮಾನ್ಯ ಸದಸ್ಯರು : ಅದು ರೆಕಾರ್ಡ್ ಆಗಿದೆ.

ಡಾ: ಹೆಚ್.ಸಿ. ಮಹದೇವಪ್ಪ : ಇಡೀ ಸದನ ಒಕ್ಕೊರಲಿನಿಂದ ಅವರ ಹಣಕಾಸಿನ ನಿರ್ವಹಣೆಯ ಬಗ್ಗೆ ಮೆಚ್ಚುಗೆ ಸೂಚಿಸಿದೆ.

ಶ್ರೀ ಆರಗ ಜ್ಞಾನೇಂದ್ರ : ನಾನು ಮೆಚ್ಚುಗೆ ವ್ಯಕ್ತಪಡಿಸಿದ್ದೇನೆ. ಅವರು ಬಿಸಿಎಂ ಮಕ್ಕಳಿಗೆ ಹಣ ಕೊಡಲಿಲ್ಲ ಎನ್ನುವ ಪದವನ್ನು ಹೇಳಿದ್ದೇನೆ. ನಾನು ಉಳಿದಿರತಕ್ಕಂಥ ಅವರ ಯಾವುದೇ ಹಣಕಾಸಿನ ನಿರ್ವಹಣೆ ಬಗ್ಗೆ ಟೀಕೆ ಮಾಡಿಲ್ಲ.

(ಅಡಚಣೆ)

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ಅದನ್ನು ಕಡತದಿಂದ ತೆಗೆದು ಹಾಕಿ.

ಉಪಾಧ್ಯಕ್ಷರು : ಇಲ್ಲಿ ನೀವು ಯಾರು ಏನು ಮಾತನಾಡುತ್ತಿದ್ದೀರಿ ಎಂಬುದು ಯಾರಿಗೂ ಏನೂ ಕೇಳಿಸುತ್ತಿಲ್ಲ. ಯಾರಾದರೂ ಒಬ್ಬೊಬ್ಬರು ಮಾತನಾಡಿ. ಎಲ್ಲರೂ ನಿಂತುಕೊಂಡು ಮಾತನಾಡಿದರೆ ಏನು ಕೇಳಿಸುತ್ತದೆ? ಕಡತ ತರಿಸೋಣ. ಅದರಲ್ಲಿ ಏನು ಮಾಡಿದ್ದಾರೆ ಎಂದು ನೋಡೋಣ.

ಶ್ರೀ ಹೆಚ್.ಡಿ. ಬಸವರಾಜು : ಚೆನ್ನಬಸಪ್ಪನವರ ಬಗ್ಗೆ ಏಕೆ ಮಾತನಾಡಿದರು?

(ಅಡಚಣೆ)

ಉಪಾಧ್ಯಕ್ಷರು : ಕಡತ ತರಿಸುತ್ತೇನೆ. ಅದರಲ್ಲಿ ಏನು ರೆಕಾರ್ಡ್ ಆಗಿದೆ ಎಂದು ನೋಡೋಣ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಒಂದು ತೀರ್ಮಾನಕ್ಕೆ ಬರಬೇಕು, ಅಭಿವೃದ್ಧಿ ಎನ್ನುವುದು ನಿರಂತರ. ನನ್ನ ಜೇಬಿನಿಂದ, ಕಾಂಗ್ರೆಸ್ ಜೇಬಿನಿಂದ ಅಲ್ಲ.

ಉಪಾಧ್ಯಕ್ಷರು : ಈಗ ಕಡತ ನೋಡೋಣ, ಅವರು ಏನು ಮಾತನಾಡಿದ್ದಾರೆ ಎನ್ನುವುದಕ್ಕೆ......

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಒಂದು ವೇಳೆ ಮಾನ್ಯ ಸದಸ್ಯರಾದ ಜ್ಞಾನೇಂದ್ರರವರು ಆಕ್ಷೇಪಾರ್ಹವಾದ ಮಾತುಗಳನ್ನು x ಈ ಸದನದಲ್ಲಿ ಹಾಜರಿದ್ದು ಸಮರ್ಥಿಸಿಕೊಳ್ಳುವುದಕ್ಕೆ ಆಗುವುದಿಲ್ಲವೋ ಅಂತಹವರ ಕುರಿತಾಗಿ ಏನಾದರೂ ವ್ಯಾಖ್ಯಾನ ಮಾಡಿದರೆ ಅದು ಅನ್ಯಾಯವಾಗುತ್ತದೆ. ಅದು ಸದನದ ಸಂಪ್ರದಾಯಕ್ಕೆ ವಿರುದ್ಧವಾಗುತ್ತದೆ. ಆದುದರಿಂದ ತಾವು ಆಶ್ವಾಸನೆಯನ್ನು ಕೊಟ್ಟುಬಿಡಿ, ಅಂತಾದ್ದು ಏನೇ ಇದ್ದರೂ ಕೂಡ ಅದನ್ನು ತೆಗೆಸಿ ಹಾಕುತ್ತೇನೆ ಎಂದು ಹೇಳಿದರೆ, ಆಗ ಅವರು ಸಮಾಧಾನವಾಗಿ ಇರುತ್ತಾರೆ.

ಉಪಾಧ್ಯಕ್ಷರು : ಆಗಲೇ ಹೇಳಿದ್ದೇನೆ. ಅಂತಾದ್ದು ಏನಾದರೂ ಇದ್ದರೆ ತೆಗೆಸಿ ಹಾಕುತ್ತೇನೆ. ವೈಯಕ್ತಿಕವಾಗಿ ಏನಾದರೂ ಮಾತನಾಡಿದ್ದರೆ, ಅದನ್ನು ನೋಡಿಬಿಟ್ಟು ತೆಗೆಸೋಣ ಎಂದು;

ಶ್ರೀ ಕೆ.ಆರ್. ರಮೇಶ್‌ಕುಮಾರ್ : ತಾವು ತಕ್ಷಣ ಕ್ರಮ ತೆಗೆದುಕೊಳ್ಳದೇ ಹೋದರೆ, ಆ ಮಾತುಗಳು ಪತ್ರಿಕೆಗಳಲ್ಲಿ ಅಚ್ಚಾಗಿ ಬಂದು ಬಿಡುತ್ತದೆ. ಅದಕ್ಕೆ ಇನ್‌ಸ್ಟ್ರಕ್ಷನ್ಸ್ ಕೊಟ್ಟರೆ ತಂದು ಕೊಡುತ್ತಾರೆ. ಅವರು ಮಾತನಾಡುತ್ತಿರಲಿ, ಆಮೇಲೆ ಎರಡು ನಿಮಿಷ ಬಿಟ್ಟು ತಿಳಿಸಿಬಿಡಿ.

ಉಪಾಧ್ಯಕ್ಷರು : ಆಯಿತು, ತೆಗೆಸಿಬಿಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ನಾನು ಯಾವುದೇ bad taste ನಿಂದ ಅದನ್ನು ಹೇಳಲಿಲ್ಲ. ಮಾನ್ಯ x ಬಗ್ಗೆ ನನಗೂ ಅಪಾರವಾದ ಗೌರವ ಇದೆ. ನಾನು ಅವರ ಬಗ್ಗೆ ಗೌರವ ಇಟ್ಟುಕೊಂಡಿರತಕ್ಕಂಥ ವ್ಯಕ್ತಿ. ಅವರ ಆರ್ಥಿಕ ವಿಷಯದ ಬಗ್ಗೆ ನಾನು ಕೂಡ ಮುಕ್ತವಾಗಿ ಹೊಗಳಿರತಕ್ಕಂಥವನು. ಆದರೆ ಈ ನಬಾರ್ಡ್ ರಸ್ತೆಗಳು ಯಾರ ಕಾಲದಲ್ಲಿ ಮಂಜೂರಾಯಿತು?

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ನಾವೂ 80 ಜನ ಇಲ್ಲಿದ್ದೇವೆ. ಜೊತೆಗೆ ಜೆಡಿಎಸ್, ಮತ್ತೆ ಇಲ್ಲಿ ಒಬ್ಬರೂ ಮಾತನಾಡುವುದಕ್ಕೆ ಬಿಡುವುದಿಲ್ಲ. ಹೀಗೆಲ್ಲಾ ಡಿಸ್ಟರ್ಬ್ ಮಾಡಿದರೆ, ನಮಗೂ ಕೂಡ ಗೊತ್ತಿದೆ. ಈ ರೀತಿ ಎಲ್ಲಾ ಅನಾವಶ್ಯಕವಾಗಿ ಡಿಸ್ಟರ್ಬ್ ಮಾಡುವುದಕ್ಕೆ ಹೋಗಬೇಡಿ. ನೀವೆಲ್ಲಾ ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡಿರುತ್ತೇವೆ. ಗೌರವದಿಂದ ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್ : ಏನು ಚಾಲೆಂಜ್ ಮಾಡುತ್ತೀರಾ?

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಚಾಲೆಂಜ್ ಏನಾದರೂ ಇದ್ದರೆ ಹೇಳಿ; ಇಲ್ಲಿ ಯಾರಿಗೂ ಮಾತನಾಡುವುದಕ್ಕಾಗುವುದಿಲ್ಲ.

(ಅಡಚಣೆ)

ಉಪಾಧ್ಯಕ್ಷರು : ಬಾಲಕೃಷ್ಣರವರೇ, ಸ್ವಲ್ಪ ಸುಮ್ಮನಿರಿ.

---

x ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ನಾವು ಗಂಭೀರವಾಗಿ ಮಾತನಾಡುತ್ತಿದ್ದೇವೆ. ದಯವಿಟ್ಟು ನಾನು ಯೀಲ್ಡ್ ಆಗಲಿಲ್ಲ.

ಶ್ರೀ ಎಂ. ಮಹದೇವ್ : ನಾನು ಒಂದು ಮಾತು ಹೇಳಿ, ಆಮೇಲೆ.....

ಉಪಾಧ್ಯಕ್ಷರು : ಒಂದು ವಿಷಯ ಹೇಳುತ್ತೇನೆ ಕೇಳಿ, ಈಗ ಸದನದಲ್ಲಿ ಇಲ್ಲದೇ ಇರುವಂತಹ ವ್ಯಕ್ತಿಗಳ ಮೇಲೆ ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಹಾಗೂ ಎಸ್.ಎಂ. ಕೃಷ್ಣ ಅವರ ಬಗ್ಗೆ ಅವರು ಮಾತನಾಡಿದ್ದಾರೆ ಎಂಬುದು ನಿಮ್ಮಗೆಲ್ಲರಿಗೂ ನೋವಾಗಿದೆ. ಅದು ಕಡತದಲ್ಲಿ ಬಂದಿದ್ದರೆ ಅದನ್ನು ತೆಗೆಸಿಹಾಕುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆಂದೂ ಕೂಡ ಹೇಳಿದ್ದೇವೆ. ಅದು ಅಲ್ಲಿಗೆ ಮುಗಿದು ಹೋದ ಮೇಲೆ ಮತ್ತೆ ಏಕೆ ಈ ವಿಷಯವನ್ನು ಎತ್ತುತ್ತೀರಿ?

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರು ಸರ್ಕಾರದ ಸಾಧನೆ ಬಗ್ಗೆ ಮಾತನಾಡಲಿ. ಅಭಿವೃದ್ಧಿ ಎನ್ನುವುದು ನಿರಂತರ. It goes on, ಜೆಡಿಎಸ್ ಗೌವರ್ನಮೆಂಟ್ ಬರಲಿ, ಕಾಂಗ್ರೆಸ್ ಗೌವರ್ನ್‌ಮೆಂಟ್ ಬರಲಿ, It goes on. ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣ ತೆರಿಗೆಯಿಂದ ಮತ್ತು external barrowing ನಿಂದ ತೆಗೆದುಕೊಂಡು ಹೋಗುತ್ತೇವೆ. ಇವತ್ತು ಹಳೇ ಸರ್ಕಾರದ ಸಾಧನೆ ಕೂಡ ಇರುತ್ತದೆ. ಆದರೆ ಒಂದು ಬ್ಲೇಮ್ ಗೇಮ್ ಮಾಡುವುದಕ್ಕೆ ಹೋಗಬಾರದು. ನಾವು ಮಾಡಿದೆವು, ಇವರು ಮಾಡಲಿಲ್ಲ. x ಬಿಡುಗಡೆ ಮಾಡಲಿಲ್ಲ. ಇದು wrong precedent ಆಗುತ್ತದೆ. He should not do it.

ಉಪಾಧ್ಯಕ್ಷರು : ನೀವು ಬೇಗ ಅದನ್ನೇ ಮುಗಿಸಿ, ಅದನ್ನೇ ಹೇಳುತ್ತೀರಿ. ಇನ್ನೂ ಬಿಲ್ ಪಾಸ್ ಆಗುವುದು ಬೇಡವೇ ಹಾಗಾದರೆ?

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನನಗೆ ಇವರು ಯಾರೂ ಮಾತನಾಡುವುದನ್ನು ಕಲಿಸಿಕೊಡುವ ಅಥವಾ ಪಾಠ ಹೇಳಿಕೊಡುವ ಅವಶ್ಯಕತೆಯಿಲ್ಲ. ನಾನು ಮೂರನೇ ಬಾರಿ ಶಾಸನ ಸಭೆಗೆ ಬಂದಿದ್ದೇನೆ.

(ಅಡಚಣೆ)

ಒಬ್ಬರು ಮಾನ್ಯ ಸದಸ್ಯರು : ಹೀಗೆ ಮಾತನಾಡಿದರೆ ಕಲಿಸಬೇಕಾಗುತ್ತದೆ. ಹೇಳಲೇಬೇಕಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ಹಳೇ ಕಾಲದ್ದು, ಹೊಸ ಕಾಲದ್ದು ಇದನ್ನೆಲ್ಲಾ ಹೇಳುವ ಅವಶ್ಯಕತೆಯಿಲ್ಲ. ಹಳೆ ಸರ್ಕಾರ ಏನು ಮಾಡಿದೆ? ಹೊಸ ಸರ್ಕಾರ ಏನು ಮಾಡಿದೆ? ಇವರೆಲ್ಲರೂ ಏನೇನು ಮಾತನಾಡಿದ್ದಾರೆ ಎಂದು ರೆಕಾರ್ಡ್ ತೆಗೆಸಿ ನೋಡೋಣ. ಎಲ್ಲರೂ ಕೂಡ ಆ ಚೌಕಟ್ಟಿನೊಳಗೆ ಮಾತನಾಡಿದ್ದಾರೆ?

ಒಬ್ಬರು ಮಾನ್ಯ ಸದಸ್ಯರು : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನೀವೇನು ಮಾಡುತ್ತೀರಾ?

ಶ್ರೀ ಆರಗ ಜ್ಞಾನೇಂದ್ರ : ನಾವು ಟೀಕೆ ಮಾಡುವಾಗ ಟೀಕೆ ಮಾಡಬೇಕು. ಬೇರೆ ಬೇರೆಯವರು ಏನೇನು ಸಾಧನೆ ಮಾಡಿದ್ದಾರೆ ಅದನ್ನು ಹೇಳಬೇಕು. ಇದನ್ನು ಯಾರೋ ಸುಮ್ಮನೆ ಟ್ಯೂಷನ್ ಹೇಳುವಂಥಾದ್ದು ಬೇಡ. ಈಗ ಉದಾಹರಣೆಗೆ ನಬಾರ್ಡ್, ಹಿಂದಿನ ಎರಡು ವರ್ಷದ ಹಿಂದೆ ನಬಾರ್ಡ್ ಯೋಜನೆಯಲ್ಲಿ ಕಾಮಗಾರಿಗಳು ಮಂಜೂರಾಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಬಸವರಾಜುರವರು ಮಾತನಾಡಿದರು. ಮಾನ್ಯ ಚೆನ್ನಬಸಪ್ಪನವರ ಬಗ್ಗೆ ಏಕೆ ಮಾತನಾಡಿದರು ಅಂತ. ಬಸವರಾಜ್‌ರವರೇ, ನಾವು ಮಾತನಾಡಬಹುದು. ಆದರೆ ಯಾರೂ ಕೂಡ ಟೀಕೆ ಮಾಡಬಾರದು.

ಶ್ರೀ ಹೆಚ್.ಡಿ. ಬಸವರಾಜು : ನಾನು ಆ ಒಂದು ಉದ್ದೇಶದಿಂದ ಮಾತನಾಡಲಿಲ್ಲ. ನನಗೆ ಮಾತನಾಡುವುದು ಗೊತ್ತಿದೆ. ನಾನು ನಿಮ್ಮಿಂದ ಮಾತನಾಡುವುದನ್ನು ಕಲಿಯಬೇಕಾಗಿಲ್ಲ.

(ಅಡಚಣೆ)

ಉಪಾಧ್ಯಕ್ಷರು : ಮಾನ್ಯ ಆರಗ ಜ್ಞಾನೇಂದ್ರರವರೇ, ತಾವು ಬೇಗ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಬಿಡದಿದ್ದರೆ ನಾನು ಏನು ಮಾಡುವುದು? ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಇನ್ನೂ ಐದು ನಿಮಿಷಗಳೂ ಕೂಡ ಆಗಿಲ್ಲ. ಅವರೆಲ್ಲರೂ ಗಂಟೆಗಟ್ಟಲೆ ಮಾತನಾಡಿದರು. ನಾವೆಲ್ಲರೂ ಬೆಳಗ್ಗೆಯಿಂದ ಅವರ ಭಾಷಣಗಳನ್ನು ಕೇಳುತ್ತಿದ್ದೆವು.

ಉಪಾಧ್ಯಕ್ಷರು : ತಾವು ಬೇಗ ಭಾಷಣವನ್ನು ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಬಾರ್ಡ್ ರಸ್ತೆಗಳಿಗೆ ಎರಡು ವರ್ಷಗಳ ಹಿಂದೆ ಮಂಜೂರಾಗಿರುವ ಕಾಮಗಾರಿಗಳ ಬಗ್ಗೆ ಈಗ ಅದರ S.R. rateಗಳು change ಆಗಿವೆ. ಅದೇ ಕಾಲದಲ್ಲಿ tender ಆಗಿ work order ಅನ್ನು ಕೊಟ್ಟಿದ್ದಿದ್ದರೆ ಆಗಿ ಹೋಗುತ್ತಿತ್ತು. ಆದರೆ ಅವರು ಆ ಕೆಲಸವನ್ನು ಮಾಡಲಿಲ್ಲ. ಇವತ್ತು ನಮ್ಮ ಸರ್ಕಾರ ಈ ಕೆಲಸವನ್ನು ಮಾಡುವಾಗ ಟಾರ್ ರೇಟ್ ಜಾಸ್ತಿಯಾಗಿದೆ, ಬೇರೆ ಬೇರೆ materialಗಳ rate ಜಾಸ್ತಿಯಾಗಿದೆ.

(ಅಡಚಣೆ)

ಶ್ರೀ ಎನ್.ಎಸ್. ಬೋಸರಾಜು : ನಿಮ್ಮ ಬಣ್ಣ ಬಯಲಾಗುತ್ತದೆ. ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಭಾರೀ ದಬ್ಬಾಳಿಕೆ ಇದು. ನಾವು ಹಿಂದಿನ ಸರ್ಕಾರದ ಬಗ್ಗೆ ಹೇಳಲೇಬಾರದು ಎಂದು ಹೇಳಿದರೆ ಇದು ಯಾವ ರೀತಿಯ ನ್ಯಾಯ?

ಶ್ರೀ ಸಿದ್ದು ಸಾವದಿ : ಸನ್ಮಾನ್ಯ ಉಪಾಧ್ಯಕ್ಷರೆ, Congress ಪಕ್ಷದವರ ಧೋರಣೆ ಹೇಗಿದೆಯೆಂದರೆ ಅವರ ಇಷ್ಟಕ್ಕೆ ತಕ್ಕಂತೆ ನಾವು ಮಾತನಾಡಬೇಕು. ಅವರು ಹೇಳಿದ ಹಾಗೆ ಇಲ್ಲಿ ನಾವು ಮಾತನಾಡಬೇಕಾ?

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಬೆಳಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯವರಿಗೆ ಕೆಲವು scholarshipಗಳನ್ನು ಕೊಡಲಿಲ್ಲ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಅದರಲ್ಲಿ ಸುಮಾರು 61 ಕೋಟಿ ರೂಪಾಯಿಗಳು ಹಿಂದಿನ ಸರ್ಕಾರದ ಬಾಕಿ ಇದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಎಲ್ಲವನ್ನೂ ಮಾಡಬೇಕಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಆರಗ ಜ್ಞಾನೇಂದ್ರರವರು ಪ್ರಸ್ತಾಪ ಮಾಡಿದರು. ಅದನ್ನು ಅವರೂ ಕೂಡ ಒಪ್ಪಿಕೊಂಡರು. ಅದು ಯಾವುದೇ ಸರ್ಕಾರವಾಗಿರಲಿ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯ ಕಳೆದು ಹೋಗುವುದಿಲ್ಲ. ಹಿಂದಿನ ಸರ್ಕಾರ ಮಾಡಿದ್ದರೆ ಅದು ತಪ್ಪೇ ಎನ್ನುವ ಮಾತನ್ನೂ ಕೂಡ ಒಪ್ಪಿಕೊಂಡಿದ್ದಾರೆ. ನಾವು ಹಿಂದಿನ ಸರ್ಕಾರದಲ್ಲಿ ಹಣ ಬಿಡುಗಡೆಯಾಗಿಲ್ಲ ಎನ್ನುವಂಥ ಮಾತನ್ನು ಹೇಳಿದರೆ ತಪ್ಪು ಏಕೆ ಆಗುತ್ತದೆ? ಅದರ ಬಗ್ಗೆ ಆಕ್ಷೇಪ ಮಾಡುವ ವಿಚಾರ ವಾದಕ್ಕೂ ಕೂಡ ಏನಿದೆ? ಆದುದರಿಂದ ದಯವಿಟ್ಟು ......

(ಅಡಚಣೆ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : 2004–05ರಲ್ಲಿ S.P.D. rate ಏನು ಇತ್ತು?

ಶ್ರೀ ಆರಗ ಜ್ಞಾನೇಂದ್ರ : ನೀವು ಮಾತನಾಡುವಾಗ ಅದನ್ನು ಹೇಳಿ. ನಾನು ಮಾತನಾಡುವಾಗ ಏಕೆ obstruction ಮಾಡುತ್ತೀರಿ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಆ rate Decemberನಲ್ಲಿ ಜಾಸ್ತಿಯಾಯಿತು. ನಾನು ಅದನ್ನೇ ಹೇಳುತ್ತಿದ್ದೇನೆ. ಟಾರ್ ರೇಟ್ ಜಾಸ್ತಿಯಾಯಿತು, ಸಿಮೆಂಟ್ ರೇಟ್ ಜಾಸ್ತಿಯಾಯಿತು. ಈಗ enhanced tender ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದರ ಉದ್ದೇಶ ಏನಿದೆ? ಹಿಂದಿನ ಸರ್ಕಾರದಲ್ಲಿ ಮಾಡಬಾರದು ಎಂದು ಏನೂ ಇರಲಿಲ್ಲ. ಈಗಿನ ಸರ್ಕಾರ ಮಾಡಬೇಕು ಎಂದು ಏನೂ ಇರಲಿಲ್ಲ. ನಬಾರ್ಡ್‌ಗೆ ಹೋಗಿ ಬರಬೇಕಾದರೆ ಸ್ವಲ್ಪ ಹೆಚ್ಚು ಕಡಿಮೆ ಆಯಿತು. ಅದನ್ನೇ ದೊಡ್ಡ issue ಮಾಡಿ ಮಾತನಾಡುವುದಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ತಾವು ಯಾರಿಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ ಅವರನ್ನು ಮಾತನಾಡುವುದಕ್ಕೆ ಅವಕಾಶ ಕೊಡಿ. ಈ ರೀತಿ ಎಲ್ಲರೂ ಮಾತನಾಡಿದರೆ ಇದು ಸಭೆ ಆಗುವುದಿಲ್ಲ.

ಉಪಾಧ್ಯಕ್ಷರು : ಆಯಿತು, ಮಾನ್ಯ ಕೃಷ್ಣಮೂರ್ತಿಯವರೇ, ತಾವು ಕುಳಿತುಕೊಳ್ಳಿ. ಮಾನ್ಯ ಆರಗ ಜ್ಞಾನೇಂದ್ರರವರೇ, ತಾವು ಬೇಗ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನೊಂದು ವಿಚಾರವನ್ನು ಪ್ರಮುಖವಾಗಿ ಪ್ರಸ್ತಾಪ ಮಾಡುವುದೇನೆಂದರೆ......

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಏಕೆ ಈ ರೀತಿ ಪದೇ ಪದೇ ಅಡಚಣೆ ಮಾಡುತ್ತೀರಿ? ಇದು ಬಹಳ ಅತಿ ಆಯಿತು.

ಶ್ರೀ ಎನ್. ಚಲುವರಾಯಸ್ವಾಮಿ : ಸಭೆಯಲ್ಲಿ ಮಾತನಾಡುವುದು ಯಾವ ರೀತಿ? ಸದನದಲ್ಲಿ ಸದಸ್ಯರು ಮಾತನಾಡುವಂಥದ್ದು ಯಾವ ರೀತಿ? ಕಳೆದ ಸರ್ಕಾರದಲ್ಲಿ ಹಣ ಬಿಡುಗಡೆ ಆಗಿಲ್ಲ ಎನ್ನುವುದು ತಪ್ಪಾದರೆ......

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಏಕೆ ಈ ರೀತಿ ಪದೇ ಪದೇ ಏಳುತ್ತಿದ್ದಾನೆ ಈ ಮನುಷ್ಯ?

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ಇವರು ಏಕ ವಚನ ಉಪಯೋಗಿಸುವಂಥದ್ದು, ಮನಸ್ಸಿಗೆ ಬಂದ ಹಾಗೆ ಮಾಡುವಂಥದ್ದು, ಇದು ಸದನವೇ? ಏನು ಇವರು?

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಸಭೆಯನ್ನು ನಾಳೆಗೆ ಮುಂದೂಡಿ. ಈಗಾಗಲೇ ಒಂಭತ್ತು ಗಂಟೆಯಾಗಿದೆ. ನಾಳೆಗೆ ಇದನ್ನು ಮುಂದುವರೆಸಿ. ನಾಳೆ ಬೆಳಗ್ಗೆ ಬೇಕಾದರೆ ಒಂಭತ್ತು ಗಂಟೆಗೆ ಸಭೆ ಸೇರಬಹುದು.

ಉಪಾಧ್ಯಕ್ಷರು : ನಾಳೆ ಇನ್ನೂ ಮಾತನಾಡುವುದಕ್ಕೆ ಒಳ್ಳೆಯ subjectಗಳು ಇವೆ.

ಶ್ರೀ ಬಸವರಾಜ ರಾಯರೆಡ್ಡಿ : ನಾಳೆ ಒಂಭತ್ತು ಗಂಟೆಗೆ ಅಥವಾ ಹತ್ತು ಗಂಟೆಗೆ ಸಭೆಯನ್ನು ಕರೆಯಿರಿ. ಎಲ್ಲಾ ಸದಸ್ಯರು ಇಲ್ಲೇ ಇದ್ದಾರೆ.

ಉಪಾಧ್ಯಕ್ಷರು : ಮಾನ್ಯ ಆರಗ ಜ್ಞಾನೇಂದ್ರರವರೇ, ತಾವು ಬೇಗ ಭಾಷಣ ಮುಗಿಸಿ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲಿ ಬಸವರಾಜ ರಾಯರೆಡ್ಡಿಯವರು ಕುಳಿತುಕೊಳ್ಳಬೇಕಲ್ಲಾ.

ಉಪಾಧ್ಯಕ್ಷರು : ಆಯಿತು, ಅವರು ಕುಳಿತುಕೊಳ್ಳುತ್ತಾರೆ. ನೀವು ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಾನು ವಿಶೇಷವಾಗಿ ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈಗಾಗಲೇ KRDCLನಿಂದ State highway maintananceಗೆ ಕೊಟ್ಟಿದ್ದಾರೆ. ಅವರು ಈಗಾಗಲೇ ಟಾರ್ ರೇಟ್ ಜಾಸ್ತಿಯಾಗಿದೆ, ಸಿಮೆಂಟ್ ರೇಟ್ ಜಾಸ್ತಿಯಾಗಿದೆ, ಎಂದು ಹೇಳಿ ಇಡೀ ರಾಜ್ಯದಲ್ಲಿ ಕೆಲಸ ನಿಂತಿದೆ. ಈಗಾಗಲೇ ಅನೇಕ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ರಸ್ತೆಗಳು ಹಾಳಾಗಿವೆ, ಮಲನಾಡಿನಲ್ಲಂತೂ ತೀರಾ ಹಾಳಾಗಿವೆ. ದಯಮಾಡಿ abnormal ಆಗಿ ಟಾರ್ ರೇಟ್ 12 ರೂ. ಗಳು ಇರುವಂಥಾದ್ದು ಇವತ್ತು 20 ರೂ., 22 ರೂ.ಗಳು ಕೆ.ಜಿ. ಆಗಿದ್ದರಿಂದ ಈ ವ್ಯತ್ಯಾಸದ ಹಣವನ್ನು ಅವರಿಗೆ ತುಂಬಿಕೊಡುವುದಾಗಲೀ ಇನ್ನಾವ ರೀತಿಯಲ್ಲಾದರೂ ಇದನ್ನು ಬಗೆಹರಿಸಿ, ಅವರು ರಸ್ತೆಯ ಕಾಮಗಾರಿ ಕೆಲಸವನ್ನು ಮಾಡುವಂಥಾದ್ದಕ್ಕೆ ವ್ಯವಸ್ಥೆ ಮಾಡುವಂಥಾದ್ದು ಒಳ್ಳೆಯದು. ಇನ್ನೊಂದು

ವಿಷಯವನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ವಿಶೇಷವಾಗಿ BPL card ಬಗ್ಗೆ ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಸರ್ವೆ ಆಯಿತು. ಅದು ಇವತ್ತು ಬಿಡುಗಡೆಯಾಗಿದೆ, ಅದು ಸರಿಯಾಗಿ ಇಲ್ಲವೆಂದು ಅನೇಕ protest ಗಳು ಆಗುತ್ತಿದೆ. ಅವರ ಸರ್ಕಾರದಲ್ಲೇ ಸರ್ವೆ ಮಾಡಿಸಿದ್ದು, ಇವತ್ತು ಅವರ ಪಕ್ಷದವರೇ ಅನೇಕ ಊರುಗಳಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಸರ್ಕಾರ ಮಲಗಿದೆ ಏನು? ಏನು ಮಾತನಾಡುತ್ತೀರಾ? ನೀವು ಸರ್ವೆ ಮಾಡಬೇಕಾಗಿತ್ತು. ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಹೋಗಿ ಎಂಟು ತಿಂಗಳುಗಳಾಯಿತು. Card ಕೊಟ್ಟು 15 ದಿವಸಗಳು ಆಯಿತು. ಈಗ ನಮ್ಮ ಮೇಲೆ ಆಪಾದನೆಯನ್ನು ಮಾಡುತ್ತೀರಾ? ಬಡವರ ಹೊಟ್ಟೆಯ ಮೇಲೆ ಕಾಲು ಇಟ್ಟು ಈಗ ನಮ್ಮ ಕಡೆಗೆ ತೋರಿಸುತ್ತೀರಾ?

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಅನೇಕ ನೌಕರರು ಸರ್ವೆಯನ್ನು ಮಾಡಿದ್ದಾರೆ. ಅದನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಅದನ್ನು ಸರಿಪಡಿಸಬೇಕೆಂದು ನಾನು ನಮ್ಮ ಆಹಾರ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಯಾರಿಗೆ eligibility ಇದೆಯೋ ಅವರಿಗೆ ಸಲ್ಲುವಂತೆ ಆಗಬೇಕು. ಇನ್ನೊಂದು ಸಾರಿ ಸರ್ವೆ ಮಾಡಿದರೂ ಅಡ್ಡಿ ಇಲ್ಲ. ನಾನು ನಿಮಗೆ ಅಭಿನಂದಿಸುತ್ತೇನೆ. ಈಗಾಗಲೇ ಹಿಂದಿನ ಕೆಲವು ನಿಬಂಧನೆಗಳನ್ನು relaxation ಮಾಡಿದ್ದೀರಿ. ಒಂದು T.V. ಇದ್ದಂಥವರಿಗೆ ಯಾರೋ Phone ಇರತಕ್ಕಂಥವರನ್ನು relaxation ಮಾಡಿದ್ದೀರಿ. ಆ relaxation ಪ್ರಕಾರ ಸರಿಯಾದಂಥಹ cardಗಳು ವಿತರಣೆ ಆಗಬೇಕು. ನಾನು ನಮ್ಮ ಆರ್ಥಿಕ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಈಗಾಗಲೇ ನಂಜುಂಡಪ್ಪನವರ ವರದಿಯ ಬಗ್ಗೆ ನಮಗೆಲ್ಲರಿಗೂ ಕೂಡ......

ಉಪಾಧ್ಯಕ್ಷರು : ಈಗ ನಾಳೆ ನಂಜುಂಡಪ್ಪನವರ ವರದಿಯ ಬಗ್ಗೆ ಮಾತನಾಡುವುದು ಇದೆ. ಬರಗಾಲದ ಬಗ್ಗೆ ಮಾತನಾಡುವುದು ಇದೆ. ಆಗ ಬೇಕಾದರೆ ತಾವು ಮಾತನಾಡಿ. ಈಗ ಸಪ್ಲಿಮೆಂಟರಿ budget ಬಗ್ಗೆ ಮಾತನಾಡಿ.

9.00 ಗಂಟೆ

ಶ್ರೀ ಆರಗ ಜ್ಞಾನೇಂದ್ರ : ಏನೇನೋ ಮಾತನಾಡಿದಾಗಲೂ ನೀವು ಸುಮ್ಮನೆ ಕುಳಿತಿದ್ದಿರಿ. ನಾನು subject ಬಗ್ಗೆಯೇ ಮಾತನಾಡುತ್ತಿದ್ದೇನೆ. ಹಾಗಾದರೆ ನನಗೆ ಮಾತನಾಡಲು ಅವಕಾಶವಿಲ್ಲವೇ?

ಉಪಾಧ್ಯಕ್ಷರು : ಎಷ್ಟು ಹೊತ್ತು ಆಯಿತು ನೋಡಿ, ನೀವು ಮಾತನಾಡಲು ಪ್ರಾರಂಭ ಮಾಡಿ ಒಂದು ಗಂಟೆಯಾಯಿತು. ಆಮೇಲೆ ನಿಮ್ಮಿಷ್ಟ, ಅದರ ಮೇಲೆ ನಾವು ಏನೂ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಕೃಷ್ಣಪ್ಪ : ಜ್ಞಾನೇಂದ್ರರವರೇ, ನನಗೆ ಒಂದು ಅರ್ಧ ನಿಮಿಷ time ಕೊಡಿ. ನಬಾರ್ಡ್, 2034 Head ನಲ್ಲಿ ಯಾವಯಾವ ಕ್ಷೇತ್ರಕ್ಕೆ ಕೊಟ್ಟಿದ್ದೀರಿ, ಯಾರನ್ನು ಉದ್ಧಾರ ಮಾಡಿದ್ದೀರಿ, ಅದನ್ನೂ ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ಅದನ್ನು ನೀವು ಕೇಳಿ Sir. ನೀವು ಕೇಳುವ ಸ್ಥಾನದಲ್ಲಿದ್ದೀರಿ, ಕೇಳಿ, ಅದರಲ್ಲೇನೂ ತೊಂದರೆಯಿಲ್ಲ. ನಂಜುಂಡಪ್ಪ ವರದಿಯನ್ನು ಈಗಾಗಲೇ ಜಾರಿಗೆ ಕೊಟ್ಟು, ಅನೇಕ ಕ್ಷೇತ್ರಗಳನ್ನು ಹಿಂದುಳಿದ ಕ್ಷೇತ್ರಗಳು ಎಂದು ಹೇಳಿ ನಾವು ಅವುಗಳಿಗೆ ಸಾಕಷ್ಟು ಹಣವನ್ನು budget ನಲ್ಲಿ ಎಲ್ಲಾ schemeಗಳಲ್ಲಿಯೂ ಒದಗಿಸುತ್ತಿದ್ದೇವೆ. ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳ ಕ್ಷೇತ್ರವೂ ಕೂಡ ಹಿಂದುಳಿದ ಕ್ಷೇತ್ರ ಎಂದು ನಂಜುಂಡಪ್ಪನವರ ವರದಿಯಲ್ಲಿ ಸೇರಿಬಿಟ್ಟಿದೆ. ಅದು ಹೇಗೆ ಸೇರುವುದಕ್ಕಾಗುತ್ತದೆ? ಅವರ ಕಾಲದಲ್ಲಿ ಅಲ್ಲಿ ಏಕೆ ಅಭಿವೃದ್ಧಿಯನ್ನು ಮಾಡಲಿಲ್ಲ. ನಂಜುಂಡಪ್ಪನವರ ವರದಿಯಲ್ಲಿ ಸೊರಬ ಸೇರಿದೆ, ಮಾಜಿ ಮುಖ್ಯಮಂತ್ರಿಗಳ ಕ್ಷೇತ್ರವಾದ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಸೇರಿದೆ, ನಮ್ಮ ಖರ್ಗೆ ಸಾಹೇಬರ ಕ್ಷೇತ್ರವೂ ಸೇರಿದೆ. ಅವರು ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದು, ಇಷ್ಟು ವರ್ಷ ಆಳಿದ ನಂತರವೂ ಆ ಕ್ಷೇತ್ರಗಳು ಹಿಂದುಳಿದ ಪ್ರದೇಶಗಳು ಎಂದು ಗುರುತಿಸಲ್ಪಡುತ್ತವೆ ಎಂದರೆ ಅದು ನಿಜವಾಗಿಯೂ ಕೂಡ ಅವರಿಗೆ ತುಂಬಾ ಇರಿಸು ಮುರುಸಾಗುತ್ತದೆ. ಹಾಗಾಗಿ ಮತ್ತೆ ಅದನ್ನು evaluation ಮಾಡಬೇಕು, ಈಗ ಆ ಪ್ರದೇಶಗಳು ಏನಾಗಿವೆ ಎನ್ನುವ ಬಗ್ಗೆ ಇನ್ನೊಂದು ಸಲ survey ಮಾಡಬೇಕು, ನಂಜುಂಡಪ್ಪನವರ ವರದಿಯ ಸಂಪೂರ್ಣ ಸಾರಾಂಶ ಸರಿ ಇದೆಯೇ ಎನ್ನುವಂಥಾದ್ದನ್ನು ನೋಡಬೇಕು. ಹಣ ನಿಜವಾದಂಥ ಹಿಂದುಳಿದ ಪ್ರದೇಶಕ್ಕೆ ಹೋದರೆ ನಮಗೇನೂ ತೊಂದರೆಯಿಲ್ಲ. ಆದರೆ ಅಧಿಕಾರದಲ್ಲಿದ್ದವರ ಕ್ಷೇತ್ರಕ್ಕೆ ಕೂಡ ಹಣ ಹೋಗುತ್ತದೆ ಎಂದಾದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಸರಿಯಾದ ರೀತಿಯಲ್ಲಿ ತಪಾಸಣೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬಾರದು ಎಂದು ಸುಮ್ಮನೆ ಕುಳಿತಿದ್ದೆ. ಆದರೆ ಆರಗ ಜ್ಞಾನೇಂದ್ರರವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅವರು ಇಷ್ಟು ವರ್ಷ ಅಧಿಕಾರದಲ್ಲಿದ್ದರೂ ಅವರ ಕ್ಷೇತ್ರಗಳು ಏಕೆ ನಂಜುಂಡಪ್ಪ ವರದಿಯಲ್ಲಿ ಸೇರಿವೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನನಗನ್ನಿಸಿದ ಮಟ್ಟಿಗೆ ಬಹುಶಃ ಹೈದರಾಬಾದ್ ಕರ್ನಾಟದ ಎಲ್ಲಾ ತಾಲ್ಲೂಕುಗಳು ನಂಜುಂಡಪ್ಪ ವರದಿಯಲ್ಲಿರಬಹುದು, ಇದು ಒಂದು. ಎರಡನೆಯದು, ಕೆಲವು ಮಾನದಂಡಗಳ ಮೇಲೆ ನಂಜುಂಡಪ್ಪ ವರದಿಯನ್ನು ತಯಾರು ಮಾಡಲಾಗಿತ್ತು. ಹಿಂದುಳಿದ ಭಾಗಗಳಿಗೆ ಅನುಕೂಲ ಮಾಡಬೇಕು ಎನ್ನುವ ದೃಷ್ಟಿಯಿಂದಲೇ ಹಳೆಯ ಮೈಸೂರಿನಿಂದ ಹಿಡಿದು, ಹೈದರಾಬಾದ್ ಕರ್ನಾಟಕದವರೆಗೆ ಯಾವ

ಯಾವ ತಾಲ್ಲೂಕುಗಳು ಹಿಂದುಳಿದಿವೆ ಅವುಗಳನ್ನು ಗುರುತಿಸಿ ಮಾಡಿರತಕ್ಕಂಥಾದ್ದು. ಸರಿ, ನಮ್ಮ ಕ್ಷೇತ್ರಗಳೆಲ್ಲಾ ಹಿಂದುಳಿದಿವೆ, ನಾವೆಲ್ಲಾ 30 ವರ್ಷಗಳಿಂದ ಅಲ್ಲಿ ಏನೂ ಅಭಿವೃದ್ಧಿ ಮಾಡಿಲ್ಲ. ಆದರೆ ನೀವೇಕೆ ನಿಮ್ಮ ಕ್ಷೇತ್ರಗಳಿಗೆ 10-20 ಸ್ಕೂಲುಗಳನ್ನು, 4-4 Junior Collegeಗಳನ್ನು ತೆಗೆದುಕೊಳ್ಳುತ್ತಿದ್ದೀರಿ? ನಿಮಗೆ ನಾಚಿಕೆಯಾಗುವುದಿಲ್ಲವೇ? ನಾವೇನೋ ತಪ್ಪು ಮಾಡಿದೆವು. ಆದರೆ ನೀವು ಈ ರೀತಿಯಾಗಿ ಮಾತನಾಡತಕ್ಕಂಥಾದ್ದು ಸರಿಯಲ್ಲ. ನಮಗೂ ಗೊತ್ತಿದೆ, ನೀವು ಯಾವ ಯಾವ ಕ್ಷೇತ್ರಗಳನ್ನು ಎಷ್ಟೆಷ್ಟು ಅಭಿವೃದ್ಧಿ ಮಾಡಿದ್ದೀರಿ ಎನ್ನುವುದು ನಮಗೂ ಗೊತ್ತಿದೆ. ನಾವು ಮಂತ್ರಿಗಳಾಗಿದ್ದಾಗ ನಿಮ್ಮ ಕ್ಷೇತ್ರಗಳಿಗೆ ದುಡ್ಡು ಕೊಡಲಿಲ್ಲವೇ? ಬರಗಾಲದಲ್ಲಿ ಸಹಾಯ ಮಾಡಲಿಲ್ಲವೇ? ಸಣ್ಣಪುಟ್ಟ ಕೆರೆಗಳ ದುರಸ್ತಿ ಮಾಡಲಿಲ್ಲವೇ? ಸುಮ್ಮನೆ ಮಾತನಾಡಬೇಕು ಎಂದು ಹೇಳಿ ಮಾತನಾಡುವುದಕ್ಕೆ ಹೋದರೆ, ನಮಗೂ ಮಾತನಾಡಲು ಬರುತ್ತದೆ. ಹಾಗಾಗಿ, ದಯವಿಟ್ಟು ಈ ರೀತಿಯಾಗಿ ಮಾತನಾಡಲು ಅವಕಾಶ ಕೊಡಬಾರದು. ಅವರು ಹೇಳಬೇಕಾದುದ್ದನ್ನು ಹೇಳಲಿ. ಆದರೆ, ನಿಮ್ಮ ಕಾಲದಲ್ಲಿ ನೀವೇನು ಮಾಡಿದಿರಿ ಎಂದರೆ ಹೇಗೆ? ನಾವು ಏನೂ ಮಾಡದೇ ಇದ್ದರೆ ಜನ ನಮ್ಮನ್ನು 30-40 ವರ್ಷಗಳ ಕಾಲ ಆರಿಸಿ ಕಳುಹಿಸುತ್ತಾರೆಯೇ? ಏನಾದರೂ ಕೆಲಸ ಮಾಡಿದರೆ ಮಾತ್ರ ಆರಿಸಿ ಕಳುಹಿಸುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ನಾನು ಪ್ರಾಮಾಣಿಕವಾಗಿ ಹೇಳಿದ್ದೇನೆ. ನಾನು ಏನು ಹೇಳಿದೆ ಎಂದರೆ, ಅವರು ಅಭಿವೃದ್ಧಿ ಮಾಡಿದರೆ.....

ಉಪಾಧ್ಯಕ್ಷರು : ಜ್ಞಾನೇಂದ್ರರವರೇ, ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದುದ್ದನ್ನು ನಾನು ಸಂಪೂರ್ಣವಾಗಿ ಕೇಳಿದ್ದೇನೆ. ನಾನು ಹೇಗೆ ಇಲ್ಲಿಗೆ ಬರುತ್ತಿದ್ದೇನೋ ಹಾಗೆಯೇ ನೀವೂ ಸಹ 10-15 ವರ್ಷಗಳಿಂದ ಆರಿಸಿ ಬರುತ್ತಿದ್ದೀರಿ. ಯಡಿಯೂರಪ್ಪನವರೂ 25 ವರ್ಷಗಳಿಂದ ಆರಿಸಿ ಬರುತ್ತಿದ್ದಾರೆ. ಅಂದರೆ ನಿಮ್ಮ ಭಾಗದಲ್ಲಿ ಏನೂ ಸಮಸ್ಯೆಗಳೇ ಇಲ್ಲವೇ? ರೇವಣ್ಣನವರು ತಮ್ಮ ಮತಕ್ಷೇತ್ರವನ್ನು 30-40 ವರ್ಷಗಳಿಂದ represent ಮಾಡುತ್ತಿದ್ದಾರೆ. ಅವರಲ್ಲದಿದ್ದರೆ ಅದನ್ನು ದೇವೇಗೌಡರು represent ಮಾಡುತ್ತಿದ್ದಾರೆ. ಅಂದರೆ ಅಲ್ಲಿ ಸಮಸ್ಯೆಗಳೇ ಇಲ್ಲವೇ? ಅವರ ಕ್ಷೇತ್ರಗಳಿಗೆ ದುಡ್ಡು ಕೊಡುವುದು ಬೇಡವೇ?

ಶ್ರೀ ಆರಗ ಜ್ಞಾನೇಂದ್ರ : ನಾನು ಹೇಳಿದ್ದು ಏನೆಂದರೆ, ಅವರು ಸಾಕಷ್ಟು ಹಣವನ್ನು ತೆಗೆದುಕೊಂಡು ಹೋಗಿ ಅಲ್ಲಿ ಅಭಿವೃದ್ಧಿ ಮಾಡಿದ್ದರೂ ಕೂಡ, ಅವುಗಳನ್ನು ನಂಜುಂಡಪ್ಪನವರ ವರದಿಯಲ್ಲಿ ಸೇರಿಸಿ ನಿಮಗೆ ಇರಿಸುಮುರಿಸು ಮಾಡಿದ್ದಾರೆಂದು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದರು, ಬಹುಶಃ ನಾವು ಅದಷ್ಟು ಸೇವೆ ಮಾಡಿರಬಹುದು, ಅದು ಒಂದು ಕಡೆ ಇರಲಿ, ಅದನ್ನು ಪರೀಕ್ಷೆ ಮಾಡುತ್ತಿದ್ದಾರೆ, ನಮಗೆ pass marks ಅವರೇ ಕೊಡುವುದು, ಅದನ್ನು ಜನ ಕೊಡುವುದಿಲ್ಲ. ಇವರೇ ಕೊಡುವುದು

ಎಂದು ತಿಳಿದುಕೊಂಡಿದ್ದಾರೆ. ಆದರೆ ನಮ್ಮ ಮಾಲೀಕರು ಜನರಾಗಿದ್ದಾರೆ. ನಮ್ಮನ್ನು pass ಅಥವಾ fail ಅವರು ಮಾಡಿಸುತ್ತಾರೆ. ಎರಡನೆಯದಾಗಿ, ನೀವು ಹಿಂದುಳಿದವರಿಗೆ ಹಾಗೆ ಮಾಡಿದ್ದೀರಿ, ನೀವೇಕೆ scholarship ಕೊಡಲಿಲ್ಲ, ನೀವೇಕೆ ಅದನ್ನು ಮಾಡಲಿಲ್ಲ. ನೀವೇಕೆ ಇದನ್ನು ಮಾಡಲಿಲ್ಲ ಎಂದು ಕೇಳಿದರು. ನಾವು ಮಾಡಿದಂಥ ಕಾರ್ಯಕ್ರಮಗಳನ್ನು ನೀವು ಮಾಡಿರುವಿರಾ? ಬಿಸಿಯೂಟ ಕಾರ್ಯಕ್ರಮವನ್ನು ನೀವು ಮಾಡಿದಿರಾ? 3–4 ಲಕ್ಷ ಆಶ್ರಯ ಮನೆಗಳನ್ನು ನೀವು ಕಟ್ಟಿಸಿದಿರಾ? ನಾವು income limit ತೆಗೆದು ಬಡ ಮಕ್ಕಳಿಗೆ higher education ಕೊಡಬೇಕು ಎಂದು ಮಾಡಿ, 100 ಹುಡುಗರು ಇರುತ್ತಿದ್ದ ಕಡೆ 200ಕ್ಕೆ ಹೆಚ್ಚುವಂಥಾದ್ದು ಆಯಿತಲ್ಲಾ, ಅದನ್ನು ನೀವು ಮಾಡಿದಿರಾ? Backlog ಹುದ್ದೆಗಳನ್ನು ನೀವು ತುಂಬಿದಿರಾ? ಹಾಗೆ ಹೇಳುತ್ತಾ ಹೋದರೆ, ನಮ್ಮ ಬಳಿಯೂ ಉದ್ದ ಪಟ್ಟಿ ಇದೆ. ಸುಮ್ಮನೆ ಮಾತನಾಡಬೇಕು ಎಂದು ಹೇಳಿ ನಮ್ಮನ್ನು ಕೆಣಕಿ, ಕೆಣಕಿ ಪದೇ ಪದೇ ಅದನ್ನೇ ಹೇಳುವುದು ಆಗುತ್ತಿದೆ. ಹಾಗಾದರೆ, ನೀವು ನಿಮ್ಮ ಕ್ಷೇತ್ರದಲ್ಲಿ ಮುಂದೆ ಬಂದಿದ್ದೀರಿ, ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು, ದೇವೇಗೌಡರು prime minister ಆಗಿದ್ದರು. ಇವತ್ತು ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾರೆ, ಅಂದ ಮಾತ್ರಕ್ಕೆ ನೀವು ಇಡೀ ಒಕ್ಕಲಿಗರನ್ನೆಲ್ಲಾ ಉದ್ಧಾರ ಮಾಡಿದ್ದೀರೇನು? ಇಡೀ ದೇಶದಲ್ಲಿರತಕ್ಕಂಥ ಒಕ್ಕಲಿಗರನ್ನೆಲ್ಲಾ ನೀವು ಉದ್ಧಾರ ಮಾಡಿ ಕುಳಿತಿರುವಿರೇನು? ಪದೇ ಪದೇ, "ಹಿಂದುಳಿದವರಾದ ನೀವೇ ಇದ್ದಿರಿ, cabinet ನಿಮ್ಮದೇ ಇತ್ತು, ಏಕೆ ಮಾಡಿಲ್ಲ" ಎಂದರೆ ಹೇಗೆ? ಯಾವುದನ್ನು ಮಾಡಿದ್ದೇವೆ, ಅದನ್ನು ಮಾಡಿದ್ದೇವೆ ಎಂದು ಹೇಳುತ್ತೇವೆ, ನಿಮಗೆ ಮಾಡಿದ್ದನ್ನೂ ಹೇಳುತ್ತೇವೆ, ಜನರಿಗೆ ಮಾಡಿದ್ದನ್ನೂ ಹೇಳುತ್ತೇವೆ. ಕೊಡತಕ್ಕಂಥ ಬಾಕಿ ಇದ್ದುದ್ದನ್ನು ನಾವು ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳಿ. ಆದರೆ ನನ್ನ ವಾದ ಏನಿತ್ತು ಎಂದರೆ, 3 ಕೋಟಿ S.C. ಯವರಿಗೆ ಕೊಟ್ಟಿರಿ, 5 ಕೋಟಿ S.T. ಯವರಿಗೆ ಕೊಟ್ಟಿರಿ, B.C. ಯವರಿಗೆ 7 ಕೋಟಿ ರೂ. ಕೊಟ್ಟಿರಿ. ಇಷ್ಟು ಹಣವನ್ನು ನೀವು ಕೊಟ್ಟಿದ್ದೀರಿ, ಸಂತೋಷ. ಆದರೆ, ಅದರ ಜೊತೆಯಲ್ಲಿ ಇದರಷ್ಟೇ ಹಣವನ್ನು ಗುಡಿ ಗುಂಡಾರಗಳಿಗೆ ಸುಣ್ಣ ಬಣ್ಣ ಹೊಡೆಯಲು ಕೊಡುತ್ತಿದ್ದೀರಲ್ಲಾ, ಆ ಹಣ ಅಲ್ಲಿಗೆ ಹೋಗುವುದಕ್ಕಿಂತಲೂ ಇಲ್ಲಿಗೆ ಹೋದರೆ ಆ ಮಕ್ಕಳಿಗೆ ಅನುಕೂಲವಾಗುತ್ತಿತ್ತು ಎಂದು ನಾವು ಹೇಳಿದರೆ ಅದನ್ನು ನೀವು ಸಹಿಸಲಿಲ್ಲ. ಪದೇ ಪದೇ ನೀವೇನು ಮಾಡಿದಿರಿ, ನೀವೇನು ಮಾಡಿದಿರಿ ಎಂದು ಕೇಳುವುದು ಸರಿಯಲ್ಲ. ನೀವು ಈ ರೀತಿಯಾಗಿ ಹೇಳಿದರೆ ನಿಮ್ಮ ಪ್ರತಿಯೊಂದು ಮಾತಿಗೂ ನಾವು ಉತ್ತರ ಕೊಡಬೇಕಾಗುತ್ತದೆ, ನಮ್ಮಲ್ಲೂ ಜವಾಬು ಇದೆ. ನಾವು ಅಧಿಕಾರದಲ್ಲಿದ್ದಾಗ, ನಾವು ಕೆಲಸ ಮಾಡಲಿಲ್ಲವೆಂದು ನೀವು ಕೇಳಲೇ ಇಲ್ಲವಲ್ಲಾ. ಆಗ ನೀವು ಖುಷಿಯಿಂದ ಹೋಗುತ್ತಿದ್ದಿರಿ. ಆದರೆ ಇವತ್ತು ನಿಮಗೆ ಟೀಕೆ ಮಾಡುವುದಕ್ಕೆ ಅವಕಾಶ ಸಿಕ್ಕಿದೆ ಎಂದು ತಿಳಿದುಕೊಂಡು ಮಾತನಾಡಿದರೆ ನಾವು ಅದನ್ನು ಸಹಿಸುವುದಿಲ್ಲ. ಇದೇ ರೀತಿಯಾಗಿ ಮಾತನಾಡಿದರೆ ಅದಕ್ಕೆ ಪ್ರತಿ ಉತ್ತರ ಕೊಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ಅವರ ಬಗ್ಗೆ ಮಾತನಾಡಿರತಕ್ಕಂಥಾದ್ದು ಇಷ್ಟೇ. 1,400 ಕೋಟಿ ರೂ.ಗಳ supplementary budget ಏಕೆ ಎಂದು ಅವರೇ ಕೇಳಿದಾಗ, ಯಾವ್ಯಾವುದಕ್ಕೆ ವೆಚ್ಚ ಮಾಡಲಾಗಿದೆ ಎನ್ನುವುದನ್ನು ನಾನು ಹೇಳಿದ್ದೇನೆ ಅಷ್ಟೇ. ಅವರು ಇಷ್ಟು ವರ್ಷ ಅಧಿಕಾರದಲ್ಲಿದ್ದು ಆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಮಾಡಿದ್ದಾರೆ, ಆದರೂ ಕೂಡ ನಂಜುಂಡಪ್ಪನವರ ವರದಿಯಲ್ಲಿ ಅವರ ತಾಲ್ಲೂಕು ಹಿಂದುಳಿದಂಥ ತಾಲ್ಲೂಕು ಎಂದು ಸೇರಿಸಿದರೆ ಅವರಿಗೆ ಅವಮಾನವಾಗುತ್ತದೆ. ಇರಿಸುಮುರಿಸಾಗುತ್ತದೆ. ಅವರಿಗೆ ತೊಂದರೆಯಾಗುತ್ತದೆ ಎಂದು ನಾನು ಅವರ ಪರವಾಗಿ ಹೇಳಿದರೆ, ಅದಕ್ಕೆ ಅವರು ಬೇಜಾರು ಮಾಡಿಕೊಂಡರೆ ಹೇಗೆ?

ಉಪಾಧ್ಯಕ್ಷರು : ಈಗ ಚರ್ಚೆಯನ್ನು ಮುಕ್ತಾಯ ಮಾಡೋಣ, ಸರ್ಕಾರದವರು ಉತ್ತರವನ್ನು ಕೊಡಲಿ.

ಶ್ರೀ ಕೆ. ಶ್ರೀನಿವಾಸಗೌಡ : ಇದು ಪೂರಕ budget. ಇದರ ಮೇಲೆ ನಾವು ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು : ನೀವೂ ಮಾತನಾಡುವಿರಾ? ಮಾತನಾಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಎಸ್. ರಾಜೇಂದ್ರನ್‌ರವರು ಮಾತನಾಡಲು ಎದ್ದು ನಿಂತರು)

ಶ್ರೀ ಕೆ. ಶ್ರೀನಿವಾಸಗೌಡ : ಈಗ ಅನುಮತಿ ಕೊಟ್ಟಿರುವುದು ನನಗಾ? ಅವರಿಗಾ?

ಉಪಾಧ್ಯಕ್ಷರು : ಅವರು ಬೇಗ ಮುಗಿಸುತ್ತಾರೆ, ಅವರು ಮಾತನಾಡಲಿ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಸನ್ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಲು ಪ್ರಾರಂಭಿಸಿದರೆ ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ರಾಯರೆಡ್ಡಿಯವರು ಮಾತನಾಡಿದರೆ one hour. ನಾನು ಮಾತನಾಡಿದ ಮೇಲೆ, ನಮ್ಮ ವಾಟಾಳ್ ಸಾಹೇಬರು, ಆಮೇಲೆ ಹೆಗಡೆಯವರು, ಆಮೇಲೆ ಅವರು ಉತ್ತರ ಕೊಟ್ಟುಬಿಡಲಿ. ನಾನು ಪುರಾಣ ಕಥೆಗಳನ್ನು ಹೇಳುವುದಿಲ್ಲ, development ಬಗ್ಗೆ ಹೇಳಬೇಕೆಂದರೆ, ಏನೂ ಹೇಳುವುದಕ್ಕಾಗುವುದಿಲ್ಲ. Supplementary budget ನಲ್ಲಿ urban developmentಗೆ Rs 4,500 lakhs ಹಣ ಕೇಳಿದ್ದಾರೆ. ನಾನು ಯಾರಿಗೆ ಹೇಳಬೇಕು, ನಾನು ಹೇಳುವುದನ್ನು ಗಮನಿಸುವವರು ಯಾರು? ಉತ್ತರ ಕೊಡುವುದು ಯಾರು? ನಾವು ಒಂದು ಹೇಳುವುದು, ತಾವು ನಮ್ಮನ್ನು ನೋಡಿಕೊಂಡಿರುವುದು, ಆದರೆ ನಾವು ಹೇಳುವುದನ್ನು ಕೇಳುವವರು ಯಾರೂ ಇಲ್ಲ, ಹೇಳುವವರು ಯಾರೂ ಇಲ್ಲ, ನಮ್ಮ ಗತಿ ಹೇಗಾಗಿದೆ ನೋಡಿ.

ಉಪಾಧ್ಯಕ್ಷರು : ಸಚಿವರು ಕೇಳುತ್ತಿದ್ದಾರೆ ಹೇಳಿ.

ಶ್ರೀ ಎಸ್. ರಾಜೇಂದ್ರನ್ : ಅರ್ಬನ್ ಡೆವಲಪ್‌ಮೆಂಟ್‌ಗೆ ಹಣ ಬಿಡುಗಡೆ ಮಾಡಬೇಕು, ಇಷ್ಟು amount ಬೇಕು ಎಂದು ಕೇಳುತ್ತಾರೆ. Extra amount ಕೊಡೋಣ. ಏನು ಕೆಲಸ

ಮಾಡಿದ್ದಾರೆಂದು ಇವರಿಗೆ extra ಕೊಡಬೇಕೆಂದು ಯಾರೂ ಕೇಳುವುದೇ ಇಲ್ಲ. ಅವರು ಕೆಲಸವನ್ನೂ ಮಾಡುವುದಿಲ್ಲ. ಇದರ ಬಗ್ಗೆ ನಾವು ಮಾತನಾಡಿದರೆ, Ruling Party ಕಡೆ ಇರುವ members, supplementary budget ಮೇಲೆ ಮಾತನಾಡಿ ಎಂದು ಹೇಳುತ್ತಾರೆ. ಏನು ಕಾರಣಕ್ಕೆ ಇಷ್ಟು ದುಡ್ಡು ಎಂದರೆ, ಯಾರಿಗೂ ಗೊತ್ತಾಗುವುದಿಲ್ಲ. ಕೇಳುವುದೇ ಇಲ್ಲ. ನಾವೇನಾದರೂ ಹುಡುಕಿ, ಇಂಥ amount ಅನ್ನು ನೀವು release ಮಾಡಿದ್ದೀರಿ, ಈ municipalities ನಲ್ಲಿ ಇಷ್ಟು ಗೊಂದಲವಾಗಿದೆ, ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇಷ್ಟು ಲೂಟಿ ಮಾಡಿದ್ದಾರೆ, ಇಷ್ಟು ಅನ್ಯಾಯ ಮಾಡಿದ್ದಾರೆಂದು ನಾವು ಹೇಳಿದರೂ Deputy C.M. ಸಾಹೇಬರೇ, ಅವರು ಕ್ರಮ ತೆಗೆದುಕೊಳ್ಳುವುದಿಲ್ಲ. ಕೆಲವು ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಉದಾಹರಣೆಗೆ, ನಾನೇ ನನ್ನ ಕ್ಷೇತ್ರದಲ್ಲಿ ಲೂಟಿ ಮಾಡಿ ತಿಂದಿದ್ದಾರೆಂದು ಅವರ noticeಗೆ ತೆಗೆದುಕೊಂಡು ಹೋದರೂ they have not taken action. ಅವರು ಶಾಮೀಲಾಗಿದ್ದಾರೋ, percentage ಗೆ ಶಾಮೀಲಾಗಿದ್ದಾರೋ ನಮಗೆ ಗೊತ್ತಿಲ್ಲ. ಕೆಲವು ಅಧಿಕಾರಿಗಳು ತಮ್ಮ ಮಾತಿಗೆ ಬೆಲೆ ಕೊಡುತ್ತಿಲ್ಲವೆಂದು ತಾವೇ ಹೇಳಿದಿರಿ. ನಿಜವಾಗಲೂ ನಮಗೆ ಬಹಳ ನೋವಾಗಿದೆ. ಖಂಡಿತವಾಗಿಯೂ, ನಾವು ನಿಮ್ಮ ಜೊತೆ ಇರುತ್ತೇವೆ. ನಿಮ್ಮ ಪರ ಇರುತ್ತೇವೆ. ಅಂಥವರನ್ನು dismiss ಮಾಡಿ. ಏನು, ಇವರು ಹೋದರೆ, ದೇಶ ಹಾಳಾಗುವುದಿಲ್ಲ. ಇವರಿದ್ದರೆ, ನಾವೆಲ್ಲಾ ಚಂದ್ರಲೋಕಕ್ಕೆ ಹೋಗುವುದಿಲ್ಲ. ಇವರಿಲ್ಲವೆಂದರೆ ಹೇಗೆ ಎಂಬುದು ನಮ್ಮ ಒಂದು ಕಲ್ಪನೆ. ಕೇವಲ village ನಲ್ಲಿರುವ ರೈತನನ್ನು ಕೂರಿಸಿದರೆ ಅವನೇ administration ಮಾಡುತ್ತಾನೆ. ನಿಜ, ಸಾರ್. ಅದು ಸತ್ಯಾಂಶ. ಇವರು budget ಮಾಡಿದರೆ ಮಾತ್ರ ಆಗುತ್ತದೆಂದು ನಾವೊಂದು ಕಲ್ಪನೆ ಮಾಡಿಕೊಂಡಿದ್ದೇವೆ. ಒಬ್ಬ village ನವರ ಹತ್ತಿರ ನೂರು ರೂಪಾಯಿ ಕೊಟ್ಟುಬಿಡಿ. ಒಂದು ತಿಂಗಳು budget ಮಾಡುತ್ತಾನೆ. ಇದು practical Sir. ಕೇವಲ ನೂರು ರೂಪಾಯಿಗಳಲ್ಲಿ 10 ರೂಪಾಯಿಗಳಿಗೆ ಅಕ್ಕಿ, 20 ರೂಪಾಯಿಗಳಿಗೆ ರಾಗಿ, 5 ರೂಪಾಯಿಗಳಿಗೆ vegetables ಎಂದು clean ಆಗಿ budget ಮಾಡಿಕೊಡುತ್ತಾನೆ. ಏನು, ಒಂದೊಂದು village ನಲ್ಲಿರುವವರಿಗೆ ಒಂದೊಂದು ಲಕ್ಷ ರೂಪಾಯಿ ಹೋಗುತ್ತದೆಯೇ? ಇಲ್ಲ. ಇಷ್ಟೂ ನೋವನ್ನು ನಾವೇಕೆ ತಮ್ಮ noticeಗೆ ತೆಗೆದುಕೊಂಡು ಬರುತ್ತೇವೆಂದರೆ, Some of the officers are inefficient. When we have brought these matters to their notice, they have not taken action. Who is monitoring? ಕೋಟ್ಯಾಂತರ ರೂಪಾಯಿಗಳನ್ನು ನಾವು ಕೊಡುತ್ತೇವೆ, ಲಕ್ಷಾಂತರ ರೂಪಾಯಿಗಳನ್ನು ನೀವು sanction ಮಾಡುತ್ತೀರಿ, ಹಣ ಬಿಡುಗಡೆ ಮಾಡುತ್ತೇವೆಂದರೆ, who is monitoring that? ಅವರು ಮಾಡಿಲ್ಲ. ನನ್ನ ಕ್ಷೇತ್ರಕ್ಕೆ ನಾನು monitor ಮಾಡಿದ್ದೇನೆ. ಆದರೆ, None of the officer has monitored it. When I bring it to their notice, they are ignoring. ಆ ತರಹ ಇಲ್ಲ ಬಿಡಿ ಎನ್ನುತ್ತಾರೆ. ಇಂಥ officerಗೆ ಏನು

ಶಿಕ್ಷೆ ಕೊಡುತ್ತೀರಿ? ಅವರು ಮಾಡಿರುವ ತಪ್ಪುಗಳ ಬಗ್ಗೆ ತಮ್ಮ ಮುಂದೆ ಮಾತನಾಡಿದೆವು. ನಾನು ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇನೆ ಎಂದು ನೀವು ಗಂಭೀರವಾಗಿ ಹೇಳಿದಿರಿ. Yes. We will appreciate you. No doubt, that you have released money, but, where it goes? To whom it goes? To whose pocket it goes? ಅದನ್ನು ಯಾರು monitor ಮಾಡುವುದು? ಬೆಳಗಾಂನಲ್ಲಿ fan ಕೆಳಗೆ ಕುಳಿತಿದ್ದೇವೆ. ಇವರು AC ಯಲ್ಲಿ ಕುಳಿತುಕೊಂಡಿರುತ್ತಾರೆ. ನಾವು ಶಾಸಕರು appointment ತೆಗೆದುಕೊಂಡು ಹೋಗಬೇಕು. ನಾವು ಹೋಗಿ ಚೀಟಿ ಕೊಟ್ಟರೂ they are not bothered. ಆಮೇಲೆ budget ನಲ್ಲಿ ಅವರು extra amount ಎಷ್ಟು ಕೇಳಿದ್ದಾರೆ ಅಷ್ಟು ಕೊಡುವುದು. ಕ್ರಮ ತೆಗೆದುಕೊಳ್ಳುತ್ತೇನೆಂದು ತಾವೇ ಹೇಳಿದಿರಿ. I brought to your notice. Minor Irrigation ನಲ್ಲಿ first ಕರ್ನಾಟಕ ಸರ್ಕಾರ 5 ಲಕ್ಷ ರೂಪಾಯಿಗಳನ್ನು release ಮಾಡಬೇಕು. I brought this to your notice. Till today, though it is more than 6 months, they have not taken any action. ಯಾರ ಮೇಲೆ ನಾವು ಹೇಳಬೇಕು? ನಾವೇನಾದರೂ force ಆಗಿ ಮಾತನಾಡಿಬಿಟ್ಟರೆ, ಅವರಿಗೆ ನೋವಾಗುತ್ತದೆ. ಎಲ್ಲಾ ಅಧಿಕಾರಿಗಳಿಗೂ ನಾವು ಹೇಳುವುದಕ್ಕಾಗುವುದಿಲ್ಲ. ಎಲ್ಲಾ theory ಮೇಲೆ ಹೇಳುವುದಕ್ಕಾಗುವುದಿಲ್ಲವೆನ್ನುತ್ತಾರೆ. ಎಲ್ಲಾ theory ಮೇಲೆ ಹೇಳಿದರೆ ಏನಾಗುತ್ತದೆ? ಕೆಲವರು ಒಳ್ಳೆಯ ಕೆಲಸ ಮಾಡುವವರಿಗೆ ನೋವಾಗುತ್ತದೆ. ಆದ್ದರಿಂದ, ಅವರ ಮೇಲೆ ಹೇಳಬಾರದು. ಅಷ್ಟೆ. ನನಗೇನೂ ಭಯವಿಲ್ಲ. ಯಾವ ಅಧಿಕಾರಿಗಳಿಗೂ ಗುಲಾಮನಾಗುವ ಅವಶ್ಯಕತೆ ನನಗಿಲ್ಲ. I will fight only for my people. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಜನರಿಗೋಸ್ಕರ ನಾನು fight ಮಾಡುತ್ತೇನೆ. ನನ್ನ Municipality ಯಲ್ಲಿ ಇಷ್ಟು ಹಣ ಕೊಟ್ಟರೂ ಒಂದು toilet ಕಟ್ಟುವುದಕ್ಕೂ ಯೋಗ್ಯತೆ ಇಲ್ಲ ಎನ್ನುತ್ತಾರೆ. ಅಲ್ಲಿ college ಗಳಿಲ್ಲ, ಶೌಚಾಲಯಗಳಿಲ್ಲ. ಕೋಟ್ಯಾಂತರ ರೂಪಾಯಿ budget ಕೊಟ್ಟಿದ್ದೇವೆಂದು ಹೇಳುತ್ತಾರೆ. ಜನ ಬಂದು ನನ್ನ ಕೇಳುತ್ತಿದ್ದಾರೆ. ಏನ್ರಿ, extra amount ಇದೆ, excess money ಇದೆ, ಇನ್ನೂ ನೀವೊಂದು ಶೌಚಾಲಯ ಕಟ್ಟಿಲ್ಲವಲ್ಲಾ ಎಂದರೆ, ನಾನು ಹೋಗಿ ಕಟ್ಟುವುದಕ್ಕಾಗುತ್ತದೆಯೇ? ನಾನೇನು contractor? ಇಲ್ಲ contractor ಕೆಲಸ ಮಾಡಿಕೊಂಡಿದ್ದೇನೆಯೇ? Where the amount goes? ನಮಗೆ ಅವಕಾಶವಿಲ್ಲವೆಂದು ಅವತ್ತು ನೀವು ಭಾಷಣ ಮಾಡುವ time ನಲ್ಲಿ ಹೇಳಿದಿರಿ. ಈ ಕಡೆ ಇರುವವರೂ ಮಾತನಾಡಬೇಕು. ನಮಗೂ ಅವಕಾಶ ಕೊಡಬೇಕು ಎಂದು ಹೇಳಿದಿರಿ. ನಿಜವೇ. ಮದುವೆ ಮಾಡುವ ಮನೆಯಲ್ಲಿ ಹೋಗಿ ಮದುವೆ ಮಾಡುವವನೇ ಊಟ ಮಾಡಿಕೊಂಡಿದ್ದರೆ, ಮಾನ ಮರ್ಯಾದೆ ಹೋಗುತ್ತದೆ. ಮದುವೆಗೆ ಬರುವವರಿಗೆ ಊಟ ಕೊಡಬೇಕು. ಮನೆಗೆ ಯಾರು ಬರುತ್ತಾರೆ ಅವರಿಗೆ ಊಟ ಕೊಡಬೇಕು. ನಾವೂ ಮನುಷ್ಯರು, ನಮಗೂ ಊಟಕ್ಕೆ time ಆಗಿದೆ ಎಂದು ಕುಳಿತುಕೊಂಡು ಊಟ ಮಾಡಿದರೆ ಆಗ ಮಾನ

ಮರ್ಯಾದೆ ಹೋಗುತ್ತದೆ. ಆ ತರಹ, ನಮಗೆ ಅವಕಾಶ ಕೊಡಬೇಕು. ನೀವೇ ಮಾತನಾಡಿಕೊಳ್ಳುವುದಲ್ಲ. ಮಾತನಾಡಿ. Felicitate ಮಾಡಿ. ನಾವೇನೂ Deputy C.M. study ಮಾಡಿಲ್ಲವೆಂದು ಹೇಳಿದೆವಾ? Yes. ನೀವು ಮಾಡಿದ್ದೀರಿ. ಸ್ವಾಮಿ. ಇಷ್ಟು ಹಣ ಬಿಡುಗಡೆ ಮಾಡಿ. ನಮಗೆ ಸಂತೋಷ. ಆ ದುಡ್ಡು ಎಲ್ಲಿ ಹೋಗುತ್ತದೆ? ಯಾರು monitor ಮಾಡಬೇಕು? ನಾವಾ? ನೀವಾ? You are supposed to monitor. Have you done that? Till today, they have not taken action. ಇಂಥ ಅಧಿಕಾರಿಗಳನ್ನಿಟ್ಟುಕೊಂಡು ನೀವು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? Social Welfare Departmentನಲ್ಲಿ ನೀವು ಇಷ್ಟು ಹಣ ಕೊಡಬೇಕೆಂದು ಕೇಳಿದ್ದೀರಿ. ಈ ಮಾತುಗಳನ್ನೂ ನೋಡಿದರೆ, Schedule Caste ಜನರ ಮೇಲೆ ಅಪಾರ ಪ್ರೀತಿ ಇರುವ ಹಾಗೆ ಇರುತ್ತದೆ. Social Welfare Minister ರವರೇ, ಸ್ವಲ್ಪ ಗಮನಿಸಿ, ತಾವು Demand No. 10 ನಲ್ಲಿ ಎಷ್ಟು amount ಕೊಟ್ಟಿದೆ, whether that amount is sufficient for the education of the people? ಇನ್ನೂ ಬೇಕೇ ಎಂದು ಕೇಳಿದರೆ, ಹಿಂದಿನ ಸರ್ಕಾರ ಏನೂ ಮಾಡಿಲ್ಲ. ಮುಂದಿನ ಸರ್ಕಾರ ಮಾಡುವುದಿಲ್ಲ. ನಾವು ಸ್ವಲ್ಪ amount ಕೊಟ್ಟಿದ್ದೇವೆ ಎನ್ನುತ್ತಾರೆ. ಅವರಿಗೆ ಒಂದು ತಿಂಗಳು ಊಟವೇ ಇಲ್ಲ. ನಾವು ಒಂದು spoon ಊಟ ಕೊಟ್ಟಿದ್ದೇವೆ ಎನ್ನುತ್ತಾರೆ. ಅಡ್ಡಿಯಿಲ್ಲ. ಕೊಡಿ. ಆಗಲೇ ಖರ್ಗೆ ಸಾಹೇಬರು ಬಡವರಿಗೆ ಊಟ ಕೊಡಿ ಎಂದು ಹೇಳಿದರು. ತಾವೇನು ಮಾಡಿದಿರಿ ಎಂದರೆ, ಅದಕ್ಕೆ ಉದಾಹರಣೆ, ಬೀದಿಯಲ್ಲಿ beggars ಇರಬಾರದು, ಭಿಕ್ಷೆ ಯಾರೂ ತೆಗೆದುಕೊಳ್ಳಬಾರದು. ಅವರನ್ನೆಲ್ಲಾ ತೆಗೆದುಕೊಂಡು ಹೋಗಿ ನಾವು ಒಳ್ಳೆಯ ಊಟ ಕೊಟ್ಟು 5 star room ನಲ್ಲಿ ಬಿಟ್ಟೆವು ಅನ್ನುತ್ತೀರಿ. ನೀವು ಮಾಡಿದಿರಿ ತಾನೆ? ಭಿಕ್ಷೆ ತೆಗೆದುಕೊಳ್ಳುವವರಿಗೆ ನೀವು ಸಹಾಯ ಮಾಡುವವರು, ಸಾಮಾನ್ಯ ಬಡವನ ಮಗ ಓದುವವನಿಗೆ ಸಹಾಯ ಮಾಡಿಲ್ಲವೆಂದರೆ, What for the Social Welfare Department is functioning? ಯಾವ ತರಹ ಮಾಡಿದಿರಿ? ಬೆಂಗಳೂರು City ಯಲ್ಲಿ ಏನೆಂದರೆ ಭಯ ಸ್ವಾಮಿ, ನಮ್ಮ ಹತ್ತಿರ ಬಹಳ budget ಇದೆ, beggar ಯಾರೂ ಬೀದಿಯಲ್ಲಿ ಹೋಗಬಾರದು, ಇವರಿಗೆ rehabilitation life ಕೊಡುತ್ತೇವೆನ್ನುವವರು, beggarsಗೂ, leprosy ಇರುವವರಿಗೂ, ಏಡ್ಸ್ ಬಂದಿರುವವನಿಗೂ ಕೊಡುವವರು, ಒಬ್ಬ ಸಾಮಾನ್ಯ ಬಡವನ ಮಗನಿಗೆ ಕೊಡುವುದಿಲ್ಲವೇ? ಆ ದುಡ್ಡು ಎಲ್ಲಿ ಹೋಗಿದೆ? Where it has gone? ಪ್ರತಿಯೊಂದು collegeಗಳಲ್ಲಿ seat ಕೊಡಬೇಕಾದರೆ first, ನೀವು ಹಣ ತುಂಬಿ, fees ಕಟ್ಟಿ, ಆಮೇಲೆ ನೋಡೋಣ ಎನ್ನುತ್ತಾರೆ. ಅವರಿಗೆ recognize ಕೊಡುವುದು ನಿಮ್ಮ ಸರ್ಕಾರ ತಾನೇ? Recognition cancel ಮಾಡುತ್ತೀರಾ? Private ನಲ್ಲೇ ಇರಲಿ. Private ಇದ್ದರೆ ಅವನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ತಾವು ಪೂರ್ತಿ budget ಬಗ್ಗೆ ಮಾತನಾಡುತ್ತಿದ್ದೀರಾ ಹೇಗೆ?

ಶ್ರೀ ಎಸ್. ರಾಜೇಂದ್ರನ್ : ಇಲ್ಲ. Food and Civil Supplies ಗೆ budjet ಕೇಳಿದರೆ, ಕೇವಲ card ಗಳು ಇಲ್ಲ, BPL, APL card, general card, yellow card ಏನೇನು card ಗಳಿವೆ. colour ಗೊಂದು card ಕೊಟ್ಟುಬಿಡಿ. ಈಗ white colour ಗೊಂದು ಮಾತ್ರ ಕೊಟ್ಟಿಲ್ಲ. ಅದನ್ನೂ ಕೊಟ್ಟುಬಿಟ್ಟರೆ, white colour people, white colour card. ಆಗುತ್ತದೆ. ಇವರು ಎಷ್ಟು ಹಣ ಕೇಳುತ್ತಿದ್ದಾರೆ, ಅವರು ಕೊಡುತ್ತಿದ್ದಾರೆಂದರೆ, ಬಾಡಿಗೆಗೆ ತೆಗೆದುಕೊಂಡ building ನಲ್ಲಿದ್ದಾರೆ. ಬಾಡಿಗೆ ಕೊಡುವುದಕ್ಕೆ ಹಣವಿಲ್ಲ. They do not have their own buildings. Then, ಅವರಿಗೆ extra amount ಏಕೆ ಕೊಡಬೇಕು? ಸ್ವಂತ building ಇಲ್ಲ, ಬಾಡಿಗೆಗೆ ತೆಗೆದುಕೊಂಡಿದ್ದಾರೆ. ಅದರ ownerಗೆ ಇವರು ದುಡ್ಡು ಕೊಟ್ಟಿಲ್ಲ. ನಾನು ಹೇಳುವುದು ಸುಳ್ಳು ಎಂದರೆ challenge ಮಾಡುತ್ತೇನೆ. I am bringing into your notice. ನನ್ನನ್ನು ಬಂದು ಕೇಳುತ್ತಿದ್ದಾರೆ. ಇವರು ಬಾಡಿಗೆಗೆ ತೆಗೆದುಕೊಂಡಿರುವುದು. ನೀವು ಶಾಸಕರಲ್ಲವೇ, ನೀವು ಮಾಡಿಕೊಡಬೇಕೆನ್ನುತ್ತಾರೆ. ಮಾಡಲಿಲ್ಲವೆಂದರೆ ನಮಗೆ ಅವನು vote ಕೊಡುವುದಿಲ್ಲ. ಇವರಿಗೆ ದುಡ್ಡು ಕೊಡಬೇಕು. ಇವೆಲ್ಲವನ್ನೂ Deputy C.M. ಸಾಹೇಬರೇ, ತಾವು ಸರಿಪಡಿಸಬೇಕು. ಬಹಳ ಕಷ್ಟವಾಗುತ್ತದೆ. ನಮ್ಮ ಜೊತೆ ನಿಲ್ಲಿ, ನಿಮ್ಮ ಜೊತೆ ನಾವು ನಿಂತುಕೊಳ್ಳುತ್ತೇವೆ. ನಾವು ಈ ಕಡೆ ಕುಳಿತುಕೊಳ್ಳುವವರು ಜೊತೆಯಲ್ಲಿರಬಾರದೆಂದು ಇಲ್ಲ. ಒಂದು ಯೋಚನೆ ಮಾಡಿ. Transport ಗೆ thousand lakhs ಕೇಳಿದ್ದಾರೆ. RTO Office ಕಟ್ಟುವುದಕ್ಕಲ್ಲ, ಅದು. Home and Transport ಗೆ ಸಂಬಂಧಿಸಿದಂತೆ, ನಾನು ನಮ್ಮ Home Minister ರವರನ್ನು ಕೇಳಿದೆ, ನನ್ನ city ಯಲ್ಲಿ more than 50% population ಇದೆ. ಇನ್ನೂ traffic police station ಇಲ್ಲವೆಂದು, ತಾವೇನಾದರೂ ಒಂದು ಅವಕಾಶ ಮಾಡಿಕೊಡಬೇಕು, budget ನಲ್ಲಿ Finance Minister ಏನಾದಾರೂ ಮಾಡಿದರೆ ಖಂಡಿತವಾಗಿ ಮಾಡುತ್ತೇನೆಂದು ಹೇಳಿದ್ದಾರೆ. thousand lakhs ನಲ್ಲೇನಾದರೂ ನಮಗೆ traffic police station ಬರುತ್ತದೆಯೋ? ಇಲ್ಲವೋ? ಗೊತ್ತಿಲ್ಲ. Home Minister ಸಾಹೇಬರೇ, ಇದನ್ನು ತಮ್ಮ notice ಗೆ ತೆಗೆದುಕೊಂಡು ಬರುತ್ತೇವೆ, ಏನಾದರೂ ಚಿಂತನೆ ಮಾಡಿ. ಅದನ್ನಾದರೂ ಒಂದು ನಮಗೆ ಮಾಡಿಕೊಡಿ. ಆಗ ನಮಗೆ thousand lakhs ನಲ್ಲಿ ನಮಗೆ ಒಟ್ಟು 50 ಸಾವಿರ ರೂಪಾಯಿ ಘಬಂದಿದೆ ಎಂದು ಜ್ಞಾಪಕ ಬರುತ್ತದೆ. Police Station development ಎಂದು ಏನು ಹೇಳುತ್ತಾರೋ, ಕೆಲವು ಕ್ಷೇತ್ರಕ್ಕೆ ಮಾತ್ರ ಹೋಗುತ್ತದೆ. who will monitor that? ನಾವು ಹೋಗಿ ಕೇಳುವುದಕ್ಕಾಗುತ್ತದೆಯೇ? The Department should perfectly find out. ಯಾವ ಯಾವ ಕ್ಷೇತ್ರದಲ್ಲಿ ಎಷ್ಟು ಹಣ ಬಿಡುಗಡೆ ಮಾಡುತ್ತಾರೋ? ಯಾವ ಯಾವ buildings ಗೆ ಮಾಡುತ್ತಾರೋ? ಯಾವ ಯಾವ ಹೊಸ police station ಮಾಡುತ್ತಾರೋ? ನಾವು ಅದನ್ನು ನಿಮ್ಮ ನೋಟೀಸ್‌ಗೆ ತೆಗೆದುಕೊಂಡು ಬಂದರೆ ನೀವು ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಿಲ್ಲ. thousand *lakhs rupees* ಪತ್ರಿಕೆಗಳಲ್ಲಿ ನೋಡಿದರೆ ಕೋಟ್ಯಾಂತರ, ರೂಪಾಯಿ ಹಾಗೇಯೇ excess ಬೀದಿ ಬೀದಿಯಲ್ಲಿ

ಬಿದ್ದಿದೆ ಎಂದು ಹೇಳುತ್ತೀರಿ, ನಮ್ಮ ಊರಿನಲ್ಲಿ ಒಂದು ನೂರು ರೂಪಾಯಿ ಬಿದ್ದಿಲ್ಲ. PWD Roadಗೆ ಕೊಟ್ಟಿದ್ದಾರೆ, ಶ್ರೀಮಾನ್ ರೇವಣ್ಣನವರಿಗೆ ನನ್ನ ಮೇಲೆ ಏನು ಪ್ರೀತಿನೋ ಏನೋ? ನಮ್ಮ Constituency ಮೇಲೆ ಪ್ರೀತಿನೋ ಗೊತ್ತಿಲ್ಲ. ಬೇಕಾದಷ್ಟು ರೋಡ್‌ಗಳನ್ನು ಕೊಟ್ಟಿದ್ದಾರೆ, two hundred lakh Rupees ಹಣವನ್ನು ಬಿಡುಗಡೆ ಮಾಡಿದ್ದಾರೆ, ಸಂತೋಷವೇ; ಇನ್ನೂ five hundred lakh Rupees ಹಣವನ್ನು ಕೊಡಿ, thousand lakh Rupees ಹಣವನ್ನು ಕೊಡಿ ಸಂತೋಷವೇ, ಅದುದರಿಂದ, ಸಾರ್ ಬೇಗ ಮುಗಿಸಿಬಿಡುತ್ತೇನೆ, ಕೊಡಲಿ ಬಿಡಿ ಸರ್ಕಾರ ಹಾಗೇ ಇದೆ, I am bringing to your notice. ನಮ್ಮ Deputy C.M. ಅವರನ್ನು ಕೇಳುತ್ತೇನೆ, ನಾನು ತಮಾಷೆಗಾಗಿ ಹೇಳಲಿಲ್ಲ, ಕೆಲವು ವಿಷಯಗಳಲ್ಲಿ ನಿಮ್ಮ ಸರ್ಕಾರದ ಬಗ್ಗೆ ಕೆಲವು ವಿಚಾರಗಳನ್ನು ಅವರ ನೋಟೀಸ್‌ಗೆ ತೆಗೆದುಕೊಂಡು ಬಂದರೆ the bureaucrats will take it for their own advantage. ತಾವು ಹೇಗೆ ಗಂಭೀರವಾಗಿ ಹೇಳಿದಿರಿ, ನಮ್ಮ ನೋವು, that means, your administration has failed ಎಂದು ಆಗುತ್ತೆ, Deputy C.M.ನವರ ಬಾಯಿನಲ್ಲಿ ಈ Administration Machinery ಸರಿಯಿಲ್ಲ, ಅದನ್ನು ನಾವು ಸರಿಪಡಿಸಬೇಕು, ಈಗ ನಾನು ಹೊಸಬನಾಗಿ ಬಂದಿದ್ದೇನೆಂದು ಹೇಳಿದರೆ, ಸ್ವಾಮಿ ತಾವು ನೋಡಿ, ನನ್ನ ಮೇಲೆ ಕೋಪ ಏನೂ ಬೇಡ, I am just bringing to your notice. Your administration has failed why because, the Deputy Chief Minister said, Officials ನಿಮಗೆ ಇಷ್ಟು ಮಾಡುತ್ತಾರೆಂದರೆ, ನಮ್ಮ ಗತಿಗಳು ಏನು ಆಗಬೇಕು ಎಂಬುದನ್ನು ತಾವು ಆಲೋಚನೆ ಮಾಡಬೇಕು. ಸಾಮಾನ್ಯ ಕ್ಲರ್ಕ್ ಕೂಡ ನಮಗೆ respect ಕೊಡುವುದಿಲ್ಲ ಸ್ವಾಮಿ ಆ ಸ್ಥಿತಿಗೆ ನಾವು ಬಂದು ಬಿಟ್ಟಿದ್ದೇವೆ. ಆದುದರಿಂದ when we bring it to your notice, you take serious action. We are with you. Definitely, you take action. ತಾವು ಏನು ಮಾಡಬೇಕು ಹೇಳಿ ಎಂದಿರಿ, ಡಿಸ್‌ಮಿಸ್ ಮಾಡಿಬಿಡಿ, ನಾವೆಲ್ಲಾ ನಿಮ್ಮ ಜೊತೆಯಲ್ಲಿ ಇರುತ್ತೇವೆ, ಏನಾಗುತ್ತದೆ ನೋಡೋಣ, next ಚುನಾವಣೆ ಬರುತ್ತದೆ, ಬಂದರೆ ನಾವು ಭಾಷಣ ಮಾಡುತ್ತೇವೆ, ಇಲ್ಲದಿದ್ದರೆ ಬೀದಿಗೆ ಇಳಿಯುತ್ತೇವೆ, ಏನಾಗುತ್ತದೆ, ಏನೂ ಆಗುವುದಿಲ್ಲ, ತಲೆ ಹೋಗುವುದಿಲ್ಲ ಸ್ವಾಮಿ, ಈ ಕುರ್ಚಿನಲ್ಲಿ, ಕುಳಿತುಕೊಳ್ಳಬೇಕು ಇಲ್ಲಿಯೇ ಇರಬೇಕು ಇಲ್ಲಿ ಇದ್ದರೆ ಮಾತ್ರ ಊಟ ಎನ್ನುವ ಅವಶ್ಯಕತೆ ಇಲ್ಲ, ಬೀದಿಯಲ್ಲಿ ಹೋಗುವುದಕ್ಕೆ ನಾವು ತಯಾರಾಗಿದ್ದೇವೆ, ಚಂದ್ರಮಂಡಲಕ್ಕೆ ಹೋಗುವುದಕ್ಕೆ ನಾವು ತಯಾರಿದ್ದೇವೆ. ನನಗೆ ಮಾತ್ರ ಹೇಳಿದೆ ಸ್ವಾಮಿ, ನಾನು ತಮಗೆ ಹೇಳಲಿಲ್ಲ, ತಾವು ಸೂರ್ಯಮಂಡಲ, ಚಂದ್ರಮಂಡಲ ಎಷ್ಟು ಮಂಡಲಗಳನ್ನು ನೋಡಿದಿರಿ, ತಾವು ವೈಕುಂಠ ಬಾಳಿಗಾರವರ ಕಾಲದಲ್ಲಿ ಇದ್ದೀರಿ. ನಾವು ಅದನ್ನು ನೋಡುವುದಕ್ಕೆ ಆಗುತ್ತದೆಯೇ? ನಮಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. Thank you. Thank you very much.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಊರಿನಲ್ಲಿ ಇರುವುದಿಲ್ಲ, ಆದುದರಿಂದ ನನಗೆ ಅವಕಾಶ ಕೊಡಿ.

ಶ್ರೀ ಯಾದವಾಡ ಮಹಾಲಿಂಗಪ್ಪ ಶಿವಲಿಂಗಪ್ಪ : ರಾಯರೆಡ್ಡಿಯವರೇ, ನೀವೇ ಮಾತನಾಡಬೇಡಿ, ಬೇರೆಯವರಿಗೆ ಅವಕಾಶ ಮಾಡಿಕೊಡಿ, ಬರೇ ನೀವು ಮಾತನಾಡಲಿಕ್ಕೆ ಹೋಗಬೇಡಿ,

ಶ್ರೀ ಆರ್. ಧ್ರುವನಾರಾಯಣ: ನಮಗೆ ಅವಕಾಶ ಕೊಡಿ ಸಾರ್.

ಶ್ರೀ ಬಸವರಾಜ ರಾಯರೆಡ್ಡಿ : ನೀವು ಬೇಡ ಎಂದರೆ, ಸುಮ್ಮನೆ ಕುಳಿತು ಬಿಡುತ್ತೇನೆ, ಎಂಎಲ್ಎ ಆಗಿ ಉಳಿಯಬೇಕು ಎನ್ನುವ ಆಸೆ ನನಗೇನೂ ಇಲ್ಲ.

ಉಪಾಧ್ಯಕ್ಷರು : ಆ ರೀತಿ ಅಲ್ಲ ನಿಮಗೆ ಕೊಡಬಾರದು ಎನ್ನುವ ಉದ್ದೇಶ ಇಲ್ಲ, ಧ್ರುವನಾರಾಯಣರವರು ಸಂಜೆಯಿಂದ ಕಾಯುತ್ತಿದ್ದಾರೆ, ನೀವು ಸ್ವಲ್ಪ ದೊಡ್ಡ ಮನಸ್ಸು ಮಾಡಿದರೆ ಅವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ,

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ನಮ್ಮ ಇಬ್ಬರಲ್ಲಿ ಯಾರಿಗಾದರೊಬ್ಬರಿಗೆ ಅವಕಾಶ ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ : ನೋಡಿ ನಾನು ಬೆಳಗಾವಿಯಲ್ಲಿ ಇರುವುದಿಲ್ಲ, ನಾನು ಇಲ್ಲಿಂದ ಧಾರವಾಡಕ್ಕೆ ಹೋಗಬೇಕಾಗಿದೆ. ನೋಡಿ ನಾನು 80 ಕಿಲೋಮೀಟರ್ ಪ್ರಯಾಣ ಮಾಡುತ್ತೇನೆ, ದಯಮಾಡಿ ಅವಕಾಶ ಕೊಡಿ.

ಉಪಾಧ್ಯಕ್ಷರು : ನೀವು ನಂತರ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಏನು ಹೇಳುತ್ತೇನೆಂದರೆ, ಅವರು ಎಲ್ಲರೂ ಇಲ್ಲಿಯೇ ಇರುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ಟೈಂ ಆಗಿದೆ, ಮಾನ್ಯ ಸಚಿವರಿಂದ ಉತ್ತರ ಕೊಡಿಸಿಬಿಡಿ.

ಉಪಾಧ್ಯಕ್ಷರು : ಆಯಿತು. ನಿಮ್ಮಿಬ್ಬರಲ್ಲಿ ಒಬ್ಬರು ಮಾತನಾಡಿ.

ಶ್ರೀ ಆರ್. ಧ್ರುವನಾರಾಯಣ : ದಯಮಾಡಿ ಅವರನ್ನು ಕೂಡಿಸಿ.

ಶ್ರೀ ವಾಟಾಳ್ ನಾಗರಾಜ್ : ನಾವು ಯಾವಾಗ ಮಾತನಾಡುವುದು?

ಶ್ರೀ ಆರ್. ಧ್ರುವನಾರಾಯಣ : ನನಗೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮೊದಲನೆಯದಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ,

ಶ್ರೀ ಬಸವರಾಜ ರಾಯರೆಡ್ಡಿ : ನಾನು 80 ಕಿಲೋಮೀಟರ್ ಪ್ರಯಾಣ ಮಾಡಬೇಕು. ನೀವು ಬೇಡ ಎಂದರೆ ಹೊರಟು ಬಿಡುತ್ತೇನೆ, I want to go out of the House.

ಶ್ರೀ ಕೆ. ಶ್ರೀನಿವಾಸ ಗೌಡ : ತಾವು ಬೆಳಿಗ್ಗೆ ಅವಕಾಶ ಕೊಟ್ಟರೆ ನಾವು ಬೆಳಿಗ್ಗೆ ಮಾತನಾಡುತ್ತೇವೆ,

ಉಪಾಧ್ಯಕ್ಷರು : ನಿಮ್ಮ ನಿಮ್ಮಲ್ಲಿ ಹೊಂದಾಣಿಕೆ ಇಲ್ಲವೆಂದರೆ, ನಾನು ಏನು ಮಾಡುವುದಕ್ಕಾಗುತ್ತದೆ ಹೇಳಿ?

ಶ್ರೀ ಕೆ. ಶ್ರೀನಿವಾಸ ಗೌಡ : ತಾವು adjourn ಮಾಡುವುದಾದರೆ, ನಾನು ಬೆಳಿಗ್ಗೆ ಮಾತನಾಡುವುದಕ್ಕೆ ರೆಡಿ ಇದ್ದೇನೆ.

ಉಪಾಧ್ಯಕ್ಷರು : ನಿಂತಿರುವವರೆಲ್ಲಾ ನೀವೇನೇ. ನಿಮ್ಮ ನಿಮ್ಮಲ್ಲಿ adjustment ಇಲ್ಲವೆಂದರೆ ನಾನು ಏನು ಮಾಡಲಿ?

ಶ್ರೀ ಯಾದವಾಡ ಮಹಾಲಿಂಗಪ್ಪ ಶಿವಲಿಂಗಪ್ಪ : ಟೈಂ ಆಗಿದೆ. ದಯಮಾಡಿ ಉತ್ತರ ಕೊಡಿಸಿಬಿಡಿ.

ಶ್ರೀ ಕೆ. ಶ್ರೀನಿವಾಸ ಗೌಡ : ಅಡ್ಜರ್ನ್ ಮಾಡುವುದಿದ್ದರೆ, ಬೆಳಿಗ್ಗೆ ಮಾತನಾಡುವುದಕ್ಕೆ ನಾವು ರೆಡಿ ಇದ್ದೇವೆ. ಅದನ್ನು ನೀವು ತೀರ್ಮಾನ ಮಾಡಬೇಕು.

ಉಪಾಧ್ಯಕ್ಷರು : ಅಲ್ಲಲ್ಲ, ತೀರ್ಮಾನವಲ್ಲ ಅವರು ಮಾತನಾಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ,

ಶ್ರೀ ಆರ್. ಧ್ರುವನಾರಾಯಣ : ನನಗೆ ಎರಡು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಆಯಿತು, ಈಗ ವಿಚಾರಗಳ ಬಗ್ಗೆ ಮಾತನಾಡುವುದು ಬಹಳ ಅವಶ್ಯಕತೆ ಇದ್ದರೆ, ಎಲ್ಲರೂ ಮಾತನಾಡಲಿ, ಪೂರಕವಾದಂಥ ಅಂದಾಜುಗಳ ಬಗ್ಗೆ ಚರ್ಚೆ ಮಾಡಿರತಕ್ಕಂಥದ್ದು ಸದನದ ಸಂಪ್ರದಾಯ ಮತ್ತು ಕಾನೂನಿನ ಪ್ರಕಾರ ಆದರೂ ಕೂಡ, ಈ ಪೂರಕ ಅಂದಾಜುಗಳನ್ನು ಹೆಚ್ಚುವರಿಯಾಗಿ ಕೇಳಿರತಕ್ಕಂಥದ್ದು, ಸಮರ್ಥನೀಯವಾದ ಕಾರಣವೇ? ಅಲ್ಲವೇ? ಮತ್ತು ಸಮರ್ಥನೀಯವಲ್ಲದ ಕಾರಣಗಳಾಗಿದ್ದರೆ ಅದನ್ನು ನಾವು ತಿರಸ್ಕರಿಸುತ್ತೇವೆಂದು ಹೇಳಬೇಕೇ ವಿನಾಃ ಬಜೆಟ್‌ನಲ್ಲಿ ಮಾತನಾಡಿದಂತೆ ಜನರಲ್ ಡಿಸ್‌ಕಷನ್ ಮಾಡಲಿಕ್ಕೆ ಅವಕಾಶ ಇಲ್ಲ, ಇದು ಈಗಾಗಲೇ ಶಕ್ಧರ್ ಅಂಡ್ ಕೌಲ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕಂಥದ್ದು ಇದೆ, ನಮ್ಮ ಸಂಪ್ರದಾಯವೂ ಇದೆ. ಆಮೇಲೆ ಯಾವುದೇ ವಿಚಾರಗಳನ್ನು ಚರ್ಚೆ ಮಾಡಬೇಕಾದರೆ, ಎಲ್ಲಾ 224 ಜನ ಸದಸ್ಯರಿಗೂ ಮಾತನಾಡತಕ್ಕಂಥ ಅರ್ಹತೆ ಇದೆ, ಎಲ್ಲರೂ ಮಾತನಾಡಲೇಬೇಕಾಗುತ್ತದೆ, ಆದರೆ ಆಯಾಯ ಪಕ್ಷಗಳಿಗೆ ಆಯಾಯ Floor Leadersಗೆ ಸಂಬಂಧಪಟ್ಟಂತೆ ತಾವು ಸಮಯವನ್ನು ನಿಗದಿ ಮಾಡಿ ಬೇರೆ ಬೇರೆ ವಿಷಯಗಳಿವೆ, ಇವತ್ತು ನಾವು ಇದರ ಒಪ್ಪಿಗೆಗೆ ಬರಬೇಕಾಗಿದೆ. 28ಕ್ಕೆ ನಮ್ಮ ಸಭೆಯನ್ನು ಮುಕ್ತಾಯಗೊಳಿಸಬೇಕೆಂದು ಅಭಿಪ್ರಾಯ ಪಟ್ಟಿದ್ದೇವೆ. ಇದರ ಜೊತೆಗೆ ಇವತ್ತು ನಮ್ಮ ಕಾರ್ಯಸೂಚಿಯ ಪಟ್ಟಿಯಲ್ಲಿರತಕ್ಕಂಥದ್ದನ್ನು ಮಾಡಲೇಬೇಕಾಗುತ್ತದೆ, ಈಗ ಇವರು ಉತ್ತರ ಕೊಡಬೇಕಾಗುತ್ತದೆ, ಉತ್ತರ ಕೊಟ್ಟ ಮೇಲೆ ಲಾಭದಾಯಕವಾದಂಥ ಹುದ್ದೆಯ ವಿಚಾರದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. ಅದಾದ ಮೇಲೆ ಬೇರೆ ವಿಷಯಗಳಿವೆ, ಎರಡನೇ ಮಸೂದೆ ಇದೆ. ಇದಾದ ಮೇಲೆ, ನಾಳೆ ಲಾಭದಾಯಕವಾದ ಹುದ್ದೆಗೆ ಸಂಬಂಧಪಟ್ಟ ಮಸೂದೆಯನ್ನು ಮತ್ತೆ Council ಗೆ ಕಳುಹಿಸಬೇಕು, ಈ ಎಲ್ಲಾ ಮಸೂದೆಗಳನ್ನು ಚರ್ಚೆ ಮಾಡತಕ್ಕಂಥ ಸಂದರ್ಭ ಇರುವಾಗ, ತಾವು ಕಾಲಮಿತಿ ಮಾಡಿ, ಆಯಾಯ ಪಕ್ಷದ ಶಾಸಕರ ಸಂಖ್ಯೆಗನುಗುಣವಾಗಿ ಅಥವಾ Floor Leader ಆಗಿದ್ದಾರೆನ್ನುವ ಕಾರಣಕ್ಕಾಗಿ ಹೆಚ್ಚು ಸಮಯ ಕೊಡುತ್ತೀರೋ ನಮ್ಮ ಆಡಳಿತ

ಪಕ್ಷದಲ್ಲಿದ್ದವರಿಗೆ ಇಷ್ಟು ಎಂದು ನೀವು ಇಬ್ಬರು ಮೂರು ಮಾತನಾಡಿ ಇಷ್ಟು ಕಾಲದಲ್ಲಿ ಮುಗಿಸಿಯೇ ತೀರಬೇಕೆಂದು ತಾವು ಟೈಂ ಗುರುತು ಮಾಡಿಕೊಂಡು ನಮಗೆ ಕೊಟ್ಟರೆ ಎಲ್ಲರಿಗೂ ಮಾಡಲಿಕ್ಕೆ ಆಗುತ್ತದೆ, ಈಗ 9–30 ಆಗಿದೆ, ಇದಾದ ಮೇಲೆ ಮತ್ತೆ ಇವರು ಉತ್ತರ ಕೊಡಬೇಕು, ಅದನ್ನು ನಾಳೆಗೆ ಹಾಕೋಣ ಎಂದು ಹೇಳುತ್ತಾರೆ, ನಾಳೆಗೆ ಹಾಕಿದರೆ ಸಭೆಯನ್ನು 28ಕ್ಕೆ ಮುಗಿಸಬೇಕು, ಮುಖ್ಯವಾದಂಥ ಮಸೂದೆಗಳೂ ಕೂಡ ಇವೆ. ನಾಳೆ 9–00 ಗಂಟೆಗೆ ಕರೆಯಬೇಕು ಅಂದರೆ 9:30ಕ್ಕೆ ಕ್ಯಾಬಿನೆಟ್ ಮೀಟಿಂಗ್ ಇದೆ, ಈ ಎಲ್ಲಾ ಕಾರಣಗಳಿಂದಾಗಿ ದಯಮಾಡಿ ನಾನು ಎಲ್ಲಾ ಶಾಸಕರನ್ನು ನಿಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಈಗ ಸಮಯ ನಿಗದಿ ಮಾಡಿ, ಒಂದು ಪಕ್ಷದವರಿಗೆ ಇಷ್ಟು ಸಮಯ, ಅಕಸ್ಮಾತ್ ಅದನ್ನು ಬೇರೆಯವರು ಉಪಯೋಗಿಸಿಕೊಂಡಿದ್ದರೆ, ಇಲ್ಲಾ ದಯಾಮಾಡಿ ಕ್ಷಮಿಸಿ, ಇನ್ನೊಂದು ಸಲ ಮಾತನಾಡಿ ಎಂದು ಹೇಳಿ. ಆಯಾಯ ಪಕ್ಷದ ಮುಖಂಡರು ಯಾರಿಗೆ ಅದ್ಯತೆ ಕೊಡಬೇಕು ಎಂದು ಅವರು ಹೆಸರು ಹೇಳುತ್ತಾರೆ, ಅವರು ಆದ್ಯತೆಯನ್ನು ಕೊಡತಕ್ಕಂಥದ್ದು ಹಿರಿಯವರಿಗಾದರೂ ಕೊಡಲಿ, ಕಿರಿಯವರಿಗಾದರೂ ಕೊಡಲಿ, ಇಲ್ಲದಿದ್ದರೆ ಇದು ಬಹಳ ಕಷ್ಟ ಆಗುತ್ತದೆ, ತಾವು ದಯಮಾಡಿ ಇದನ್ನು ನಿಯಂತ್ರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ : ನನಗೆ ಅವಕಾಶ ಕೊಟ್ಟಿದ್ದೀರಿ, ಅಪರೂಪಕ್ಕೆ ಅವಕಾಶ ಕೊಟ್ಟಿದ್ದೀರಿ.

ಉಪಾಧ್ಯಕ್ಷರು : ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಆರ್. ಧ್ರುವನಾರಾಯಣ (ಸಂತೆಮಾರನಹಳ್ಳಿ) : ಮಾನ್ಯ ಅಧ್ಯಕ್ಷರಿಗೆ ತಮಗೆ ಧನ್ಯವಾದಗಳು, ಈ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ವರ್ಷಕ್ಕೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಎಂಟು ಸಾವಿರ ಶಿಕ್ಷಕರು ನಿವೃತ್ತಿಯಾಗುತ್ತಾರೆ, ಅದೇ ಪ್ರಮಾಣದಲ್ಲಿ ನೇಮಕಾತಿ ಆಗುತ್ತಿಲ್ಲ. ರಾಜ್ಯದಲ್ಲಿ ಎಲ್ಲಾ ಕಡೆ ಶಿಕ್ಷಕರ ಕೊರತೆ ಎದ್ದು ಕಾಣುತ್ತಿದೆ. ಈಗಾಗಲೇ 350 High schools ಮತ್ತು colleges ಅನ್ನು ಹೊಸದಾಗಿ ಮಂಜೂರು ಮಾಡಿದ್ದಾರೆ, ಈಗಾಗಲೇ ಆ ಹೈಸ್ಕೂಲ್‌ಗಳು ಪ್ರಾರಂಭವಾಗಿವೆ, ಆದರೆ, ಶಿಕ್ಷಕರ ಕೊರತೆ ಇಡೀ ರಾಜ್ಯಾದ್ಯಂಥ ಎಲ್ಲಾ ಕಡೆ ಇದೆ. ಉದಾ:ಗೆ ನನ್ನ ಕ್ಷೇತ್ರದಲ್ಲಿ ಕಳೆದ ಸಾರಿ SSLC ನಲ್ಲಿ ಒಂದು ಹೈಸ್ಕೂಲ್‌ನಲ್ಲಿ percentage ಕೇವಲ 20% ಬಂತು, ಕಾರಣ ಗಣಿತ ಒಂದೇ subjectನಲ್ಲಿ ಆ ಒಂದು ಟೀಚರ್ ಕೊರತೆಯಿಂದ ಬಹುತೇಕ ಮಕ್ಕಳು ಎಲ್ಲರೂ ಕೂಡ ಆ ಒಂದು subjectನಲ್ಲಿ ಫೇಲ್ ಆಗಿದ್ದರು, ಆದ್ದರಿಂದ ಸರ್ಕಾರ ನೇಮಕಾತಿಯನ್ನು ಎಂಟು ಸಾವಿರ ಶಿಕ್ಷಕರು ಪ್ರತಿ ವರ್ಷ ಏನು ನಿವೃತ್ತಿಯಾಗುತ್ತಾರೋ ಅಷ್ಟೇ ಪ್ರಮಾಣದಲ್ಲಿ ನೇಮಕಾತಿಯಾಗಬೇಕು. ಜೊತೆಗೆ ಪ್ರತಿ ವರ್ಷವೂ ಕೂಡ ಹಣಕಾಸಿನ ಇಲಾಖೆಯವರು ಈ teachers recruitment ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತಿಲ್ಲ, ದಯಮಾಡಿ ಮಾನ್ಯ ಉಪ ಮುಖ್ಯಮಂತ್ರಿಗಳು ಈ ನೇಮಕಾತಿಯನ್ನು, ಶಿಕ್ಷಕರ ಕೊರತೆಯಿರತಕ್ಕಂಥ, ಪ್ರಾಥಮಿಕ, ಹಾಗೂ ಹೈಸ್ಕೂಲ್ ಟೀಚರ್ಸ್‌ಗಳನ್ನು ಪ್ರತಿ ವರ್ಷ ನೇಮಕಾತಿ ಮಾಡಿಕೊಳ್ಳಬೇಕು, ಮತ್ತೆ

9.30 P.M.

ಆ ಶಿಕ್ಷಕರ ಕೊರತೆಯನ್ನು ನೀಗಿಸಬೇಕು ಎನ್ನತಕ್ಕಂಥ ಮಾತನ್ನೂ ಕೂಡ ಈ ಸಂದರ್ಭದಲ್ಲಿ ತಮ್ಮ ಮುಖೇನ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಜೊತೆಗೆ ಅವರು ಪ್ರೌಢ ಶಿಕ್ಷಣ ಹಾಗೂ ಪಿ.ಯು.ಸಿ. ಕಾಲೇಜು ಮಂಜೂರು ಮಾಡತಕ್ಕಂಥದ್ದರಲ್ಲಾಗಲಿ, ಹೈಸ್ಕೂಲ್ಸ್ ಮಂಜೂರು ಮಾಡತಕ್ಕಂಥದ್ದರಲ್ಲಾಗಲಿ, ಡಾ: ನಂಜುಂಡಪ್ಪನವರ ವರದಿಯನ್ನು ಗಾಳಿಗೆ ತೂರಿದ್ದಾರೆ, ಒಂದೇ ಒಂದು ಉದಾಹರಣೆ ಹೇಳಿದರೆ ಯಾರು ಅನ್ಯಥಾ: ಭಾವಿಸಿಕೊಳ್ಳಬಾರದು, ಮಾನ್ಯ ರೇವಣ್ಣನವರು ಇದ್ದಾರೆ, ಹೊಳೆನರಸೀಪುರ ಒಂದೇ ಒಂದು ತಾಲ್ಲೂಕಿಗೆ 7 ಹೈಸ್ಕೂಲ್‌ಗಳನ್ನು ಮಂಜೂರು ಮಾಡಿದ್ದಾರೆ. ಅದೇ ರೀತಿ ಪಿ.ಯು.ಸಿ. ಕಾಲೇಜುಗಳಲ್ಲಿ ಕೂಡ ಮಂಜೂರು ಮಾಡಿದ್ದಾರೆ, ದಯಮಾಡಿ ಡಾ: ನಂಜುಂಡಪ್ಪನವರ ವರದಿ ಪ್ರಕಾರ ಎಲ್ಲಾ ಕ್ಷೇತ್ರಗಳಿಗೂ ಕೂಡ, 39 ತಾಲ್ಲೂಕುಗಳೇನು ಇದೆಯೋ ಪ್ರತೀ ತಾಲ್ಲೂಕಿಗೂ ಕೂಡ ಈ ಒಂದು ಹೈಸ್ಕೂಲ್ಸ್ ಮಂಜೂರಾತಿ ಆಗಬೇಕು, ಏಕೆಂದರೆ Constitution ಪ್ರಕಾರ, ಡಾ:ಬಾಬ ಸಾಹೇಬ್ ಅಂಬೇಡ್ಕರ್ ಹೇಳಿರತಕ್ಕದ್ದು ಪ್ರತಿಯೊಬ್ಬ ಮಗುವಿಗೂ ಕೂಡ ಶಿಕ್ಷಣದ ಅಗತ್ಯ ಇದೆ ಅಂತ ಒಂದು ಕ್ಷೇತ್ರಕ್ಕೆ ನಾಲ್ಕು ಹೈಸ್ಕೂಲ್, ಒಂದು ಕ್ಷೇತ್ರಕ್ಕೆ 7 ಪಿ.ಯು.ಸಿ. ಕಾಲೇಜು ಕೊಡತಕ್ಕಂಥದ್ದು ಅಸಮಾನತೆ ಎದ್ದು ಕಾಣುತ್ತಿದೆ. ಆದ್ದರಿಂದ ತಮ್ಮ ಮುಖೇನ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ರಾಜ್ಯದ ಬಹುತೇಕ ಎಲ್ಲಾ ಹಿಂದುಳಿದ ತಾಲ್ಲೂಕುಗಳ ಭಾಗದಲ್ಲಿ ಸಮಾನತೆಯನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಧ್ರುವನಾರಾಯಣ್‌ರವರು ಮಾತನಾಡುತ್ತಾ ನನ್ನ ಕ್ಷೇತ್ರಕ್ಕೆ 7 ಹೈಸ್ಕೂಲ್ ಕೊಟ್ಟಿದ್ದಾರೆಂದು ಆಪಾದನೆ ಮಾಡಿದರು. ಆದ್ದರಿಂದ ನಾನು ಹೇಳುವುದೇನೆಂದರೆ, ಹಿಂದಿನ ಸರ್ಕಾರದಲ್ಲಿ ಏನೇನು ನಡೆದಿದೆ ಎಂಬುದರ ಬಗ್ಗೆ ದಯಮಾಡಿ ಚರ್ಚೆ ಮಾಡಿ. ನಾನೂ ಕೂಡ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. 7 ಹೈಸ್ಕೂಲ್ ಕೊಟ್ಟಿದ್ದಾರೆಂದು ಹೇಳಿದ್ದೀರಿ ಯಾರ್‍ಯಾರ ಕಾಲದಲ್ಲಿ ಎಷ್ಟೆಷ್ಟು ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ ಎಂಬುದನ್ನು ದಯಮಾಡಿ ತಾವು ದಾಖಲೆಗಳನ್ನು ಸ್ವಲ್ಪ ತೆಗೆದು ನೋಡಬೇಕು. ಇದರಲ್ಲಿ 7 ಹೈಸ್ಕೂಲ್‌ನ್ನು ಕಾಂಗ್ರೆಸ್ ಶಾಸಕರಿಗೆ ಕೊಟ್ಟಿಲ್ಲವೇ? ಆರ್ಡರ್ ಕಾಪಿಯನ್ನು ತೆಗೆದು ನೋಡಿ.

ಶ್ರೀ ಆರ್. ಧ್ರುವನಾರಾಯಣ್ : ಬೆಳಗಾಂನಲ್ಲಿ ತಾವು ಅಧಿವೇಶನ ಮಾಡುತ್ತಿದ್ದೀರಿ. ಮತ್ತೆ ಬೆಳಗಾಂನಲ್ಲಿ ಅಧಿವೇಶನ ಮಾಡಿ ಉತ್ತರ ಕರ್ನಾಟಕದ ಅಭಿವೃದ್ಧಿಯಾಗಬೇಕೆಂದು ಹೇಳುತ್ತೀರಿ. ಆದರೆ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೈಸ್ಕೂಲ್ ಮತ್ತು ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾ ಹೋದರೆ ಸಮಾನತೆ ಎಲ್ಲಿ ಬರುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ : ಸಮಾನತೆಯನ್ನು ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ. ನಿಮ್ಮಿಂದ ಸಮಾನತೆ ಕಲಿಯಬೇಕಾದ ಅವಶ್ಯಕತೆ ಕೂಡ ಇಲ್ಲ. ಕಳೆದ 5 ವರ್ಷದಲ್ಲಿ ಯಾವ್ಯಾವ ಕ್ಷೇತ್ರಕ್ಕೆ ಏನೇನು ಕೊಟ್ಟಿದ್ದಾರೆ ಎನ್ನತಕ್ಕಂಥ ರೆಕಾರ್ಡ್ಸ್ ತೆಗೆಸಿ ನೋಡಿ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಅವರಿಗೆ ಹೇಳಬೇಕು. ಬೇರೆ ಸಮಯದಲ್ಲಿ ಇದರ ಬಗ್ಗೆ ಚರ್ಚೆ ಆಗಲಿ, ನಾವೂ ಕೂಡ ಅದಕ್ಕೆ ಉತ್ತರ ಕೊಡುತ್ತೇವೆ. ಈಗ ಪೂರಕ ಬೇಡಿಕೆ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಹೇಳಿ. ನಾವೂ ಯಾವ್ಯಾವ ಊರಿಗೆ ಅಂದರೆ, ಕೋಲಾರ, ಮಂಡ್ಯಕ್ಕೆ, ಬೆಳಗಾಂಗೆ ಕೊಟ್ಟಿದ್ದೇವೋ ಹೇಳಲಿ. ನಮಗೇನೂ ಉತ್ತರ ಕೊಡುವುದಕ್ಕೆ ಬರುವುದಿಲ್ಲವೇ?

ಉಪಾಧ್ಯಕ್ಷರು : ಧ್ರುವನಾರಾಯಣರವರೇ, ನಿಮ್ಮ ಭಾಷಣ ಮುಗಿಯಿತೆ?

ಶ್ರೀ ಆರ್. ಧ್ರುವನಾರಾಯಣ : ಇನ್ನೂ ಇಲ್ಲ ಮಾನ್ಯ ಉಪಾಧ್ಯಕ್ಷರೆ...

SRI M.P. PRAKASH : Sir, I am on a Point of Order.

ಉಪಾಧ್ಯಕ್ಷರು : ನಂಜುಂಡಪ್ಪ ವರದಿಯ ಆಧಾರದ ಮೇಲೆ ಮಾತನಾಡತಕ್ಕಂಥದ್ದು ನಾಳೆ ಇದೆಯಲ್ಲಾ, ನೀವು ನಾಳೆ ಮಾತನಾಡಿ.

SRI M.P. PRAKASH : Sir, I am on a Point of Order. ತಾವು ನೋಡಬಹುದು.

'As regards demands for which no sanction has been obtained, the question of Policy has to be confined to the items on which the vote of the House is sought. General grievances cannot be ventilated on a supplementary grant. A member can only say whether the supplementary demands is necessary or not'.

During discussion on excess Demands for Grants, it is open to members to say that the money has been spent unnecessarily or that it ought not to have been spent' beyond that, there is no scope for a general discussion.' ಇಷ್ಟೆಲ್ಲಾ ರೂಲ್ ಅಪ್ಲೈ ಮಾಡಿದ ಮೇಲೆ ನೀವು ಬೆಳಗಿನತನಕ ಮಾತನಾಡುತ್ತಾ ಕುಳಿತರೆ ಹೇಗೆ? Supplementary demands ನಲ್ಲಿ general grievances ಬಗ್ಗೆ ಮಾತನಾಡಿದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ನಿಮ್ಮ ರೂಲ್ ಇಲ್ಲಿ ಅಪ್ಲೈ ಆಗುವುದಿಲ್ಲವಲ್ಲಾ.

SRI M.P. PRAKASH : Sir, therefore, you have to come to our rescue. ಬೆಳಗ್ಗೆಯಿಂದ ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಟೈಂ ಲಿಮಿಟ್ ಮಾಡಿ. ನಮ್ಮ ತಕರಾರೇನೂ ಇಲ್ಲ.

Sri.M.P. PRAKASH : With regard to the scope of the debate on the supplementary budget it is very limited ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : 28ನೇ ತಾರೀಖು ಅಧಿವೇಶನವನ್ನು ಮುಗಿಸಬೇಕೆಂದು ತೀರ್ಮಾನವಾಗಿದೆ. ಆದರೆ ಅಜೆಂಡಾ ಪ್ರಕಾರ 29ನೇ ತಾರೀಖಿನವರೆಗೂ ಅಧಿವೇಶನ ಇದೆ.

SRI M.P. PRAKASH : You are a party to the decision. You are a senior member of the House. Supplementary *demands* ನಲ್ಲಿ *can* we go on Ventilating our grievances?

ಶ್ರೀ ಬಸವರಾಜ ರಾಯರೆಡ್ಡಿ : 28ನೇ ತಾರೀಖು ಬರಗಾಲದ ಬಗ್ಗೆ ಚರ್ಚೆ ಮಾಡೋಣ. 29ನೇ ತಾರೀಖು ರಾಜ್ಯಪಾಲರ ಭಾಷಣ ಇಟ್ಟುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ಮತ್ತೆ ಬಿಎಸಿಯನ್ನು ಕರೆಯಬೇಕಾಗುತ್ತದೆ. We are the members of the BAC. BAC has taken a decision. ಆಯಿತು, ತಾವು ಹೇಳಿದ ಸಲಹೆ ಪ್ರಕಾರ ಬಿಎಸಿಯನ್ನು ನಾಳೆ ಕರೆಯೋಣ. ಆದರೆ ಇಲ್ಲಿ ಬಿಎಸಿ ಕರೆದರೂ ಕೂಡ supplementary demands ನಲ್ಲಿ general grievances ಬಗ್ಗೆ ಮಾತನಾಡುತ್ತಾ ಕುಳಿತರೆ ಹೇಗೆ?

ಶ್ರೀ ಎನ್. ಚಲುವರಾಯಸ್ವಾಮಿ : ಈ ಸದನ ಹೋಗುತ್ತಿರುವ ದಿಕ್ಕು ಸರಿಯೇ ಎಂದು ಮಾನ್ಯ ರಮೇಶ್‌ಕುಮಾರ್‌ರವರೇ ಹೇಳಬೇಕು.

ಉಪಾಧ್ಯಕ್ಷರು : ಧ್ರುವನಾರಾಯಣ್‌ರವರೇ, ತಾವು ಮಾತನಾಡಿ ಬೇಗ ಮುಗಿಸಿ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಉಪಾಧ್ಯಕ್ಷರೇ, ಡಾ: ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಮತ್ತೆ ಬೆಳಗಾವಿ ಅಧಿವೇಶನದಿಂದ ಒಂದು ಸಂದೇಶ ಹೋಗಬೇಕು. ಅದೇನೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದಿರತಕ್ಕಂಥ ಎಲ್ಲಾ ಪ್ರದೇಶಗಳು ಮುಂದುವರಿಯಬೇಕಾದರೆ ಆ ಒಂದು ಸಮಾನತೆಯನ್ನು ಕಾಪಾಡಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖೇನ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮತ್ತೆ ಸಣ್ಣ ನೀರಾವರಿ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದೇನೆಂದರೆ ಕಾವೇರಿ ಬೇಸಿನ್‌ಗೆ ಯಾವುದೇ ಒಂದು ಹಣವನ್ನು ಬಿಡುಗಡೆ ಮಾಡಿಲ್ಲ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಣ್ಣ ನೀರಾವರಿ ಇಲಾಖೆಯಿಂದ ಕಾವೇರಿ ಬೇಸಿನ್ ಪ್ರದೇಶಕ್ಕೂ ಕೂಡ ಹಣವನ್ನು ಮಂಜೂರು ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಈ ದಿನ ಉಪ ಮುಖ್ಯಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಸದನದಲ್ಲಿ ಪೂರಕ ಅಂದಾಜನ್ನು ಸಂವಿಧಾನದ ಅನುಚ್ಛೇದ 205/1(ಎ)ರ ಪ್ರಕಾರ ಮಂಡಿಸಿದ್ದಾರೆ. ಈ 205/1(a)ರ ಸಂವಿಧಾನದ ಪ್ರಕಾರ ಇಲ್ಲಿ ಮಂಡಿಸಿರತಕ್ಕಂಥ ಪೂರಕ ಅಂದಾಜಿನಿಂದ ಈ ಸರ್ಕಾರ ಹಣ ದುರುಪಯೋಗ ಮಾಡಿಕೊಳ್ಳುತ್ತಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, 205 ಆರ್ಟಿಕಲ್‌ನಲ್ಲಿ ಕ್ಲಿಯರ್ ಆಗಿ ಹೇಳುತ್ತಾರೆ. Article 205(a) ನಲ್ಲಿ "...if the amount authorized by any law made in accordance with the provisions of article 204 to be expended for a particular service for the current financial year is found to be insufficient for purposes of that year ... "ಅವರಿಗೆ ಹಕ್ಕು ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಈ ಸರ್ಕಾರಕ್ಕೆ ಸಂವಿಧಾನ ನೀಡಿದಂಥ ಅಧಿಕಾರದ ಮೂಲಕ ಪೂರಕ ಧನವಿನಿಯೋಗವನ್ನು ಮಂಡಿಸುವುದಕ್ಕೆ ಅಧಿಕಾರ ಇದೆ. ಆದರೆ, ಸರ್ಕಾರ ಮಂಡಿಸಿದಂಥ ಪೂರಕ ಟಿಪ್ಪಣಿಯಲ್ಲಿ ಯಾವ್ಯಾವ ಬಾಬ್ತಿನಲ್ಲಿ ಇನ್‌ಸಫಿಶಿಯೆಂಟ್ ಇದೆ ಎನ್ನತಕ್ಕಂಥದರ ಬಗ್ಗೆ ಒಂದು ಮಾತು ಇಲ್ಲ. ಈ ಸದನಕ್ಕೆ ಏನೊಂದು ಪೂರಕ ಟಿಪ್ಪಣಿಯನ್ನು ಕೊಟ್ಟಿದ್ದಾರೆ, ಇದರಲ್ಲಿ ಯಾವ್ಯಾವ

ಮಾತು ಇಲ್ಲ. ಈ ಸದನಕ್ಕೆ ಏನೊಂದು ಪೂರಕ ಟಿಪ್ಪಣಿಯನ್ನು ಕೊಟ್ಟಿದ್ದಾರೆ, ಇದರಲ್ಲಿ ಯಾವ್ಯಾವ ಬಾಬ್ತಿಗೆ ಎಷ್ಟು ಇನ್‌ಸಫಿಶಿಯೆಂಟ್ ಇದೆ, ಅದಕ್ಕಾಗಿ ನಾವು ಇದನ್ನು ಕೇಳುತ್ತಿದ್ದೇವೆ ಎನ್ನತಕ್ಕಂಥದ್ದರ ಬಗ್ಗೆ ಒಂದು ಮಾತನ್ನು ಎಲ್ಲಿಯೂ ಕೂಡ ಸ್ಪಷ್ಟವಾಗಿ ಎಲ್ಲಿಯೂ ಕೂಡ ಹೇಳಿಲ್ಲ. ಆದ್ದರಿಂದ ಈ ರೀತಿಯಾಗಿರತಕ್ಕಂಥ ಧನ ವಿನಿಯೋಗಕ್ಕೆ ಒಪ್ಪಿಗೆ ಕೊಡುವುದಾದರೂ ಹೇಗೆ? ಇದನ್ನು ಕೇವಲ ಕಾಟಾಚಾರಕ್ಕೆ ಸಲ್ಲಿಸಬಾರದು. ಆದ್ದರಿಂದಲೇ ಇದು ಜಾಣತನದ ದುರುಪಯೋಗ ಆಗುತ್ತದೆ. ಎನ್ನತಕ್ಕಂಥ ಮಾತನ್ನು ನಾನು ಮೊದಲೇ ಹೇಳಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಹಾಗೆ ಸುಮಾರು 44 ಕೋಟಿ 50 ಲಕ್ಷ ರೂಪಾಯಿಗಳನ್ನು ಬೀಜಗಳ ಪೂರೈಕೆಗೆ ಕೊಡುತ್ತಿರುವುದು ಬಹಳ ಸಂತೋಷದ ವಿಚಾರ. ಆದರೆ, ಇನ್‌ಸಫಿಶಿಯೆನ್ಸಿ ಬಗ್ಗೆ ಅಂದರೆ, ನೀವು ಎಷ್ಟು ಖರ್ಚು ಮಾಡಿದ್ದೀರಿ ಎಂಬುದು ಮತ್ತು ಎಷ್ಟು ಬಿಡುಗಡೆ ಮಾಡಿದ್ದೀರಿ ಎನ್ನತಕ್ಕಂಥ ವಿಚಾರಗಳನ್ನು ಹೇಳಬೇಕಾಗಿತ್ತಲ್ಲವೇ? ಏಕೆಂದರೆ, ಕಳೆದ ಸಾಲಿನ ಬಜೆಟ್‌ನಲ್ಲಿ ಅಂದರೆ, ಜುಲೈನಲ್ಲಿ ಬೀಜಕ್ಕಾಗಿ ನೀವು ಹಣವನ್ನು ತೆಗೆದುಕೊಂಡಿದ್ದೀರಿ. ಮತ್ತೆ 124 ತಾಲ್ಲೂಕುಗಳಲ್ಲಿ ಬರಗಾಲವೆಂದು ನೀವೇ ಡಿಕ್ಲೇರ್ ಮಾಡಿದ್ದೀರಿ. ಬರಗಾಲವೆಂದು ಡಿಕ್ಲೇರ್ ಮಾಡಿದ ಮೇಲೆ ಆ ಸಮಯದಲ್ಲಿ ಬೀಜವನ್ನು ಯಾರಿಗೆ ಕೊಟ್ಟೀದ್ದಿರಿ? ಬಿತ್ತನೆ ಆಗಿದೆಯೇ? ಬಿತ್ತನೆ ಆಗಿದೆಯೇ ಎಂದು ತಾವು ನೋಡಬೇಕಲ್ಲವೇ? ಬಿತ್ತನೆ ಆಗಿಲ್ಲ ಎಂದು ನೀವು ಒಂದು ಕಡೆ ಹೇಳುತ್ತೀರಿ. ಅಂದರೆ ಇದರ ಅರ್ಥ ಬೀಜದ ಹಣದಲ್ಲಿ ದುರುಪಯೋಗ ಆಗುತ್ತಿದೆ ಎಂಬ ಸಂಶಯ ಬರುತ್ತಿದೆ. 44 ಕೋಟಿ ರೂಪಾಯಿಗಳು ಏಕೆ ಬೇಕು ಲೆಕ್ಕ ಕೊಡಬೇಕಾಗುತ್ತದೆ. ಆದ್ದರಿಂದ ನಾನು ಈಗಾಗಲೇ ಹೇಳಿದಂತೆ ಇನ್‌ಸಫಿಶಿಯೆಂಟ್ ಎನ್ನತಕ್ಕಂಥ ಪದ ಅಲ್ಲಿರುವುದರಿಂದ, ಏನು ಇನ್‌ಸಫಿಶಿಯೆಂಟ್ ಎನ್ನುವ ಒಂದು ಮಾಹಿತಿ ಕೂಡ ಅಲ್ಲಿ ಇಲ್ಲ. ಹಣ ಬೇಕೆಂದು ಮಾತ್ರ ಹೇಳಿದ್ದೀರಷ್ಟೆ, ಅದಕ್ಕೆ ಸಕಾರಣ ಕೊಟ್ಟಿಲ್ಲ. ಬರಗಾಲ ಬಿದ್ದಿದ್ದರೆ ಬೀಜವನ್ನು ಯಾರಿಗೆ ಕೊಟ್ಟಿದ್ದೀರಿ? ಆ ಹಣ ಎಲ್ಲಿಗೆ ಹೋಯಿತು? ಆದ್ದರಿಂದ ಇದರ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಹೇಳಬೇಕಾಗುತ್ತದೆ.

ಮತ್ತೆ ಇದಾದಮೇಲೆ ಕೃಷಿ ಇಲಾಖೆಯಲ್ಲಿ ಸುಮಾರು 24 ಕೋಟಿ ರೂ. ಸಾಮಾನ್ಯ ವೆಚ್ಚಗಳು ಅಂತ ಹೇಳಿದ್ದಾರೆ. ಏನು? ಹಾಗಾದರೆ ಸಾಮಾನ್ಯ ವೆಚ್ಚಗಳು? What is the meaning of subsidiary expenditure? ಅದರ ಬಗ್ಗೆ ಮಾಹಿತಿ ಇಲ್ಲ. ಅದೇ ತರಹ Animal Husbandry & Fisheries ನಲ್ಲಿ ಶಿವಮೊಗ್ಗದಲ್ಲಿ ಸರ್ಕಾರಿ ನೂತನ ಪಶು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅನುದಾನದ ಕೊರತೆ ಇರುತ್ತದೆ. ಹೆಚ್ಚುವರಿ 7.44 ಕೋಟಿ ರೂ. ಗಳನ್ನು ಕೊಡುತ್ತಿದ್ದೀರಿ, ಸರಿ ಆದರೆ ಅದಕ್ಕೆಷ್ಟು expenditure ಮಾಡಿದ್ದೀರಿ ಎಂಬ ಮಾತೇ ಇಲ್ಲ. ಈ ತರಹದ ಅಪ್ರಸ್ತುತ ಮತ್ತು ಅಸಮರ್ಪಕವಾದ ಮಾಹಿತಿಯನ್ನು ಸದನಕ್ಕೆ ಕೊಟ್ಟರೆ ನಾವು ಮಾಡುವುದಾದರೂ ಹೇಗೆ? ಮತ್ತು ಬಹುತೇಕ ಬೆರಳಚ್ಚಿನ ತಪ್ಪಾಗಿದೆ ಎಂದು ಬರೆಯಲಾಗಿದೆ. ಅವತ್ತೇನು ನೀವು ಬಜೆಟ್ ಮಂಡನೆ ಮಾಡಿದ್ದೀರಿ ಅದಕ್ಕೆ corrigendum issue ಮಾಡಬಹುದಿತ್ತಲ್ಲಾ. Why the Government has not issued the corrigendum? It shows that this Government is inefficient ಮತ್ತೆ ಇವತ್ತು ಎಷ್ಟು ಅವೈಜ್ಞಾನಿಕವಾದ ಮತ್ತೆ ಪೂರಕ ಅಂದಾಜುಗಳು ಬರಬೇಕು? ಗ್ರಾಮೀಣಾಭಿವೃದ್ಧಿ ಇಲಾಖೆ, ಸನ್ಮಾನ್ಯ ಮುಖ್ಯಮಂತ್ರಿಗಳು, ಅರ್ಥ

ಮಂತ್ರಿಗಳು ಸಾವಿರ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸುವರ್ಣ ಕರ್ನಾಟಕ ಯೋಜನೆ ತರುತ್ತೇವೆ ಎಂದಿದ್ದಾರೆ, ನಾವು ಸ್ವಾಗತ ಮಾಡುತ್ತೇವೆ. ಆದರೆ ಈ ಯೋಜನೆಗೆ announcement ಪ್ರಕಾರ ಒಂದು ಗ್ರಾಮಕ್ಕೆ ಒಂದು ಕೋಟಿ ರೂ. ಕೊಡುತ್ತೇವೆ ಎಂದು ಹೇಳಿದ್ದೀರಿ. ಅಂದರೆ ಸಾವಿರ ಗ್ರಾಮಕ್ಕೆ ಸಾವಿರ ಕೋಟಿ ರೂ. ಬೇಕು. ಆದರೆ ಸಂವಿಧಾನದ ಅನುಚ್ಛೇದ ಏನಿದೆ ಇಲ್ಲಿ ಅದನ್ನು ಉಪಯೋಗ ಮಾಡಿಕೊಂಡು ಕೇವಲ 200 ಕೋಟಿ ರೂ. ಕೊಡುತ್ತಿದ್ದೀರಿ. ಉಳಿದ 800 ಕೋಟಿ ರೂ. ಗೆ supplementary budget ತರುತ್ತೀರಾ? ನೀವು ಯಾಕೆ ಸರಿಯಾಗಿ ಪ್ಲಾನ್ ಮಾಡುತ್ತಾ ಇಲ್ಲ? ಯಾಕೆ ಈ ಮಾತು ಹೇಳುತ್ತೇನೆ ಅಂದರೆ ನನ್ನ ಪ್ರಕಾರ ಇಂತಹ ಒಂದು supplementary budgetನ್ನು ....

ಶ್ರೀ ಎಂ.ಪಿ. ಪ್ರಕಾಶ್ : ತಾವು Article 205ರ ಬಗ್ಗೆ ಹೇಳುತ್ತಾ ಕೊನೆ ಎರಡು ವಾಕ್ಯಗಳನ್ನು ಉಲ್ಲೇಖಿಸಿದ್ದೀರಿ –'(a) if the amount authorised by any law made in accordance with the provisions of article 204 to be expended for a particular service for the current financial year if found to be insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financial statement for that year.' This is a new scheme which has now been contemplated and not find in the other. Therefore ಇದು ಕಾನೂನುಬದ್ಧವಾಗೇ ಇದೆ. ಪೂರಕ ಅಂದಾಜುಗಳಲ್ಲಿ ಸೇರಿಸಲೂ ಬರುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ನಿಮಗೆ ಅಧಿಕಾರ ಇಲ್ಲ ಅಂತ ನಾನು ಹೇಳಲಿಲ್ಲ. ಹೆಚ್ಚುವರಿ ಮಾಡಲು ಅಧಿಕಾರ ಕೊಟ್ಟಿದ್ದಾರೆ ಅಂತ ಮಾತ್ರ ಹೇಳಿದ್ದೇನೆ.

Sri M.P. Prakash : New services which have not been contemplated.

Sri Basavaraja Raya Reddy : I agree, ನಾನು ಏನು ಹೇಳುತ್ತಿದ್ದೇನೆ ಎಂದರೆ ಏನು ಮಹತ್ವಾಕಾಂಕ್ಷೆಯ ಸಾವಿರ ಸುವರ್ಣ ಗ್ರಾಮ ಯೋಜನೆಗೆ 200 ಕೋಟಿ ರೂ. ಕೊಟ್ಟಿರುವುದರಿಂದ ನೀವು ಮತ್ತೊಂದು ಬಜೆಟ್ ತರಬೇಕಾಗುತ್ತದೆ ಯಾಕೆ ಈ ಮಾತು ಹೇಳುತ್ತೇನೆ ಅಂದರೆ ಆರ್ಥಿಕ ಶಿಸ್ತನ್ನು ಸರಿಯಾಗಿ ನಿರ್ವಹಣೆ ಮಾಡಬೇಕಾಗಿದ್ದರೆ ನೀವೊಂದು ಸಾವಿರ ಕೋಟಿ ರೂ ಕೊಡಿ, ಕೆಲಸ ಪ್ರಾರಂಭ ಮಾಡಿಸಿ. ಇನ್ನೆಷ್ಟು ತಿಂಗಳಿವೆ? ಹೀಗಾಗಿ ಆರ್ಥಿಕ ಅಶಿಸ್ತಿಗೆ ದಾರಿ ಮಾಡಿಕೊಡುತ್ತೇವೆ. ಮಾನ್ಯ ದೇಶಪಾಂಡೆಯವರು ಹೇಳಿದಂತೆ ನಮ್ಮ ರಾಜ್ಯದಲ್ಲಿ Fiscal Responsibility Act & Budget Management Act ತಂದ ಮೇಲೆ ದೇಶದಲ್ಲಿ ಒಂದು ಅತ್ಯುತ್ತಮ ಆರ್ಥಿಕ ಶಿಸ್ತನ್ನು ಹಿಂದಿನ S.M. Krishna ಸರ್ಕಾರ ಹಾಕಿಕೊಂಡಿದ್ದನ್ನು ನಮ್ಮ ಸರ್ಕಾರ ಮುಂದುವರೆಸಿಕೊಂಡು ಹೋಗಿದೆ ತಾವು ಮುಂದುವರೆಸಿಕೊಂಡು ಹೋಗಿದ್ದೀರಿ, ಧರ್ಮಸಿಂಗರ ಸರ್ಕಾರ ಇದ್ದಾಗ ಅತ್ಯುತ್ತಮ ಆರ್ಥಿಕ ಶಿಸ್ತನ್ನು ಕರ್ನಾಟಕ ತೋರಿಸಿತು, ಅದಕ್ಕಾಗಿ

incentive ಬರುತ್ತಾ ಇದೆ, ಯಡಿಯೂರಪ್ಪನವರು ಹೇಳಿದರಲ್ಲಾ ಬಹಳ incentives ಬರುತ್ತಾ ಇರುವುದಕ್ಕೆ ಕಾರಣ S.M. Krishna ರವರ ಸರ್ಕಾರದಿಂದ ಹಿಡಿದು ಧರ್ಮಸಿಂಗರ ಸರ್ಕಾರ ಒಳ್ಳೆಯ ರೀತಿಯ finance management ಮಾಡಿತು.

ಶ್ರೀ ಹೆಚ್.ಡಿ. ರೇವಣ್ಣ : ಒಂದ್ನಿಮಿಷ, ಅದು ಮಾಡುವ ಹೊತ್ತಿಗೆಯೇ Mandya package ಅಂತ ತಾವು 200 ಕೋಟಿ ರೂ. ಇಟ್ಟಿದ್ದಿರಿ, ಆದರೆ ಕೊಟ್ಟಿದ್ದೆಷ್ಟು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಅದನ್ನೇ ನಾನು ಹೇಳಿದ್ದು ಹಿಂದೆ ಆಗಿದೆ ಅಂತ ಈಗ ಆರ್ಥಿಕ ಅಶಿಸ್ತು ಆಗಬಾರದು. Mandya packageದು ನೀವು ವಿವರ ಕೊಡಿ PWDದ್ದು; ನನಗೆ ಗೊತ್ತಿಲ್ಲ ಅದು. You are the Minister. I am not a Minister. It is your business to say. ಅದಕ್ಕೆ ನಾನು ಏನು ಹೇಳುತ್ತೇನೆ, ಮಾನ್ಯ ಸಂಸದೀಯ ಮಂತ್ರಿಗಳಿಗೆ, ತಾವು ದಯಮಾಡಿ ಇದಕ್ಕೆ ಸಂಪೂರ್ಣ ಹಣ ಕೊಡಿ. ಜೊತೆಗೆ ಇದರಲ್ಲಿ ಒಂದು ನ್ಯೂನತೆ ಏನು ಕಾಣುತ್ತದೆ, ಅಂದರೆ ಸಾವಿರ ಗ್ರಾಮಗಳನ್ನು ಮೊದಲನೇ ಹಂತದಲ್ಲಿ ಹೋಬಳಿ ಮಟ್ಟದಲ್ಲಿ ತೆಗೆದುಕೊಳ್ಳಬೇಕು ಅಂತ ಘೋಷಣೆ ಮಾಡಿದ್ದೀರಿ, ಹೋಬಳಿ ಕೇಂದ್ರದಲ್ಲಿ ತೆಗೆದುಕೊಂಡರೆ ಮತ್ತೆ Hyderabad & Mumbai Karnataka- ಪ್ರದೇಶಗಳಿಗೆ ಅನ್ಯಾಯವಾಗುತ್ತದೆ. ತಾವು ಇದನ್ನು ಗಮನಿಸಬೇಕಾಗುತ್ತದೆ. ಹೋಬಳಿಗಳ ಸಂಖ್ಯೆ ಹಳೇ ಮೈಸೂರಿಗೆ ಹೋಲಿಸಿದರೆ Hyderabad and Mumbai Karnataka ದಲ್ಲಿ ಹೋಬಳಿಗಳ ಸಂಖ್ಯೆ ಬಹಳ ಕಡಿಮೆ ಇದೆ. ಹೀಗಾಗಿ ಹಳೇ ಮೈಸೂರು ಪ್ರದೇಶಕ್ಕೆ ಹೆಚ್ಚು ಹೋಗುತ್ತದೆ. ಅಲ್ಲಿಗೆ ಕೊಡಬಾರದು ಅಂತ ನಾನು ಹೇಳುವುದಿಲ್ಲ. ಅದರ ಜೊತೆಗೆ 39 ಅತೀ ಹಿಂದುಳಿದ ತಾಲ್ಲೂಕುಗಳಿಗೆ ಮೊದಲ ಆದ್ಯತೆ ಕೊಡಬೇಕು. ದಯವಿಟ್ಟು ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ, ಇವು ಬಹಳ ಹಿಂದುಳಿದ ಪ್ರದೇಶಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ: ಹಿಂದುಳಿದ ಪ್ರದೇಶಗಳಿಗೆ ಏನು ಆದ್ಯತೆ ಬೇಕೋ ಕೊಡೋಣ. ನಮ್ಮದು ಹೊಸ ಕಲ್ಪನೆ: ಇಡೀ ರಾಜ್ಯದ ಎಲ್ಲಾ ತಾಲ್ಲೂಕಿನ ನಾಲ್ಕೈದು ಗ್ರಾಮಗಳನ್ನು ಅಭಿವೃದ್ಧಿಪಡಿಸೋಣ ಅಂತ; ಹಿಂದುಳಿದ ಪ್ರದೇಶಕ್ಕೆ ಕೊಡದೇನೋ ಅಲ್ಲೇ ಎಲ್ಲೋ ಮೈಸೂರಿನಲ್ಲಿ ಮಾಡಿಕೊಂಡರೆ ನೀವು objection ಮಾಡಬೇಕು. ನಿಮ್ಮ ಭಾಗದಲ್ಲಿ ಯಾವುದಕ್ಕೆ ಕೊಡುತ್ತೇವೋ ಅದನ್ನು ಉಪಯೋಗ ಮಾಡಿಕೊಂಡು develop ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಹೋಬಳಿ ಕೇಂದ್ರ ಆಧಾರ ಮಾಡಿಕೊಂಡರೆ Hyderabad Karnatakaಕ್ಕೆ ಅನ್ಯಾಯವಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮುಖ್ಯಮಂತ್ರಿಗಳ ಹಾಗೂ ಉಪ ಮುಖ್ಯಮಂತ್ರಿಗಳ ಗಮನಕ್ಕೆ ಅದು ಬಂದಿದೆ. ನಾಳೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗುತ್ತದೆ. ಆಮೇಲೂ ಏನಾದರೂ ಅನ್ಯಾಯವಾದರೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಆಯಿತು ಉತ್ತರ ಕೊಡುವಾಗ ಹೇಳಿ. ಇದರ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಸಹಕಾರ ಇಲಾಖೆಯಡಿ ಬರ ಪರಿಹಾರ ಯೋಜನೆಯಡಿ KCC Bank, Dharwarಕ್ಕೆ 25 ಕೋಟಿ ರೂ. ಒದಗಿಸಲು ಸರ್ಕಾರ ನಿರ್ಧರಿಸಿದೆ ಅಂತ ಹೇಳಲಾಗಿದೆ. ಬರ ಪರಿಹಾರ ಅಂದರೆ Whether it is given under

Calamity Relief Fund. ಹಾಗಿದ್ದರೆ ಆ ನಿಯಮಗಳಡಿ ಕೊಡಲು ಬರುತ್ತದೆಯೇ ಎಂಬುದನ್ನು clarify ಮಾಡಬೇಕು Under CRF norms, you cannot provide any assistance to any Co-operative banks at all. If you are giving, it is going to be misuse of funds. ದಯವಿಟ್ಟು ಅದನ್ನು ತಾವು clarification ಮಾಡಬೇಕಾಗುತ್ತದೆ. ಅದು ಯಾವ Head of account ಗೆ ಬರುತ್ತದೆ ಬರ ಪರಿಹಾರ ಯೋಜನೆಯಲ್ಲಿ ಕೊಡುತ್ತೇವೆಂದರೆ, under what Head? ದಯಮಾಡಿ ತಾವು clarification ಮಾಡಿ. ಇಲ್ಲದೇ ಇದ್ದರೆ ಬೇರೆ ಯಾವುದಾದರೂ ಸ್ಕೀಮ್ ಲೋನ್ ವೇವರ್ಸ್ ಸ್ಕೀಮ್ ಅದರಲ್ಲಿ ಏನಾದರೂ ಬರ ಪರಿಹಾರ ಸ್ಕೀಮ್ ಇದೆಯಾ? ಅದಕ್ಕೆ ಕೇಂದ್ರ ಸರ್ಕಾರ ಏನಾದರೂ ಹಣವನ್ನು ಕೊಟ್ಟಿದೆಯಾ? ರಾಜ್ಯ ಸರ್ಕಾರ ಹಣವನ್ನು ಕೊಟ್ಟಿದೆಯಾ? ಇದರಲ್ಲಿ ಏನೂ ಇಲ್ಲ. ಇದರಲ್ಲಿ ಏನೂ ಇಲ್ಲದೇ ಇರುವುದರಿಂದ ಇದು ಸಂಶಯಕ್ಕೆ ಕಾರಣವಾಗಿದೆ. ದಯಮಾಡಿ ಅರ್ಥಮಂತ್ರಿಗಳು explanation ಮಾಡಬೇಕೆಂದು ನಾನು ಕೇಳುತ್ತೇನೆ. ಏಕೆಂದರೆ under Calamity Relief Fund ನಲ್ಲಿ ಇದನ್ನು ಕೊಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ಈ ಒಂದು ಪುಸ್ತಕದಲ್ಲಿ ತಾವು ಏನು ಹಲವಾರು ವಿಚಾರಗಳನ್ನು ಹೇಳಿದ್ದೀರಿ, ಎಲ್ಲವೂ ಕೂಡ insufficient ಅಂದರೆ ಯಾವುದೂ ಕೂಡ ಸರಿಯಾದಂತಹ ಮಾಹಿತಿಯನ್ನು ತಾವು ಸದನಕ್ಕೆ ಕೊಟ್ಟಿಲ್ಲ. ಅದಕ್ಕೆ ನಾನು ಆ wordನ್ನು use ಮಾಡಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ನಿಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಮಾತನಾಡುವಾಗ ಇದೇ ಅಂಶವನ್ನು ಹೇಳಿದರು. ನೀವು ಹೊಸ ಅಂಶವನ್ನು ಹೇಳಿ. ಇದರ ಬಗ್ಗೆ 10 ಜನರು ಹೇಳಿ ಆಗಿದೆ; ಇನ್ನೇನಾದರೂ ಹೊಸದು ಇದ್ದರೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಬೇರೆ ಹೇಳುವುದಕ್ಕೆ ಬರುವುದಿಲ್ಲ. Parliamentary Affairs Minister ಹೇಳಿದರು. ಏನು ಇದೆ ಅದನ್ನೇ ಮಾತನಾಡಬೇಕು. ಅವರು ಒಂದು ಅಂಶವನ್ನು ಕೋಟ್ ಮಾಡಿ ಹೇಳಿದರು. ನಾನು ಮತ್ತೇ ಅದನ್ನೇ ಮಾತನಾಡಬೇಕಲ್ಲ? ಇದನ್ನು ಬಿಟ್ಟು ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ. ಹಾಗೇ ಮಾತನಾಡುವುದಕ್ಕೆ ಬರುವುದಿಲ್ಲ. ಈಗ Parliamentary Affairs Minister ರವರೇ ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನೇರವಾಗಿ ಮಾತನಾಡಿದರೆ ಕಷ್ಟವಾಗುತ್ತದೆ. ಪೂರಕ ಬೇಡಿಕೆಯ ಬಗ್ಗೆ...

Sri Basavaraja Raya Reddy :I can digest. ನೀವು ನೇರವಾಗಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪೂರಕ ಬೇಡಿಕೆಯ ಬಗ್ಗೆ ಚರ್ಚೆಯಾಗಬೇಕಾದರೆ ಅದಕ್ಕೆ ಒಂದು ಸಮಯವನ್ನು ನಿಗದಿ ಮಾಡೋಣ. ಯಾರು ಎಷ್ಟು ಕಾಲ ಮಾತನಾಡಬೇಕೆಂದು ನೀವೇ ಹೇಳಿ, ಅದಕ್ಕೆ ಇತಿಮಿತಿ ಬೇಡವೇ? ಈಗಾಗಲೇ 10 ಗಂಟೆಯಾಗುತ್ತಾ ಬರುತ್ತಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಅದು ನನ್ನ ತಪ್ಪಲ್ಲ. ಅದು ಸದಸ್ಯರ ತಪ್ಪಲ್ಲ. ಅದನ್ನು ತೀರ್ಮಾನ ಮಾಡಬೇಕಾದವರು ಅವರು Presiding Officer.

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ : ನಾನು ವಿಷಯಾಂತರ ಮಾಡುತ್ತಿಲ್ಲ. ನಾನು 5 ಟರ್ಮ್ ಎಲೆಕ್ಟ್ ಆಗಿದ್ದೇನೆ ಗೊತ್ತಾ ನಾನೇನೂ ಹೊಸಬನಲ್ಲ. I know my responsibilities

(ಅಡಚಣೆ)

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ತಾವು ಮಾತನಾಡುವುದಕ್ಕೆ 5 ನಿಮಿಷ ಕೇಳಿದ್ದೀರಿ. ಈಗಾಗಲೇ 15 ನಿಮಿಷಗಳಾಯಿತು. ತಾವು ಬೇಗನೆ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ : ಆಯಿತು. ತಲಕಾಡಿನಲ್ಲಿ ಜರುಗಲಿರುವಂಥ ಪಂಚಲಿಂಗ ದರ್ಶನದ ಮಹೋತ್ಸವಕ್ಕಾಗಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸದೇ ಇರುವುದರಿಂದ 300 ಲಕ್ಷ ರೂ. ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿರುತ್ತೇನೆ ಎಂದು ಹೇಳಿದ್ದೀರಿ. ಇದು ಏನಿದು? ಪಂಚಲಿಂಗ ದರ್ಶನಕ್ಕೆ 3 ಕೋಟಿ ರೂಪಾಯಿಗಳು; ಯಾವ ಕಾರಣಕ್ಕಾಗಿ ಕೊಡುತ್ತಿದ್ದೀರಿ; ಅದರ ಬಗ್ಗೆ ನಮಗೆ explanation ಬೇಡವೇ? ಪಂಚಲಿಂಗ ದರ್ಶನ ಎಂದರೆ ಏನು? ಅದರ ಬಗ್ಗೆ ನನಗೆ ಗೊತ್ತಾಗುವುದು ಬೇಡವೇ? ಏತಕ್ಕಾಗಿ ಕೊಟ್ಟಿದ್ದೀರಿ ಎಂದು ನಾನು ಕೇಳಲಿಲ್ಲ. ಪಂಚಲಿಂಗ ದರ್ಶನಕ್ಕಾಗಿ 300 ಲಕ್ಷ ರೂ. ಗಳ ಖರ್ಚು ಎಂದರೆ ಏನು? ಅಲ್ಲಿ ದರ್ಶನ ಮಾಡುವವರಿಗೇನಾದರೂ ಹಣವನ್ನು ಕೊಡುತ್ತೀರಾ? ಅವರು ಪಂಚಲಿಂಗ ದರ್ಶನಕ್ಕಾಗಿ ಎಂದು ಹೇಳಿದ್ದಾರೆ. ಅದರ ಬಗ್ಗೆ ಏನು ಎಂದು ಗೊತ್ತಾಗಬೇಕಲ್ಲಾ? ಅಂದರೆ ಗುಡಿಗುಂಡಾರಕ್ಕೆಲ್ಲಾ ಸುಮಾರು 3 ರಿಂದ 4 ಕೋಟಿ ರೂಪಾಯಿಗಳು ಸರ್ಕಾರ ಹಣವನ್ನು ಕೊಡುವುದಾದರೆ ಬೇರೆ ಬೇರೆ ಕಾಮಗಾರಿಗಳ ಪರಿಸ್ಥಿತಿಯೇನು? ಲೋಕೋಪಯೋಗಿ ಇಲಾಖೆಯಿಂದ ಪಂಚಲಿಂಗ ದರ್ಶನಕ್ಕಾಗಿ ಸುಮಾರು 10 ಕೋಟಿ ರೂಪಾಯಿಗಳನ್ನು ರಸ್ತೆ ಕೊಟ್ಟಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ. 12 ವರ್ಷಕ್ಕೊಂದು ಸಾರಿ ಪಂಚಲಿಂಗ ದರ್ಶನ ನಡೆಯುತ್ತದೆ. ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತು. ತಾವು ಆ ದರ್ಶನವನ್ನು ನೋಡಿಲ್ಲ. ನವೆಂಬರ್ 20ನೇ ತಾರೀಖು ಪಂಚಲಿಂಗ ದರ್ಶನವಾಗುತ್ತದೆ. ಇಡೀ ರಾಷ್ಟ್ರದಿಂದ ಜನರು ಅಲ್ಲಿಗೆ ಬರುತ್ತಾರೆ. ಹಿಂದೂ ಸಮಾಜದ ಎಲ್ಲಾ ಜನರು ಅಲ್ಲಿಗೆ ಬರುತ್ತಾರೆ. ಆ ಸಮಯಕ್ಕೆ ಸುಮಾರು 25 ಲಕ್ಷ ಜನರು ಅಲ್ಲಿಗೆ ಬರುತ್ತಾರೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ರಸ್ತೆ ಇರಬಹುದು, ಇವೆಲ್ಲಾ ಕಾರ್ಯಕ್ರಮಕ್ಕೆ ಹಣ ಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಅದರ ಬಗ್ಗೆ explanation ಕೊಡಬೇಕಲ್ಲಾ ತಾವು insufficient ಆಗಿ ಕೊಡುತ್ತಿರುವುದರಿಂದ, ನಾವು ಮಾತನಾಡಬೇಕಾಗುತ್ತದೆ. ನೀವು ಅದನ್ನು ಕೊಟ್ಟಿದ್ದರೆ ಇದಾಗುತ್ತಿರಲಿಲ್ಲ. ಪಂಚಲಿಂಗ ದರ್ಶನ ಮಹೋತ್ಸವಕ್ಕಾಗಿ ಎಂದರೆ ನಾನು ಅದಕ್ಕೆ 3 ಕೋಟಿ ರೂಪಾಯಿಗಳು ಎಂದರೆ ನನಗೆ ಆಶ್ಚರ್ಯವಾಯಿತು. ದೇವರ ದರ್ಶನಕ್ಕಾಗಿ 3 ಕೋಟಿ ರೂ. ಕೊಡುತ್ತೇನೆಂದರೆ ನಾನು ಯಾವ ದೇವರ ಹತ್ತಿರ ಹೋಗುವುದಿಲ್ಲ. ನನಗೆ ದೇವರ ಅವಶ್ಯಕತೆ ಇಲ್ಲ. ಹೀಗಾಗಿ ಇದು ಸರಿಯಾದುದಲ್ಲ. Education Department ನಲ್ಲಿ ಈ ಸೈಕಲ್‌ಗಳಿಗಾಗಿ 25 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಬಡತನದ ರೇಖೆಗಿಂತ ಕೆಳಗಿರುವಂತಹ ಕುಟುಂಬಗಳಿಗೆ 8ನೇ ತರಗತಿಯಲ್ಲಿ ಓದುತ್ತಿರುವಂತಹ ಹೆಣ್ಣು ಮಕ್ಕಳಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಬೈಸಿಕಲ್‌ಗಳನ್ನು ತರಿಸಲು 25 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಅನುದಾನವನ್ನು

ಒದಗಿಸಲು ಯೋಚಿಸಿದೆ. ಈ ಉದ್ದೇಶಕ್ಕಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಲೆಕ್ಕ ಶೀರ್ಷಿಕೆ so and so ನಿಂದ ಒದಗಿಸಲಾಗಿದೆ. 25 ಲಕ್ಷ ರೂ. ಗಳ ಅಧ್ಯರ್ಪಣೆ ಮಾಡಿರುವುದರಿಂದ ಇದರ ಹೊಂದಾಣಿಕೆಯ ನಗದು ಹಣಕ್ಕೆ ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಅಂದರೆ ಈ ಮೊದಲು 25 ಕೋಟಿ ರೂ. ಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಯೋಜನೆಗೆ ತಾವು ನೀಡಿದ್ದೀರಿ. ಆದರೆ ನನಗೆ ಗೊತ್ತಿದ್ದ ಹಾಗೆ ಸ್ತ್ರೀಶಕ್ತಿಗಾಗಿ ಕೊಟ್ಟಿದ್ದೀರಾ ಹೇಗೆ? ಇದನ್ನು ಏಕೆ divert ಮಾಡಿದಿರಿ? Why the money had been diverted from the Women and Childern Welfare Department? ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. 25 ಕೋಟಿ ರೂಪಾಯಿಗಳನ್ನು ನೀವು ಹೆಣ್ಣು ಮಕ್ಕಳಿಗಾಗಿ ಇಟ್ಟಿದ್ದೀರಿ ಎಂದು ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನು ಮಾತನಾಡುತ್ತಿದ್ದೀರಿ, ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಅರ್ಥವೇ ಆಗುತ್ತಿಲ್ಲ. ಬಹಳ ಮುಖ್ಯವಾದ ಸಂಗತಿ ಎಂದರೆ, ತಾವು ಲೋಕ ಸಭಾ ಸದಸ್ಯರಾಗಿದ್ದಿರಿ, ಈ ಬೈಸಿಕಲ್ ಅನ್ನು ಪಾರದರ್ಶಕವಾಗಿ ಮಾರ್ಕೆಟ್‌ನಲ್ಲಿ ಎರಡೂವರೆ ಸಾವಿರ ರೂಪಾಯಿ ಬೆಲೆ ಬಾಳುವುದನ್ನು ಎರಡು ಸಾವಿರದ ನಲವತ್ತು ಅಥವಾ ಎರಡು ಸಾವಿರದ ಐವತ್ತಕ್ಕೋ ಟೆಂಡರ್ ಕರೆದು ದೊಡ್ಡ ದೊಡ್ಡ ಸೈಕಲ್ ಕಂಪನಿಗಳಿಂದ ಸೈಕಲ್ ವಿತರಣೆಯಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿದ್ದುದ್ದನ್ನು ಶಿಕ್ಷಣ ಇಲಾಖೆಗೆ ವರ್ಗಾವಣೆಯಾಗಿದೆ. ಅದರಿಂದ Head of Account change ಆಯಿತು. ಅದಕ್ಕೋಸ್ಕರ ಮಾಡಿದ್ದೇವೆ, ಆದರೆ ಅದಕ್ಕೆ budget ನಲ್ಲಿ provision ಇತ್ತು ಇದರಿಂದ ಏನು ಸಮಸ್ಯೆಯಾಯಿತೆಂದು ಹೇಳುತ್ತೀರಾ?

ಶ್ರೀ ಬಸವರಾಜ ರಾಯರೆಡ್ಡಿ : ನಾನು ಸಮಸ್ಯೆಯನ್ನು ಹೇಳಿಬಿಡುತ್ತೇನೆ. ಇದು ನಮಗೆ ಹೇಗೆ ಗೊತ್ತಾಗಬೇಕು? ನೀವು ಸ್ತ್ರೀಶಕ್ತಿಗೆ ಕೊಟ್ಟಿರುವುದನ್ನು ಡೈವರ್ಟ್ ಮಾಡಿದ್ದರೆ, ಇದರಲ್ಲಿ ನೀವು ಹೇಳಿದ್ದೀರಾ? ಮೊದಲೇ ನೀವು declare ಮಾಡಬೇಕಾಗಿತ್ತು. ಆಗ main budget ಅನ್ನು ಮಂಡಿಸುವಂಥ ಸಂದರ್ಭದಲ್ಲಿ ಮಾಡಬೇಕಾಗಿತ್ತು. ನಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ನಾವು ಬೈಸಿಕಲ್ ಅನ್ನು ಕೊಡಿಸುತ್ತೇವೆಂದು ಹೇಳಿದರೆ ನಮಗೆ ಅರ್ಥವಾಗುತ್ತಿತ್ತು. ನಾವು ಸ್ಕೂಲ್‌ಗಾಗಿ ಶಿಕ್ಷಣ ಇಲಾಖೆಯಿಂದ ಕೊಡಿಸುತ್ತೀರೆಂದು ತಿಳಿದುಕೊಂಡೆವು. If it is diverted from the other Department, ನಾವೇನು ಅರ್ಥಮಾಡಿಕೊಳ್ಳಬೇಕು ಹೇಳಿ? ಆ ಇಲಾಖೆಯಲ್ಲಿ ಬೇರೆ ಕೆಲಸವಾಗುವುದು ಬೇಡವೇ? ನೀವು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗಾವಣೆ ಮಾಡುವುದು ಸರ್ವಥಾ ಸರಿಯಲ್ಲ. ಅದಕ್ಕಾಗಿ ವೇಳೆಯ ಅಭಾವವಿರುವುದರಿಂದ ನಾನು ಬೇಗನೇ ಮುಗಿಸುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾದರೆ, ಇವತ್ತು ಇಷ್ಟೆಲ್ಲಾ ಇಲಾಖೆಗಳ ಬಗ್ಗೆ ಹೇಳಿ, ಯಡಿಯೂರಪ್ಪನವರು, ಸನ್ಮಾನ್ಯ ಅರ್ಥ ಮಂತ್ರಿಗಳು ನಮ್ಮ ಹೈದರಾಬಾದ್-ಕರ್ನಾಟಕದ ಬಗ್ಗೆ ವಿಶೇಷವಾದ ಕಾಳಜಿ ಏನಾದರೂ ಇಟ್ಟಿದ್ದಾರೆಯೇ? ಎಂದು ನಾನು ಯೋಚನೆ ಮಾಡಿದೆ. ಇದರಲ್ಲಿ ಎಲ್ಲಾ ಇಲಾಖೆಗಳ ಬಗ್ಗೆ ಇದೆ. ಆದರೆ Area Development ಬಗ್ಗೆ ಒಂದು ಮಾತನ್ನೂ ಹೇಳಿಲ್ಲ. ಹೈದರಾಬಾದ್-ಕರ್ನಾಟಕದ ಅಭಿವೃದ್ಧಿಯಾಗುವುದಕ್ಕೆ ಒಂದು ರೂಪಾಯಿ ಹೆಚ್ಚಿಗೆ ಹಣವನ್ನು ಈ Supplementary Budget ನಲ್ಲಿ ಕೇಳಿಲ್ಲ, ಕೊಟ್ಟಿಲ್ಲ. ಇವರಿಗೆ ಕಾಳಜಿ ಇಲ್ಲ. ಉತ್ತರ ಕರ್ನಾಟಕದ ಬಗ್ಗೆ ಇವರಿಗೆ ಕಾಳಜಿ ಇಲ್ಲ.

10.00 P.M.

ಉತ್ತರ ಕರ್ನಾಟಕದ ವಿಚಾರದಲ್ಲಿ ನಿಮಗೆ ಕಾಳಜಿ ಇಲ್ಲ ಎಂದು ಅನಿಸುತ್ತದೆ. ತಾವೇನು Supplementary Budget ನಲ್ಲಿ ತಾವು ಏನನ್ನೂ ಹೈದರಾಬಾದ್-ಕರ್ನಾಟಕಕ್ಕೆ ಕೊಟ್ಟಿಲ್ಲ. ಇದು ಸರಿಯಲ್ಲ, ದಯಮಾಡಿ ಇದನ್ನು ಒದಗಿಸಿಕೊಡಬೇಕೆನ್ನುವಂಥ ಮಾತನ್ನು ಹೇಳಿ ಕೊನೆಗೆ ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಬಜೆಟ್‌ನಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ. Supplementary Estimates 2006-07 - showing the advances sanctioned from Contingency Fund. ಸುಮಾರು 315 ಕೋಟಿ ರೂ. ಗಳನ್ನು ಈಗಾಗಲೇ ಖರ್ಚು ಮಾಡಿಬಿಟ್ಟಿದ್ದಾರೆ. ಇದಕ್ಕೆ ಧನ ವಿನಿಯೋಗವನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತಿದ್ದೀರಿ, ಅದು ಸರಿ. ನೀವು ಖರ್ಚುಮಾಡಿರಬಹುದು, ಅದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ನೀವು ಯಾವ ಯಾವ ಇಲಾಖೆಗಳಿಗೆ ಖರ್ಚು ಮಾಡಿದ್ದೀರಿ. ಎಲ್ಲಿ ಮಾಡಿದ್ದೀರಿ? ಇದರಲ್ಲಿ ಏನೂ ವಿವರ ಇಲ್ಲ. ಇಲ್ಲಿ ನೋಡಿ Demand No. Head of Account, G.O. No. Amount Sanctioned. ನಮಗೆ ಏನು ಗೊತ್ತು. ಈಗ ಉದಾಹರಣೆಗೆ Demand No. 4216-01-700-2-12-132 (p)8000-00-223-0-00-G.O. No. & Date FD 21 BCF 2006 Dtd:7.6.2006, Amount Sanctioned: Rs 20 Crores. ಅದು ಏನು? ಇದೆ ತರಹ ಸುಮಾರು 9 ಇಲಾಖೆಗಳಿಗೆ ಈ ತರಹ ಕೊಟ್ಟರೆ ಸದಸ್ಯರಿಗೆ ಮಾಹಿತಿ ಕೊಡುವುದು ಬೇಡವೇ ಇಂತಹ ಅಸಮರ್ಪಕವಾದಂತಹ ಮಾಹಿತಿಯಿಂದ ಏನು ಪ್ರಯೋಜನ ಆಗುವುದಿಲ್ಲ. ಅದಕ್ಕಾಗಿ ನಾನು ಹೇಳಿದ್ದು, ಈಗ ನೀವು Supplementary Budgetನ್ನು ಮಾಡಿಕೊಂಡು ಪಾಸು ಮಾಡಿಕೊಳ್ಳುವುದು ಸರಿಯಲ್ಲ. ಅದಕ್ಕೆ ನಾನು ಹೇಳಿರುವುದು ಇದು ಜಾಣ ದುರುಪಯೋಗ, Article 205ದ ಜಾಣ ದುರುಪಯೋಗವನ್ನು ಈ ಸರ್ಕಾರ ಮಾಡಿಕೊಳ್ಳುತ್ತದೆ. ಅದಕ್ಕೆ ಸರಿಯಾದಂತಹ ಸಮರ್ಪಕವಾದಂತಹ ಉತ್ತರವನ್ನು ನಾನು ಅರ್ಥಮಂತ್ರಿಗಳಿಂದ ನಿರೀಕ್ಷೆ ಮಾಡುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಉಚ್ಚ ನ್ಯಾಯಾಲಯದ ಸುವರ್ಣ ಮಹೋತ್ಸವದ ಸಮಾರಂಭಕ್ಕೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನವು ಸಾಲದು ಎಂದು ಹೆಚ್ಚುವರಿ 25.00 ಲಕ್ಷ ರೂಪಾಯಿಗಳನ್ನು ಈಗ ಅಭಿಯಾನದಲ್ಲಿ ಸೇರಿಸಲಾಗಿದೆ. ಈ ನ್ಯಾಯಾಲಯಗಳ ಸಮಾರಂಭಕ್ಕೆ ಇವಕ್ಕೆಲ್ಲಾ ನಾವು ದುಡ್ಡು ಕೊಡುತ್ತೇವೆ. ನಾವೇ ಇದರಲ್ಲಿ ಹಣ ಕೊಡತಕ್ಕಂಥದ್ದು, ಅವರು ಹಣ ಪಡೆಯಲಿಕ್ಕೆ ಅನುಮತಿ ಕೊಡತಕ್ಕಂಥದ್ದು, ಎಲ್ಲವನ್ನೂ ನಾವೇ ಕೊಡುತ್ತೇವೆ. ಮಾನ್ಯ ಉಪ ಮುಖ್ಯಮಂತ್ರಿಗಳೂ ಗಮನಿಸಬೇಕು. ನ್ಯಾಯಾಲಯ ಕಟ್ಟಡಗಳನ್ನು ಉದ್ಘಾಟನೆ ಮಾಡುವಾಗ ಶಾಸಕರುಗಳನ್ನು ಕರೆಯುವುದಿಲ್ಲ, ನ್ಯಾಯಾಲಯ ಸಮಾರಂಭಕ್ಕೆ ಹಣ ಕೊಡುತ್ತೇವೆ. ನ್ಯಾಯಾಧೀಶರುಗಳಿಗೆ ಉನ್ನತವಾದ ಕಾರುಗಳಿಗೆ ನಾವು ಹಣ ಕೊಡುತ್ತೇವೆ. ಈ ಹಣವನ್ನು ಕೊಡುವವರು ಯಾರು? ಈ ಸದನ, ಅವರಿಗೆ ಹಣವನ್ನು ಒದಗಿಸುವಂಥದ್ದು ಈ ಸದನ. ಅವರಿಗೆ ನಾವು ಹಣ ಕೊಡುತ್ತೇವೆ. ನಾವೇ ಕಟ್ಟಿಕೊಟ್ಟಂತಹ ಕಟ್ಟಡ ನ್ಯಾಯಾಲಯಗಳ ಕಟ್ಟಡ, ತಾಲ್ಲೂಕು ಇರಬಹುದು, ಜಿಲ್ಲೆ ಇರಬಹುದು, ಅಲ್ಲಿ ಕಟ್ಟಡಗಳನ್ನು ಕಟ್ಟಿದಾಗ ಅಲ್ಲಿ ಶಾಸಕರುಗಳನ್ನು ಕರೆಯುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು : ಸಾರ್, ಕರೆಯುತ್ತಿದ್ದಾರೆ, ಒಂದು ಆರು ತಿಂಗಳಿಂದ

ಶ್ರೀ ವಾಟಾಳ್ ನಾಗರಾಜ್ : ಯಾವಾಗ 6 ತಿಂಗಳಿನಿಂದ, ಯಾವಾಗ ನಾವು ನ್ಯಾಯಾಲಯಕ್ಕೆ ಹೋಗಿ ಇದು ಸರಿಯಲ್ಲವೆಂದು ಹೇಳಿದ ಮೇಲೆ ಆ ನ್ಯಾಯಾಲಯಕ್ಕೇ ಹೋಗಿದ್ದೆವು, ಇನ್ನೂ ಕೆಲವು ಕಡೆ ಅದು ಗಂಭೀರವಾಗಿ ಇನ್ನೂ ನೇರವಾಗಿ ಅದಕ್ಕೆ ಅನುಮತಿ ಬಂದಿಲ್ಲ, ಇದರ ಬಗ್ಗೆ ಮಾನ್ಯ ಸರ್ಕಾರವನ್ನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದರೊಂದಿಗೆ ಲೋಕಸೇವಾ ಆಯೋಗದ ಸಮಾರಂಭಕ್ಕೆ 10.00 ಲಕ್ಷ ರೂಗಳನ್ನು ಕೊಡುತ್ತಿದ್ದೇವೆ. ನನಗೆ ಅನ್ನಿಸುತ್ತಿದೆ, ಲೋಕಸೇವಾ ಆಯೋಗದಲ್ಲಿ ಒಟ್ಟು 6 ಜನ ಸದಸ್ಯರು ಇರಬೇಕು, ಇಬ್ಬರೇ ಇಬ್ಬರು ಸದಸ್ಯರು ಇದ್ದಾರೆ. ಉಳಿದ ನಾಲ್ಕು ಜನ ಸದಸ್ಯರು ಇಲ್ಲವೇ ಇಲ್ಲ, ಅದರಲ್ಲೂ ಉತ್ತರ ಕರ್ನಾಟಕದ ಭಾಗಕ್ಕೆ ಬೀದರ್, ಬೆಳಗಾಂ ಇರಬಹುದು ಅಥವಾ ಗುಲಬರ್ಗಾ ಇರಬಹುದು, ಈ ಪ್ರದೇಶದಲ್ಲಿ ಕನಿಷ್ಠ ನಾಲ್ಕು ಇಲ್ಲವೇ ಮೂರು ಜನಗಳನ್ನಾದರೂ ನೇಮಕ ಮಾಡಬೇಕಲ್ಲವೇ? ಏತಕ್ಕೆ ಇನ್ನೂ ನೇಮಕ ಮಾಡಿಲ್ಲ, ಈಗಾಗಲೇ ನೀವು ಎ.ಸಿ. ವರ್ಗಕ್ಕೆ ಸಂಬಂಧಪಟ್ಟಂತೆ ಬಹಳ ಜನ ಅಧಿಕಾರಿಗಳನ್ನು ಕರೆದಿದ್ದೀರಿ. ಅವರ ನೇಮಕಾತಿ ಆಗಬೇಕಾಗಿದೆ. ಇಬ್ಬರೇ ಸದಸ್ಯರ ಕೈಯಲ್ಲಿ ಸಾಧ್ಯವೇ? ನೀವು ಯಾರನ್ನಾದರೂ ನೇಮಕ ಮಾಡಿ. ನೀವು ಇದರ ಬಗ್ಗೆ ತೀವ್ರವಾಗಿ ಯೋಚಿಸಬೇಕು, ಪ್ರಕಾಶ್ ರವರೇ, ಆಯೋಗಕ್ಕೆ ಇಬ್ಬರೇ ಸದಸ್ಯರಿದ್ದರೆ ಹೇಗೆ? ನೀವು ಯಾರಿಗಾದರೂ ಕೊಡಿ, ಉತ್ತರ ಕರ್ನಾಟಕ ಭಾಗಕ್ಕೆ ಕನಿಷ್ಠ ಮೂರು ಜನಕ್ಕೆ ಕೊಡಿ, ನೀವು ಇಲ್ಲಿ ಸದನವನ್ನು ನಡೆಸುತ್ತಿದ್ದೀರಿ. ಉತ್ತರ ಕರ್ನಾಟಕದ ಬಗ್ಗೆ ಬಹಳ ಕಳಕಳಿ ಇದೆ, ಅದರ ಬಗ್ಗೆ ಚಿಂತನೆ ಮಾಡುತ್ತೀರಿ. ನೀವು ಯಾವ ವರ್ಗದವರಿಗಾದರೂ ಕೊಡಿ. ಯಾವ ಕೋಮಿನವರಿಗಾದರೂ ಕೊಡಿ, ಉತ್ತರ ಕರ್ನಾಟಕದಲ್ಲಿ ನೀವು ಪರಿಣಾಮಕಾರಿಯಾಗಿ ಈ ಕೂಡಲೇ ನೀವು ನೇಮಿಸಬೇಕು. ನಿಧಾನ ಮಾಡಲಿಕ್ಕೆ ಆಗುವುದಿಲ್ಲ, ಅಷ್ಟೊತ್ತಿಗೆ ಎಲ್ಲಾ ಮುಗಿದು ಹೋಗುತ್ತದೆ. ಅಷ್ಟೊತ್ತಿಗೆ ಯಾವುದೇ ಸಂದರ್ಶನವೂ ಬರುವುದಿಲ್ಲ. ಯಾರೂ ನಿಮಗೆ ಅರ್ಜಿಯನ್ನು ಹಾಕುವುದಿಲ್ಲ. ಮತ್ತೆ ಬರಬೇಕಾದರೆ ಆರು ವರ್ಷವೋ, ಏಳು ವರ್ಷವೋ ಮತ್ತೆ ಉದ್ಯೋಗ ಸೃಷ್ಟಿಯಾಗಬೇಕಾದರೆ, ಹಾಗಾಗಿ ನಾನು ಹೇಳುತ್ತಿದ್ದೇನೆ. ಕೂಡಲೇ ಆ ಕೆಲಸವನ್ನು ಮಾಡಬೇಕಾದುದು ನಿಮ್ಮ ಕರ್ತವ್ಯವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ಮತ್ತೊಂದು ಬಹಳ ನೋವಿನ ಪ್ರಸಂಗ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಾಲದಿರುವುದರಿಂದ, ವೀರಪ್ಪನ್ ಕಾರ್ಯಾಚರಣೆಯ ಎಸ್.ಟಿ.ಎಫ್. ಸಿಬ್ಬಂದಿಗಳಿಗೆ ಬಹುಮಾನ ವಿತರಣೆಗಾಗಿ ಹೆಚ್ಚುವರಿಯಾಗಿ ಒಂದು ಸಾವಿರ ಲಕ್ಷ ರೂ. ಗಳನ್ನು ಅಭಿಯಾಚನೆಯಲ್ಲಿ ಸೇರಿಸಿದೆ, ಸೇರಿಸಿಕೊಳ್ಳಿ, ನನ್ನದೇನೂ ಅಭ್ಯಂತರವಿಲ್ಲ. ಆದರೆ ಬಹಳ ಪ್ರಾಮುಖ್ಯವಾಗಿರುವುದರ ಬಗ್ಗೆ ನಾವ್ಯಾರೂ ಚಿಂತನೆ ಮಾಡಿಲ್ಲ. ಈ ಸದನದ ಸದಸ್ಯರಾಗಿದ್ದವರೂ ಈ ರಾಜ್ಯದ ಮಂತ್ರಿಯಾಗಿದ್ದ ನಾಗಪ್ಪನವರನ್ನು ಅಪಹರಣ ಮಾಡಿದರು. ನಾಗಪ್ಪನವರ ಪರಿಸ್ಥಿತಿ ಏನಾಯಿತು, ಅಪಹರಣ ಮಾಡಿ ಯಾರು ಅವರನ್ನು ಕೊಂದರು ಎಂಬುದು ಇದುವರೆಗೆ ಇನ್ನೂ ಆ ವರದಿ ಸರ್ಕಾರಕ್ಕೆ ಸಲ್ಲಿಸಿದ್ದರೂ ಅದು ಬಹಿರಂಗವಾಗಿಲ್ಲ. ಏನಾಗಿದೆ? ಕನಿಷ್ಠ ಸೌಜನ್ಯಕ್ಕಾದರೂ ಒಬ್ಬ ಶಾಸಕರಾಗಿದ್ದವರು ಒಬ್ಬ ಮಂತ್ರಿಯಾಗಿದ್ದವರು ಅಪಹರಣದಲ್ಲಿ ಅವರು ಸತ್ತಿದ್ದಾರೆ, ಅವರ ಸಂಸಾರಕ್ಕೆ ನಾವು ಸರ್ಕಾರದವರು ಕನಿಷ್ಠ ಏನು ಕೊಟ್ಟಿದ್ದೇವೆ? ನಾನು

ಅವರು ಸತ್ತಿದ್ದಾರೆ, ಅವರ ಸಂಸಾರಕ್ಕೆ ನಾವು ಸರ್ಕಾರದವರು ಕನಿಷ್ಠ ಏನು ಕೊಟ್ಟಿದ್ದೇವೆ? ನಾನು ಅನೇಕ ಸಾರಿ ಹೇಳಿದೆ, ಎರಡು ಕೋಟಿ ರೂ.ಗಳನ್ನು ಕೊಡಿ ಎಂದು ಹಿಂದಿನ ಸಭೆಗಳಲ್ಲಿ ಅನೇಕ ಸಾರಿ ಹೇಳಿದ್ದೇನೆ. ನೀವು ಅದರ ಬಗ್ಗೆ ಮಾತನಾಡಲಿಲ್ಲ. ಅದರ ಬಗ್ಗೆ ಚಿಂತನೆ ಮಾಡಲಿಲ್ಲ, ಇಲ್ಲಿ ಬಹುಮಾನ ಕೊಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನೀವು ಅವರಿಗೆ ಕೊಡಿ. ಆದರೆ ಅವರ ಬಗ್ಗೆ ನೀವು ಏನು ಮಾಡಿದ್ದೀರಿ, ಅದರ ಬಗ್ಗೆ ನೀವು ಪ್ರಾಮಾಣಿಕವಾದಂಥ ಚಿಂತನೆಯಾಗಬೇಕಾಗಿತ್ತು. ಅಬ್ದುಲ್ ಕರೀಂ ಬಗ್ಗೆ ನಿಮಗೆ ಹೇಳುತ್ತೇನೆ. ಇಡೀ ಸಮಗ್ರವಾಗಿ ಸರ್ವೋಚ್ಚ ನ್ಯಾಯಾಲಯ ಆ ಅಪಹರಣ ಸಂದರ್ಭದಲ್ಲಿ ನಡೆದಂತಹ ವ್ಯವಸ್ಥೆಯಲ್ಲಿ ಅಬ್ದುಲ್ ಕರೀಂ ಎಂಬುವವರು ನಡೆಸಿದಂತಹ ನ್ಯಾಯಾಂಗ ಹೋರಾಟ ಇತಿಹಾಸದಲ್ಲಿ ಬರೆಯತಕ್ಕಂಥಾದ್ದು, ಆ 85ನೇ ವಯಸ್ಸಿನಲ್ಲಿ ಶಕೀಲ್ ಎಂಬ ತನ್ನ ಮಗನನ್ನು ಕಳೆದುಕೊಂಡು ಅವರೂ ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದವರೆಗೂ ಹೋರಾಟ ಮಾಡಿದಂಥ ವ್ಯಕ್ತಿಯನ್ನು ನಿಮ್ಮ ಸರ್ಕಾರದವರು ಯಾರಾದರೂ ಕರೆದು ನಿಮಗೆ ಎಷ್ಟು ಖರ್ಚಾಗಿದೆ, ಯಾವ ವಿಷಯ, ಎಷ್ಟು ಹಣ ಕೊಡಬೇಕು, ಏನಾದರೂ ಕೇಳಿದರೇ? ಅವರ ಬಗ್ಗೆ ನೀವು ಕೇಳಲಿಲ್ಲ. ನಾಗಪ್ಪ ಮಾರಡಿಗೆ ಎಂಬ ಉತ್ತರ ಕರ್ನಾಟಕದ ವ್ಯಕ್ತಿ ನಿಜವಾಗಲೂ ಅವರಿಗೆ ಪ್ರಶಸ್ತಿ ಕೊಡಬೇಕಾಗಿತ್ತು. ನಿಜವಾಗಲೂ ಅವನು ಕನ್ನಡದ ವೀರ. ಆ ಮನುಷ್ಯ ಆ ವೀರಪ್ಪನನ್ನು ಹೊಡೆದು ತಪ್ಪಿಸಿಕೊಂಡು ಬಂದಂತಹ ನಾಗಪ್ಪ ಮಾರಡಿಗೆ ಎಂಬ ವ್ಯಕ್ತಿಯ ಬಗ್ಗೆ ನೀವೆಲ್ಲಾ ಚಿಂತನೆ ಮಾಡಿದಿರಾ? ಚಿಂತೆ ಮಾಡಲೇ ಇಲ್ಲ. ಇಂತಹ ಅನೇಕ ವಿಚಾರಗಳ ಬಗ್ಗೆ ಹಣ ಕೊಡಲಿಕ್ಕೆ ನಿಮ್ಮ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳಿದರೆ ಇದು ನಿಜಕ್ಕೂ ನಾಚಿಕೆಗೇಡು. ನೀವು ಎಂತೆಂಥ ವಿಚಾರಗಳಿಗೆ ಕೊಡುತ್ತಿದ್ದೀರಿ. ಈ ವಿಚಾರಗಳಿಗೆ ನಿಮಗೆ ಪೂರಕ ಅಂದಾಜುಗಳಲ್ಲಿ ಹಣ ಕೊಡಲಿಕ್ಕೆ ಬರಲಿಲ್ಲವೇ? ಇದಕ್ಕೆ ಕೊಡಲಿಕ್ಕೆ ಹಣ ಸಿಗಲಿಲ್ಲವೇ? ಹಾಗಾಗಿ ಈ ಸಂದರ್ಭದಲ್ಲಿ ನಾನು ಅತ್ಯಂತ ಕಳಕಳಿಯಿಂದ ಈ ಮಾತನ್ನು ತಮಗೆ ಹೇಳುತ್ತಿದ್ದೇನೆ. ಬೆಳಗಾವಿಯಲ್ಲಿ ವಿಧಾನಸಭೆ ಅಧಿವೇಶನ ನಡೆಸುವುದಕ್ಕೆ 200.00 ಲಕ್ಷ ರೂಪಾಯಿಗಳ ಹೆಚ್ಚು ಅನುದಾನವನ್ನು ಮಂಜೂರು ಮಾಡಲಾಗಿದೆ. ಇದು ನಿಜಕ್ಕೂ ನನಗೆ ಬಹಳ ಸಂತೋಷ. ಇದಕ್ಕೆ ಎಷ್ಟು ಹಣ ಖರ್ಚಾಗುತ್ತೆ ಅಷ್ಟು ಹಣವನ್ನು ಕೊಡಿ. ಈ ಸದನ ಚೆನ್ನಾಗಿ ನಡೆದಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಬೆಂಗಳೂರಿನಲ್ಲಿ ಸದನ ನಡೆದಿದ್ದರೆ 5 ಜನಕ್ಕಿಂತ ಹೆಚ್ಚು ಜನ ಶಾಸಕರು ಕುಳಿತುಕೊಳ್ಳುತ್ತಿರಲಿಲ್ಲ. ಈ ಹಾಜರಿ ನೋಡಿ, ಕನಿಷ್ಠ ನೂರು ಜನರ ಮೇಲೆ ಇದ್ದಾರೆ, ಸಂತೋಷಪಡತಕ್ಕಂಥ ವಿಚಾರ, ಅದಕ್ಕೆ ನನಗೆ ಅನ್ನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ದಯವಿಟ್ಟು ಜಾಸ್ತಿ ಜನರಿದ್ದಾರೆಂಬ ಲಾಭ ತೆಗೆದುಕೊಂಡು, ನೀವು ಭಾಷಣವನ್ನು ಮುಂದುವರೆಸಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನಗೆ ಅನ್ನಿಸುತ್ತದೆ, ಇಲ್ಲಿ ಪ್ರತಿ ವರ್ಷ ಸದನವನ್ನು ನಡೆಸಬೇಕೆಂಬ ಉದ್ದೇಶ ತಮಗೆ ಇದೆ. ನಡೆಸಬೇಕು ಎನ್ನುವ ಉದ್ದೇಶ ನಿಮಗಿರುವುದಾದರೆ, ಈಗಾಗಲೇ ನಮಗೆ ಗಾಳಿಸುದ್ದಿ ಇದೆ, ಈಗಾಗಲೇ ಇಲ್ಲಿ ಶಂಕುಸ್ಥಾಪನೆ ಮಾಡುತ್ತಾರೆ, ಎಲ್ಲಿ ನಡೆಸಬೇಕು ಎಂಬ ಸುದ್ದಿಗಳು ಇವೆ, ಅದನ್ನು ನೀವು ನಮಗೆ ಇನ್ನೂ ತಿಳಿಸಿಲ್ಲ. ಈಗ ಮುಂದಿನ ವರ್ಷ ಈ ಊರಿನಲ್ಲಿ ಸದನ ನಡೆಸುವುದಾದರೆ ಸ್ಥಳ, ಅದಕ್ಕೆ ಪೂರಕವಾದ ವ್ಯವಸ್ಥೆ ಇವೆಲ್ಲಾ ಆಗಬೇಕು, ಅದಕ್ಕೆಲ್ಲಾ ನಿಮ್ಮ ಚಿಂತನೆ ಏನು? ಅದಕ್ಕೆಲ್ಲಾ ಹಣ ಒದಗಿಸುವಿರಾ ಅಥವಾ ಸುಮ್ಮನೆ ಇದೊಂದು

ಸಾರಿ ಸದನ ನಡೆಸಿ ಮುಂದಿನ ಸಾರಿ ನೀವು ಸದನವನ್ನು ನಡೆಸುವುದಿಲ್ಲವೇ? ಯಾವ ಉದ್ದೇಶವಿದೆ ಎನ್ನುವುದು ತಿಳಿಯಬೇಕಲ್ಲವೇ? ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆ, ಆ ರೀತಿ ಯಾವ ಉದ್ದೇಶ ನಿಮಗಿದ್ದರೆ, ಅದನ್ನು ಸ್ಪಷ್ಟಪಡಿಸಿ, ನಾವು ಶಂಕುಸ್ಥಾಪನೆ ಮಾಡುತ್ತಿದ್ದೇವೆ. ನಾವು ಇಲ್ಲಿ ಸ್ಥಳ ಒದಗಿಸುತ್ತಿದ್ದೇವೆ. ಇಷ್ಟು ಹಣ ತೆಗೆದುಕೊಂಡಿದ್ದೇವೆ. ಒದಗಿಸಿದ್ದೇವೆ ಇಲ್ಲಿ ಶಂಕುಸ್ಥಾಪನೆ ಮಾಡುತ್ತಿದ್ದೇವೆಂದು ಹೇಳಿ ಚಾಮರಾಜನಗರದ ವಿಚಾರ ಅವರಿಗೆ ಸೇರಿದ್ದು; ಮಾಡುವುದು ಬಿಡುವುದು ಅವರಿಗೆ ಸೇರಿದ್ದು. ನಾನು ತಾವು ಹೇಳಿದಿರಿ ಎಂದು ನಾನು ಆ ಪ್ರಶ್ನೆಗೆ ಮಾತನಾಡಬೇಕಾಗುತ್ತದೆ, ಈಗ ಮಾಧುಸ್ವಾಮಿಯವರು ಸುಮ್ಮನೆ ಕೆಣಕುತ್ತಿದ್ದಾರೆ. ನಾವು ಎಷ್ಟು ಸಾರಿ ಕರೆದರೂಈ ಮುಖ್ಯಮಂತ್ರಿಗಳಂತೂ ಬರುವುದಿಲ್ಲ. ನಾವು ಏನು ಮಾಡುವುದು? ನಾವು ಅವರಿಗೆ ಬನ್ನಿ ಎಂದು ಕರೆಯುತ್ತಿದ್ದೇವೆ ಅವರು ಬರಲಿಕ್ಕೆ ಸಿದ್ಧವಿಲ್ಲ. ಆದರೂ ನನಗೇನೂ ನೋವಾಗಿಲ್ಲ. ಅವರು ಬರುವುದು ಬಿಡುವುದು ಅವರಿಗೆ ಸೇರಿದ್ದು. ಮತ್ತೆ ಉಪ ಮುಖ್ಯಮಂತ್ರಿಗಳೂ ಈಗ ಯಾವ ಮೂಢನಂಬಿಕೆಗೆ ಕಟ್ಟುಬಿದ್ದಿದ್ದೀರಿ ಎಂಬುದು ಗೊತ್ತಿಲ್ಲ. ನೀವು ಎಲ್ಲೋ ಬರುವುದಕ್ಕೆ ಹಿಂದು ಮುಂದು ನೋಡುತ್ತಿದ್ದೀರಿ ಎಂದು ನನಗೆ ಅನ್ನಿಸುತ್ತಿದೆ. ಹೀಗೆ ಹಿಂದು ಮುಂದು ನೋಡಿ ನೀವು ಬರಬಹುದು ಅಥವಾ ಬಿಡಬಹುದು, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣ ಕೊಡಿ, ಈ ರಾಜ್ಯದಲ್ಲಿ ಶಿವಮೊಗ್ಗ, ಹಾಸನ ಎರಡೇ ಅಲ್ಲ. ಚಾಮರಾಜನಗರವೂ ಇದೆ, ಬೇರೆ ಜಿಲ್ಲೆಗಳು ಇವೆ, ನೀವು ಹಣ ಹಂಚುವಾಗ ಬರೇ ಕೇವಲ ಹಾಸನ,, ನೀವು ಏನು ತಿಳಿದುಕೊಂಡಿದ್ದೀರಿ, ಶಿವಮೊಗ್ಗ ಯಡಿಯೂರಪ್ಪನವರು ಈಶ್ವರಪ್ಪನವರು ಇದ್ದಾರೆ, ನಾವಿರುವಾಗ ಎಲ್ಲಾ ಶಿವಮೊಗ್ಗಕ್ಕೆ ಏನೇನು ಬೇಕೋ ಎಲ್ಲಾ ಮಾಡಿಬಿಡೋಣ ಮತ್ತು ರೇವಣ್ಣ ಮತ್ತು ಕುಮಾರಸ್ವಾಮಿ ಅವರೂ ಇರುವವರೆಗೆ ನಾವು ಬರೇ ಆಸ್ತಿ, ಈ ರೀತಿ ಆಗಬಾರದು, ಇಡೀ 27 ಜಿಲ್ಲೆಗಳಿಗೂ ನೀವು ಸಮಾನಾಂತರವಾಗಿ ಕಾಣಬೇಕು. ನೀವು ಹಾಗೇ ಕಾಣದೇ ಇದ್ದರೆ ಏನಾಗುತ್ತದೆಂದರೆ ನಿಜಕ್ಕೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಪಚಾರ ಮಾಡಿದಂತೆ ಆಗುತ್ತದೆ. ಆ ದೃಷ್ಟಿಯಿಂದ ನಮಗೆ ಏಕೆ ನೀವು ಮೆಡಿಕಲ್ ಕಾಲೇಜ್ ಕೊಡುವುದಿಲ್ಲ? ವಿಮಾನ ನಿಲ್ದಾಣ, ಇಂಜನಿಯರಿಂಗ್ ಕಾಲೇಜ್ ಏಕೆ ಕೊಡುವುದಿಲ್ಲ? ಇದನ್ನೆಲ್ಲಾ ನೋಡಿದಾಗ ನನಗೆ ಅನ್ನಿಸುತ್ತದೆ. ನಾನು ಯಾವತ್ತೂ ಎರಡು ಕರ್ನಾಟಕ ಆಗಬೇಕೆಂದು ಎಂದೂ ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳೇ ಅಲ್ಲಿ ಹೋಗಲಿಕ್ಕೆ ತಯಾರಿಲ್ಲ, ಇನ್ನು ವಿದ್ಯಾರ್ಥಿಗಳು ಅಲ್ಲಿ ಮೆಡಿಕಲ್, ಇಂಜನಿಯರಿಂಗ್ ಕಾಲೇಜ್‌ಗಳಿಗೆ ಹೋಗುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಇದು ನನ್ನ ಜೀವನದಲ್ಲಿ ಯಾರಾದರೂ ಪಿತೂರಿ ಮಾಡುವುದಿದ್ದರೆ ಅದು ಖರ್ಗೆ ಒಬ್ಬರೇ, ನಾನು ಮೊದಲಿನಿಂದಲೂ ನೋಡುತ್ತಿದ್ದೇನೆ. ಏನು ನಿರಂತರವಾಗಿ ಪಿತೂರಿ ನಡೆಯುತ್ತಿದೆ, ಆದರೆ ನಾನು ಗಟ್ಟಿಯಾಗಿರುವುದರಿಂದ ಉಳಿದುಕೊಂಡಿದ್ದೇನೆ, ಇಲ್ಲದಿದ್ದರೆ ಉಳಿಯಲಿಕ್ಕಾಗುತ್ತಿರಲಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಎಲ್ಲಿಯವರೆಗೆ ಯೋಚನೆ ಮಾಡಿದ್ದೇನೆಂದರೆ, ಹಿಂದೆಯೂ ಹೇಳಿದ್ದೇನೆ, ಈ ಒಂದು ಗಡಿನಾಡಿನಲ್ಲಿ ಕುಳಿತು ಈ ಮಾತನ್ನು ಹೇಳಬೇಕಾದರೆ ನನಗೆ ನೋವಾಗುತ್ತದೆ, ಯಡಿಯೂರಪ್ಪನವರೇ, ಚಾಮರಾಜನಗರವನ್ನು ಸೆಪರೇಟ್ ರಾಜ್ಯ ಮಾಡಲಿಕ್ಕೆ ಕೊಟ್ಟುಬಿಡಿ. ಇಡೀ ಚಾಮರಾಜನಗರ ನಮ್ಮದೇ

ರಾಜ್ಯ. ಗಡಿನಾಡು ರಾಜ್ಯ. ಇದರ ಬಗ್ಗೆ ನಾಳೆಯೇ ನಿರ್ಣಯ ಮಾಡಿ ನಾವು ಒಪ್ಪುತ್ತೇವೆ. ಇಲ್ಲದಿದ್ದರೆ ನೀವು.

ಉಪಾಧ್ಯಕ್ಷರು : ನೀವು ನಾಳೆ ಹೋಗುವುದಾದರೆ ಪಾಸ್ ಮಾಡಿ ಬಿಡುತ್ತಾರೆ..

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ತಾವು ನಿರ್ಣಯ ಮಾಡುತ್ತೀರಾ, ನಾನು ಈಗಲೇ ನಿರ್ಣಯವನ್ನು ಕಳುಹಿಸುತ್ತೇನೆ. ತಾವು ನಿರ್ಣಯ ಮಾಡುವುದಾದರೆ, ಈಗಾಗಲೇ ನಮ್ಮ ರಾಜೇಂದ್ರರವರು ನಮ್ಮನ್ನು ವೈಕುಂಠಕ್ಕೆ ಕಳಿಸಿದ್ದಾರೆ. ಅವರಿಗೆ ಭಾಷೆ ಗೊತ್ತಿಲ್ಲ, ವೈಕುಂಠ, ಕೈಲಾಸ ಎಂದರೆ ಗೊತ್ತಿಲ್ಲ. ಇವರೆಲ್ಲಾ ಮಹಾ ಪಿತೂರಿ ಮಾಡುವಂಥ ಜನ ಆದರೂ ನಾವು ಗಟ್ಟಿಯಿದ್ದೇವೆ. ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಇದು ಹಾಸ್ಯವಿರಬಹುದು, ಪರಿಸ್ಥಿತಿ ಒಂದು ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿವೆ, ಎಲ್ಲಾ ಜಿಲ್ಲೆಗಳಿದ್ದಾಗ ಕೆಲವು ಜಿಲ್ಲೆ ಕೆಲವು ರಾಜ್ಯಗಳಿಗೆ ಕೆಲವು ತಾಲ್ಲೂಕುಗಳಿಗೆ ಹೋಗಬಾರದೆಂಬ ಈ ಮೂಢನಂಬಿಕೆಯಿದೆಯೆಲ್ಲಾ, ಇದಕ್ಕಿಂತ ಅನಾಗರಿಕ ವರ್ತನೆ ಯಾವುದೇ ಕಾಲಕ್ಕೂ ಸಾಧ್ಯವಿಲ್ಲ. ನನಗೆ ಅನ್ನಿಸುತ್ತದೆ. ಅವರು ಬರುವುದು ಬಿಡುವುದು ಅವರಿಗೆ ಸೇರಿದ್ದು, ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕಂಥದ್ದು ಮಾತ್ರ ಕರ್ತವ್ಯವೆಂಬ ಮಾತನ್ನು ತಮಗೆ ಹೇಳಬಯಸುತ್ತೇನೆ. ಈ ಪ್ರವಾಹ ಪೀಡಿತ ಗ್ರಾಮಗಳಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳೂ ತೀವ್ರವಾದ ಕ್ರಮವನ್ನು ಕೈಗೊಳ್ಳತಕ್ಕಂಥ ವಿಚಾರಗಳನ್ನು ಅವರು ಮಾತನಾಡಿದ್ದಾರೆ. ಈ ವಿಚಾರ ನಿಜಕ್ಕೂ ಪ್ರಾಮಾಣಿಕವಾಗಿರುವ ವಿಚಾರ ಎಂದು ನನಗೆ ಅನ್ನಿಸುತ್ತಿದೆ. ಎಷ್ಟು? ಅದಕ್ಕೇನು ಯೋಜನೆ ಮಾಡಿದ್ದೀರಾ? ಆ ಪ್ರವಾಹ ಪೀಡಿತವಾದ ಪ್ರದೇಶಗಳನ್ನು ಎಲ್ಲಿ ಸೇರಿಸಬೇಕು? ಯಡಿಯೂರಪ್ಪನವರೇ ಈ ಪ್ರವಾಹ ಪೀಡಿತ ಪ್ರದೇಶವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಏನಿದ್ದೀರಿ, ಅದಕ್ಕೆ ಯೋಜನೆ ತಯಾರಾಗಿದೆಯೇ? ಎಲ್ಲೆಲ್ಲಿ ಎಂದು ನೋಡಿದ್ದೀರಾ? ಇಡೀ ಉತ್ತರಕರ್ನಾಟಕದ ಅನೇಕ ಭಾಗಗಳಲ್ಲಿ ಸುಮಾರು ನಾಲ್ಕೈದು ಜಿಲ್ಲೆಗಳಂತೂ ಬಹಳ ತೀವ್ರವಾದಂಥ ಪ್ರವಾಹಪೀಡಿತರ ಪ್ರದೇಶವಾಗುತ್ತದೆ. ಅಲ್ಲಿ ನೀವು ಏನಾದರೂ ಮಾಡತಕ್ಕಂಥ ವ್ಯವಸ್ಥೆ ನಿಮ್ಮ ಸರ್ಕಾರದ ಕೈಯಲ್ಲಿದೆಯೇ ಎಂಬ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ಕೇಂದ್ರದವರನ್ನು ನೀವು ಎಷ್ಟು ಹಣ ಕೇಳಿದ್ದೀರಿ ಯಡಿಯೂರಪ್ಪನವರೇ? ಆದ್ದರಿಂದ ಈ ವಿಚಾರದಲ್ಲಿ ಇದೊಂದು ಪರಿಣಾಮಕಾರಿಯಾಗಿ ಇವರು ತಿಳಿಸಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಸುಮ್ಮನೆ ನೀವು ಮಾತನಾಡುವುದರಲ್ಲಿ ಏನೂ ಪ್ರಯೋಜನವಿಲ್ಲ. ಪಂಚಲಿಂಗ ದರ್ಶನ ಎಂದರೆ ಅದು ದರ್ಶನ ಅಲ್ಲ, ಮಹಾಮಸ್ತಕಾಭಿಷೇಕ ಹೇಗೆ ಆಗುತ್ತದೆ, ಅದೇರೀತಿ ಇದು 12 ವರ್ಷಕ್ಕೊಂದು ಸಾರಿ ಪಂಚಲಿಂಗದರ್ಶನ ಆಗುವುದು, ಇದಕ್ಕೆ ಈ ಸರ್ಕಾರ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆಂಬ ಮಾತನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ. ಇಂತಹವೆಲ್ಲಾ ಸಾಂಸ್ಕೃತಿಕವಾಗಿ ನಡೆಯತಕ್ಕ ವಿಚಾರಗಳು, ಈ ರೀತಿ ಸಾಂಸ್ಕೃತಿಕವಾಗಿ ನಡೆಯತಕ್ಕಂಥ ವಿಚಾರಗಳಲ್ಲಿ ನಾವು ಬಹಳ ಎಚ್ಚರವಾಗಿ ಗಮನ ಕೊಟ್ಟು ಸಹಕರಿಸಬೇಕಾಗುತ್ತದೆ. ಮತ್ತೊಂದು ವಿಚಾರವೇನೆಂದರೆ ಈ ತಾರತಮ್ಯದ ಬಗ್ಗೆ ಈಗಾಗಲೇ ನಮ್ಮ ಸಂಪೂರ್ಣವಾಗಿ ನಮ್ಮ ಸದಸ್ಯರುಗಳು ಮಾತನಾಡಿರುವಂಥಾದ್ದು, ತಾರತಮ್ಯ, ಈಗ ನೀವು ಕೊಟ್ಟಿರತಕ್ಕಂಥ ಪ್ರಥಮದರ್ಜೆ ಕಾಲೇಜುಗಳೆಷ್ಟು? ನಾಗರಬಾವಿಗೆ ಕೊಟ್ಟಿರತಕ್ಕಂಥ ಅನುದಾನವೆಷ್ಟು? ಇದರ ಬಗ್ಗೆ ನೀವು ಈ ಸದನ ಮುಗಿಯುವುದರೊಳಗಾಗಿ ಸಂಪೂರ್ಣವಾಗಿ ಸಮಗ್ರವಾದ

ವಿವರಗಳನ್ನು ಕನಿಷ್ಠ ನಾಳೆಯಾದರೂ ಮಂಡಿಸಬೇಕು. ಎಷ್ಟು ಕ್ಷೇತ್ರಗಳಿಗೆ ಕೊಟ್ಟಿದ್ದೀರಿ? ಯಾವ್ಯಾವ ಕ್ಷೇತ್ರಗಳಿಗೆ ಕೊಟ್ಟಿದ್ದೀರಿ? ಕೊಡದೇ ಇರಲಿಕ್ಕೆ ಕಾರಣವೇನು? ಯಾವ ಉದ್ದೇಶ ಎನ್ನುವುದನ್ನು ತಾವು ಹೇಳಬೇಕು. ಮತ್ತು ಅನೇಕ ಸಂದರ್ಭಗಳಲ್ಲಿ ನೀವು ಕುಡಿಯುವ ನೀರಿನ ಬಗ್ಗೆ task force ಮಾಡಿದ್ದೀರಿ. ಎಲ್ಲಾ ಶಾಸಕರನ್ನು ನೀವು ಸಾಲಗಾರರನ್ನಾಗಿ ಮಾಡಿದ್ದೀರಿ. ಬಹುಶ: ತಾವು ಹೇಳಿದ ಹಾಗೆ ಮೊನ್ನೆ 7.00 ಲಕ್ಷ ರೂಗಳನ್ನು ಬಿಡುಗಡೆ ಮಾಡಿದ್ದಾರೆ. ಒಂದು ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ಪ್ರತಿ ಕೇತ್ರದಲ್ಲೂ ಇನ್ನೂ ಕೊಡಬೇಕಾಗಿದೆ. ಯಡಿಯೂರಪ್ಪನವರೇ, ಈ Task force ನಲ್ಲಿ ಸುಮ್ಮನೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿಬಿಟ್ಟಿದ್ದೀರಿ. ಏನಾಯಿತು, ಆ ಸಾಲಗಳನ್ನು ತೀರಿಸದವರ ಗತಿ ಏನು? ಏತಕ್ಕೆ ಸಾಲ ತೀರಿಸಿಲ್ಲ? Task force ಮಾಡಿದ್ದು ಒಳ್ಳೆಯದೇ ಆಯಿತು. ನಾವು ಕುಡಿಯುವ ನೀರು ಕೊಟ್ಟಿದ್ದರಿಂದ ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳಲ್ಲಿ ಸ್ವಲ್ಪ ಓಡಾಡುವುದಕ್ಕೆ ಅವಕಾಶ ಸಿಕ್ಕಿತು, ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ನೀವು Task force ಮುಂದುವರಿಸಿದ್ದೀರಾ? ಇಲ್ಲವೇ ನೀವು ಮುಂದುವರಿಸದಿದ್ದರೂ ಚಿಂತೆಯಿಲ್ಲ ಯಾರಿಗಾದರೂ ಕೊಡಿ, ನಮ್ಮ ಸಾಲ ತೀರಿಸಿದರೆ ಸಾಕು, ಪ್ರತಿ ಕ್ಷೇತ್ರದಲ್ಲಿ ಕೊಡಬೇಕಾದ ಹಣವನ್ನು ತೀರಿಸಿ, ಹಾಗೆ ತೀರಿಸಿದರೆ ನಿಜಕ್ಕೂ ನಿಮಗೂ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಪಡಿತರ ಚೀಟಿಯಂತೂ ಇಡೀ ರಾಜ್ಯಾದ್ಯಂತ ಎಲ್ಲಾ ಜನರಲ್ಲಿಯೂ ತೀವ್ರವಾದಂಥ ಗೊಂದಲ ಸೃಷ್ಟಿಯಾಗಿದೆ, ಆ ಪಡಿತರ ಚೀಟಿಯ ಗೊಂದಲ ಸರಿಪಡಿಸಲಿಕ್ಕೆ ಪರಿಣಾಮಕಾರಿಯಾದಂತಹ ಕ್ರಮವನ್ನು ತಾವು ಕೈಗೊಳ್ಳಬೇಕು. ಅಂತಿಮವಾಗಿ ಬಹಳ ಅನೇಕ ವಿಚಾರದಲ್ಲಿ ಸಂಪಾದನೆ ಬರುವಂಥದ್ದು ಸಾರಾಯಿಯಲ್ಲಿ, ಒಬ್ಬರು ಇಟ್ಟುಕೊಳ್ಳುತ್ತೇವೆ, ಒಬ್ಬರು ತೆಗೆಯುತ್ತೇವೆಂದು ಹೇಳುತ್ತೀರಿ. ಮುಖ್ಯಮಂತ್ರಿಗಳು ಒಂದು ರೀತಿಯಲ್ಲಿ ಹೇಳಿದರೆ ಉಪ ಮುಖ್ಯಮಂತ್ರಿಗಳು ಒಂದು ರೀತಿ ಹೇಳುತ್ತಾರೆ. ಇದನ್ನು ಮೊದಲು ಸ್ಪಷ್ಟಪಡಿಸಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಉಪ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಒಂದು ಅನೌನ್ಸ್‌ಮೆಂಟ್ ಮಾಡಿ ಆಮೇಲೆ ರಿಪ್ಲೈ ಮಾಡುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರಜಿಲ್ಲೆಯಲ್ಲಿ ಬೆಳಿಗ್ಗೆ ಪ್ರಸ್ತಾಪ ಮಾಡಿದಾಗ ಆ ಪೂರ್ವ ತಾಲ್ಲೂಕು ಬರಗಾಲದ ಪಟ್ಟಿಗೆ ಹೋಗಬೇಕೆಂದು ರಿಕ್ವೆಸ್ಟ್ ಮಾಡಿದೆ. ಎರಡನೇಯದೇನೆಂದರೆ ಮೂರು ವರ್ಷದ ಹಿಂದೆ ಸಿವಿಲ್ ಕೋರ್ಟ್‌ನಲ್ಲಿ ಸ್ಯಾಂಕ್ಷನ್ ಆಯಿತು, ಏಕೆಂದರೆ ರಾಜ್ಯದಲ್ಲಿ ಬಹಳ ವರ್ಷಗಳಾದ ಮೇಲೆ ಹೊಸದಾಗಿ ಕೊಟ್ಟಿದ್ದು ಬೆಂಗಳೂರು ಪೂರ್ವ ತಾಲ್ಲೂಕು. ಕೋರ್ಟ್‌ನಲ್ಲಿ ಸ್ಯಾಂಕ್ಷನ್ ಆಗಿ ಮೂರು ವರ್ಷವಾಗಿದೆ, ಆದರೆ ಬಜೆಟ್ಟಿನಲ್ಲಿ ಹಣ ಕೊಟ್ಟಿಲ್ಲ. ಕೆಲಸ ಪ್ರಾರಂಭವಾಗಿಲ್ಲ. ಅದರಿಂದ ದಯಮಾಡಿ ಅದಕ್ಕೆ ಗಮನ ಕೊಡಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳ ಹಾಗೂ ಗೃಹ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ಕೆ.ಆರ್. ಪುರಂ. ಪೂರ್ವ ತಾಲ್ಲೂಕು. ಮತ್ತೆ ನಮಗೆ ಕೊಟ್ಟಂತಹ ಪ್ರಥಮದರ್ಜೆ ಕಾಲೇಜು, 9 ವರ್ಷಗಳ ಹಿಂದಿನದ್ದು, ಇವತ್ತು ರಾಜ್ಯದಲ್ಲಿ ನ್ಯಾಕ್

ಸಂಸ್ಥೆಯವರೂ ಕೂಡ excellency award ಕೊಟ್ಟಿದ್ದಾರೆ ಯೂನಿವರ್ಸಿಟಿಯವರೂ excellency certificate ಕೊಟ್ಟಿದ್ದಾರೆ. ಆ ಕಾಲೇಜಿಗೆ ಡಿಮ್ಯಾಂಡ್ ಎಷ್ಟಿದೆಯೆಂದರೆ ಈಗ ಸಾವಿರಪಟ್ಟು ಜಾಸ್ತಿಯಾಗಿದೆ. ಮಕ್ಕಳು ಚೆನ್ನಾಗಿ ಓದುತ್ತಾರೆ, ಒಳ್ಳೆಯ ರಿಸಲ್ಟ್ಸ್ ಆ ಗವರ್ನಮೆಂಟ್ ಕಾಲೇಜಿನಲ್ಲಿ ಬರುತ್ತಿದೆ ಅಂತ. ರೂಮುಗಳು ಕೊಡಿ ಎಂದು ಮುಖ್ಯಮಂತ್ರಿಗಳಿಗೆ, ಶಿಕ್ಷಣ ಮಂತ್ರಿಗಳಿಗೂ ಹೇಳಿದ್ದೇವೆ. ರೂಮುಗಳನ್ನು ಕೊಟ್ಟಿಲ್ಲ. 9 ತಾಲ್ಲೂಕಿನ ಮಕ್ಕಳು ಅಲ್ಲಿ ಬರುತ್ತಾರೆ. ಇದರಲ್ಲಿ ಎಂ.ಎ., ಬಿ.ಎ., ಬಿ.ಎಸ್.ಸಿ., ಬಿ.ಕಾಂ., ಇದೆ. ಈ ಎರಡೂ ವಿಚಾರದಲ್ಲಿ ತಾವು ಅದನ್ನು ಸೇರಿಸಿ ಹೇಳಿ ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಈ ಹೈದರಾಬಾದ್ ಕರ್ನಾಟಕ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಗುಲಬರ್ಗಾ ಇವರು ಮತ್ತೆ ಎಲ್ಲಾ ಛೇಂಬರ್ ಆಫ್ ಕಾಮರ್ಸ್‌ನವರು ಒಂದು ಒತ್ತಾಯವನ್ನು ತರುತ್ತಿದ್ದಾರೆ. ಭತ್ತ, ಗೋಧಿ, ಅಕ್ಕಿ, ಬೇಳೆಕಾಳು, ಮೈದಾ ಈ ವಸ್ತುಗಳನ್ನು ವ್ಯಾಟ್‌ನಿಂದ 1.4.06. ರಿಂದ 30.9.2006 ರವರೆಗೆ ವಿನಾಯಿತಿಯನ್ನು ಕೊಟ್ಟಿದ್ದೇವೆ. ಇನ್ನೂ ಆರು ತಿಂಗಳೂ ಇದನ್ನು ವಿಸ್ತರಣೆ ಮಾಡಿದರೆ ನಮ್ಮ ರೈತರಿಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಈ ಒಂದು ಒತ್ತಾಯವಿಟ್ಟು ಆ ಅವಧಿಯನ್ನು ಸೆಪ್ಟಂಬರ್‌ನಿಂದ ಮಾರ್ಚ್‌ನವರೆಗೆ 31.3.2007 ರವರೆಗೆ ವಿಸ್ತರಣೆ ಮಾಡಿರುವುದರಿಂದ ನಾನು ವಿಸ್ತರಣೆ ಮಾಡಿದ್ದೇನೆಂದು ಈಗ ಅನೌನ್ಸ್‌ಮೆಂಟ್‌ನಲ್ಲಿ ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, 2006–07ನೇ ಸಾಲಿನ ಈ ಪೂರಕ ಅಂದಾಜುಗಳ ಮೇಲೆ ಬಹಳ ಗಂಭೀರವಾದಂಥ ಚರ್ಚೆಯಾಗಿದೆ. ಈ ಪೂರಕ ಅಂದಾಜು 1409 ಕೋಟಿ ರೂ.ಗಳ ಹೆಚ್ಚಿರುವ ಬಗ್ಗೆ ಒಂದು ರೀತಿಯ ಅಸಮಾಧಾನವನ್ನು ನಮ್ಮ ಅನೇಕ ಸದಸ್ಯರು ವ್ಯಕ್ತಪಡಿಸಿದ್ದಾರೆ. ನಾನು ಇದನ್ನು ಗಂಭೀರವಾಗಿ ಗಮನಿಸಿದ್ದೇನೆ. ಸನ್ಮಾನ್ಯ ಧರಂಸಿಂಗ್‌ರವರು, ಖರ್ಗೆಯವರು, ಶ್ರೀ ಕೃಷ್ಣಪ್ಪನವರು, ರಮೇಶ್‌ಕುಮಾರ್, ವಾಟಾಳ್‌ನಾಗರಾಜ್, ಮಾಧುಸ್ವಾಮಿಯವರು, ದೇಶಪಾಂಡೆಯವರು ಹಾಗೂ ಇನ್ನೂ ಅನೇಕ ಹಿರಿಯ ಸದಸ್ಯರು ಟೀಕೆ ಮಾಡಿದ್ದಾರೆ ಹಾಗೆಯೇ ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಈ ಹಿರಿಯ ಅನುಭವಿ ಸದಸ್ಯರ ಸಲಹೆ, ಟೀಕೆಗಳನ್ನು ನಾನು ಮುಕ್ತ ಮನಸ್ಸಿನಿಂದ ಸಕಾರಾತ್ಮಕವಾಗಿ ತೆಗೆದುಕೊಂಡಿದ್ದೇನೆ. ಮುಂಬರುವ ದಿನಗಳಲ್ಲಿ ಈ ಸಲಹೆ ಸೂಚನೆಗಳೂ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಸಹಕಾರಿಯಾಗುತ್ತದೆಂದು ನಾನಾದರೂ ಭಾವಿಸುತ್ತೇನೆ. ಅನಿರೀಕ್ಷಿತ ವೆಚ್ಚಗಳಿಗೆ ಆಗಿರುವ ಹಣವನ್ನು ಸಾದಿಲ್ವಾರು ನಿಧಿಗೆ ಮರುಭರ್ತಿ ಮಾಡಲು ಮತ್ತು ಹೊಸ ಕಾರ್ಯಕ್ರಮಗಳಿಗೆ ಅಗತ್ಯವಾದಂಥ ಹಣವನ್ನು ಒದಗಿಸಿಕೊಡುವುದಕ್ಕೆ ಸದನದ ಅನುಮೋದನೆಯನ್ನು ಕೋರುವುದು ಪದ್ಧತಿ, ನಾನೂ ಕೂಡ ಹಿಂದೆ ಯಾವರೀತಿ ನಡೆದುಕೊಂಡು ಬಂದಿದೆ, ಅದೇ ಮಾದರಿಯಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಿದ್ದೇನೆ. ಪ್ರಮುಖವಾದ ಎಲ್ಲಾ ವಿಷಯಗಳಿಗೆ ನಾನು ಉತ್ತರಿಸಲಿಕ್ಕೆ ಹೋಗದೇ ಒಂದು ಮಾತನ್ನು ಮಾತ್ರ ಹೇಳುತ್ತೇನೆ. Revenue deficit ಆಗುವಂಥ ಪ್ರಶ್ನೆಯೇ ಇಲ್ಲ. ಓವರ್ ಡ್ರಾಫ್ಟ್ ನನ್ನ ಕಾಲದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈ Revenue deficit 3% ಜಿ.ಡಿ.ಪಿ. ಗಿಂತ ಕಡಿಮೆಯಿದೆ. 2.85% ಇದೆಯೆಂದು ಬಹಳ ಸಂತೋಷದಿಂದ ಹೇಳಲಿಕ್ಕೆ ಇಚ್ಛಿಸುತ್ತೇನೆ, ಜಿ.ಡಿ.ಪಿ. ಗಿಂತ 2.8 ಗ್ರೋತ್ ಇದೆಯೆಂದು

ಹೇಳಲಿಚ್ಛಿಸುತ್ತೇನೆ. ಈ ಬಜೆಟ್ ಮಂಡನೆ ಮಾಡುವಂಥ ಕಾಲದಲ್ಲಿ ಯಾವ ಒಂದು ಕಾರ್ಯಕ್ರಮಕ್ಕೆ ಹಣವನ್ನು ಘೋಷಣೆ ಮಾಡಿದ್ದೇವೆ, ಒಂದು ಕಾರ್ಯಕ್ರಮಕ್ಕೂ ಹಣದ ಕೊರತೆಯಾಗದಂತೆ ನೀವೇನು ಸಲಹೆ ಕೊಟ್ಟಿದ್ದೀರಿ ಅದರ ಬಗ್ಗೆ ಕಟ್ಟೆಚ್ಚರ ವಹಿಸಿ ಕಾರ್ಯಕ್ರಮವನ್ನು ಘೋಷಣೆ ಮಾಡಿರುವುದನ್ನು ಅನುಷ್ಠಾನಕ್ಕೆ ತರುತ್ತೇವೆ. ಈ ಭರವಸೆಯನ್ನು ಈ ಮನೆಯಲ್ಲಿ ನಾನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಸಾಧ್ಯವಾದ ಮಟ್ಟಿಗೂ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಹಳೆಯ ಬಿಲ್ಲುಗಳನ್ನು ಪಾವತಿಸಿ ಹೊಸ ಕಾಮಗಾರಿಗಳು ಸ್ಥಗಿತ ಆಗದ ರೀತಿಯಲ್ಲಿ ಕೆಲಸವಾಗಬೇಕೆಂಬ ಕಳಕಳಿಯಿಂದ ದಿಟ್ಟ ಹೆಜ್ಜೆಯನ್ನು ನಾವಿಡುವ ಪ್ರಯತ್ನವನ್ನು ಮಾಡಿದ್ದೇನೆ. ನಮ್ಮ ಶಾಸಕರಲ್ಲಿ ನಾನು ವಿನಂತಿಸುವುದಿಷ್ಟೆ, ಆಯವ್ಯಯದಲ್ಲಿ ಹೇಳಿರುವಂಥ ಕಾರ್ಯಕ್ರಮಕ್ಕೆ ಬಹುತೇಕ ಸರ್ಕಾರಿ ಆಜ್ಞೆ ಹೊರಡಿಸಿದೆ, ಅಧಿಕಾರಿಗಳ ಆಲಸ್ಯದಿಂದ ಆ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರಲಿಲ್ಲ, ಆದರೆ ಮುಂದೆ ಆ ರೀತಿಯಾಗಬಾರದೆನ್ನುವ ದೃಷ್ಟಿಯಿಂದ ಬೆನ್ನು ಹತ್ತಿ ಆ ಕಾರ್ಯಕ್ರಮಗಳನ್ನು ಏನು ಘೋಷಣೆ ಮಾಡಿ ಸರ್ಕಾರಿ ಆಜ್ಞೆ ಹೊರಡಿಸಿದ್ದೇವೆ. ಹಣ ಬಿಡುಗಡೆ ಮಾಡಿದ್ದೇವೆ, ಅದು ಆಗುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಒಟ್ಟಾರೆ ಪ್ರಯತ್ನವಾಗಬೇಕು. ಆ ದಿಕ್ಕಿನಲ್ಲಿ ಒಟ್ಟಾರೆ ಪ್ರಯತ್ನ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವ ಕಾಲದಲ್ಲಿ ಈ ಹೆಚ್ಚುವರಿ ಹಣವನ್ನು ಎಲ್ಲಿಂದ ತರುತ್ತೀರಿ? ಹೇಗೆ ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಎತ್ತಿದರು. ನಾನು ಪ್ರಾರಂಭದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದೇನೆ. 2005–06ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ವಿತ್ತೀಯ ಸುಧಾರಣೆಗಾಗಿ 357 ಕೋಟಿ ರೂಪಾಯಿಗಳ ಬಡ್ಡಿಯನ್ನು ನಾವು ಪಾವತಿಸಬೇಕಾಗಿಲ್ಲ, ಈ ಬಗ್ಗೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಈ 357 ಕೋಟಿ ರೂಪಾಯಿಗಳನ್ನು 2006–07ನೇ ಸಾಲಿನಲ್ಲಿ ಕರ್ನಾಟಕ ಕೇಂದ್ರ ಸರ್ಕಾರಕ್ಕೆ ನೀಡುತ್ತಿದ್ದ ಬಡ್ಡಿ ಹಣಕ್ಕೆ ಚುಕ್ತಾ ಮಾಡಿಕೊಂಡಿದೆ, ಆದ್ದರಿಂದ 357 ಕೋಟಿ ರೂ. ರಾಜ್ಯ ಸರ್ಕಾರ ನೀಡಬೇಕಾಗಿಲ್ಲ. ಈ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳಲು ನಮಗೆ ಅನುಕೂಲವಾಗುತ್ತದೆ. ಮತ್ತೆ 2005–06ನೇ ಸಾಲಿನಲ್ಲಿ ಮೌಲ್ಯವರ್ಧಿತ ತೆರಿಗೆ ನಷ್ಟದ ಮೊತ್ತ 251 ಕೋಟಿ ರೂ. ಗಳನ್ನು ಕೇಂದ್ರ ಸರ್ಕಾರ 2006–07ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವುದರಿಂದ 2006–07ರ ಆಯವ್ಯಯ ಮಾಡುವಾಗ ಇದು ಹೊಸ ಸಂಪನ್ಮೂಲವಾಗಿ ಪರಿಗಣಿಸಲಾಗುವುದು. 2005–06ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಪ್ರಕೃತಿ ವಿಕೋಪ ನಿಧಿಯಿಂದ 158.18 ಕೋಟಿ ರೂ. ಗಳನ್ನುವಾಪಸ್ ಪಡೆದಿತ್ತು. ಇದು ಸರಿಯಾದ ಕ್ರಮವಲ್ಲವೆಂದು ನಾವು ಕೇಂದ್ರದೊಡನೆ ವ್ಯವಹರಿಸಿದ ಮೇಲೆ 2006–07ರ ಸಾಲಿನಲ್ಲಿ ಈ ಹಣವನ್ನು ಬಿಡುಗಡೆ ಮಾಡಿದ್ದಾರೆ. ಇದರಿಂದ ನಮ್ಮ ಸಂಪನ್ಮೂಲ ಲಭ್ಯತೆಗೆ ಅನುಕೂಲವಾಗಿದೆ. ಇನ್ನು ಚರ್ಚೆಯಾಗಿರುವ ವಿಷಯಗಳಲ್ಲಿ ಡಾ: ನಂಜುಂಡಪ್ಪ ವರದಿ ಅನುಷ್ಠಾನದ ಬಗ್ಗೆ ಮತ್ತು ಬರಗಾಲ ಪರಿಹಾರದ ಬಗ್ಗೆ ನಾಳೆ ಚರ್ಚೆಯಾಗಿ ನಾನು ಉತ್ತರ ಕೊಡುವಾಗ ನಿಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಮಾಡುವೆನು. ಒಂದು ಪ್ರಮುಖ ಅಂಶ, ಕಳೆದ ವರ್ಷ ತೆರಿಗೆ ಸಂಗ್ರಹಣೆಯಲ್ಲಿ April to Augustವರೆಗೆ ಪ್ರತಿ ತಿಂಗಳೂ ಸರಾಸರಿ 300 ಕೋಟಿ ರೂ. ಹೆಚ್ಚು ಸಂಗ್ರಹವಾಗಿದೆ. ಉದಾ: 2005–06ರಲ್ಲಿ April to July 5752.81 ಕೋಟಿ ರೂ. ತೆರಿಗೆ ಸಂಗ್ರಹವಾಗಿದ್ದರೆ ಇದೇ ಅವಧಿಯಲ್ಲಿ 7195.32 ಕೋಟಿ ರೂ ಸಂಗ್ರಹವಾಗಿದೆ. ಅಂದರೆ 1443

ಇತ್ತು ಈ ವರ್ಷ 4 ಸಾವಿರ ಕೋಟಿ ರೂ. ಹೆಚ್ಚು ಸಂಗ್ರಹಿಸುವ ಗುರಿ ಹಾಕಿ ಕೊಂಡಿದ್ದೇವೆ. ಅದೇ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಸಹ ಆಗುತ್ತಿದೆ ಎಂದು ಸಂತೋಷದಿಂದ ಹೇಳಬಯಸುತ್ತೇನೆ: Medical Colleges ಬಗ್ಗೆ ಚರ್ಚೆಯಾಗುವಾಗ ಒಂದು ವಿಷಯ ಬಂತು. 2005–06ರಲ್ಲಿ 6 Medical Collegesಗೆ ಇಟ್ಟಿದ್ದ ಹಣ 30 ಕೋಟಿ ರೂ. ಯಾದರೂ ವರ್ಷಾಂತ್ಯಕ್ಕೆ 91 ಕೋಟಿ ರೂ. ನಾವು ನೀಡಿದ್ದೇವೆ. ಮಂಡ್ಯ ಮತ್ತು ಬೆಳಗಾವಿ ಕಾಲೇಜುಗಳು ಪ್ರಾರಂಭವಾಗಿವೆ. 2006–07ರ ಸಾಲಿಗೆ 39.28 ಕೋಟಿ ರೂ. ಇಟ್ಟಿದ್ದೇವೆ. ಆದರೆ 51 ಕೋಟಿ ರೂಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಎರಡನೇ ಹಂತದಲ್ಲಿ ಒಟ್ಟು 309 ಕೋಟಿ ರೂ. ಅಂದಾಜುಗಳಿಗೆ Cabinet ಮಂಜೂರಾತಿ ನೀಡಿದ್ದೇವೆ. ಇದರಿಂದ ಹಾಸನ ಶಿವಮೊಗ್ಗಕ್ಕೆ ಮಾತ್ರವಲ್ಲ ಉಳಿದ ಕಾಲೇಜುಗಳಿಗೂ ಕೊಡುತ್ತೇವೆ, ಯಾರಿಗೂ ಸಂಶಯ ಬೇಡ. ಇನ್ನೊಂದು ಗಂಭೀರ ವಿಷಯವನ್ನೂ ಸದಸ್ಯರು ಪ್ರಸ್ತಾಪಿಸಿದರು. ರಾಜ್ಯದ ರೈತರಿಗೆ 4% ರಂತೆ ಬಡ್ಡಿ ಕೊಟ್ಟಿದ್ದೀರಲ್ಲಾ ಯಡಿಯೂರಪ್ಪನವರೇ 2006ರ ಮಾರ್ಚಿ ಕೊನೆಯೊಳಗೆ ಅವರು ಕಟ್ಟದೇ ಇದ್ದರೆ ಪ್ರಾರಂಭದಿಂದ ಹೆಚ್ಚುವರಿ ಬಡ್ಡಿ ಕಟ್ಟಬೇಕಾಗುತ್ತದೆ ಇದು ಸರಿಯಲ್ಲ ಅಂತ ವೈಯಕ್ತಿಕವಾಗಿ ಸಿಕ್ಕಿದಾಗ ಬಹಳ ಜನ ಶಾಸಕರು ಹೇಳಿದ್ದರು. ಆದ್ದರಿಂದ 2005–06ರಲ್ಲಿ ಬೆಳೆ ಸಾಲ ತುಂಬಿದ ನಂತರ ನಾವು ಆ ರೂಲನ್ನು apply ಮಾಡಿದ್ದೇವೋ ಅದೇ ರೀತಿ 4% ಬಡ್ಡಿಯನ್ನು 31–3–2007ರವರೆಗೆ ಮುಂದುವರಿಸುತ್ತೇವೆ ಅನಂತರ ಬೇಕಾದರೆ ಹೆಚ್ಚು ಬಡ್ಡಿ ಹಾಕೋಣ. BPL Card ಬಗ್ಗೆ ಬಹಳ ಸದಸ್ಯರು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಆ ಸರ್ಕಾರ ಈ ಸರ್ಕಾರ ಅನ್ನುವುದಕ್ಕಿಂತ ಇದರಲ್ಲಿ ಗೊಂದಲ ಇರುವುದು ನಿಜ, ಮುಖ್ಯಮಂತ್ರಿಗಳು Deputy Commissioners CEOಗಳ ಸಭೆ ಕರೆದಾಗ ಬಿಚ್ಚು ಮನಸ್ಸಿನ ಚರ್ಚೆಯಾಯಿತು. ಅಧಿಕಾರಿಗಳನ್ನು ದೂಷಿಸುವುದಕ್ಕಿಂತ ನಾವು ಕೊಟ್ಟಿರುವ, ಸುತ್ತೋಲೆಯ ಕೆಲವು Conditions ಬಗ್ಗೆ ಮನಬಂದಂತೆ ಅಧಿಕಾರಿಗಳು ಸರ್ವೆ ಕಾರ್ಯ ಮಾಡಿದ್ದಾರೆ. ಇದರಿಂದ ಬಹಳ ಕಡು ಬಡವರಿಗೆ ಯಾರಿಗೆ BPL Cards ಸಿಗಬೇಕಾಗಿತ್ತೋ ಅವರಿಗೆ ಸಿಕ್ಕಿರಲಿಲ್ಲ. ನಾಳೆ Cabinet ನಲ್ಲೂ ಚರ್ಚೆ ಮಾಡುತ್ತೇವೆ. ಈ ರಾಜ್ಯದ ಯಾವುದೇ ಬಡವ BPL Card ನಿಂದ ವಂಚಿತವಾಗದಂತೆ conditions, ಸಡಿಲಪಡಿಸಿ ಅನುಕೂಲ ಮಾಡಿಕೊಡುವಂತಹ ಪ್ರಯತ್ನ ಮಾಡುತ್ತೇವೆ ಎಂಬ ಭರವಸೆಯನ್ನು ನಿಮಗೆ ಕೊಡುತ್ತಿದ್ದೇನೆ. ಬಹಳಷ್ಟು ವಿಷಯಗಳು ಚರ್ಚೆಯಾದುವು. 2006–07ನೇ ಸಾಲಿನಲ್ಲಿ Scheduled Castes and Schedules Tribes Hostels ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ. ಮಾಡಿರುವ ಒಳ್ಳೆಯ ಕೆಲಸವನ್ನು ನೀವು appreciate ಮಾಡಬೇಕು. ಉದಾಹರಣೆಗೆ 2006–07ರಲ್ಲಿ 50 Scheduled Caste Hostels ನಾವು ಕೊಟ್ಟಿದ್ದೇವೆ. ಹೋದ ವರ್ಷ ಒಂದು ಹಾಸ್ಟೆಲೂ ಕೊಟ್ಟಿರಲಿಲ್ಲ. 50 BCM Hostels ಮಂಜೂರು ಮಾಡಿದ್ದೇವೆ. ಹೋದ ವರ್ಷ ಒಂದು ಹಾಸ್ಟೆಲೂ ಕೊಟ್ಟಿರಲಿಲ್ಲ. 10 ST Hostels ಕೊಟ್ಟಿದ್ದೇವೆ. ಹೋದ ವರ್ಷ ಕೇವಲ 4 ಕೊಡಲಾಗಿತ್ತು. ಇಷ್ಟು ದೊಡ್ಡ ಪ್ರಮಾಣದಲ್ಲಿ hostelsಗೆ ಮಂಜೂರಾತಿ ಕೊಟ್ಟಿದ್ದೇವೆ. ತೆರೆದಿದ್ದೇವೆ. Scholarship, SC ಗಳಿಗೆ 9 ಕೋಟಿ ರೂ. pre matric ಗೆ ಕೊಟ್ಟಿದ್ದೇವೆ. 28 ಕೋಟಿ ರೂಗಳನ್ನು

10.30. P.M.

post matricಗೆ ಬಿಡುಗಡೆ ಮಾಡಿದ್ದೇವೆ. 4.8 ಕೋಟಿ ರೂ.ಗಳ fee reimbursementಗೂ ಕೊಟ್ಟಿದ್ದೇವೆ. 9 ಕೋಟಿ ರೂ. ಗಳನ್ನು post matric ಬಿಡುಗಡೆ ಮಾಡಿದ್ದೇವೆ. 3.5 ಕೋಟಿ ರೂ.ಗಳನ್ನು prematricಗೆ ಬಿಡುಗಡೆ ಮಾಡಿದ್ದೇವೆ. ಬಾಕಿ ಇದ್ದುದ್ದನ್ನೋ ಹೊಸದಾಗಿ ಕೊಡಬೇಕಾದುದ್ದನ್ನೋ ಕೊಡುವ ಪ್ರಯತ್ನ ಮಾಡಿದ್ದೇವೆ. ಶಿಕ್ಷಣ ಕ್ಷೇತ್ರಕ್ಕೆ ಹಿಂದೆ ಯಾವುದೇ ಸರ್ಕಾರ ಮಾಡದಿದ್ದಷ್ಟು ಒತ್ತು ಕೊಟ್ಟಿದ್ದೇವೆ ಎಂಬುದರ ಅಂಕಿ ಅಂಶದ ಜೊತೆ ಹೇಳುತ್ತಿದ್ದೇನೆ. Primary Schools upgrade 2004–05ರಲ್ಲಿ 204 ಕೊಟ್ಟಿದ್ದರು. 2005–06ರಲ್ಲಿ 210 ಕೊಟ್ಟಿದ್ದರು. ನಾವು 716 Primary Schools ತೆರೆದಿದ್ದೇವೆ. Primary Schools ಮಾಡಿದ್ದೇವೆ. 2004–05ರಲ್ಲಿ 408 ಮಾಡಿದ್ದರು. 2005–06ರಲ್ಲಿ 47 ಮಾಡಿದ್ದರು. 2006–07ರಲ್ಲಿ 341 ನಾವು ಮಾಡಿದ್ದೇವೆ. 2004–05ರಲ್ಲಿ High Schools ಕೊಟ್ಟಿರಲಿಲ್ಲ, 2005–06ರಲ್ಲಿ 127 ಕೊಟ್ಟಿದ್ದರು. ಈ ಸಾರಿ 385 ಕೊಟ್ಟಿದ್ದೇವೆ, ಇನ್ನೂರು ಕೊಡಲು ಸಿದ್ಧತೆ ಮಾಡಿದ್ದೇವೆ. 2004–05ರಲ್ಲಿ Junior Colleges ಕೊಟ್ಟಿರಲಿಲ್ಲ. 2005–06ರಲ್ಲಿ 22 ಕೊಟ್ಟಿತ್ತು. ಈ ಸಾರಿ 130 Junior Colleges ಕೊಟ್ಟಿದ್ದೇವೆ. First grade colleges, 2004–05ರಲ್ಲಿ ಕೊಟ್ಟಿಲ್ಲ. 05–06ರಲ್ಲಿ 2 ಕೊಟ್ಟಿದ್ದಿರಿ, ನಾವು ಈ ಸಾರಿ 14 colleges ಕೊಟ್ಟಿದ್ದೇವೆ. ಗ್ರಾಮ ಪಂಚಾಯಿತಿಯ Librarieಗಳಿಗೆ ಹಿಂದೆ ಎರಡು ವರ್ಷಗಳು ಕೊಟ್ಟಿರಲಿಲ್ಲ. ನಾವು 2463 ಲೈಬ್ರರಿಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಹೀಗೆ ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ನಿರೀಕ್ಷೆಗೆ ಮೀರಿ ಮಂಜೂರಾತಿಯನ್ನು ಕೊಟ್ಟು ಅದಕ್ಕೆ ಹೆಚ್ಚು ಒತ್ತು ಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಮೊರಾರ್ಜಿ ಶಾಲೆಗಳು, 2004–05ರಲ್ಲಿ SCಗೆ 10 ಕೊಟ್ಟಿದ್ದರು, STಗೆ 5 ಕೊಟ್ಟಿದ್ದರು, BCಗೆ 11 ಕೊಟ್ಟಿದ್ದರು ಮತ್ತು Minoritiesಗೆ 5 ಕೊಟ್ಟಿದ್ದರು, ಒಟ್ಟು 31 ಕೊಟ್ಟಿದ್ದರು. 2005–06ರಲ್ಲಿ SCಗೆ 10 ಕೊಟ್ಟಿದ್ದರು, STಗೆ 9 ಕೊಟ್ಟಿದ್ದರು, BCಗೆ 14 ಕೊಟ್ಟಿದ್ದರು ಮತ್ತು Minoritiesಗೆ 13 ಕೊಟ್ಟಿದ್ದರು, ಒಟ್ಟು 46 ಕೊಟ್ಟಿದ್ದರು. ಈ ಬಾರಿ ಅಂದರೆ 2006–07ಕ್ಕೆ SCಗೆ 20, STಗೆ 5, BCಗೆ 20 ಮತ್ತು Minorities ಗೆ 5, addition ಆಗಿ 25ನ್ನು ಕೊಟ್ಟು, ಒಟ್ಟು 75 ಮೊರಾರ್ಜಿ ಶಾಲೆಗಳಿಗೆ ನಾವು ಈ ವರ್ಷ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಅಂದರೆ ಹಿಂದಿನದಕ್ಕಿಂತ ನಾವು ಹೆಚ್ಚುವರಿಯಾಗಿ ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಅದೇ ರೀತಿ ಗಂಗಾ ಕಲ್ಯಾಣ ಯೋಜನೆಯಲ್ಲಿ SC/STಗೆ ನೀವೇನು ಮಾಡಿದ್ದೀರಿ ಎಂಬ ಪ್ರಶ್ನೆಗಳು ಇಲ್ಲಿ ಬಂದವು ಸುಮಾರು 8.5 ಕೋಟಿ ರೂ.ಗಳನ್ನು 2005–06ರಲ್ಲಿ ಕೊಟ್ಟಿದ್ದಿರಿ. ಈ ಬಾರಿ 35.40 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. STಗೆ ಹೋದ ಸಾರಿ 8.5. ಕೋಟಿ ರೂ.ಗಳನ್ನು ಕೊಟ್ಟಿದ್ದಿರಿ. ನಾವು 34.50 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಈಗ 4–5 ದಿವಸದ ಹಿಂದೆ ನಮ್ಮ ಶಿವಮೊಗ್ಗದಲ್ಲಿ ಅಪರೂಪದ ಕಾರ್ಯಕ್ರಮವೊಂದು ಆಯಿತು. Minorities Developmentಗಾಗಿ ಹಮ್ಮಿಕೊಂಡಿರುವ Programme ಅನ್ನು implement ಮಾಡುವುದು

ಹೇಗೆ ಎಂಬ ಬಗ್ಗೆ ಕಾರ್ಯಕ್ರಮ ನಡೆಯಿತು. 4–5 ಸಾವಿರ ಜನ ಅಲ್ಪಸಂಖ್ಯಾತ ಮುಸ್ಲಿಂ ಬಾಂಧವರು ಸೇರಿದ್ದರು. ಈ Minority ಸಮೂಹಕ್ಕೆ ನಾವೇನು ಆಯವ್ಯಯದಲ್ಲಿ ಕೊಟ್ಟಿದ್ದೇವೆ, ಆ ಕಾರ್ಯಕ್ರಮಗಳನ್ನು implement ಮಾಡುವುದು ಹೇಗೆ ಎಂಬುದನ್ನು ಚರ್ಚೆ ಮಾಡುವುದಕ್ಕೋಸ್ಕರ ಅಲ್ಲಿ 4–5 ಸಾವಿರ ಜನ ಸೇರಿದ್ದರು. ನಾನೇ ಹೋಗಿ ಅದನ್ನು ಉದ್ಘಾಟನೆ ಮಾಡಿದೆ. ನಾನೇಕೆ ಇದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಹಿಂದೆ 40 ಕೋಟಿ ರೂಪಾಯಿಗಳನ್ನು ನೀವು Minorities ಗೋಸ್ಕರ ಕೊಟ್ಟಿದ್ದರೆ, ನಾವು ಎಲ್ಲಾ ಸೇರಿ ಈ ಬಾರಿ 140 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಏಕೆಂದರೆ, ಎಲ್ಲೋ ಒಂದು ಕಡೆ ವಾಸ್ತವಿಕ ಸತ್ಯ ಸಂಗತಿಗಳು Minoritiesಗೂ ಗೊತ್ತಾಗಬೇಕು ಮತ್ತು ಈ ಸರ್ಕಾರದ ಇಚ್ಛಾ ಶಕ್ತಿಗಳೇನು? ಯಾವ ರೀತಿ ನಾವು ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆಯೂ ತಾವು ಗಮನಿಸಬೇಕು. ಇನ್ನು ರೈತರ ಬಡ್ಡಿ ಮನ್ನಾ ಮಾಡುವುದರ ಬಗ್ಗೆ ನಾವು ಹೋದ ವರ್ಷದ್ದು 2005–06ನೇ ಸಾಲಿನಲ್ಲಿ ಒಟ್ಟು 550 ಕೋಟಿ ರೂಪಾಯಿಗಳ ಬಡ್ಡಿ ಬಾಬ್ತು ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಈ ಬಾರಿ ಈಗಾಗಲೇ ನಾವು 100 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. 1750 ಕೋಟಿ ರೂ.ಗಳನ್ನು ಇದುವರೆಗೂ ಸಹಕಾರಿ ಸಂಘಗಳಿಂದ 4% interest ನಲ್ಲಿ ಸಾಲವನ್ನು ಕೊಡುವಂತಹ ಪ್ರಯತ್ನ ಮಾಡಿದ್ದೇವೆ. ಹೀಗೆ ನಾವು ರೈತ ಸಮೂಹದ ಬಗ್ಗೆ ನಾವು ಶಕ್ತಿ ಮೀರಿ ಕೊಟ್ಟಿದ್ದೇವೆ. ಎನ್ನುವಂತಹ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ನಾಳೆ ಸವಿಸ್ತಾರವಾಗಿ ಈ ಬರದ ಬಗ್ಗೆ, ಅತಿವೃಷ್ಟಿ ಬಗ್ಗೆ ಮತ್ತು ಡಾ: ನಂಜುಂಡಪ್ಪ ವರದಿ ಬಗ್ಗೆ ಚರ್ಚೆಯಾದಾಗ ಪೂರ್ಣ ವಿವರ ಕೊಡುತ್ತೇನೆ. ನಾನು ವಿವರವನ್ನು ಕೊಡುವುದಾದರೆ ಇನ್ನು ಅರ್ದ–ಮುಕ್ಕಾಲು ಗಂಟೆ ಸಾಕಷ್ಟು ವಿವರಗಳನ್ನು ಕೊಡಬಹುದು. ಬಹುಶ: ನಾನು ಇಷ್ಟೇ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಡಾ: ನಂಜುಂಡಪ್ಪ ವರದಿ ಆಧಾರದ ಮೇಲೆ ಉತ್ತರ ಕರ್ನಾಟಕಕ್ಕೆ ನಾವು ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ? ಏನು ಕಾರ್ಯಕ್ರಮಗಳನ್ನು ಮಾಡಿದ್ದೇವೆ ಅಥವಾ ಇನ್ನೂ ಮಾಡುತ್ತಿದ್ದೇವೆ ಎನ್ನುವುದರ ವಿವರಗಳನ್ನು ನಿಮಗೆ ಕೊಟ್ಟರೆ ಇನ್ಯಾರೂ ಈ ಒಂದು ಇಚ್ಛಾಶಕ್ತಿಯನ್ನು ಪ್ರಕಟ ಮಾಡಲಿಕ್ಕೆ ಆಗಿರಲಿಲ್ಲ ಎಂಬುದು ನಿಮಗೆ ಗೊತ್ತಾಗುತ್ತದೆ. ಮೂಗಿಗೆ ಬರೀ ತುಪ್ಪ ಹಚ್ಚಿಲ್ಲ, ಹಣ ಬಿಡುಗಡೆ ಮಾಡಿದ್ದೇವೆ, ಅಭಿವೃದ್ಧಿ ಕಾರ್ಯಕ್ರಮಗಳು ಪ್ರಾರಂಭವಾಗಿವೆ. ಬರುವಂತಹ ದಿವಸಗಳಲ್ಲಿ ಈ ನಂಜುಂಡಪ್ಪ ವರದಿಯ ಆಧಾರದ ಮೇಲೆ ನೀವು ಚರ್ಚೆಯನ್ನು ಮಾಡಿದ ಮೇಲೆ, ಈಗೇನು ಮಾಡಬಹುದು? ಮುಂದೆ ಏನು ಮಾಡಬಹುದು? ಮುಂದಿನ ಬಜೆಟ್‌ನಲ್ಲಿ ಏನು ಮಾಡಬಹುದು? ಇದನ್ನು ಸವಿಸ್ತಾರವಾಗಿ ಆ ಸಮಯದಲ್ಲಿ ನಾನು ಉತ್ತರ ಕೊಡುವಂತಹ ಪ್ರಯತ್ನವನ್ನು ಮಾಡುತ್ತೇನೆ. ಈ ಪೂರಕ ಅಂದಾಜುಗಳಿಗೆ ಈ ಸದನ ಮಂಜೂರಾತಿಯನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ. ದಿನಾಂಕ 31.03.2007ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 5, 7ರಿಂದ 15, 17ರಿಂದ 24 ಹಾಗೂ 26ರಿಂದ 28 ಇವುಗಳಿಗೆ ಸಂಬಂಧಿಸಿದಂತೆ

ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರಾದ ಮತ್ತು ಭರಿಸಲು ಪೂರಕ ಅಂದಾಜುಗಳಿಗೆ ಸೇರಿಸಲಾದ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಈ ಸಭೆ ಮಂಜೂರು ಮಾಡಬೇಕೆಂದು ನಾನು ಸದನವನ್ನು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚಿಗೆ ವಿವರಗಳನ್ನು ಕೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾಳೆ ನಾನು ಉತ್ತರ ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ಇವತ್ತೂ ಕೂಡ ಕೆಲವು ವಿವರಗಳನ್ನು ಅವರು ಕೊಟ್ಟಿದ್ದಾರೆ. ನಿಮಗೇನು ಹೇಳಬೇಕಾಗಿತ್ತೋ ಅದನ್ನು ಬಜೆಟ್ಟಿನಲ್ಲಿ ಹೇಳಿದ್ದಿರಿ. ನಿಮಗೆ ಹೇಳಬೇಕಾದುದೆಲ್ಲವನ್ನೂ ಕೂಡ ಈಗಲೂ ಕೂಡ ಹೇಳಿದಿರಿ. Minorities ಬಗ್ಗೆ. SC/ST ಬಗ್ಗೆ ಹೆಣ್ಣುಮಕ್ಕಳ ಬಗ್ಗೆ, ಭಾಗ್ಯಲಕ್ಷ್ಮಿಯಂತಹ ಸ್ವಂತ ಕಾರ್ಯಕ್ರಮಗಳ ಬಗ್ಗೆ ಹಾಗೂ ತಮಗೆ ಪ್ರೀತಿ ಇರತಕ್ಕದಲ್ಲರ ಬಗ್ಗೆ ಹೇಳಿದಿರಿ. ನಾವೂ ಕೂಡ ಅದೆಲ್ಲದರ ಬಗ್ಗೆ ಕೇಳಿದ್ದೇವೆ. ಇಲ್ಲಿ 1490 ಕೋಟಿ ರೂಪಾಯಿಗಳು ಎಲ್ಲಿಂದ ಬರುತ್ತದೆ ಎಂಬ ಬಗ್ಗೆ ನೀವು explanation ಕೂಡ ನೀವು ಕೊಟ್ಟಿದ್ದಿರಿ. ಒಂದು ಸಂತೋಷ ನನಗೇನಾಯಿತು ಎಂದರೆ, ಇದ್ದಿದ್ದರಲ್ಲೇ ಸಂಗ್ರಹಣೆ ಮಾಡಿ, ಈಗಾಗಲೇ ಅವರು ಹೇಳಿದಂತೆ 250 ಕೋಟಿ ರೂ.ಗಳು flood ಮತ್ತು brought ಗಾಗಿ ಕೇಂದ್ರ ಸರ್ಕಾರದಿಂದ ಬಂದಿದೆ. ಇನ್ನೊಂದು 158 ಕೋಟಿ ರೂ.ಗಳನ್ನು ಪಡೆಯುವ ಬಗ್ಗೆ ಹಿಂದೆಯೇ ಪ್ರಯತ್ನ ನಡೆದಿತ್ತು. ಈಗಿನ ನಮ್ಮ ಗೃಹ ಸಚಿವರು ಕಂದಾಯ ಸಚಿವರಾಗಿದ್ದಾಗ, ಕೇಂದ್ರ ವಾಪಸ್ ತೆಗೆದುಕೊಂಡಂತಹ ಹಣ ಕೊಡಿ ಎಂದು ಬೆನ್ನು ಹತ್ತಲಾಗಿತ್ತು. ಆ ಹಣ ಈಗ ಬಂದಿದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಅದು 158 ಕೋಟಿ ರೂಪಾಯಿಗಳ ಮೊತ್ತವಾಗಿದೆ. ಹೆಚ್ಚು ಕಡಿಮೆ 400–500 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರುತ್ತದೆ. ಇನ್ನೊಂದು 141 ಕೋಟಿ ರೂ.ಗಳು ಮತ್ತು incentives ಇವೆಲ್ಲವೂ ಸೇರಿ ಲೆಕ್ಕ ಹಾಕಿ ಕೊನೆಗೆ ತಾವು ಇಲ್ಲಿಗೆ ಬಂದಿದ್ದೀರಿ, ಸಂತೋಷ. ಅದಕ್ಕೆ ನಮ್ಮದೇನೂ ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ. ಈಗ ಇದಕ್ಕೆ ಹಾಕತಕ್ಕಂಥದ್ದಕ್ಕೆ explanation ಅನ್ನು ತಾವು ಕೊಟ್ಟಿರಿ. ಆದರೆ ಖಂಡಿತವಾಗಿಯೂ ಡಾ: ನಂಜುಂಡಪ್ಪ ವರದಿಯನ್ನು implement ಮಾಡುವುದಕ್ಕೆ ಇದು ಸಾಧ್ಯವಿಲ್ಲ ಅನ್ನತಕ್ಕಂಥದ್ದನ್ನು ತಾವು ಹೇಳಬೇಕಾಗುತ್ತದೆ. ಏಕೆಂದರೆ, ಇದು ನಾಳೆ ನೀವು ಉತ್ತರ ಕೊಡುತ್ತೀರಿ, ಇವತ್ತು ಕೇಳುವುದಕ್ಕೆ ಹೋಗುವುದಿಲ್ಲ. ಅದು ಸುಮ್ಮನೆ ಒಂದು ಹೇಳಿಕೆಯಾಗುತ್ತದೆ ಈ ವರ್ಷ ಹೊರತಾಗಿ ಬೇರೇನೂ ಇಲ್ಲ. ಆದರೆ ಈ planನಲ್ಲೂ ಕೂಡ area development ಗೆ ತಾವು ಹಣ ಕೊಡಬೇಕಾಗಿತ್ತು. ಕೊಡುತ್ತೇನೆ ಎಂದು ತಾವು ಹೇಳಿದ್ದಿರಿ, Hyderabad-Karnataka Development Board ಇರಬಹುದು, ಬಯಲುಸೀಮೆ ಇರಬಹುದು, ಬೇರೆ Board ಗಳಿಗೆ ಸ್ವಲ್ಪ ಹೆಚ್ಚಿನ ಮೊತ್ತವನ್ನು ಕೊಡುತ್ತೇವೆ ಎಂದು ಹೇಳಿ ಕೊಡಲಿಲ್ಲ. ಬಹುಶ: ನಂಜುಂಡಪ್ಪನವರ ವರದಿಯನ್ನೇ ನಾವು implement ಮಾಡುತ್ತೇವೆ ಎಂದು ತಿಳಿದುಕೊಂಡು ತಾವು ಇದಕ್ಕೇನೂ ಅವಕಾಶ ಕೊಟ್ಟಿಲ್ಲವೇನೋ ಗೊತ್ತಿಲ್ಲ. ಅದು ಪ್ರಶ್ನೆ ಇವತ್ತು ತಮ್ಮ ಮುಂದೆ ಇದೆ. ಹೀಗೆ ಹಲವಾರು ವಿಷಯಗಳು ಇದ್ದರೂ ಕೂಡ ಇವತ್ತು ಕೆಲವು ವಿಷಯಗಳನ್ನು

ತಾವು ಪ್ರಸ್ತಾಪ ಮಾಡಿದ್ದಿರಿ. ನಾನು ಒಂದೇ ಒಂದು ಕೇಳಿಕೊಳ್ಳುತಕ್ಕಂಥದ್ದು ಇಷ್ಟೇ. ಯಾವುದಕ್ಕೆ ಆದ್ಯತೆ ಹೆಚ್ಚಿಗೆ ಕೊಡಬೇಕೋ ಅದಕ್ಕೆ priority ಕೊಡುವುದು ಬಹಳ ಮುಖ್ಯ. ನಾವು ಅನೇಕ ಸಾರಿ emotionally ಎಲ್ಲರೂ ಕೂಡ ಹೇಳುತ್ತೇವೆ. But, ಏನಾಗುತ್ತದೆ ಎಂದರೆ ನೀವು ಇಲ್ಲಿ Finance Department ನಲ್ಲಿ ನೂರು Schools ಮಂಜೂರು ಮಾಡಿದ್ದೇವೆ, ಎಪ್ಪತ್ತು ಕಾಲೇಜುಗಳನ್ನು ಮಾಡಿದ್ದೇವೆ, ಎಪ್ಪತ್ತು ಜೂನಿಯರ್ ಕಾಲೇಜುಗಳನ್ನು ಮಾಡಿದ್ದೇವೆ ಎಂದು ನೀವು ಹೇಳುವಂತಹ ಅಂಕಿ ಸಂಖ್ಯೆಗಳು ಇಲ್ಲಿ ಸರಿ. ಆದರೆ ಅದು ಕೆಳಕ್ಕೆ percolate ಆಗುವಾಗ ಸರಿಯಾಗಿ ಪ್ರತಿಯೊಂದು ತಾಲ್ಲೂಕಿಗೆ ಹೋಗುವುದಿಲ್ಲ ಮತ್ತು ಪ್ರತಿ constituency ಗೆ ಇಲ್ಲ. ಈ ತಾರತಮ್ಯ ಸರಿ ಹೋಗದೆ ಇದ್ದಾಗ ಖಂಡಿತವಾಗಿಯೂ ನಾವೆಲ್ಲರೂ agitate ಮಾಡುತ್ತೇವೆ. ನಮ್ಮ ವಾದಕ್ಕೆ ನೀವು ಮಾಡಿಲ್ಲವೇನು?, ಅದಕ್ಕೆ ನಾವೂ ಮಾಡಿದ್ದೇವೆ ಎನ್ನತಕ್ಕಂಥ ಪ್ರತಿವಾದ ಬೇಡ. ಯಾರ್‍ಯಾರು ಏನೇನು ಮಾಡಿದ್ದರೂ ಕೂಡ, ಇಷ್ಟೊಂದು ಅನ್ಯಾಯ ಯಾರೂ ಮಾಡಿರಲಿಲ್ಲ. ಒಂದು ಇದ್ದಲ್ಲಿ ಅವರು ಎರಡನ್ನು ತೆಗೆದುಕೊಂಡಿರಬಹುದು, ಆದರೆ ಒಂದು ಇದ್ದಲ್ಲಿ 10 ಶಾಲೆಗಳು, 3 ಶಾಲೆಗಳು ಕೊಟ್ಟಿರುವುದು ಸರಿಯಲ್ಲ. ನನ್ನದೇ ಉದಾಹರಣೆ ಹೇಳುವುದಾದರೆ, ನನಗೆ 50 ಲಕ್ಷ ರೂ.ಗಳನ್ನು announce ಮಾಡಿದಿರಿ, ಮರು ದಿವಸವೇ withdraw ಮಾಡಿಕೊಂಡಿರಿ. ನನಗೆ ಅರ್ಥವೇ ಆಗಲಿಲ್ಲ. ಅಂದರೆ ನಾನು ನಿಮ್ಮನ್ನು ಮುಜುಗರಕ್ಕೆ ಸಿಲುಕಿಸುತ್ತೇನೆ ಎಂದಲ್ಲ. Issue ಮಾಡಿ, sign ಮಾಡಿ, ಅದನ್ನು withdraw ಮಾಡಿದರು. ನನ್ನಂತೆ ಇನ್ನೂ ಹತ್ತಾರು ಜನ ಇದ್ದಾರೆ, ಅಂದರೆ ಹೀಗೆ ನೀವು ತಾರತಮ್ಯ ಮಾಡಿದರೆ ಅಥವಾ ಪಕ್ಷ ಭೇದ ಮಾಡಿದರೆ, ನಾವು ಎಲ್ಲಿಗೆ ಹೋಗೋಣ ಮತ್ತು ಎಲ್ಲಿ ಮಾತನಾಡೋಣ? ನಾವು ಅದೆಲ್ಲವನ್ನೂ ಈ. ಸದನದಲ್ಲೇ ಮಾತನಾಡಬೇಕಲ್ಲಾ? ಸದನದಲ್ಲೇ ನ್ಯಾಯ ಕೇಳಬೇಕಲ್ಲಾ? ಬೇರೆ ಕಡೆಗೆ ನಾವು ಕೇಳುವುದಕ್ಕಾಗುವುದಿಲ್ಲ. ಇಂತಹವು ಅನೇಕವು ಆಗಿವೆ. ಅವು ರಸ್ತೆಯೇ ಇರಬಹುದು, ಶಾಲೆಯೇ ಇರಬಹುದು, ಆಸ್ಪತ್ರೆಯೇ ಇರಬಹುದು, ಅದಕ್ಕಾಗಿ ದಯವಿಟ್ಟು ನೀವು ಇದಕ್ಕಾಗಿ ಒಂದು High level Committee ಏನಾದರೂ ಮಾಡಿಕೊಂಡು, ಇದು review ಮಾಡಿ. ಇಲ್ಲದಿದ್ದರೆ, ಒಬ್ಬರ ಅಧಿಪತ್ಯದಲ್ಲೇ ಕೊಟ್ಟರೆ ಅವರು tick ಮಾಡುತ್ತಾರೆ. ನಾನು ಕೇಳಿದ್ದು ಏನೆಂದರೆ, Education Minister ಹತ್ತಿರ ಹೋಗುವಂತಹ file, ಇನ್ನೊಬ್ಬರು unconcerned ಒಬ್ಬರ ಹತ್ತಿರ ಹೋಗುತ್ತದಂತೆ. ಅವರು tick ಮಾಡಿದ್ದು ಮಾತ್ರ ಹೊರಗೆ ಜಿ.ಓ. ಆಗಿ ಬರುತ್ತದಂತೆ. ಹೀಗಾದರೆ ಹೇಗೆ? ಹೀಗೆ ಎಂದೂ ಆಗಿಲ್ಲ. ಯಾರ ಕಾಲದಲ್ಲೂ ಆಗಿಲ್ಲ. ಅದಕ್ಕೆ ಯಾವುದಾದರೊಂದು ಅಪವಾದವನ್ನು ಮಾನ್ಯ ಪ್ರಕಾಶ್‌ರವರು ನೆನಪು ಮಾಡಿಕೊಂಡು, ಹುಡುಕಿ ತೆಗೆಯಬಹುದು, ಆದರೆ ಖಂಡಿತವಾಗಿಯೂ ಎಂದೂ ಕೂಡ ಯಾರೂ ಈ ರೀತಿಯಾಗಿ ಇನ್ನೊಬ್ಬರು file ತರಿಸಿಕೊಂಡು, tick ಮಾಡಿ, ಇವನು ನಮ್ಮ ಪಾರ್ಟಿಯವನು, ಅವನು ಬೇರೆ ಪಾರ್ಟಿಯವನು, ಇವನು ಬೇಕಾದವನು, ಇವನು ಬೇಡವಾದವನು, ಈ ರೀತಿಯಾಗಿ ಮಾಡಿದರೆ ಅಭಿವೃದ್ಧಿಯಾಗುವುದಿಲ್ಲ. ದಯವಿಟ್ಟು ಅದರ ಕಡೆಗೆ ಗಮನ ಕೊಟ್ಟು, ಎಲ್ಲರಿಗೂ ಸರಿಸಮಾನವಾಗಿ ಕೊಡತಕ್ಕಂಥದ್ದು ಮಾಡೋಣ. ಹೊರಗಡೆ ಬೇಕಾದರೆ ಹೋರಾಟ ಮಾಡೋಣ. ಈಗ ನೋಡಿ, ನಿಮಗೆ *support* ಮಾಡುವುದಕ್ಕೆ 80% BJP MLA ಇದ್ದಾರೆ, ಬಾಕಿ JD[S]ಯವರೆಲ್ಲಾ ಹೋಗಿದ್ದಾರೆ. Hardly

10% ಮಾತ್ರ ಕುಳಿತಿದ್ದಾರೆ. JD[S]ನವರು ಬೇಕಾದರೆ ಕೈ ಎತ್ತಲಿ, ಎಷ್ಟು ಜನರಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ loyalty ಮೇಲೆ ನೀವು ಏನು ಮಾಡುತ್ತೀರಿ? ನಿಮಗೆ ಬೇಕಾದ MLA ಗಳಿಗೆ ಕೊಟ್ಟು ಬಿಡುತ್ತೀರಿ, ಮಾನ್ಯ ರೇವಣ್ಣ ಬಂದ ಕೂಡಲೇ ಅವರು ಈ ಕಡೆಗೇ ನೋಡುತ್ತಾರೆ, ಯಾರು ಅವರಿಗೆ ಕೂಗುತ್ತಾರೋ, ಅವರಿಗೆ ಅವರು ಕೊಡುತ್ತಾರೆ. ಸ್ವಾಮಿ, ನಾವು ಎಲ್ಲಿ ಹೋಗಬೇಕು? ಇನ್ನು ಮೇಲಾದರೂ ಕೂಡ ಅದನ್ನು ಸರಿಪಡಿಸತಕ್ಕದ್ದನ್ನು ತಾವು ಮಾಡಿ.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು clarification ಕೇಳಬಯಸುತ್ತೇನೆ.

ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನೂ ಕೂಡ clarification ಅನ್ನು ಕೇಳುತ್ತಿದ್ದೇನೆ. ನೇಕಾರರು KSFC ಯಿಂದ ಪಡೆದುಕೊಂಡಿರುವ loan ಮೇಲೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಏನಾದರೂ ಮಜಾ ಮಾಡುತ್ತೀರಾ ಎಂದು ಕೇಳಿದ್ದೆ. ಅದಕ್ಕೆ ತಾವು ಏನನ್ನೂ ಹೇಳಲಿಲ್ಲ. Horticulture ನಲ್ಲಿ ನಮಗೆ ಇವತ್ತು Drip Irrigation Subsidy release ಆಗಿಲ್ಲ. ದಯಮಾಡಿ ತಾವು ಅದನ್ನು release ಮಾಡಿಸಿ. ಅದಲ್ಲದೆ ಕುಡಿಯುವ ನೀರಿಗೆ ದುಡ್ಡು ಕೊಟ್ಟಿಲ್ಲ. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಏನು task force ಮಾಡಿದ್ದೀರಿ, ಅದಕ್ಕೆ ದುಡ್ಡು ಕೊಡುವ ಬಗ್ಗೆಯೂ ತಾವು ಏನನ್ನೂ ಹೇಳಲಿಲ್ಲ. ಏನಾದರೂ ಮಾಡಿ ಅದಕ್ಕೆ ದುಡ್ಡು ಬಿಡುಗಡೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಾಧುಸ್ವಾಮಿಯವರೆ, ತಾವು ಕೊಟ್ಟಂತಹ ಎಲ್ಲಾ ಸಲಹೆಗಳನ್ನೂ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇನೆ. ಆ ಕಡೆಯಿಂದ ಮತ್ತು ಈ ಕಡೆಯಿಂದ ಸಲಹೆಗಳು ಬಂತು. ಆದರೆ ಯಡಿಯೂರಪ್ಪನವರೆ, 10–45 ಗಂಟೆಯಾಯಿತು, short ಆಗಿ ಉತ್ತರ ಕೊಡಿ ಎಂದು ಹೇಳಿದರು. ಆದ್ದರಿಂದ ಈ ರೀತಿ ಉತ್ತರವನ್ನು ಕೊಡಬೇಕಾಯಿತು. ತಾವೇನು ಈಗ ಕೆಲವು ಪ್ರಶ್ನೆಗಳನ್ನು ಹೇಳಿದ್ದೀರಿ, ಅಷ್ಟನ್ನೂ ನಾನು ನೋಟ್ ಮಾಡಿಕೊಂಡಿದ್ದೇನೆ. ಯಾವುದನ್ನು ನಾನು ತತ್‌ಕ್ಷಣಕ್ಕೆ ಮಾಡುತ್ತೇನೆ ಎಂದು ಹೇಳತಕ್ಕ ಸ್ಥಿತಿಯಲ್ಲಿ ಇಲ್ಲ. ಯಾವುದನ್ನು ಮಾಡಬಹುದಾಗಿತ್ತೋ ಅಂತಹ ಒಂದೆರಡನ್ನು ಹೇಳಿದ್ದೇನೆ, ನೀವೇನು ನೇಕಾರರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಮತ್ತು KSFC ಬ್ಯಾಂಕ್‌ನಿಂದ ತೆಗೆದುಕೊಂಡಂತಹ ಸಾಲದ ಬಗ್ಗೆ, ಅವನ ಗತಿಯೇನು ಎಂದು ಪ್ರಸ್ತಾಪ ಮಾಡಿದ್ದೀರಿ. ಇತರ ಅನೇಕ ವಿಷಯಗಳ ಬಗ್ಗೆ ಎಲ್ಲಾ ಪ್ರಮುಖರು ಪ್ರಸ್ತಾಪ ಮಾಡಿದ್ದೀರಿ. ನಾನು ಅದನ್ನು note ಮಾಡಿಕೊಂಡಿದ್ದೇನೆ. ಹಣಕಾಸಿನ ಅನುಕೂಲತೆಗಳನ್ನು ನೋಡಿಕೊಂಡು ಅದಕ್ಕೆ ಏನೇನು ಪರಿಹಾರ ಹುಡುಕಬಹುದು ಎಂದು ನೋಡುತ್ತೇನೆ. ಖಂಡಿತವಾಗಿಯೂ ಪ್ರಾಮಾಣಿಕವಾಗಿ ನೀವು ಹೇಳಿದಂತಹ ಪ್ರಶ್ನೆಗಳೇನಿದೆಯೋ ಅದನ್ನು ಬಗೆಹರಿಸಲಿಕ್ಕೆ ನಾನು ಪ್ರಯತ್ನ ಪಡುತ್ತೇನೆ ಎಂಬ ಭರವಸೆಯನ್ನು ಕೊಡಬಯಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಪೂರಕ ಅಂದಾಜುಗಳ ಮೇಲಿನ ಚರ್ಚೆಗೆ ಉತ್ತರ ಕೊಟ್ಟಿದ್ದಾರೆ. ನಾನು

ತಮ್ಮ ಮೂಲಕ ಅವರಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ಗುಲ್ಬರ್ಗಾ, ಬೆಳಗಾಂ ಮತ್ತು ರಾಜ್ಯದ ಬೇರೆ ಬೇರೆ ಕಡೆ SC/ST ನಿರುದ್ಯೋಗಿ ಯುವಕರು ನಮಗೆ Backlog ಹುದ್ದೆಗಳನ್ನು ತುಂಬಬೇಕೆಂದು ಧರಣಿ ಕುಳಿತಿದ್ದಾರೆ ಮತ್ತು ಹೋರಾಟ ಮಾಡುತ್ತಿದ್ದಾರೆ. ಮಾನ್ಯ ಹಿರಿಯ ಸಚಿವರಾದ ಎಂ.ಪಿ. ಪ್ರಕಾಶ್‌ರವರಿಗೆ ಇದು ಗೊತ್ತಿದೆ. ನಾವು ಸಚಿವ ಸಂಪುಟದಲ್ಲಿದ್ದಾಗ, ಮಾನ್ಯ ಖರ್ಗೆ ಸಾಹೇಬರಿಗೆ ಗೊತ್ತಿದೆ, Backlog ಹುದ್ದೆಗಳನ್ನು ತುಂಬಲಿಕ್ಕೆ ನಾವು ಮಾಡಿದಂತಹ ಹೋರಾಟ, ಅಂದಿನ ಜೆ.ಹೆಚ್. ಪಟೇಲ್‌ರವರ Cabinet ನಲ್ಲಿ ಎಷ್ಟು ಪ್ರಮಾಣದಲ್ಲಿತ್ತು ಅಂತ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಈಗಾಗಲೇ ಎರಡು ಸಭೆಯನ್ನು ಕರೆದು ಚರ್ಚೆ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದಷ್ಟು ಬೇಗ ಈ backlog ಹುದ್ದೆಗಳನ್ನು ತುಂಬಲಿಕ್ಕೆ ಶೀಘ್ರ ಕ್ರಮ ಕೈಗೊಳ್ಳಬೇಕು. ಇನ್ನೊಂದು ಸಹಕಾರ ಸಂಘಗಳನ್ನು ಉತ್ತೇಜನ ಮಾಡಲಿಕ್ಕೆ ಹಣಕಾಸಿನ ನೆರವನ್ನು ಪೂರಕ ಅಂದಾಜುಗಳಲ್ಲಿ ಒದಗಿಸಿಕೊಟ್ಟಿದ್ದಾರೆ. ಆದರೆ ಹಣಕಾಸಿನ ವಹಿವಾಟುಗಳಲ್ಲಿ backward class, scheduled caste, scheduled tribes ಜನರನ್ನು ಒದಗಿಸಲಿಕ್ಕೆ ಅವರಿಗೆ ಬೇಕಾದಂತಹ share ಹಣವನ್ನು ಸರ್ಕಾರವೇ ಒದಗಿಸುತ್ತೇವೆ ಎಂದು ಹಿಂದೆ ನಾವು ಹೇಳತಕ್ಕಂಥ ಮಾತಿತ್ತು. ಅದಕ್ಕೆ ಇಲ್ಲ, SC/ST ಮತ್ತು Backward Classes ಸದಸ್ಯತ್ವದ ನೋಂದಾಣಿಕೆಗೆ ಸಹಕಾರ ಸಂಘಗಳಲ್ಲಿ ಅವರಿಗೆ ಸಾಲ ಸೌಲಭ್ಯಗಳನ್ನು ಒದಗಿಸಲಿಕ್ಕೆ share ಹಣವನ್ನು ಸರ್ಕಾರವೇ ಒದಗಿಸಿಕೊಡಲಿಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ತಾವು SC/ST ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳ ಬಗ್ಗೆ, Scholarship ಬಗ್ಗೆ ಮತ್ತು ಗಂಗಾಕಲ್ಯಾಣದ ಬಗ್ಗೆ ಹೋದ ಸಾರಿಗಿಂತ ಹೆಚ್ಚು ಹಣವನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಆ ರೀತಿ ಒದಗಿಸಿದ್ದರೆ ಸಂತೋಷ. ಕೇಂದ್ರದ ಯೋಜನಾ ಆಯೋಗ ರಾಜ್ಯಕ್ಕೆ ಒಂದು ಪತ್ರ ಬರೆದಿದೆ. ಯೋಜನಾ ಗಾತ್ರಕ್ಕೆ ಅನುಗುಣವಾಗಿ SC/ST ಜನಸಂಖ್ಯೆಗೆ ಅನುಗುಣವಾದಂತಹ ಹಣಕಾಸನ್ನು ಒದಗಿಬೇಕೆಂದು ಅದರಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದ ಯೋಜನಾ ಆಯೋಗ ಸುಮಾರು 13 ಸಾವಿರಕ್ಕೂ ಹೆಚ್ಚು ಕೋಟಿ ಇದೆ. ಆ ಜನಸಂಖ್ಯೆಗೆ ಅನುಗುಣವಾಗಿ ನೀವು ಆಯವ್ಯಯದಲ್ಲಿ ಒದಗಿಸಬೇಕೆಂದು ಯೋಜನಾ ಆಯೋಗ ನಿಮಗೆ ಪತ್ರ ಬರೆದಿದ್ದ ಮೇಲೆ, ಸುಮಾರು ಮೂರೂವರೆ ಸಾವಿರಕ್ಕೂ ಹೆಚ್ಚು ಕೋಟಿ ರೂ.ಗಳನ್ನು SC/ST ಜನರ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಬೆಳವಣಿಗೆಗೆ ಒದಗಿಸಲಿಕ್ಕೆ ರಾಜ್ಯಾಂಗ ಬದ್ಧವಾದಂತಹ ಅವಕಾಶ ಇದೆ. ಅದನ್ನು SC/ST ಮತ್ತು ಇತರ ಶೋಷಿತ ವರ್ಗಗಳ ಬಗ್ಗೆ ಬದ್ಧತೆಯನ್ನು ಮಾತನಾಡತಕ್ಕಂಥ ಮತ್ತು ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವಂತಹ ತಾವು ಯೋಜನಾ ಆಯೋಗದ ಪತ್ರವನ್ನು ಗಮನದಲ್ಲಿಟ್ಟುಕೊಂಡು ಆಯವ್ಯಯದಲ್ಲಿ ಮತ್ತೊಂದು ಪೂರಕ ಆಯವ್ಯಯವನ್ನು ಮಂಜೂರು ಮಾಡಿಕೊಂಡು ಜನಸಂಖ್ಯೆಗೆ ಅನುಗುಣವಾಗಿ ಯೋಜನಾ ಆಯೋಗದ ಗಾತ್ರಕ್ಕೆ ಅನುಗುಣವಾಗಿ ಹಣಕಾಸಿನ ನೆರವನ್ನು ಒದಗಿಸಿ ಅವರಿಗೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಮೇಲೆತ್ತಲಿಕ್ಕೆ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮಲ್ಲಿ ನಾನು ಮನವಿಯನ್ನು ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಉಪಾಧ್ಯಕ್ಷರೆ,....

ಉಪಾಧ್ಯಕ್ಷರು : ಒಂದೊಂದು ನಿಮಿಷದಲ್ಲಿ ಮುಗಿಸಿ, ಈಗಾಗಲೇ ಸಾಕಷ್ಟು ಟೈಮ್ ಆಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಉಪಾಧ್ಯಕ್ಷರೆ, ಸಹಕಾರ ಬ್ಯಾಂಕುಗಳಿಗೆ ಸಾಲ ಮನ್ನಾವನ್ನು ಬಿಡುಗಡೆ ಮಾಡಬೇಕು, ಇನ್ನೂ ಬಿಡುಗಡೆ ಮಾಡಿಲ್ಲ. ಇದರಿಂದ ಬ್ಯಾಂಕುಗಳು ಹಾಳಾಗುತ್ತಿವೆ. ಇದರ ಬಗ್ಗೆ ತಾವೇನೂ ಹೇಳಲಿಲ್ಲ. ಇನ್ನೂ 200–300 ಕೋಟಿ ರೂಪಾಯಿಗಳು ಅಪೆಕ್ಸ್‌ಗೆ ಬರಬೇಕು. ನಮ್ಮ ಸ್ವಂತ ಬ್ಯಾಂಕಿಗೇ 30 ಕೋಟಿ ರೂ.ಗಳು ಬರಬೇಕಾಗಿದೆ, ಈ ಬ್ಯಾಂಕುಗಳಿಗೆ ನೀವು ಹಣವನ್ನು ಬಿಡುಗಡೆ ಮಾಡಿಲ್ಲವೆಂದರೆ ಈ ಸಹಕಾರ ಸಂಘಗಳೆಲ್ಲಾ ಹಾಳಾಗುತ್ತವೆ. ಅದರ ಬಗ್ಗೆ ತಾವೇನೂ ಹೇಳಲಿಲ್ಲ. ತಾವು ಮಾನ್ಯ ದೇಶಪಾಂಡೆಯವರು ಮಾತನಾಡುವಾಗ ಇನ್ನೊಂದು ಮಾತು ಹೇಳಿದ್ದಿರಿ. 4% ಬಡ್ಡಿ ಎಲ್ಲರಿಗೂ ಮಾಡುತ್ತೇವೆ, ಹಿಂದಿನದು 12% ಮಾಡುವುದಿಲ್ಲ ಎಂದು ಹೇಳಿದ್ದಿರಿ, ಬಹಳ ಸಂತೋಷ, ಸ್ವಾಗತ. But, ಆ 3 ಲಕ್ಷ ರೂ.ಗಳ limit ಅನ್ನು ಬಿಡುತ್ತೇವೆ ಎಂದಿರಿ, ಈಗ ಏಕೆ ತಾವು ಉತ್ತರದಲ್ಲಿ ಆ ಬಗ್ಗೆ ಹೇಳಲಿಲ್ಲ. ಅದನ್ನು ತಾವು ಕೈ ಬಿಟ್ಟಿರೋ ಹೇಗೆ? ಅದೊಂದರ ಬಗ್ಗೆ ತಾವು clear ಮಾಡಬೇಕು. ತಾವು ಎಲ್ಲರಿಗೂ High Schoolಗಳನ್ನು ಕೊಟ್ಟಿದ್ದೀರಿ. ಬಹಳ ಸಂತೋಷ. ನಮ್ಮ ಬೀದರ್ ಜಿಲ್ಲೆಯಲ್ಲಿ ಎಲ್ಲಿ BJP ಶಾಸಕರು ಇದ್ದಾರೋ ಅಲ್ಲಿಗೆ ಹೋಗಿದೆ. ಎಲ್ಲಿ JD[S] ಶಾಸಕರು ಇದ್ದಾರೋ ಅಲ್ಲಿಗೆ ಹೋಗಿದೆ. ನಾನೊಬ್ಬನೇ ಒಬ್ಬ ಕಾಂಗ್ರೆಸ್ ಶಾಸಕನಿದ್ದೇನೆ. ಡಾ: ನಂಜುಂಡಪ್ಪ ವರದಿಯ ಪ್ರಕಾರ ನಮ್ಮಲ್ಲಿ ಎಲ್ಲಾ ಹಿಂದುಳಿದ ತಾಲ್ಲೂಕುಗಳೇ ಇವೆ. ಅಲ್ಲಿ ನಮ್ಮ ಕ್ಷೇತ್ರವನ್ನು ಕೈಬಿಟ್ಟಿದ್ದೀರಿ. ಅದನ್ನೂ ತಾವು ಸೇರಿಸಿಕೊಳ್ಳುತ್ತೀರೋ ಹೇಗೆ? ಇದರ ಬಗ್ಗೆ ಆಗಲೇ ಖರ್ಗೆಯವರು ಈ ರೀತಿಯಾಗಿ ತಾರತಮ್ಯ ಆಗಬಾರದೆಂದು ಹೇಳಿದರು. ತಾರತಮ್ಯ ಮಾಡಬಾರದು ಎಂದು ನಾನು ತಮಗೆ ಕೇಳುತ್ತಿದ್ದೇನೆ. ಇನ್ನು ಬೀಜದ ಬಗ್ಗೆ ತಾವು enquiry ಮಾಡಬೇಕು. ಈ ಬಗ್ಗೆ ನಾನು ಮೊದಲೇ ತಮಗೆ ತಿಳಿಸಿದ್ದೇನೆ. Enquiry ಮಾಡಿ ಅಲ್ಲಿ ನಿಜವಾದ ಪರಿಸ್ಥಿತಿ ಏನಿದೆ ಎಂಬ ಬಗ್ಗೆ Report ಕೊಡಬೇಕು. ಬಹಳ ರೈತರಿಗೆ ಅದರಿಂದ ಅನ್ಯಾಯವಾಗಿದೆ. ಅದರ ಬಗ್ಗೆ ತಾವು ಹೇಳಲೇಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಉಪಾಧ್ಯಕ್ಷರೆ, ಅಭಿಯಾಚನೆ ಸಂಖ್ಯೆ 1ರಲ್ಲಿ ಮಾನ್ಯ ಯಡಿಯೂರಪ್ಪ ಸಾಹೇಬರು ಹೇಳಿದ್ದಾರೆ. ಈಗಾಗಲೇ ಹೆಚ್ಚುವರಿ ಹಣದ ಮಂಜೂರಾತಿಯನ್ನು ಕೂಡ ತೆಗೆದುಕೊಳ್ಳುತ್ತಿದ್ದಾರೆ. ಆದರೆ ನಮ್ಮಲ್ಲಿ ಆಗಲೇ ಹಿಂಗಾರಿ ಬಿತ್ತನೆ ಈಗಾಗಲೇ ಪ್ರಾರಂಭವಾಗಿದೆ. ಯಾವ ರೈತ ಸಂಪರ್ಕ ಕೇಂದ್ರದಲ್ಲೂ ಬೀಜಗಳ ಲಭ್ಯತೆ ಇನ್ನುವರೆಗೆ ಇಲ್ಲ. ಈಗಾಗಲೇ ಮುಂಗಾರಿಯಲ್ಲಿ ಬಿತ್ತಿ, ಬರ ಬಂದು ಹೋಗಿರತಕ್ಕಂಥದ್ದು ತಮಗೆ ಗಣನೆಗೆ ಬಂದಿದೆ. ಅದರಲ್ಲಿ ಏನೂ ಕೂಡ ತಾವು ಪರಿಹಾರ ಕೊಡಲಿಲ್ಲ. ಇವತ್ತು ಕೇಂದ್ರ ಸರ್ಕಾರ ಕೊಟ್ಟಿಲ್ಲ ಎನ್ನುತಕ್ಕಂಥ ಮಾತನ್ನು ತಾವು ಆಡಿದ್ದೀರಿ. ಅತಿವೃಷ್ಟಿಗೆ ಅವರು ಕೊಟ್ಟಿದ್ದಾರೆ. ಆದರೆ ಬರ ಪರಿಹಾರಕ್ಕಾಗಿ ನೀವೇನೂ ಇದರಲ್ಲಿ ಕಾಣಿಸಿಕೊಳ್ಳಲಿಲ್ಲ. ನಾಳೆ ಮುಂಗಾರು ಬಿತ್ತಿ ಬರ ಬಂದು ಹೋಗಿರತಕ್ಕಂಥ ಜನರಿಗೆ ಏನಾದರೂ ಸ್ವಲ್ಪ ತಮ್ಮಿಂದ ನಿರೀಕ್ಷೆ ಇದೆ. ತಾವೇನಾದರೂ ಬಹಳ ರೈತರ ಬಗ್ಗೆ ಕಳಕಳಿ ವಹಿಸತಕ್ಕಂಥವರು, ಮಾತನಾಡತಕ್ಕಂಥವರು, ಇದರಲ್ಲೇ ಏನಾದರೂ

ಹೇಳುತ್ತೀರೆಂದು ನಾನು ಆಸೆ ಪಡುತ್ತೇನೆ. ಜೊತೆಗೆ ಬೀಜಗಳ ಲಭ್ಯತೆ ಬಗ್ಗೆ, ಹಿಂಗಾರಿ ಹಂಗಾಮಿ ಈಗಾಗಲೇ ಪ್ರಾರಂಭವಾಗಿದೆ ಮುಗಿಯಲಿಕ್ಕೆ ಬಂದಿದೆ. ಯಾವ ರೈತ ಸಂಪರ್ಕ ಕೇಂದ್ರಗಳಲ್ಲೂ ಇದುವರೆಗೂ ಬೀಜದ ಲಭ್ಯತೆ ಇಲ್ಲ. ಇದು ಅವರಿಗೆ ಗೊತ್ತಿರುತ್ತದೆ. ಖರೀಬ್‌ಗೆ ಎಷ್ಟು sowing ಆಗುತ್ತದೆ? ರಬಿಗೆ ಎಷ್ಟು sowing ಆಗುತ್ತದೆ ಎನ್ನುವಂತಹ ಅಂಕಿ ಸಂಖ್ಯೆಗಳು ಅವರಲ್ಲಿ ಇದ್ದಾಗ, ಇಷ್ಟು ಇದ್ದಾಗಲೂ ಹೆಚ್ಚುವರಿ ಮಂಜೂರಾತಿ ತೆಗೆದುಕೊಳ್ಳತಕ್ಕಂಥ ಹಣೆಬರಹ ಅವರಿಗೆ ಬರಬಾರದಾಗಿತ್ತು. ತಾವು ಇದರ ಬಗ್ಗೆ ವಿಮರ್ಶೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ತಾವು Junior college ಗಳನ್ನು ಮಂಜೂರಾತಿ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಯಾವ Junior college ಕೂಡ Science ಮಂಜೂರಾತಿ ಇಲ್ಲ. ಎಲ್ಲಾ Arts and Commerce ಮಾತ್ರ ಮಂಜೂರಾತಿಯಾಗಿದೆ. ಈ Arts and Commerce ಮಾತ್ರ outdated colleges. ಈ 150 Junior Collegeಗಳನ್ನು ತಾವೇನು ಕೊಟ್ಟಿದ್ದೀರಿ, ಇದರಲ್ಲಿ ಒಂದೂ ಕೂಡ Science College ಇಲ್ಲ. Atleast ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ಗೊತ್ತಿದೆ, ಮಕ್ಕಳಿಗೆ Science ಬಿಟ್ಟರೆ ಯಾವುದೂ ಗತಿ ಇಲ್ಲ. ಅದಕ್ಕೆ ದಯಮಾಡಿ ಈಗೇನು Junior Collegeಗಳನ್ನು ಕೊಟ್ಟಿದ್ದೀರಿ, Science faculty ಕೂಡ ಇದೇ ವರ್ಷವಾಗಲಿ ಅಥವಾ ಕೊನೆಯ ಪಕ್ಷ ಮುಂದಿನ ವರ್ಷವಾದರೂ ಪ್ರಾರಂಭ ಮಾಡತಕ್ಕಂಥ ಆಯವ್ಯಯವನ್ನು ಮಂಜೂರಾತಿ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ (ಕೊಟ್ಟೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಕಿತ್ತೂರು ರಾಣಿ ಚೆನ್ನಮ್ಮನ ನಾಡಿನಲ್ಲಿ ವಿಶೇಷ ಅಧಿವೇಶನವನ್ನು ಕರೆದು, ಮಹಿಳೆಯರಿಗಾಗಿ ಏನಾದರೂ ವಿಶೇಷವಾದ ಹೊಸ ಕಾರ್ಯಕ್ರಮಗಳ ಅಥವಾ ಯೋಜನೆಗಳ ಬಗ್ಗೆ ಏನಾದರೂ ಒಂದು ಮಾತು ಹೊರಬರಬಹುದು ಎಂದು ನಾನು ಭಾವಿಸಿದ್ದೆ. ಆದರೆ ಕೇವಲ ಸೈಕಲ್ ಅನ್ನು ಕೊಡುವ ಬಗ್ಗೆ ಒಂದೇ ಒಂದು ಪದ ಇಲ್ಲಿ ಬಳಕೆಯಾಗಿದೆ. ದಯಮಾಡಿ ನಮ್ಮ ಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಏನು ಪೂರಕ ಬಜೆಟ್ ಬಗ್ಗೆ ಮಾತನಾಡುತ್ತಿದ್ದೀರಿ, ಇದರಲ್ಲಿ ಸಾವಿರ ಹಳ್ಳಿಗಳ ಕಾರ್ಯಕ್ರಮವೆಂಬ ಹೊಸ ಯೋಜನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇದೇ ರೀತಿಯಲ್ಲಿ ಎಲ್ಲದಕ್ಕಿಂತ ಹೆಚ್ಚಿನ ಒತ್ತನ್ನು ಮಹಿಳೆಯರ ಯಾವುದಾದರೂ ವಿಶೇಷ ಯೋಜನೆಯನ್ನು ಇಲ್ಲಿ ಪ್ರಸ್ತಾಪ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ) : ಮಾನ್ಯ ಉಪಾಧ್ಯಕ್ಷರೆ, ನಾನೇನು ಮಾತನಾಡಬಾರದು ಎಂದೇ ಕುಳಿತಿದ್ದೆ. ನಮ್ಮ ಮಾನ್ಯ ಯಡಿಯೂರಪ್ಪನವರು ಏನಾದರೂ ಬಯಲುಸೀಮೆ ಕಡೆಗೆ ಲಕ್ಷ್ಯ ಹಾಕಬಹುದು ಎಂದು ನಾನು ತಿಳಿದುಕೊಂಡಿದ್ದೆ. ಬಹುಶ: ನಿಮಗೆ ಎಷ್ಟು ಸಲ ಹೇಳಿದರೂ ಕೂಡ ಕೊನೆಗೆ ನಾವು 75 ಜನ ಮಾತನಾಡಿಕೊಂಡು ಬಂದು ಸತ್ಯಾಗ್ರಹ ಕುಳಿತುಕೊಳ್ಳುವ ಮಟ್ಟಿಗೆ ಹೋಗುತ್ತದೆ. ಅನ್ನಿಸುತ್ತದೆ. ಈ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಬಯಲು ಸೀಮೆ ಅಭಿವೃದ್ಧಿ ಆಗುವಂತೆ ಮಾಡಬೇಕು. ಇದನ್ನು ಮಾಡದಿದ್ದರೆ ನಿಮ್ಮದೆಲ್ಲಾ ಫೇಲ್ಯೂರ್ ಆಗುತ್ತದೆ. ಯಾವ ಸರ್ಕಾರ ಬಂದರೂ ಇದರ ಬಗ್ಗೆ ಲಕ್ಷ್ಯ ಇಲ್ಲವಾಗಿದೆ. ನಿಮಗೆ ಎಷ್ಟು ಹೇಳಿದರೂ ಮೀಟಿಂಗ್‌ಗೇ

ಬರುವುದಿಲ್ಲ. ಮುಖ್ಯಮಂತ್ರಿಗಳೂ ಬರುವುದಿಲ್ಲ, ಉಪ ಮುಖ್ಯಮಂತ್ರಿಗಳೂ ಬರುವುದಿಲ್ಲ. ಮೊನ್ನೆ ಬಾಯ್‌ಕಾಟ್ ಮಾಡಿ ಅಷ್ಟೂ ಮಂದಿ ಹೊರಗೆ ಬಂದಿದ್ದೇವೆ. ಆ ಕಾರಣಕ್ಕಾಗಿಯೇ ಕೂಡಲೇ ತಾವು ಈ ಬಯಲು ಸೀಮೆಗೆ ಕನಿಷ್ಠ ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ತಮ್ಮದೂ ಅದರಲ್ಲಿ ಸೇರಿದೆ ಆ ಕಾರಣಕ್ಕಾಗಿಯೇ ತಾವು ಇದನ್ನು ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಸಲಹೆ ಇದೆ. ಬೆಳಗಾಂನಲ್ಲಿ ವಿಶೇಶ ಅಧಿವೇಶನ ಮಾಡಿದ ವಿಶೇಷತೆ ಏನೆಂದರೆ, ಬಾರ್ಡರ್ ಏರಿಯಾ ಬಗ್ಗೆ ಕಾಳಜಿಯನ್ನು ತೋರಿಸಬೇಕೆನ್ನುವ ಕಾಳಜಿಯಿಂದ. ಆ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಆದರೆ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗೆ ಎಷ್ಟು ಹಣವನ್ನು ಕೊಡುತ್ತೇವೆ ಎಂಬುದನ್ನು ಈ ಪೂರಕ ಅಂದಾಜಿನಲ್ಲಿ ಸರ್ಕಾರ ಹೇಳಲೇ ಇಲ್ಲ. ನಿಮಗೆ ಹೆಚ್ ಕೆ ಡಿ ಬಿ ಗೆ ಕೊಡುವುದಕ್ಕಾಗಲಿಲ್ಲವೆಂದರೂ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗಾದರೂ ನೀವು ಹಣವನ್ನು ಕೊಡಬೇಕಾಗುತ್ತದೆ. ಈ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗೆ ನೀವು ಹಣ ಕೊಡದೇ ಬೆಳಗಾಂ ವಿಶೇಷ ಅಧಿವೇಶನ ಎಂದರೆ ಬರೇ lip sympathy ತೋರಿಸಿದ ಹಾಗೆ ಆಗುತ್ತದೆ. ಮಾನ್ಯ ಹಣಕಾಸಿನ ಸಚಿವರು ಹಣವನ್ನು ಕೊಡುವ ಬಗ್ಗೆ ಹೇಳಬೇಕು. ಇಲ್ಲದಿದ್ದರೆ ಬೆಳಗಾಂ ಅಧಿವೇಶನ ಕೇವಲ ರಾಜಕೀಯ ಶೋ ಆಗುತ್ತದೆ. ಅದನ್ನು ಬಿಟ್ಟು ಬೇರೆ ಏನೂ ಆಗುವುದಿಲ್ಲ ಎನ್ನುವುದು ನನ್ನ ಭಾವನೆ.

ಶ್ರೀ ಎನ್.ಎಸ್. ಭೋಸರಾಜು (ಮಾನ್ವಿ) : ಕಳೆದ ಬಾರಿ ಬಜೆಟ್ ಮೇಲೆ ಭಾಷಣ ಮಾಡುವಾಗ ಕೂಡ ನಾನು ಹೇಳಿದ್ದೆ. ಹೈದ್ರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗೆ ಬಹಳ ಅತೀ ಕಡಿಮೆ ಹಣವನ್ನು ಕೊಟ್ಟಿದ್ದೀರಿ. ಕೇವಲ 43 ಕೋಟಿ ರೂಪಾಯಿಗಳನ್ನು ಮಾತ್ರ ನೆಟ್ ಕೊಟ್ಟಿದ್ದೀರಿ, ಟಿಎಸ್‌ಪಿ ಮತ್ತು ಎಸ್‌ಸಿಪಿ ಕಡಿಮೆ ಆದಮೇಲೆ ಎಂದು ಹೇಳಿದಾಗ ಉತ್ತರ ಕೊಡುವ ಸಂಧರ್ಭದಲ್ಲಿ ತಾವು ಏನು ಹೇಳಿದ್ದೀರೆಂದರೆ ತಪ್ಪದೆ ಮುಂದಿನ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಹೈದ್ರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗೆ ಒದಗಿಸುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದಿರಿ. ಆದರೆ ಇವತ್ತು ಈ ಪೂರಕ ಅಂದಾಜಿನಲ್ಲಿ ಅದರ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲ. ಎರಡನೆಯದಾಗಿ ಶಿಕ್ಷಣಕ್ಕಾಗಿ ಹೈದ್ರಾಬಾದ್ ಕರ್ನಾಟಕದ 5 ಜಿಲ್ಲೆ ಹಾಗೂ ಬಾಗಲಕೋಟೆ ಮತ್ತು ಬಿಜಾಪುರ ಸೇರಿಸಿ ಗುಲ್ಬರ್ಗಾದಲ್ಲಿ ಡೈರೆಕ್ಟೊರೇಟ್ ಪ್ರಾರಂಭ ಮಾಡಿದ್ದೇವೆ ಅನ್ನುತ್ತೀರಿ ಬಜೆಟ್‌ನಲ್ಲಿ ಶಿಕ್ಷಣದಲ್ಲಿ ಇಡುವ ಹಣದಲ್ಲಿ 50 ಪರ್ಸೆಂಟ್ ಹಣವನ್ನು ಆ ಏರಿಯಾಗೆ ಖರ್ಚು ಮಾಡಬೇಕೆಂದು ಹಿಂದಿನ ಸರ್ಕಾರಗಳು ಹೇಳಿ ಅದರಂತೆ ನಡೆದುಕೊಂಡು ಬಂದಿರುವುದನ್ನು ತಾವು ನೋಡಿದಾಗ, ಈ ಸಾರಿ ಆ ರೀತಿಯಾಗಿ ಆಗುತ್ತಿಲ್ಲ. ಅದರ ಬಗ್ಗೆ ಸರಿಪಡಿಸುವುದಕ್ಕೆ ತಾವು ನೋಡಬೇಕು. ಡೈರೆಕ್ಟೊರೇಟ್ ಅಲ್ಲಿ ಓಪನ್ ಮಾಡಿರುವ ಉದ್ದೇಶ ಸಫಲವಾಗಬೇಕು ಮತ್ತು ಆ ಹಿಂದುಳಿದ ಪ್ರದೇಶದಲ್ಲಿ ಜನರ ಬಗ್ಗೆ ಮತ್ತು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದರೆ, ಆ ಉದ್ದೇಶ ಸಫಲಕ್ಕಾಗಿ ಹಿಂದಿನ ಸರ್ಕಾರಗಳು ಬಜೆಟ್‌ನಲ್ಲಿ

ಯಾವ ರೀತಿ ಹಣವನ್ನು ಕೊಟ್ಟು ಒತ್ತು ಕೊಟ್ಟಿದೆಯೋ ಆ ರೀತಿಯಾಗಿ ಒತ್ತನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದೇ ರೀತಿಯಾಗಿ ಪ್ರೌಢಶಾಲೆಗಳನ್ನು, ಜೂನಿಯರ್ ಕಾಲೇಜುಗಳನ್ನು ಮತ್ತು ಇನ್ನಿತರವುಗಳನ್ನು ಕೊಡುವಾಗ ಕೂಡ 50 ಪರ್ಸೆಂಟ್‌ನಷ್ಟು ಆ ಏಳು ಜಿಲ್ಲೆಗಳಿಗೆ ಕೊಟ್ಟಾಗ ಮಾತ್ರ, ಆ ಹಿಂದುಳಿದ ಪ್ರದೇಶಗಳಿಗೆ ಸರ್ಕಾರ ಒತ್ತು ಕೊಟ್ಟಿದೆ ಹಾಗೂ ಅವುಗಳು ಮುಂದುವರೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಈಗಾಗಲೇ ನಮ್ಮ ಮಾನ್ಯ ಶಿವಾನಂದ ಪಾಟೀಲರು ಹೇಳಿದಂತೆ ಬೀಜದ ವಿಷಯದಲ್ಲಿ ನಮ್ಮ ರಾಯಚೂರು, ಗುಲ್ಬರ್ಗಾ ಪ್ರದೇಶದಲ್ಲಿ ಹೋದ ವಾರ ಸ್ವಲ್ಪ ಮಳೆ ಆಗಿರುವುದರಿಂದ ಈಗಾಗಲೇ ರೈತರು ಬೀಜಕ್ಕೆ ತೊಂದರೆ ಪಡುತ್ತಿದ್ದಾರೆ. ನಾನು ಈಗಾಗಲೇ ಕೃಷಿ ಸಚಿವರ ಹತ್ತಿರ ಮಾತನಾಡಿದ್ದೇನೆ. ಅದರ ಕಮಿಶನರ್ ಜೊತೆಗೂ ಕೂಡ ರಾಯಚೂರಿನಲ್ಲಿ ದೂರವಾಣಿಯಲ್ಲಿ ಮಾತನಾಡಿದ್ದೇನೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಕೂಡ ಕೆಡಿಪಿ ಮೀಟಿಂಗ್‌ನಲ್ಲಿ ನಾನು ಮತ್ತು ಅಮರೇಗೌಡರೂ ಕೂಡ ಮಾತನಾಡಿದ್ದೇವೆ. ಇವೊತ್ತು ಅಲ್ಲಿ ಬೀಜ ಸ್ಟಾಕ್ ಇಲ್ಲ. ಬೀಜ ಎಲ್ಲೋ 200 ರಿಂದ 300 ಕ್ವಿಂಟಾಲ್ ಇದ್ದರೂ ಕೂಡ ತಾವು ರಬಿಗಾಗಿ ಸಬ್ಸಿಡಿಯನ್ನು ಇನ್ನೂ ರಿಲೀಸ್ ಮಾಡಿಲ್ಲ. ಒಂದೂವರೆ ತಿಂಗಳ ಹಿಂದೆಯೇ ನಾನು ಮಂತ್ರಿಗಳ ಜೊತೆ ಈ ಬಗ್ಗೆ ಮಾತನಾಡಿದ್ದೆ. ತಾವು ಹಣ ಕಟ್ಟಿದ ನಂತರ ಸಬ್ಸಿಡಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇರುವಂಥ ಬೀಜವನ್ನೂ ಕೂಡ ರೈತರು ಖರೀದಿ ಮಾಡುವ ಪರಿಸ್ಥಿತಿ ಇಲ್ಲ. ಅದಕ್ಕಾಗಿ ತಾವು ನಾಳೆಯೇ ಆ ಬಗ್ಗೆ ವಿಚಾರ ಮಾಡಿ ಆ ಸಬ್ಸಿಡಿ ಏನು ಖರೀಫ್‌ನಲ್ಲಿ ಕೊಟ್ಟಿದ್ದೀರಿ, ಅದೇ ರೀತಿಯಾಗಿ ರಬಿಯಲ್ಲೂ ಕೂಡ ಮುಂದುವರೆಸಿ. 75 ಪರ್ಸೆಂಟ್ ಇರತಕ್ಕಂಥ ಸೀಡ್‌ನಲ್ಲಿ ಅದು ಕಡಲೆ ಇರಲಿ Sunflower ಇರಲಿ, ಮತ್ತೊಂದು ಸೀಡ್ ಇರಲಿ ಅದಕ್ಕೆ ಸಬ್ಸಿಡಿಯನ್ನು ಕೊಡತಕ್ಕಂಥ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಈ ರಬಿ ಕ್ರಾಪ್‌ಗೆ 75 ಪರ್ಸೆಂಟ್ ಬೀಜದಲ್ಲಿ ಸಬ್ಸಿಡಿ ಏನು ಕೊಡುತ್ತಿದ್ದೇವೆ, ಅದೇ ರೀತಿ ಇದಕ್ಕೂ ಅವಕಾಶ ಸಿಗಬೇಕು ಎಂದು ಹೇಳಿದ್ದೀರಿ. ಅದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ತಮಗೆ ಗೊತ್ತಿರಬಹುದು, ಬಜೆಟ್‌ನಲ್ಲಿ 40 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಮತ್ತೆ 42 ಕೋಟಿ ರೂಪಾಯಿಗಳನ್ನು ಈಗ ರಿಲೀಸ್ ಮಾಡಿದ್ದೇವೆ. ಸುಮಾರು 82 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಿಂದೆಂದೂ ಹೋದ ವರ್ಷ 25,30 ಕೋಟಿ ರೂಪಾಯಿಗಳನ್ನೂ ಕೂಡ ಕೊಡುವುದಕ್ಕೆ ಆಗಿರಲಿಲ್ಲ. ರಬಿಗೂ ಗೂಡ 75 ಪರ್ಸೆಂಟ್ ಸಬ್ಸಿಡಿ ಕೊಡುವುದಕ್ಕೆ ನಾನು ಮಾಡಿಸುತ್ತೇನೆ. ಇನ್ನು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕೆಂದು ಪ್ರಸ್ತಾವ ಮಾಡಿದ್ದೀರಿ. ಆ ಬಗ್ಗೆ ಎರಡ್ಮೂರು ಸಭೆಗಳಾಗಿವೆ. ಆ ಬಗ್ಗೆ ವಿಶೇಷವಾದಂಥ ಗಮನವನ್ನು ಕೊಡುತ್ತೇವೆ. ಅವರಿಗೆ ಅನ್ಯಾಯವಾಗಬಾರದು, ಅದರ ಬಗ್ಗೆ ಎರಡು ಮಾತಿಲ್ಲ. ಇನ್ನು ಕೆ.ಎಸ್.ಎಫ್.ಸಿ. ಯಲ್ಲಿ ನೇಕಾರರಿಗೆ ಸಾಲ ಕೊಡುವ ಬಗ್ಗೆ ಮಾಧುಸ್ವಾಮಿಯವರೇ ತಾವು ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ನಾನು ಚರ್ಚೆ ಮಾಡಿದ್ದೇನೆ. ನಿಮಗೆ ಗೊತ್ತಿರುವ ಹಾಗೆ ನೇಕಾರರಿಗೆ ನಾವು ಮ್ಯಾಕ್ಸಿಮಮ್ ಹೆಲ್ಪ್ ಮಾಡಿದ್ದೇವೆ. ಇದೊಂದು ಕೆ.ಎಸ್.ಎಫ್.ಸಿ.ಯದು ಪೆಂಡಿಂಗ್ ಇದೆ. ಈ ಬಗ್ಗೆ ಏನಾದರೂ ಮಾಡಿ ಅವರಿಗೆ ಬೇಕಾದಂಥ

ಕನ್ಸೆಶನ್ ಸಿಗುವಂತೆ ಕಾರ್ಯಕ್ರಮವನ್ನು ರೂಪಿಸುತ್ತೇನೆ. ಇನ್ನು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವ ಬಗ್ಗೆ ಪ್ರಸ್ತಾಪವಾಯಿತು. ಬಿಡುಗಡೆ ಮಾಡಿದ್ದೇವೆ. ಉಳಿದಂಥ ಹಣವನ್ನು ಮುಂದಿನ ಹಣಕಾಸಿನ ಒಂದು ಅನುಕೂಲತೆಗಳನ್ನು ನೋಡಿಕೊಂಡು ಆ ಸಣ್ಣ ಕೈಗಾರಿಕೆಗಳು ಉಳಿಯುವಂಥ ದೃಷ್ಟಿಯಲ್ಲಿ ಸವಲತ್ತುಗಳನ್ನು ಮಾಡೋಣ. ಇನ್ನು ಪವರ್‌ಟಿಲ್ಲರ್ ಮತ್ತು ಟ್ರ್ಯಾಕ್ಟರ್ ಬಗ್ಗೆ ಸರ್ಕಾರಿ ಆಜ್ಞೆಯನ್ನು ತಕ್ಷಣ ಹೊರಡಿಸಿ ಶಾಸಕರ ಅಧ್ಯಕ್ಷತೆಯಲ್ಲಿಯೇ ಸಮಿತಿ ಮೂಲಕ ಡಿಸ್ಟ್ರಿಬ್ಯೂಟ್ ಆಗಬೇಕು ಎನ್ನುವುದು ಇತ್ತು. ಆ ವಿಷಯದಲ್ಲಿ ಸಾಕಷ್ಟು ಗೊಂದಲವಾಗಿ ಕೊನೆಗೆ ಶಾಸಕರಿಗೇ ಅಧಿಕಾರವನ್ನು ಕೊಟ್ಟಿದ್ದೇವೆ. ಟ್ರ್ಯಾಕ್ಟರ್ ಹಾಗೂ ಟಿಲ್ಲರ್ ವಿತರಣೆಗೆ ಸಂಬಂಧ ಪಟ್ಟಂತೆ ಬೇಕಾದರೆ ಗ್ರಾಮ ಪಂಚಾಯಿತಿಯಿಂದ ವರದಿಯನ್ನು ತರಿಸಿಕೊಂಡು ಫೈನಲ್ ಆಗಿ ಯಾರಿಗೆ ಕೊಡಬೇಕು ಎನ್ನುವುದರ ಬಗ್ಗೆ ಅಧಿಕಾರವನ್ನು ಶಾಸಕರಿಗೇ ಕೊಡಬೇಕು ಎನ್ನುವುದರ ಬಗ್ಗೆ ಯಾರದೇ ಭಿನ್ನಾಭಿಪ್ರಾಯವಿಲ್ಲ. ಅದರ ಬಗ್ಗೆ ಪರಿಶೀಲನೆಯನ್ನು ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಪಬ್ಲಿಕ್ ಸರ್ವೀಸ್ ಕಮಿಷನ್‌ದು ಆದಷ್ಟು ಬೇಗ ನೇಮಕಾತಿ ಆಗಬೇಕು. ಇದರಲ್ಲಿ ಎರಡು ಮಾತಿಲ್ಲ. ನಿಮಗೆ ಗೊತ್ತಿದೆ. ಅದು ಬೇರೆ ಬೇರೆ ಕಾರಣದಿಂದ ತಡವಾಗುತ್ತಿದೆ. ಅದನ್ನು ಆದಷ್ಟು ಬೇಗ ತುಂಬುವಂಥ ಪ್ರಯತ್ನವನ್ನು ಮಾಡುತ್ತೇವೆ. ಇನ್ನು ಕರ್ನಾಟಕ ಹೈದ್ರಾಬಾದ್ ಬಗ್ಗೆ. ಬಯಲು ಸೀಮೆ ಅಭಿವೃದ್ಧಿ ಬಗ್ಗೆ. ಮಲೆನಾಡು ಅಭಿವೃದ್ಧಿ ಬಗ್ಗೆ ಹಣವನ್ನು ಕೊಟ್ಟಿದ್ದೇವೆ. ಅದು ಸಾಲದು ಅದಕ್ಕೆ ಇನ್ನೂ ಹೆಚ್ಚು ಹಣ ಬೇಕು ಎಂದು ಕೇಳುವುದರಲ್ಲಿ ತಪ್ಪೇನಿಲ್ಲ. ಅದರ ಬಗ್ಗೆ ನಾನು ಪರಿಶೀಲನೆಯನ್ನು ಮಾಡುತ್ತೇನೆ. ಇನ್ನು ಕಿತ್ತೂರು ರಾಣಿ ಚೆನ್ನಮ್ಮನ ನಾಡಿಗೆ ಬಂದಿದ್ದೀರಿ ಯಡಿಯೂರಪ್ಪನವರೇ, ನೀವು ಮಹಿಳೆಯರಿಗಾಗಿ ಏನು ಭರವಸೆಯನ್ನು ಕೊಟ್ಟಿರಿ ಎಂದು ಮಾಜಿ ಸಚಿವೆಯವರು ಪ್ರಸ್ತಾಪ ಮಾಡಿದರು. ತಾವು ಯೋಚನೆ ಮಾಡಿ, ಈ ಬಜೆಟ್‌ನಲ್ಲಿ ಹೆಣ್ಣು ಮಕ್ಕಳಿಗೆ ಕೊಟ್ಟಿರುವಷ್ಟು ಸವಲತ್ತು ಬೇರೆ ಯಾವ ವರ್ಗದವರಿಗೂ ನಾವು ಕೊಡಲಿಲ್ಲ. ಭಾಗ್ಯಲಕ್ಷ್ಮಿ ಯೋಜನೆಗೆ ಇಡೀ ನಮ್ಮ ರಾಜ್ಯದಲ್ಲಿ ಸುಮಾರು 230 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ. ಹತ್ತು ಸಾವಿರ ರೂಪಾಯಿಗಳನ್ನು ಇಡುತ್ತಿದ್ದೇವೆ. ಸರ್ವೆ ಮಾಡಿಸಿದ್ದೇವೆ. ಇನ್ನು ಒಂದೂ ಮುಕ್ಕಾಲು ಲಕ್ಷ ಹೆಣ್ಣು ಮಕ್ಕಳಿಗೆ ಸೈಕಲ್ ವಿತರಣೆ ಆಗಿಬಿಟ್ಟಿದೆ. ಈಗ ಈ ರೀತಿ ಏನೂ ಮಾಡಿಲ್ಲವೆಂದು ಹೇಳುವಂಥ ಅಗತ್ಯವಿಲ್ಲ ಸ್ವಸಹಾಯ ಗುಂಪುಗಳನ್ನು, ಸ್ತ್ರೀಶಕ್ತಿ ಕೇಂದ್ರಗಳನ್ನು ಬಲಪಡಿಸುವುದಕ್ಕೆ ಏನು ಅನುಕೂಲ ಮಾಡಬೇಕಾಗಿದೆಯೋ, ಅದಕ್ಕೆ ಹೆಚ್ಚಿನ ನೆರವನ್ನು ಕೊಡುವುದರ ಬಗ್ಗೆ ಕೂಡ ನಾವು ಯೋಜನೆಯನ್ನು ಮಾಡುತ್ತಿದ್ದೇವೆ. ಬಹಳ ಒಳ್ಳೆಯ ವಿಚಾರವನ್ನು ನಮ್ಮ ಪಾಟೀಲರು ಹೇಳಿದರು. ಸೈನ್ಸ್ ಜೂನಿಯರ್ ಕಾಲೇಜುಗಳನ್ನು ಕೊಡಿಯಪ್ಪಾ, ಈಗ ಬರೀ ಆರ್ಟ್ಸ್ ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೀರಿ, ಅದೇನೂ ಅಷ್ಟು ಉಪಯೋಗವಾಗುವುದಿಲ್ಲ ಅದರಿಂದ ಮಕ್ಕಳೂ ಕೂಡ ಅಷ್ಟು ಮುಂದುವರೆಯುವುದಿಲ್ಲ ಎಂದಿದ್ದಾರೆ. ನಮಗೆ ಸೈನ್ಸ್ ಜೂನಿಯರ್ ಕಾಲೇಜು ಅಗತ್ಯವಿದೆ ಎಂದರು. ನಮಗೆ ಲೆಕ್ಚರರ್ಸ್‌ದೇ ದೊಡ್ಡ ಪ್ರಾಬ್ಲಂ. ಜೂನಿಯರ್ ಕಾಲೇಜು ಮಂಜೂರಾತಿ ಮಾಡುವುದಕ್ಕೆ ನಮಗೆ ಏನೂ ತೊಂದರೆ ಇಲ್ಲ. ಅದರ ಬಗ್ಗೆಯೂ ನಾನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತೇನೆ. ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಕೃಷ್ಣಪ್ಪನವರಿಗೆ ಒಂದು ವಿಷಯವನ್ನು ನಾನು ಹೇಳುವಂಥದ್ದು ಏನೆಂದರೆ ಈ ಬರಗಾಲದ ಬಗ್ಗೆ ಯಾವುದನ್ನು ಘೋಷಣೆ ಮಾಡಬೇಕು....

ಶ್ರೀ ಎ. ಕೃಷ್ಣಪ್ಪ : ಸುಪ್ರೀಂ ಕೋರ್ಟ್ ಆರ್ಡರ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ನಾನು ಪರಿಶೀಲನೆ ಮಾಡಿ ನೋಡುತ್ತೇನೆ. ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ. ಡಾ: ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡಿದ ಮೇಲೆ ನಾನು ಉತ್ತರ ಕೊಟ್ಟಮೇಲೆ ಇಲ್ಲಿ ಅಧಿವೇಶನ ಮಾಡಿದ್ದಕ್ಕೆ ಸಾರ್ಥಕವಾಯಿತು, ಸಾಕಷ್ಟು ಕಾರ್ಯಕ್ರಮಗಳ ಬಗ್ಗೆ ಈ ಸಮ್ಮಿಶ್ರ ಸರ್ಕಾರ ಒತ್ತನ್ನು ಕೊಟ್ಟಿದೆಯಪ್ಪಾ, ಇಲ್ಲಿ ಅಧಿವೇಶನ ಮಾಡಿದ್ದಕ್ಕೂ ಸಾರ್ಥಕವಾಯಿತು ಎಂದು ಹೇಳುವ ರೀತಿಯಲ್ಲಿ ನಾನೂ ಮತ್ತು ಮುಖ್ಯಮಂತ್ರಿಗಳು ಚರ್ಚೆ ಮಾಡಿ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಎಷ್ಟು ಸಾಧ್ಯವೋ ಅಷ್ಟು ಮ್ಯಾಕ್ಸಿಮಮ್ ಇಲ್ಲಿನ ಕಾರ್ಯಕ್ರಮಗಳಿಗೆ ಅನುಕೂಲ ಮಾಡಿಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟು...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಉಪ ಮುಖ್ಯಮಂತ್ರಿಗಳೆ, ನಾನು ಕೇಳಿದುದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೊಂದಕ್ಕೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಸಾರ್. ನೀವು ಹೇಳಿರುವುದರ ಬಗ್ಗೆ ನಾನು ಪರಿಶೀಲನೆಯನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ಈಗ 2006–07ರ ಪೂರಕ ಅಂದಾಜುಗಳ (ಮೊದಲನೆಯ ಕಂತು) ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ ದಿನಾಂಕ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 5 ,7 ರಿಂದ 15, 17 ರಿಂದ 24 ಹಾಗೂ 26 ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ."

ಪ್ರಸ್ತಾವವು ಅಂಗೀಕೃತವಾಯಿತು.

ಸದನವು ಅಂಗೀಕರಿಸಿದ 2006–07ರ ಪೂರಕ ಅಂದಾಜು (ಮೊದಲನೆ ಕಂತು) ಬೇಡಿಕೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ. (ಅನುಬಂಧ–1)

ಉಪಾಧ್ಯಕ್ಷರು : ಈಗ ವಿಧೇಯಕಗಳನ್ನು ಮಂಡಿಸುವುದು. ಮಾನ್ಯ ಯಡಿಯೂರಪ್ಪನವರೆ, ಮಂಡಿಸಿ.

7. ಶಾಸನಗಳ ರಚನೆ

ವಿಧೇಯಕಗಳ ಮಂಡನೆ

(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2006 ಮಂಡನೆಗೆ ಅನುಮತಿ ಕೋರಿಕೆ.